ಸಂಪುಟ ೧೭
ಸಂಚಿಕೆ ೪

ಕರ್ನಾಟಕ ಭಾರತಿ

"೧೯೮೪ರ ಕನ್ನಡ ಸಾಹಿತ್ಯ ಸಮೀಕ್ಷೆ"ಯ
ವಿಶೇಷಾಂಕ

ಅಕ್ಷಯ ತೃತೀಯಾ ಸಂಚಿಕೆ

ಏಪ್ರಿಲ್, ೧೯೮೫

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸ ಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತ ಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**–೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ	೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ	೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮–೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ: ರೂ. ೨–೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ) ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ ದರ ರೂ. ೪·೦೦ ಮಾತ್ರ. ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೇ ಪೋಸ್ಟಲ್ ಆರ್ಡರ ಮೂಲಕ **ಫಾಯನಾನ್ಸ ಅಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸ ಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

೧೯೮೪ರ ಕನ್ನಡ ಸಾಹಿತ್ಯಸಮೀಕ್ಷೆಯ ವಿಶೇಷಾಂಕ

ಸಂಪುಟ : ೧೭ ಸಂಚಿಕೆ : ೪

ಪ್ರಧಾನ ಸಂಪಾದಕರು :

ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು :

ಡಾ. ಎಂ. ಬಿ. ಕೊಟ್ರಶೆಟ್ಟಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಅಕ್ಷಯ ತೃತೀಯಾ ಸಂಚಿಕೆ

ಏಪ್ರಿಲ್, ೧೯೮೫

೧೯೮೪ರ ಕನ್ನಡ ಸಾಹಿತ್ಯಸಮೀಕ್ಷೆಯ ವಿಶೇಷಾಂಕ

ಪ್ರಕಾಶಕರು :

ಎಸ್. ಬಿ. ನಾಯಕ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ರಾಜಶ್ರೀ ಪ್ರಿಂಟಿಂಗ್ ಪ್ರೆಸ್
ತಡಕೋಡ ಓಣಿ, ಧಾರವಾಡ–೫೮೦ ೦೦೧

ಸಂಪಾದಕೀಯ

ಕನ್ನಡ ಅಧ್ಯಾಪಕರ ಶಿಬಿರ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ಅಧ್ಯಾಪಕರ ಮಧ್ಯದ ಕಂದರ ಕಡಿಮೆಯಾಗಬೇಕು, ಅಳಿದು ಹೋಗಬೇಕೆಂಬ ಹಂಬಲ ಬಹಳ ಹಳೆಯದು. ಆದರೆ ಅದಕ್ಕೆ ಮೂರ್ತರೂಪ ಬಂದುದು ೧೯೮೪ ರಲ್ಲಿ. ೧೯೮೪ ಅಕ್ಟೋಬರ್ ೨೭,೨೮ ಹೀಗೆ ಎರಡು ದಿನ ದಾಂಡೇಲಿಯ ಕಾಳೀನದಿ ತೀರದ ಸರಕಾರಿ ವಸತಿಗೃಹದಲ್ಲಿ ಈ ಅಧ್ಯಾಪಕರ ಅಪೂರ್ವ ಶಿಬಿರವೊಂದು ಜರುಗಿತು. ೬೦ ಜನ ಅಧ್ಯಾಪಕರು ಒಂದೆಡೆ ಸೇರಿ ೧೯೮೩ ರಲ್ಲಿ ಪ್ರಕಟವಾದ ಕನ್ನಡ ಸಾಹಿತ್ಯ ಕೃತಿಗಳನ್ನು ಕುರಿತು ಗಂಭೀರವಾಗಿ ಇಲ್ಲಿ ಚರ್ಚಿಸಿದರು. ಆ ವರ್ಷದ ಕಾದಂಬರಿ, ಕಾವ್ಯ, ಸಣ್ಣಕತೆ, ನಾಟಕ, ಪ್ರಬಂಧ, ವಿಮರ್ಶೆ, ಜಾನಪದ, ಸಂಶೋಧನೆ, ಸಂಪಾದನೆ, ಶಾಸ್ತ್ರ–ಹೀಗೆ ೧೦ ಪ್ರಕಾರಗಳನ್ನು ಕುರಿತು ೧೦ ಜನ ಪ್ರಾಧ್ಯಾಪಕರು ಮಂಡಿಸಿದ ಪ್ರಬಂಧಗಳ ಸಂಕಲನವಾಗಿದೆ; ಈ ಸಂಚಿಕೆ. ಪ್ರತಿವರ್ಷ ಜರುಗುವ ಇಂಥ ಶಿಬಿರದ ಲೇಖನಗಳನ್ನು ಪ್ರತ್ಯೇಕ ಗ್ರಂಥರೂಪದಲ್ಲಿ ತರಬೇಕೆಂಬ ನಮ್ಮ ಆಸೆ ಕೈಗೂಡದ ಸಂಗತಿ ನಮಗೆ ನೋವನ್ನುಂಟುಮಾಡಿದೆ. ಕೊನೆಯ ಪಕ್ಷ "ಕರ್ನಾಟಕ ಭಾರತಿ"ಯ ಮೂಲಕವಾದರೂ ಈ ಲೇಖನಗಳು ಪ್ರಕಟವಾದುದಕ್ಕೆ ಸಂತೋಷಪಡಬೇಕಾಗಿದೆ. ವಿದ್ವಾಂಸ ಮಿತ್ರರು ಈ ಪ್ರಯತ್ನವನ್ನು, ಈ ಸಂಚಿಕೆಯ ಲೇಖನಗಳನ್ನು ಸ್ವಾಗತಿಸುವರೆಂದು ಆಶಿಸುತ್ತೇವೆ.

ಪರಿವಿಡಿ

೧೯೭೮ರ ಕನ್ನಡ ಕಾವ್ಯ

● ಬಸವಲಿಂಗ ಸೊಪ್ಪಿನಮಠ

ಬುದ್ಧಿಜೀವಿಗಳಿಂದ ಬುದ್ಧಿಜೀವಿಗಳಿಗಾಗಿಯೇ ಎಂದು ಆರೋಪ ಹೊತ್ತ ನವ್ಯಕಾವ್ಯ, ತನ್ನ ಸಂವಹನ ಕ್ಲಿಷ್ಟತೆ ಮತ್ತು ಮುಕ್ತಧೋರಣೆಯ ಸ್ವೇಚ್ಛೆ-ವಿಲಾಸಗಳಿಂದಾಗಿ ಜನದೂರವಾದ ಮೇಲೆ ನವ್ಯದ ಊನ/ವೈಫಲ್ಯಗಳನ್ನು ತುಂಬಿಕೊಡಲೋ ಎಂಬಂತೆ ಹುಟ್ಟಿಕೊಂಡ ನವ್ಯೋತ್ತರ ಬಂಡಾಯ ದಲಿತಗಳೆಂಬ ಸದ್ಯದ ಕಾವ್ಯಪ್ರವಾಹಗಳೂ ಕೂಡ ಜನಾದರದಿಂದ ವಂಚಿತವಾಗುತ್ತಿರುವುದು ಗುಟ್ಟಿನ ಮಾತೇನಲ್ಲ ನವ್ಯ ಕಾವ್ಯದ ಮುಖ್ಯಸಮಸ್ಯೆಯಾಗಿದ್ದ 'ಸಂವಹನದ ಸರಳತೆ'ಗೆ ಬಲು ಉತ್ಸಾಹದಿಂದ ಧಾವಿಸಿದ ಬಂಡಾಯ ಮತ್ತು ದಲಿತ ಪಂಥದವರು ಕಾವ್ಯವನ್ನು ಎಲ್ಲಿಗೆ ಒಯ್ದು ನಿಲ್ಲಿಸಿದರೆಂದರೆ, ಯಾರು ಬೇಕಾದರೂ ನಿರಾಯಾಸವಾಗಿ ಕವಿತೆ ರಚಿಸಬಹುದಾಗಿತ್ತು. ಕಾವ್ಯಕ್ಕಿರಬೇಕಾದ ಗಾಂಭೀರ್ಯ ಶಿಸ್ತು-ಶ್ರಮಗಳೇ ಇಲ್ಲಿ ಮಾಯವಾದವು. ನವ್ಯದ ವಿರುದ್ಧ ಈ ಮಾರ್ಗದವರ ಇನ್ನೊಂದು ಅತಿರೇಕ ಇದು. ಜನಸಮ್ಮುಖ ಕಾವ್ಯರಚನೆಗೆ ಕ್ರಿಯಾಶೀಲರಾದ ಇವರು ವೈಚಾರಿಕ ಅಭಿವ್ಯಕ್ತಿಗೆ ಬಹುಶಃ ಅಡ್ಡಿಯಾಗಬಹುದಾದ ತನ್ಮಯತೆ ಗುಣದ 'ಗೇಯತೆ'ಯನ್ನು ತಮ್ಮ ಕಾವ್ಯಕ್ಕೆ ಅಲಂಕರಿಸಿದ್ದು ಗುಣಕ್ಕಿಂತ ದೋಷವೇ ಆಯ್ತು.

—ಹೆಚ್ಚು ಜನಪರವಾದ ಇವರು ತಮ್ಮ ಗಾಢವಾದ ಆಸಕ್ತಿ ಮತ್ತು ಅಷ್ಟಿಷ್ಟ ಚಿಂತನೆಯಿಂದ ಹೊಸಕಾವ್ಯಕ್ಕೆ ಹೊಸಶಕ್ತಿ ಮತ್ತು ಚಲನಶೀಲತೆಯನ್ನು ತಂದದ್ದು ಚಾರಿತ್ರಿಕ ನಿಜವೇ ಆದರೂ, ಇವರ ಸಂವೇದನೆಗಳಲ್ಲಿ ಪೂರ್ಣಪ್ರಮಾಣದ ಬದಲಾವಣೆಯೇನೂ ತೋರಲಿಲ್ಲ. ತುರ್ತುಪರಿಸ್ಥಿತಿಯಂಥ ರಾಷ್ಟ್ರೀಯ ಕಂಟಕದಿಂದ ಈಚೆಗೆ ಕರ್ನಾಟಕ ಹಲವು ಹತ್ತು ಸಂಘರ್ಷಗಳಿಗೆ, ಬದಲಾವಣೆಗೆ ತನ್ನನ್ನೊಡ್ಡಿಕೊಳ್ಳುತ್ತಿದೆ. ಅತೃಪ್ತ ರೈತನ ಬಂಡಾಯ-ಗೋಳಿಬಾರು, ನಾಡಿನಾದ್ಯಂತ ಹೊತ್ತುರಿದ ಭಾಷಾಚಳುವಳಿ-ಹೀಗೆ ಮುಖ್ಯ ಘಟನೆಗಳನ್ನೇ ತೆಗೆದುಕೊಳ್ಳೋಣ: ರಾಜಕೀಯ ವಿಚ್ಛಿದ್ರ ಶಕ್ತಿಗಳು, ಪುಢಾರಿಗಳ ಮೊಂಡುತನ ಹಾಗೂ ಸ್ವಾರ್ಥ, ಕೋಮು ಗಲಭೆಯಿಂದ ಜರ್ಜರಿತವಾದ ಜನಜೀವನ-ಇಂಥ ಸನ್ನಿವೇಶಗಳೂ ಜನಶಕ್ತಿಯ ಮೇಲೆ ಉಂಟುಮಾಡುವ ಪರಿಣಾಮ, ಬೀರುವ ಪ್ರಭಾವಗಳು ಅಷ್ಟಿಷ್ಟಲ್ಲ. ಕಳೆದೊಂದು

ದಶಕದ ಈ ಹೊಯ್ದಾಟ/ತಹತಹ ಎಷ್ಟರಮಟ್ಟಿಗೆ ನಮ್ಮ ಸಾಹಿತ್ಯದಲ್ಲಿ ಪಡಿಮೂಡಿದೆ ? ಇದಕ್ಕೆ ನವ್ಯೋತ್ತರ ಕಾವ್ಯದ ಪ್ರತಿಕ್ರಿಯೆ ಏನು ? ಹೇಗೆ ?

ಕಾವ್ಯ ಅಮೂರ್ತದಿಂದ ಹುಟ್ಟುವದಿಲ್ಲ. ಬದಲಾವ ಪರಿಸರದ ಸಂವೇದನೆಗಳೇ ಕಾವ್ಯದ ಆಹಾರ. ಇದರರ್ಥ ಕಾವ್ಯವನ್ನು ಹೀಗೆ ಹೀಗೇ ಬರೆಯಬೇಕೆಂಬ ಅರ್ಥವಲ್ಲ. ಜನಮಧ್ಯ ಬದುಕುವ ಕವಿ, ತೆರೆದ ಕಣ್ಣಿನಿಂದ ತಾನು ತುಂಬಿಕೊಂಡದ್ದನ್ನು, ಮನಃಪೂರ್ವಕ ಚಿಂತಿಸಿದ್ದನ್ನು ತತ್ಕಾಲೀನ ಸಾಮಾಜಿಕ ಸಂದರ್ಭದಲ್ಲಿ ಕಲಾತ್ಮಕವಾಗಿ ಅನುಭವಗಮ್ಯವಾಗಿ ಪ್ರಕಟಿಸಬೇಕಲ್ಲವೆ ? ಖರೆ ಹೇಳಬೇಕೆಂದರೆ ಇದು ನಿರೀಕ್ಷಿತ ಪ್ರಮಾಣದ ಗೆರೆ ಕೂಡ ದಾಟಿಲ್ಲ. ೮೦ರ ಕನ್ನಡ ಕಾವ್ಯಸಂದರ್ಭದಲ್ಲೂ ಇದನ್ನೇ ಹೇಳಬೇಕಾಗಿದೆ.

೮೦ರ ಕನ್ನಡ ಕಾವ್ಯದ ಬೆಳೆ ದೊಡ್ಡದು, ಕಳೆಯೂ ಅಷ್ಟೇ. ಬೇಂದ್ರೆಯವರ ಮರಣೋತ್ತರ ಕಾವ್ಯಸಂಗ್ರಹದಿಂದ ಹಿಡಿದು ಹೊಸಕವಿಯ ಪ್ರಥಮ ಸಂಕಲನದ ವರೆಗೆ ಸುಮಾರು ೧ ಸಂಕಲನಗಳನ್ನಲ್ಲದೆ ಸಂ. ಶಿ. ಭೂಸನೂರಮಠರ 'ಭವ್ಯ ಮಾನವ' ಬೃಹತ್‌ಕೃತಿಯನ್ನೂ ಪ್ರಸ್ತುತ ವಿಮರ್ಶೆಗೊಳಪಡಿಸಿದ್ದೇನೆ. ಅಡಿಗರಂಥ ಪ್ರತಿಷ್ಠಿತ ಕವಿಗಳೂ ಇಲ್ಲಿದ್ದಾರೆ. ವಿಷಾದದ ಸಂಗತಿ ಎಂದರೆ, ೮೦ರಲ್ಲಿ ಪ್ರಕಟಿತ ಎಷ್ಟೋ, ಸಂಕಲನಗಳು ನನಗೆ ಸಿಗದೇ ಹೋದವು. ಲೇಖನದ ಉದ್ದಕ್ಕೂ ಆ ಅತೃಪ್ತಿ ನನ್ನನ್ನು ಕಾಡಿದೆ. ಸಿಗದಿರುವ ಕೃತಿಗಳನ್ನು ಕೇವಲ ಹೆಸರಿಸಿ ಸಮಾಧಾನ ಪಟ್ಟುಕೊಳ್ಳಬೇಕಾಗಿ ಬಂದಿದೆ. ವಿಮರ್ಶಿತ ಇಲ್ಲಿನ ಸಂಕಲನಗಳೇ ೮೦ರ ಪ್ರಾತಿನಿಧಿಕ ಕಾವ್ಯ ಎಂಬಂಥ ಭ್ರಮೆ ಯಾರಿಗೂ ಬರಬಾರದೆಂದು ಈ ಮಾತು.

೧. ತಾ ಲೆಕ್ಕಣಿಕಿ ತಾ ದೌತಿ (ಅಂಬಿಕಾತನಯದತ್ತ) :

ಬೇಂದ್ರೆಯವರ ಈ ಮರಣೋತ್ತರ ಸಂಗ್ರಹದಲ್ಲಿ ೭೮ ಕವಿತೆಗಳಿವೆ. 'ನಾಕು ತಂತಿ'ಯಿಂದ ಅಧ್ಯಾತ್ಮಗಂಧಿಯೂ ಅಂತರ್ಮುಖಿಯೂ ಆಗುತ್ತಬಂದ ಬೇಂದ್ರೆಯವರ ಕಾವ್ಯ. ಮತ್ತೆ ಬಹಿರಂಗಕ್ಕೆ ತನ್ನ ದೃಷ್ಟಿಯನ್ನು ಚಾಚಲಿಲ್ಲ ಎಂಬುದನ್ನು ಈ ಸಂಕಲನ ದೃಢಪಡಿಸುತ್ತದೆ.

ಸಂಕಲನದ ಹೆಸರು, ಮುಖಪುಟದ ವರ್ಣವಿನ್ಯಾಸ ನೋಡಿ ಬಂಡಾಯದ ಗುಮಾನಿ ಹೊತ್ತಿ ಪುಟ ಬಿಡಿಸಿದರೆ ಅಕ್ಷರಾಡಂಬರ, ಸಂಖ್ಯಾಡೊಂಬರುತನ ಕಣ್ಣಿಗೆ ಹೊಡೆಯುತ್ತವೆ. ಮಾತು ಮಂತ್ರವಾಗಿ, ಮಂತ್ರ ತಂತ್ರವಾಗಿ, ತಂತ್ರ ಅತಂತ್ರವಾಗಿರೋದು ಈ ಸಂಕಲನ ವೈಶಿಷ್ಟ್ಯ ಎಂದರೆ ಖಾರ ಪ್ರತಿಕ್ರಿಯೆ ಆದೀತಾದರೂ ಇದು ಸುಳ್ಳಲ್ಲ.

ಕವಿ ಹೇಳುತ್ತಾನೆ :

'ನವಭಾರತ ಹರಕಿs ಪರ್ವಾ ಬರೆಯುವೆ'। ತಾ ಲೆಕ್ಕಣಿಕಿ
'ನವತಾರುಣ್ಯ ಕರಕಿs ದುರ್ವಾ ಹರಿಯುವೆ'। ತಾ ಲೆಕ್ಕಣಿಕಿ
'ನವಮಾನವ ಬೆರಕಿs ಗರ್ವಾ ಹರಿಯುವೆ'। ತಾ ಲೆಕ್ಕಣಿಕಿ

ನೋವಿನ ಸಂಗತಿ ಎಂದರೆ ಈ ಮಾತುಗಳಿಗೆ ಸಂಕಲನದಲ್ಲಿ ಪುರಾವೆ ಇಲ್ಲ. ಅಧ್ಯಾತ್ಮದಂಥ ಅಮೂರ್ತ ವಿಷಯಗಳಿಗೆ ಕಾವ್ಯವನ್ನು ಈಡು ಮಾಡಿದಾಗ ಹೊರಡುವ ಅಸ್ಪಷ್ಟತೆಯನ್ನು ಬೇಂದ್ರೆಯವರಿಗೆ ಕೊನೆಗೂ ಮೀರಲಾಗಲಿಲ್ಲ. ಅವರ ಹರಿತ ವೈಚಾರಿಕತೆಗೆ, ಮಾತಿನ ತೀಕ್ಷ್ಣತೆಗೆ ಈ ಸಂಕಲನದಲ್ಲಿ 'ಹುಷಾರ! ಮನಿ ಅವರ್‍ಯಾ ಹುಷಾರ್', 'ಒಪ್ಪಿದರೂ ಭಲಾ ಒಪ್ಪದಿದ್ದರೂ ಭಲಾ', ನಾ ಕವಿತಾ ಬರೀಬಾರ್ದಿತ್ತು' ಮುಂತಾದ ಕವಿತೆಗಳನ್ನು ಉದಾಹರಿಸಬಹುದಾಗಿದ್ದರೂ, ತಮ್ಮ ವಾಚಾಳಿತನ ಮತ್ತು ಅಸ್ಪಷ್ಟ ವಿಚಾರಶಕ್ತಿಯಿಂದಾಗಿ ಅವಕ್ಕೆ ಕವಿತ್ವದ ಗುಣ ದಕ್ಕಿಯೇ ಇಲ್ಲ.

ಓ ಮಹಂತಾ, ಲಕ್ಷ್ಮೀ ಸಹಿತಾ
ತರುಣಾ, ಅರುಣಾ, ಸಕರುಣಭಕ್ತಿಪ್ರೀತಾ
ನರ್ತಕಾ, ಚೌತಿಮಗ್ಗುಲದಲ್ಲಿದ್ದಾತಾ
ಪಿಂಗಲಾ, ಮಂಗಲಾ, ದ್ವಿಜರಲಿ ಸುಪ್ರೀತಾ ('ಈ ಗಣನಾಥಾ')

—ಬೇಂದ್ರೆಯವರ ಈ ಇಂಥ ಪದಪಂಕ್ತಿಗಳಿಗೆ ಅರ್ಥವಿಲ್ಲ ಎಂದು ಹೇಳುವದಕ್ಕಿಂತ ಅರ್ಥವಾಗುತ್ತಿಲ್ಲ ಎಂದು ಒಪ್ಪಿಕೊಂಡು ಬಿಡುವುದು ಸುರಕ್ಷಿತ !

೨. ಬತ್ತಲಾರದ ಗಂಗೆ (ಗೋಪಾಲಕೃಷ್ಣ ಅಡಿಗ) :

ನವ್ಯದ ಹರೆಯದಲ್ಲಿ ಜನಪ್ರಿಯತೆಯ ಶೃಂಗ ತಲುಪಿದ್ದ ಅಡಿಗರ ಹೊಸ ಕವನ ಸಂಕಲನ ಇದು. ಪುರಾಣ ಪ್ರತಿಮೆಗಳಲ್ಲೇ ಇನ್ನೂ ಜೋಲಿ ಹೊಡೆಯುತ್ತಿರುವ ಅಡಿಗರ ಕಾವ್ಯ ಈ ಸಲ 'ಪ್ರಗತಿಪರತೆಯ ಹೊಸ ಸೋಗಿನೊಂದಿಗೆ ಧುತ್ತೆಂದು ಪ್ರತ್ಯಕ್ಷವಾಗಿರೋದು ತಮಾಷೆ ಕೂಡ. ತಮಾಷೆ ಯಾಕೆಂದರೆ, ಜನಸಂಘದ ಬಾಗಿಲು ಬಡಿದು ಬಂದ ಅಡಿಗರು ಇವತ್ತು ಪ್ರಗತಿ ಪ್ರಗತಿ ಅಂತಾ ಬಡಬಡಿಸಿದರೆ ಅದು ಸಂಕುಚಿತ ಹಿಂದೂ ಪ್ರಜ್ಞೆಯ ಜೀವಂತ ಕಾಳಜಿಯಾಗಿರುತ್ತದೆಯೇ ವಿನಾ ನಾವು ಅರ್ಥೈಸುವ ಪ್ರಗತಿಪರತೆ ಖಂಡಿತಕ್ಕೂ ಅದಾಗಿರುವದಿಲ್ಲ. ಈ ಮಾತಿನ ನಿಜಕ್ಕೆ ಪ್ರಸ್ತುತ ಸಂಕಲನದ 'ನಾನು ಹಿಂದು, ನಾನು ಬ್ರಾಹ್ಮಣ' ಹಾಗೂ 'ಅಂಬೇಡಕರ ಭೀಮರಾಯರಿಗೆ' ಎಂಬೆರಡು ಪದ್ಯಗಳೇ ಸಾಕು.

'ನಾನು ಹಿಂದು, ನಾನು ಬ್ರಾಹ್ಮಣ' ಎಂದು ಕರೆದುಕೊಳ್ಳುವದು ಕವಿತೆಯ ನಾಯಕನಿಗೆ ಅರ್ಥಾತ್ ಕವಿಗೆ ಎಂಥ ಸ್ವಾಭಿಮಾನದ ಸಂಗತಿ ಎಂದರೆ, ಬೇರೆಯವರು ನಿಷ್ಕಾರಣ ಹಾಗೆ ಕರೆದರೆ, ಹಳಿದರೆ ಅವರಿಗೆ ಕೆಂಡದಂಥ ಕೋಪ; ಅಂಥವರಿಗೆ ನಿರಂತರ 'ಭೇದಿ' ಉಂಟಾಗಲಿ ಎಂದು ಶಾಪ ಹಾಕುತ್ತಾರೆ! ಬದಲಾಗುತ್ತಿರುವ ಪ್ರಕೃತಿ, ಸಮಾಜವನ್ನು ತಾವು ನೋಡದೆ 'ಪ್ರಕೃತಿ ಬದಲಿಸದಯ್ಯ, ಮಾನವ ಪ್ರಕೃತಿಯೂ ಬದಲಾಗದು' ಎಂದು ನಮ್ಮನ್ನು ನಂಬಿಸುತ್ತ ಬ್ರಾಹ್ಮಣ ಶ್ರೇಷ್ಠತೆಯ ಸನಾತನ 'ಮೌಲ್ಯ'ವನ್ನು ಪರೋಕ್ಷವಾಗಿ ಎತ್ತಿಹಿಡಿಯುತ್ತಾರೆ :

ಭಿನ್ನ ಭಿನ್ನದ ತಾರತಮ್ಯದ ನೆಲೆಗೆ ನಿಲುಕಿಸಿ ಹೊಂದಿಸಿ
ಹಂತ ಹಂತವ ರಚಿಸಬೇಕಿದೆ ಮೌಲ್ಯಶಿಖರವ ಗುರುತಿಸಿ

ಇಲ್ಲಿ 'ತಾರತಮ್ಯ' ಸರಿಪಡಿಸುವದು, 'ಮೌಲ್ಯಶಿಖರ' ಗುರುತಿಸುವದು ಅಂದರೆ ಏನೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಅಡಿಗರ ಬ್ರಾಹ್ಮಣ ಮೋಹ, ಅಂತ್ಯಜರ ಕುರಿತಾದ ತಣ್ಣನೆಯ ಆಕ್ರೋಶ ಇಷ್ಟು ಸ್ಫುಟವಾಗಿ ಕಾಣಿಸಿಕೊಂಡಿರುವುದು, ಕಾವ್ಯದಲ್ಲಿ, ಬಹುಶಃ ಈಗಲೇ ಇರಬೇಕು.

ಅಡಿಗರ ಧೋರಣೆ-ಧಾರಣೆಗಳು ಎಂಥ ಅಪಾಯಕರ ನೆಲೆ ಮುಟ್ಟಿವೆ ಎಂಬುದನ್ನು 'ಅಂಬೇಡಕರ ಭೀಮರಾಯರಿಗೆ' ಕವನ ಎಳೆಎಳೆಯಾಗಿ ಬಿಡಿಸಿಡುತ್ತದೆ. ದಲಿತ ನಾಯಕ ಬಿ. ಆರ್. ಅಂಬೇಡಕರ ಅವರನ್ನು 'ಭೀಮರಾಯ'ರಾಗಿ, 'ಆಧುನಿಕ ಹಿಂದುತ್ವ'ದ ಮಾದರಿಯಾಗಿ, 'ಬುದ್ಧಿಯೋಗಿ'ಯಾಗಿ ಕಂಡ ಅಡಿಗರು, ಅವರನ್ನು 'ಸಂಘರ್ಷವಾದಿಯಾಗಿರಲಿಲ್ಲ' ಎಂದು ಸಮರ್ಥಿಸಿಕೊಳ್ಳುತ್ತ ಅವರ ಅನುಯಾಯಿಗಳಿಗೆ ಹೇಳುವ ಉಪದೇಶ ಹೇಗಿದೆ ನೋಡಿ :

ನಿಮಗೆ ಜಯಜಯಕಾರ ಹಾಕಿ ಹಿಂಡು ಹಿಂಡು ನುಗ್ಗುತ್ತಿರುವ
ಬಂಧುಗಳೆ, ಹಾಗೆ ನಡೆಯಿರಿ ನೇರ ಶಿಖರದತ್ತ
ಸಾಮರಸ್ಯದ ಮೇಳಗಾನದತ್ತ
ಇಲ್ಲವಾದರೆ ಎಲ್ಲ ವ್ಯರ್ಥ ವ್ಯರ್ಥ.

ಈ ವ್ಯರ್ಥಾಲಾಪದ ಹಿಂದಿರುವ ಅಡಿಗರರ ಧೂರ್ತತೆಯನ್ನು ಹೆಚ್ಚು ವಿವರಿಸಬೇಕಾದ ಅಗತ್ಯವಿಲ್ಲ. ಶತಶತಮಾನಗಳಿಂದ ತುಳಿತಕ್ಕೆ ಒಳಗಾದ ಮೂಕನೋವಲ್ಲಿ ನರಳಿದ ಅಸ್ಪೃಶ್ಯ ಜನತೆ ಅಡಿಗರ ಕಣ್ಣಲ್ಲಿ ಇನ್ನೂ 'ಹಿಂಡು' ಗಳಾಗಿ ಕಾಣಿಸುತ್ತಿರುವದು ಅರ್ಥಪೂರ್ಣವಾಗಿದೆ. 'ಹಿಂಡು ಹಿಂಡು ನುಗ್ಗುತ್ತಿರುವ' ಎಂಬ ಪದಪಂಕ್ತಿಯಲ್ಲಿಡಗಿರುವ ಒರಟು ವ್ಯಂಗ್ಯ, ಅಸಹನೆ ಗಮನಾರ್ಹಕೂಡ. ಹೊಸನಾಡ ಕಟ್ಟ

ಹೋದ ಈ 'ಹರಿ' ಕಾರರು ಅವತ್ತಿನಿಂದಲೂ ಇಂಥ 'ಸಾಮರಸ್ಯದ ಮೇಳಗಾನ' ಹಾಡುತ್ತಲೇ ಬಂದಿರುವದರಿಂದ ಅವರಿಗಾಗಿ ಇವತ್ತು ಯಾರೂ ಕುತೂಹಲದಿಂದ ಬೆಚ್ಚಿಬೀಳಬೇಕಾಗಿಲ್ಲ. 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ 'ಇವರೇಅಲ್ಲವೆ ?

'ಆಚಾರ್ಯರಿಗೆ ನಮಸ್ಕಾರ' ಕವಿತೆಯಲ್ಲಿ ಈ ಕವಿ' ಆಚಾರ್ಯಕುಲಕ್ಕೆ ಸಾಷ್ಟಾಂಗ ಪ್ರಣಾಮ' ಹಾಕುತ್ತ, 'ಹಾಕುವದು ಸುಲಭ, ಹಾಕುವದು ತೀರಾ ಕಷ್ಟ' ಎಂದು ಒದ್ದಾಡಿದ್ದಾರೆ. ಪುರೋಗಾಮಿ ಚಹರೆಯ ಅಡಿಗರು ಈ ತೆರನ ದ್ವಂದ್ವ ಗಳನ್ನು ಮೀರದ ಹೊರತು ಅವರಿಗೆ ಅವರ ಕಾವ್ಯಕ್ಕೆ ಒಳ್ಳೆಯ ಭವಿಷವಿಲ್ಲ–ಎಂದಷ್ಟೇ ಇಲ್ಲಿ ಸೂಚಿಸಬಹುದು.

ಇಂದಿರಾಗಾಂಧಿಯವರ ಆಡಳಿತ ಶೈಲಿಯನ್ನು ಟೀಕಿಸಿ ಬರೆದ ಅವರ ಮೂರು ಕವಿತೆಗಳು ಈ ಸಂಕಲನದಲ್ಲಿದ್ದು ರಂಜಿಸುತ್ತವೆ; ಮಾವೊ ಕವನಗಳ ಅನುವಾದ ಕೂಡ ಅಷ್ಟೆ.

೩. ಕೊಂಪೆಯಲ್ಲಿ ಕೋಗಿಲೆ (ದೇಶ ಕುಲಕರ್ಣಿ) :

ಈ ವರ್ಷದ ಉತ್ತಮ ಸಂಕಲನ ಇದು. ಈ ಸಂಕಲನದಲ್ಲಿ ಸಂವೇದನಾಶೀಲ ಕವಿಯೊಬ್ಬನ ಸಾಮಾಜಿಕ ಕಳಕಳಿಯ, ವರ್ತಮಾನದ ಸ್ಪಂದನಗಳನ್ನು ಸಮಶೃತಿ ಯಲ್ಲಿ ಕೇಳಿಸಿಕೊಳ್ಳಬಹುದಾಗಿದೆ. ದೇಶ ಕುಲಕರ್ಣಿ ಬೆಳೆಯುತ್ತಿರುವ ಕವಿ ಎಂಬು ದಕ್ಕೊ ಈ ಸಂಕಲನ ಜೀವಂತ ಸಾಕ್ಷಿಯಾಗಿದೆ.

ರಾಜಕೀಯ ನಿಮಿತ್ತ ನಡೆದ ಕೊಲೆಗಳು ಸಾಮಾಜಿಕ ದುರಂತದಲ್ಲಿ ಕೊನೆ ಯಾಗುವದನ್ನು ಸೊಗಸಾಗಿ ನಾಟ್ಯೀಕರಿಸುವ 'ಪರೋಕ್ಷ' ಈ ಸಂಕಲನದ ಅತ್ಯು ತ್ತಮ ಕವಿತೆ.

ಕಸೂರಿಯನ್ನು ಕೊಲ್ಲಬೇಕಾಗಿದ್ದ ಭುಟ್ಟೊ ಅವನಪ್ಪನನ್ನು ಕೊಂದದ್ದು, ಜಿಯಾ ಭುಟ್ಟೊನನ್ನು ಕೊಂದದ್ದು—ಇತಿಹಾಸಕ್ಕೆ ಸೇರಿದ ಈ ಕೊಲೆಯ ಸರಣಿ ಅಲ್ಲಿಗೇ ನಿಲ್ಲದೆ, ಜಿಯಾನ ಈ ಕೃತಿಯನ್ನು ಪ್ರತಿಭಟಿಸಿ ಶ್ರೀನಗರದ ಶಾಲೆಯೊಂದ ರಲ್ಲಿ ಭುಟ್ಟೊ ನೇಣಿನ ಅಣಕುನಾಟಕವಾಡುವಾಗ ಜಿಯಾ ಪಾತ್ರಧಾರಿ ವಿದ್ಯಾರ್ಥಿಗೆ ಬೀಳುವ ನೇಣು ಖರೆಯಾದದ್ದು, 'ಯಾರೋ ಒಬ್ಬರು ಹೋದರಲ್ಲ ಅಂತ' ಜಿಯಾ ನಿಶ್ಚಿಂತನಾಗುವದು ಇಲ್ಲಿನ ವಸ್ತು. ಅಂತರಂಗದಲ್ಲಿ ಸಾಕಷ್ಟು ಜಟಿಲವಾದ ಸಮಸ್ಯೆ ಯನ್ನು ಕವಿ ನಿಭಾಯಿಸಿದ ರೀತಿ ಅಚ್ಚರಿ ಹುಟ್ಟಿಸುವಂಥದು. ಕವಿತೆ ಓದುತ್ತಿದ್ದರೆ ಅದರ ಗಾಢ ತೆಕ್ಕೆಗೆ ನಾವೂ ಸೇರಿ ಹೋಗುತ್ತೇವೆ. ಕವಿತೆಯ ರೂಪಶಿಲ್ಪದಲ್ಲಿ, ಭಾಷೆಯಲ್ಲಿ ಸಾವಯವ ಬಂಧುರತೆ ಖಚಿತತೆ ಇದೆ.

ಸಮಕಾಲೀನ ಸನ್ನಿವೇಶಗಳಿಗೆ, ತತ್ಕಾಲೀನ ತೀರ ಸಣ್ಣ ಸುದ್ದಿಗೂ ಈ ಕವಿ ಕೊಡುವ ಮಹತ್ವ, ಅವನ್ನು ಹಿಡಿದು ಆತ ಹೊರಡಿಸುವ ಧ್ವನಿ ಪರಂಪರೆಗಳು, ಶಕ್ತಿಯುತವಾದ ಉಕ್ತಿಸಾಮರ್ಥ್ಯ ಮೆಚ್ಚುಗೆಯಾಗುತ್ತವೆ :

"ಮೇಲೆ, ಶ್ರಾವಣ ಮೋಡವಿಲ್ಲದೆ
ಬಾನು ಬರಿದು
ಕೆಳಗೆ
ಶೌಚಗೃಹದ ಕೊಳಾಯಲ್ಲಿ
ನೀರು ಬಂದು
ಮಧ್ಯೆ
ಪತ್ರಿಕೆ ತೆಗೆದರೆ ಅಲ್ಲಿ
ನಗುತ್ತಾನೆ ಮೊರಾರ್ಜಿ
ಹಲ್ಲು ಕಿರಿದು." ('ಅದೇ ಗತಿ')

ಪ್ರಕೃತಿಯ ಪ್ರಕೋಪ, ಆಡಳಿತ ಪಕ್ಷದವರ ನಿರ್ಲಕ್ಷ್ಯ, ಇದರ ತಲೆ ಮೇಲೆ ಹೊಡೆತ ದಂತೆ ವಿರೋಧ ಪಕ್ಷದವರ ನಿರುಮ್ಮಳತನವನ್ನು ಇದಕ್ಕಿಂತ ಅಡಕವಾಗಿ ಚಿತ್ರಿಸ ಲಾಗದೇನೋ. 'ಕ್ಯೂ' ವೈವಿಧ್ಯ ನೋಡಿ:

"ಕೆಲವರು ಸಿಟಿ ಬಸ್ಸಿಗೆ
ಇನ್ನೂ ಕೆಲವರು ಸೀಮೆ ಎಣ್ಣೆಗೆ
ಮತ್ತು ಕೆಲವರು ಮಲೆಯಾಳಿ ಚಿತ್ರಕ್ಕೆ"

ಇದು ದೇಶದ ಸ್ಥಿತಿ. ಸಂಕಲನದ ಮುನ್ನುಡಿಯಲ್ಲಿ ಎಚ್. ಎಸ್. ವೆಂಕಟೇಶಮೂರ್ತಿ ಅವರು ದೇಶ ಕುಲಕರ್ಣಿ ಅವರನ್ನು 'ಈಗಿಂದೀಗ ಬದುಕುತ್ತಿರುವ ಕವಿ' ಎಂದು ಕರೆದದ್ದು ಅರ್ಥಪೂರ್ಣವಾಗಿದೆ. ಅನುಭವವನ್ನು ಮಂಡಿಸುವಾಗ ಕವಿ ತೋರುವ ನಿರ್ಲಿಪ್ತ ಧಾಟಿ, ಸಂಯಮಯುತ ಭಾಷೆ, ಸಮಕಾಲೀನ ಸಮಸ್ಯೆಗಳನ್ನು ಕಾವ್ಯ ಕ್ರಿಯೆಯ ಮೂಲಕವೇ ಶೋಧಿಸುತ್ತ ಹೊರಡುವ ರೀತಿಯಲ್ಲಿನ ಸ್ವೋಪಜ್ಞತೆ ಈ ಎಲ್ಲ ಜೀವಂತ ಕವಿಗಿರಬೇಕಾದ ಲಕ್ಷಣಗಳು.

೪. ಭಾವಲೋಕ (ಸುಮತೀಂದ್ರ ನಾಡಿಗ) :

'ನಮ್ಮ ಸಂವೇದನೆಯಲ್ಲಿ ಬದಲಾವಣೆಯಾಗಿರುವ ಈ ಕಾಲದಲ್ಲಿ ಕಾವ್ಯ ದಲ್ಲಿಯೂ ಬದಲಾವಣೆ ಆಗಬೇಕಾಗಿದೆ' ಎಂದು ಸಂಕಲನದ ತಮ್ಮ ಮಾತಿನಲ್ಲಿ ಸೂಚಿಸಿರುವ ನಾಡಿಗರು 'ಜೀವಪರವಾದ ಧೋರಣೆಗಳನ್ನು ರೂಪಿಸುವ ಕಾವ್ಯ' ಬೇಕೆಂದು ಒತ್ತುಕೊಟ್ಟು ಹೇಳುವಲ್ಲಿ ಅರ್ಥವಿದೆ ಎನಿಸುತ್ತದೆ.

ಯಂತ್ರನಾಗರಿಕತೆಯ ಅಬ್ಬರದಲ್ಲಿ ದುರ್ಭರವಾಗುತ್ತಿರುವ, ಕ್ಷೀಣಿಸುತ್ತಿರುವ ನಗರಬದುಕಿನ ದಾರುಣತೆ, ಆ ಒಂಟಿತನದ ನೋವಿನ ಸುತ್ತಲೇ ಗಿರಿಗಿರಿ ಸುತ್ತಿ ನಿಶ್ಚೇಷ್ಟತವಾದ ನವ್ಯಕಾವ್ಯ, ಅವರಾಚೆ ತನ್ನನ್ನು ವಿಸ್ತರಿಸಿಕೊಳ್ಳುವ, ಹೊಸ ಕಸುವು ಪಡೆಯುವ ತಾಕತ್ತು ತೋರದೇ ಹೋಯ್ತು; ಅಭಿವ್ಯಕ್ತಿಯಲ್ಲಿ ಹೊಸತನ ಕಂಡು ಕೊಂಡಿತಾದರೂ ಸಂವೇದನೆಗಳಲ್ಲಿ ನೂತನತೆಯನ್ನು ತಂದುಕೊಳ್ಳಲಿಲ್ಲ—ಎಂದು ಪ್ರಬಂಧದ ಆದಿಯಲ್ಲಿಯೇ ಈ ಕುರಿತು ಹೇಳಿದ್ದೇನೆ.

ನವ್ಯದ ಏರುಗಾಲದಿಂದಲೂ ಅಪ್ಪಟನವ್ಯರಾಗಿಯೇ ಬರೆಯುತ್ತಬಂದ ಸುಮ ತೀಂದ್ರ ನಾಡಿಗರು ಕಾವ್ಯತತ್ವದ ಬದಲಾವಣೆಯ ಮಾತಾಡುತ್ತಿರುವುದು ಕುತೂಹಲ ಕರವಾಗಿದೆ. ಆದರೆ ಅವರು ಬಯಸುವ ಬದಲಾವಣೆಯ ಸ್ವರೂಪ ಮಾತ್ರ ಸ್ಪಷ್ಟ ವಾಗುವದಿಲ್ಲ. ನವ್ಯದ ಏಕತಾನತೆ ಹಾಗೂ ಏಕರೂಪತೆಯಿಂದ ರೋಸಿಹೋದಂತೆ ಕಾಣುವ ನಾಡಿಗರು 'ಜೀವಪರವಾದ ಧೋರಣೆ'ಗೆ ಕರೆಕೊಡುವಂತೆ (ಇದು ಹೊಸ ತೇನೂ ಅಲ್ಲ), ಅದರ 'ಅಭಿವ್ಯಕ್ತಿಯ ಆಕಾರ' ಯಾವುದೆಂಬುದನ್ನು ಸ್ಪಷ್ಟವಾಗಿ ಮುಂದಿಡಬಹುದಾಗಿತ್ತು. ಬಹುಶಃ ಅವರಲ್ಲೇ ಗೊಂದಲ ಎದ್ದಂತೆ ಕಾಣುತ್ತದೆ. ಅವರ ಕವಿತೆಗಳು ಏನು ಹೇಳುತ್ತವೆ ಎಂಬುದನ್ನು ನೋಡಬೇಕು—

> ನಿಶ್ಚೇಷ್ಟ ಭಾವಗೀತವೆ
> ನಿನ್ನ ನೀರಿನ ಕಣ್ಣಿಗೆ ಮೇಣ ಮೆತ್ತಿದ್ದನ್ನು ಕಿತ್ತು ಹಾಕುವೆ
> ಬುಗ್ಗೆಯಾಗಿ ಸದಾ ಚಿಮ್ಮು
> ಭಾವನೆಗಳ ಬಿತ್ತಗಳ ಸುತ್ತ ಒತ್ತೊತ್ತು ಪ್ರತಿಮೆಗಳ
> ಸುಟ್ಟ ಇಟ್ಟಿಗೆ ಕೆಡವಿ
> ಗೊಬ್ಬರ ಮಾಡಿ ಹರಡುತ್ತೇನೆ
> ಹುಲುಸಾಗು.

'ಭಾವಗೀತೆ'ಯ ಪುನರುತ್ಥಾನವೇ ನಾಡಿಗರ ಆಶಯವಾಗಿರುವಂತೆ ತೋರುತ್ತದೆ. 'ಭಾವಗೀತೆ' ಪದ್ಯದ ಮೇಲಿನ ಸಾಲುಗಳು, 'ಭಾವಲೋಕ'ವೆಂಬ ಸಂಕಲನದ ಹೆಸರು ಈ ಮಾತನ್ನು ಎತ್ತಿಹಿಡಿಯುತ್ತವೆ. 'ಭಾವನೆಗಳ ಬಿತ್ತ' ಎಂಬಲ್ಲಿ ರಮ್ಯಕಾವ್ಯದ ಪ್ರಾಣವಾದ ಭಾವನಿಷ್ಠತೆಯನ್ನು ಆಹ್ವಾನಿಸುತ್ತಿರುವ ಸೂಚನೆ ಇದ್ದರೆ, 'ಪ್ರತಿಮೆ ಗಳ ಸುಟ್ಟ ಇಟ್ಟಿಗೆ ಕೆಡವಿ' ಎಂಬಲ್ಲಿ 'ನವ್ಯ'ನಾಶದ ಹಾರೈಕೆ ಇದೆ. ಅಂದರೆ ಕಾವ್ಯದ ವಸ್ತು ಮತ್ತು ಭಾಷೆಯಲ್ಲಿ ನಾಡಿಗರು 'ನವೋದಯ' ವನ್ನು ಪೂರ್ಣಪ್ರಮಾಣದಲ್ಲಿ ಸ್ವೀಕರಿಸುವಂತೆ ತೋರುತ್ತದೆ ('ಸುಟ್ಟ ಇಟ್ಟಿಗೆ; ಜೀರ್ಣ ಇಲ್ಲವೆ ನಾಶದ ಸೂಚಕ ವಾಗುವದಿಲ್ಲವೆಂಬುದನ್ನು ಕವಿ ಗಮನಿಸಬೇಕಿತ್ತು; 'ಸುಟ್ಟ ಇಟ್ಟಿಗೆ' ಹೆಚ್ಚು ಗಟ್ಟಿತನದ ಸಂಕೇತವಾಗುವದಿಲ್ಲವೆ ?).

ಅದೇ 'ಭಾವಗೀತೆ' ಕವಿತೆಯಲ್ಲಿ ಮುಂದುವರಿದು ಅವರು ಹೇಳುತ್ತಾರೆ :

ನರಸತ್ತ ಬಡವರ ಪ್ಯೈಯು ವಿದ್ಯುತ್ತಾಗು
ಕ್ರಾಂತಿಕಾರರ ಕೈಯು ಸಿಡಿಲಾಗು
ಸಮಾನತೆ ತರುವ ಸಾಹಸವಾಗು
ಸಹನಾವವತು ಎಂದು ಮೊಳಗು ಹೋಗು.

ಕವಿತೆಯೊಂದರ ಸಾಲುಗಳಾಗಿ ಈ ಘೋಷಣೆಗಳ ಮಾತು ಹಾಗಿರಲಿ, ಈ ಇಂಥ ಸಂವೇದನೆಗಳು ಕಾವ್ಯದ ಕೇಂದ್ರಭೂಮಿಕೆಯಾದಾಗ, ಬೌದ್ಧಿಕ ಇಕ್ಕಟ್ಟಿನ ಈ ತೆರನ ಭಾವನೆಗಳನ್ನು ಹೊರಲು ಕೋಮಲವಾದ ಭಾವಗೀತೆಗೆ ಸಾಧ್ಯವಾದೀತೆ ? ಎಂಬುದು ಪ್ರಶ್ನೆ. ನಾಡಿಗರು ಬಯಸುವಂತೆ ಸಾಮಾಜಿಕ ಪ್ರತಿಭಟನೆಯ ಕ್ರಾಂತಿ ಕಾರಕತೆಯನ್ನು ಪುನಶ್ಚೇಷ್ಟಿತ ಭಾವಗೀತದಲ್ಲಿ ಅಳವಡಿಸುವದಾದರೆ, ಈ ರಾಜಿಯಿಂದ ಕವಿಯ ಚಿಂತನಶೀಲ ಸಂವೇದನೆಗಳು ಸರಳೀಕರಣಗೊಂಡು ವಸ್ತುವಿನ ಗಾಂಭೀರ್ಯ ಹಾಗೂ ಸಂಕೀರ್ಣತೆಗೆ ಧಕ್ಕೆ ಒದಗುವದಿಲ್ಲವೆ ? ವ್ಯಕ್ತಿನಿಷ್ಠ (Subjective) ವಾದ 'ಭಾವಗೀತೆಗೂ', 'ವ್ಯಕ್ತಿನಿರಸನ ಸಿದ್ಧಾಂತ' (Impersonal theory)ವೇ ತನ್ನ ಜೀವಜೀವಾಳವಾದ ವಸ್ತುನಿಷ್ಠ (objective) 'ನವ್ಯಕಾವ್ಯ'ಕ್ಕೂ ಸಂಬಂಧ ಎತ್ತಣಿಂದೆತ್ತ ?

'ಕಲ್ಪನೆಯ ರೆಕ್ಕೆಗಳ ನವ್ಯಕವಿ ಸುಟ್ಟಿರುವ, ಸದ್ಯಕ್ಕೆ ಕೆವಕೋಣ ನಾಳೆ ನೆನಪ' ಎಂಬ ಸಮಾಧಾನ ಎಷ್ಟು ಸರಿ ? ಕಳೆದ ಕಾವ್ಯ ಪರಂಪರೆಗೆ ('ನವೋದಯ'ಕ್ಕೆ) ನಾಡಿಗರು ತಮ್ಮನ್ನು ಲಗತ್ತಿಸಿಕೊಳ್ಳುವದು ತಪ್ಪಲ್ಲವಾದರೂ, ಪ್ರಸ್ತುತ ಸನ್ನಿವೇಶ ದಲ್ಲಿ, ಕವಿಗಿರಬೇಕಾದ ಜವಾಬ್ದಾರಿಯ ಹಿನ್ನೆಲೆಯಲ್ಲಿ ಹೀಗೆ ರಮ್ಯ 'ಕಲ್ಪನೆ'ಯ 'ರೆಕ್ಕೆ' ಬಿಚ್ಚಿ ಹಾರೋದು ಸರಿಯೆ ಎಂಬುವನ್ನು ಅವರೇ ಯೋಚಿಸಲಿ.

೫. ದ್ರೌಪದಿಯ ಸ್ವಗತ (ಸರಸ್ವತಿ ಗೌಡ) :

ನವ್ಯರು ಬಳಕೆಗೆ ತಂದ 'ವೈಯಕ್ತಿಕ ತುರ್ತು', 'ವೈಯಕ್ತಿಕ ಘಾಟು', 'ವೈಯಕ್ತಿಕ ಜರೂರು' ಮುಂತಾದ ಪದಗಳು ಎಷ್ಟು ಚೆನ್ನಾಗಿ ಬಳಕೆಗೆ ಬಂದು ವೆಂದರೆ, ವೈಯಕ್ತಿಕತೆ ಅಲ್ಲದ್ದು ಕಾವ್ಯವೇ ಅಲ್ಲ ಎನ್ನುವ ಹಂತಕ್ಕೆ 'ವೈಯಕ್ತಿಕ ಅನುಭವದ ಶೋಧನೆ'ಗಿರುವ ಮಿತಿಗಳನ್ನು ಗುರುತಿಸಿಕೊಳ್ಳದೆ, ತೀರಾ ವೈಯಕ್ತಿ ಕತೆಗೆ ಕಾವ್ಯವನ್ನು ಬಲಿಕೊಟ್ಟವರಲ್ಲಿ, ಈ ಸಲದ ಹೊಸಕವಿಗಳಲ್ಲಿ ಸರಸ್ವತಿ ಗೌಡ ಅವರು ಮೊದಲಿಗರೆನ್ನಬೇಕು. ಖಾಸಗಿ ಜೀವನದ ಹಸಿ ಹಸಿ ವೇದನೆಗಳನ್ನು ಕವಿತೆಗಳಲ್ಲಿ ಆವೇಶಪೂರಿತವಾಗಿ ದಾಖಲಿಸುತ್ತ ಹೋಗುವ ಇವರಿಗೆ ಜೀವನಾನು ಭವದ ಗಾಢಸ್ಪರ್ಶವಾಗಲಿ, ಕಲಾತ್ಮಕತೆಯ ಗಂಧವಾಗಲಿ ಇಲ್ಲ. ಅನಗತ್ಯವಾಗಿ

ಸಿಡುಕುವ ಇವರ ರೊಚ್ಚಿನ ಮಾತುಗಳು ಸುದೀರ್ಘ ಭಾಷಣಗಳು ಮಾತ್ರ. ಇವರ ಪದ್ಯ, ಗಪದ್ಯವಿರಲಿ ಸರಿಯಾದ ಗದ್ಯವೂ ಅಲ್ಲ. ದ್ರೌಪದಿ, ಸೀತೆ, ಮೇನಕೆ ಮುಂತಾದ ಹೆಸರುಗಳು ಕಾವ್ಯಶಿಲ್ಪದಲ್ಲಿ ಅರಳಿನಿಲ್ಲುವ ಸಾಧ್ಯತೆಯನ್ನು ಪಡೆದು ಕೊಳ್ಳದೆ ಕವಯಿತ್ರಿಯ ತೆಳುವಾದ ಅನುಭವದಡಿ ನರಳಿ ಸರಿಯುತ್ತವೆ.

ಈ ಸಮಸ್ಯೆಗಳಿಗೆಲ್ಲಾ ಮದ್ಯದ ಮೊರೆ ಹೋಗುತ್ತಿರುವೆ
ಇದೊಂದು ನನ್ನಲ್ಲಿರಲಿಲ್ಲ ಆ ಅಭ್ಯಾಸವೂ ಇಲ್ಲ
ಹವ್ಯಾಸವೂ ಇಲ್ಲ; ನಿನ್ನ ಹುಟ್ಟಿನಿಂದಾಗಿ
ನಾನು ದುಶ್ಚಟಕ್ಕೆ ಬಿದ್ದೆ ನನ್ನ ವ್ಯಕ್ತಿತ್ವ ನಶಿಸುತ್ತಿದ್ದರೂ

('ಮಾಯೆ')

ತೀರಾ Prosaic ಆದ ಇಂಥ ಸಾಲುಗಳನ್ನು ಕಾವ್ಯವೆಂದು ಹೇಗೆ ಗುರ್ತಿಸುವದು ? ವಾಚ್ಯಾರ್ಥದ ಸುಸಂಗತತೆ ಕೂಡ ಇವಕ್ಕಿಲ್ಲ. ಕೆಲವು ಕಡೆಗಂತೂ ನಿಷ್ಕಾರಣ ಉದ್ಧಟ ತನ, ಅತಾರ್ಕಿಕ ಹರಟೆ ಮುಗಿಲು ಮುಟ್ಟುತ್ತವೆ. ಕೈಗೆ 'ಕೈಯಿ', ಮೈಗೆ 'ಮೈಯಿ', ಗಳಿಗೆಗೆ 'ಗಳಗೆ', ಸ್ವಾತಂತ್ರ್ಯಕ್ಕೆ 'ಸ್ವತಂತ್ರ್ಯ', ಫೀನಿಕ್ಸ್‌ಗೆ 'ಪೀನಿಕ್ಸ್', ಠರಾವಿಗೆ 'ಟರಾವು'—ಎಂದು ಮುಂತಾಗಿ ಬಳಸುವದು ಸರಸ್ವತಿ ಗೌಡ ಅವರ ವೈಶಿಷ್ಟ್ಯ!

೬. ವಿರಹೋತ್ಸವ (ಹೇಮಾ) :

ವ್ಯಕ್ತಿಜೀವನದ ಸೋಲು ತಂದ ಹತಾಶೆ, ನೋವುಗಳು ಅನುಭವದಲ್ಲಿ ಮಾಹದೆ, ಕಾವ್ಯದಲ್ಲಿ ಹುದುಗದೆ ಕೇವಲ ಕನವರಿಕೆಗಳಾದಾಗ ಕಾವ್ಯ ಹೇಗೆ ತತ್ತರಿಸು ವದು ಎಂಬುದನ್ನು ಸರಸ್ವತಿಗೌಡ ಅವರ 'ದ್ರೌಪತಿಯ ಸ್ವಗತ' ಹೇಳಿದರೆ, ಜೀವನ ತಂದ ತೃಪ್ತಿ–ಸಂಭ್ರಮಗಳೇ ಕಾವ್ಯದ ವೈಭವವಾದಾಗ ಕವಿಯ ಸಂವೇದನೆಗಳು ಹೇಗೆ ಸೊರಗುತ್ತವೆ. ಎಂಬುದನ್ನು ಹೇಮಾ ಅವರ 'ವಿರಹೋತ್ಸವ' ಮನಗಾಣಿಸುತ್ತದೆ.

ಸಂವೇದನೆಗಳು ಬೆಳೆದಂತೆ ಕವಿ ಬೆಳೆಯುತ್ತಾನೆ: ಬೆಳೆಯಬೇಕು. ಜೀವನ ಒಂದು ಸವಾಲು. ಪ್ರಶ್ನೆಯಾಗದೆ ಹೋದಾಗ ಸಂವೇದನೆಗಳು ಬೆಳೆಯುವದಿಲ್ಲ; ಕವಿತೆಯೂ ಬೆಳೆಯುವದಿಲ್ಲ. 'ನಿತ್ಯೋತ್ಸವ' ಧಾಟಿಯಲ್ಲಿ 'ವಿರಹೋತ್ಸವ' ಆಚರಿ ಸುವ ಹೇಮಾ ವಿರಹದಲ್ಲಿ ಕಂಗೆಡದೆ ಉಕ್ಕುವದು ಒಂದು ಆಭಾಸ. ಜೀವನವನ್ನು ಕಾವ್ಯಕ್ಕೆ ಆರೋಪಿಸಿಕೊಂಡದ್ದೇ ಇದಕ್ಕೆ ಕಾರಣವಿರಬೇಕು.

'ಭಾಷೆಯ ಆಳಸ್ತರಗಳ ಮೇಲೆ ಅವರ ಪ್ರಭುತ್ವ ಎಷ್ಟು ಎಂದರೆ ಆಳಸ್ತರಗಳ ಜೊತೆಗೆ ಲೀಲಾಜಾಲವಾಗಿ ಅವರು ಆಟವಾಡಬಲ್ಲರು'—ಎಂದು ಸಂಕಲನದ ಮುನ್ನುಡಿಯಲ್ಲಿ ಶಂಕರ ಮೊಕಾಶಿ ಪುಣೇಕರ ಹೇಳುತ್ತಾರೆ. ಆದರೆ ಭಾಷೆಯೊಂದಿಗಿನ

ಆಟ ಇಲ್ಲವೆ ಜಗಳಗಳೇ ಕಾವ್ಯದ ಶ್ರೇಷ್ಠತೆಯನ್ನು ನಿರ್ಧರಿಸುವದಿಲ್ಲ. 'ಒಂದು ಕೃತಿಯ ಮಹತ್ವವನ್ನು ನಿರ್ಧರಿಸುವದಕ್ಕೆ ಸಾಹಿತ್ಯಕ ಕಾರಣಗಳಷ್ಟೇ ಸಾಕಾಗುವದಿಲ್ಲ' ಎನ್ನುತ್ತಾನೆ ಎಲಿಯಟ್. ಜೀವನದ ಗಂಭೀರ ಸಮಸ್ಯೆಗಳೆದುರು ಮುಖಾಮುಖಿ ಯಾಗಿ ನಿಲ್ಲದಿರುವ ಸಾಹಿತ್ಯ ತನ್ನೆಲ್ಲ ಕಲಾತ್ಮಕ ಎತ್ತರದ ಮಧ್ಯೆಯೂ ಕುಸಿಯುತ್ತದೆ.

ಗಂಡನ ಸಖ್ಯ, ತಾಯ್ತನದ ಸಾರ್ಥಕತೆ, ಮಗು ತಾಯಿಗೆ ತರುವ ಪುಳಕ— ಇವುಗಳನ್ನು ಕುರಿತು ಬರೆಯುವಾಗ ಹೇಮಾ ಉತ್ಸಾಹಿಯಾಗುತ್ತಾರೆ :

ನಾ ಮಗು ನಾ ತಾಯಿ ಹೆಂಡತಿ
ದೇವ ದೇವಾಲಯ ಶಿವ ಶಿವಾ
ಬೇರು ಬಿಟ್ಟಿದೆ ಪ್ರೀತಿ
ನೀತಿಗೋಡೆಯಗುಂಟ
ಕುಡಿಯೊಡೆದು ಕುಲದ ಹೂ ಹೂ ಬಿಡಿಸಿ
ಬಾ ನಗು ನನ್ನ ನಾನಾದ ನೀ ಮಗು
ನನ್ನ ಮಗು ('ಅಂಕುರ')

ಇಂಥ ಲವಲವಿಕೆ ಮುಗಿಲು ಮುಟ್ಟಿದಾಗ ಕವಿತೆ ಹೇಗೆ ಸರಳವಾಗುತ್ತದೆ ನೋಡಿ :

ನನ್ನ ಪ್ರೀತಿಯು ನಿನ್ನ
ಇಷ್ಟುದ್ದ ಕೂದಲಿನಾಣೆ
ನನ್ನ ಹೆಗಲ ಮೇಲಿನ ನಿನ್ನ
ಹಲ್ಲಿನಾಣೆ
ನಿನ್ನ
ಹಣೆಗೆರೆಯಾಣೆ
ಬಲಗಾಲ
ಕರಿಚುಕ್ಕಿಯಾಣೆ

ತಮ್ಮ ಅಂತರ್ಮುಖತೆಯು ಈ ಕೇಂದ್ರವನ್ನು ಕೊಸರಿಕೊಂಡು ಬಂದಾಗ, ಭಾಷೆಯ ಮೇಲಿನ ಹೇಮಾ ಅವರ ಪ್ರಭುತ್ವಕ್ಕೆ ಏನಾದರೂ ಅರ್ಥಬರಲು ಸಾಧ್ಯ ವಾದೀತು.

೭. ಸಂಪರ್ಕ (ಗಂಗಾಧರ ಚಿತ್ತಾಲ) :

ಸಾವಿನ ಚಡಪಡಿಕೆ–ತಲ್ಲಣಗಳನ್ನು ಕಾವ್ಯವಾಗಿಸುವದು ಕಷ್ಟದ ಕೆಲಸ. ಸಾವಾಗಲೀ, ಸಾವಿನಂಥ ವ್ಯಾಧಿಯಾಗಲಿ ವ್ಯಕ್ತಿಯ ಅನುಭವದಲ್ಲಿ ಪ್ರವೇಶ ಪಡೆದು

ಮನೋವ್ಯಾಧಿ ಆದಾಗ ಅಭಿವ್ಯಕ್ತಿ ಕ್ರಮದಲ್ಲಿ ಒಂದು ರೀತಿಯ ವಿಚಿತ್ರ ಸಂಯಮ, ಅಸಹಜವಾದ ಸರಳತೆ ಬಂದುಬಿಡಬಹುದು. ಅನುಭವವನ್ನು ಹಿಡಿದಿಡಲು ಆಗದೆ ಭಾಷೆ ಸೆಟೆದು, ರಚನೆಯಲ್ಲಿ ಅಸಾಂದ್ರತೆ ಇಣುಕಬಹುದು. ಆದರೆ ಮನೋವ್ಯಾಧಿಯ ಉದ್ರಿಕ್ತತೆಯನ್ನು, ಮೃತ್ಯುವಿನ ಸನಿಹದಲ್ಲಿ ಬಿಳಿಚಿಕೊಂಡ ಭಾವನೆಗಳನ್ನು ದಿವ್ಯ ನಿರ್ಲಕ್ಷ್ಯದಿಂದ ಪ್ರಕಟಿಸುವ 'ಸಂಪರ್ಕ'ದ ಚಿತ್ತಾಲರ ಬರವಣಿಗೆಯಲ್ಲಿ ಮೊದಲಿನ ತನ್ಮಯತೆ ಹಾಗೇ ಇದೆ; ಆಶಾವಾದಿತ್ವ ಪುಟಿಯುತ್ತಿದೆ. ಪುಟ್ಟ ಸಂಕಲನ ಮುಡಿಸುವ ಪರಿಣಾಮ ಗಾಢವಾಗಿದೆ. 'ನೋವು' ಈ ಸಂಕಲನದ ಸ್ಥಾಯೀಭಾವ.

ಬಾಳ ಮುಸ್ಸಂಜೆಯ ನಡುಕದಲ್ಲಿಯೂ ಜೀವನದ ಬೆರಗು-ಮುಗ್ಧತೆ ಮಾಸಿಲ್ಲ, ಈ ನಡತೆ ನೋಡಿ :

"ನೀರ್ಮಣ್ಣ ಆರೈಕೆಗೆದ್ದ ಆಗಂತುಕರ
ಈ ಸೋಜಿಗದ ಸುತ್ತು ನೆರೆದ ಮಕ್ಕಳ ಮಧ್ಯೆ
ಸೇರಿ ನಾನೂ ಕುಳಿತೆ, ಮೈಮರೆತೆ ಮಗುವಾಗಿ ('ಸಂಪರ್ಕ')

'ನೆತ್ತಿ ಮೇಲೆ ಸದಾ ನಿಶ್ಯಬ್ದ ಪತನ ಭಯ' ದುರ್ಬಲವಾಗಿ ತೂಗುತ್ತಿದೆ. 'ಕೊನೆಯ ಪ್ರಹರ' ಬಳಿಸಾರುತ್ತಿದೆ. 'ಸುತ್ತಲೂ ನಿರುತ್ತರದ ಮೌನ' ಬೇರೆ. 'ಎಷ್ಟು ಕಾಲ ತಡೆದೀತೋ, ಅಡಿಗಡಿಗೂ ಅದೇ ಭಯ' ಎಂದು ಸಾವಿನ ಭಯದಲ್ಲಿ ಕಂಗೆಟ್ಟ ನಾಯಕ ಬದುಕಿನ ದಾರಿಗಾಣದೆ ಒಮ್ಮೊಮ್ಮೆ ಕೈ ಚೆಲ್ಲುವದೂ ಉಂಟು.

ನಿರ್ವೈಯಕ್ತಿಕತೆ ಚಿತ್ತಾಲರಿಗೆ ಪೂರ್ಣಸಾಧ್ಯವಾಗಿಲ್ಲವಾದರೂ, ನಿಗೂಢ ಸಾವಿನ ಘೋರತನಕ್ಕೆ ಸಾರ್ವತ್ರಿಕತೆ ಇದ್ದೇ ಇದೆ—ಎಂಬುದನ್ನು ಮರೆಯಲಾಗದು. 'ಅಸ್ವಸ್ಥತೆ'ಯ ನಡುವೆಯೂ ಕವಿ ಚಿತ್ತಾಲ ಜೀವಂತವಾಗಿದ್ದಾರೆ ಎಂಬುದನ್ನು ಈ ಸಂಕಲನ ಶ್ರುತಪಡಿಸುತ್ತದೆ.

೮. ಕಪ್ಪು ಕಾಡಿನ ಹಾಡು (ಸಿದ್ಧಲಿಂಗಯ್ಯ) :

ದಲಿತಸಾಹಿತ್ಯದ ವಿಶಿಷ್ಟದನಿಯಾದ ಸಿದ್ಧಲಿಂಗಯ್ಯ ಅವರ ಮೂರನೆಯ ಸಂಕಲನ ಇದು. 'ಹೊಲೆಮಾದಿಗರ ಹಾಡು' ಸಂಕಲನದಲ್ಲಿ ವಾಚ್ಯವಾಗಿದ್ದ ಆಕ್ರೋಶ । ಆರ್ಭಟಗಳಿಗೆ ಸಂಯಮದ ಔಚಿತ್ಯದೃಷ್ಟಿ ಮಾಡಿರುವುದಕ್ಕೆ ಈ ಕೃತಿ ಸಾಕ್ಷಿಯಾಗುತ್ತದೆ.

ಅನುಭವಗಳ ಸಾಂದ್ರತೆ, ವಿವರಗಳ ಸೂಕ್ಷ್ಮತೆ, ಭಾಷೆಯ ಸರಳತೆ ಮತ್ತು ಗೇಯತೆ—ಸಿದ್ಧಲಿಂಗಯ್ಯ ಅವರ ಕಾವ್ಯದ ಪ್ರಧಾನ ಅಂಶಗಳು, ಭಾವಗೀತ

ಸಂಪ್ರದಾಯದ ಪದಮಾಧುರ್ಯ, ಲಯ–ಲಾಲಿತ್ಯ, ಗೇಯ ಗುಣಗಳನ್ನು ಸಿದ್ಧಲಿಂಗಯ್ಯ ಅವರು ಬಳಸುವದಕ್ಕೂ, ಉಳಿದಂತೆ ಕಂಬಾರ, ನಿಸಾರ್, ಲಕ್ಷ್ಮೀನಾರಾಯಣಭಟ್ಟ ಮುಂತಾದವರು ಬಳಸುವದಕ್ಕೂ 'ಉದ್ದೇಶ'ದಲ್ಲಿ ಸ್ಪಷ್ಟಭೇದವಿದೆ ಕ್ಯಾಸೆಟ್ ಮತ್ತು ಸಿನಿಮಾ ಮಾಧ್ಯಮದಲ್ಲಿ ಜನಪ್ರಿಯವಾಗ-ತ್ತಿರುವ ಈ ಇಂಥವರ ಹಾಡುಗಳಲ್ಲಿ 'ಭಾವ'ವೊಂದನ್ನು (ಹೆಚ್ಚಾಗಿ ಶೃಂಗಾರ ಮತ್ತು ಕರುಣ) ತನ್ನೆಲ್ಲ ಮಗ್ಗುಲುಗಳಿಂದ ಅಲಂಕೃತಗೊಳಿಸುವದು ಕಂಡುಬರುತ್ತದೆ. ಈ ಹವ್ಯಾಸಕ್ಕೆ ಇವರಿಗೆ ನಿರ್ದಿಷ್ಟ ಕಾರಣಗಳು ಇದ್ದಂತಿಲ್ಲ. ಸಿದ್ಧಲಿಂಗಯ್ಯ ಅವರಲ್ಲಿ 'ತಾತ್ವಿಕ ನಿಲುವುಗಳ ಸ್ಪಷ್ಟತೆ'ಯ ವಾಹಕವಾಗಿ ಮಾತ್ರ ಅವರ ಪದ್ಯಗಳಿಗೆ ಹಾಡಿನ ಗುಣ ಬರುತ್ತದೆ. ಇವರ ಕಾವ್ಯದಲ್ಲಿ ಪ್ರಕೃತಿಯಾಗಲಿ, ಹೆಣ್ಣಾಗಲಿ ವಿಲಾಸಮೂಲ ರೋಮಾಂಚನಕ್ಕಾಗಿ ಬರುವದಿಲ್ಲ; ನಿಸರ್ಗಸಹಜ ಬದುಕು (ದಲಿತ)ಗಳ ಸ್ವಚ್ಛತೆಯ ಬೇಡಿಕೆಯಾಗಿ ಬರುತ್ತವೆ. ಸಿದ್ಧಲಿಂಗಯ್ಯನವರ ಕಾವ್ಯಸೌಂದರ್ಯದ ಗುಟ್ಟು ಇರುವದು ಇಲ್ಲಿಯೇ.

ಗುಡಿಸಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಕವನ ('ನನ್ನ ಕವನ')

ಸಾಮಾಜಿಕ ಜವಾಬ್ದಾರಿಯ ತೀವ್ರತೆಯನ್ನು ಅವರ ಕಾವ್ಯದ ಇಂಥ ಪ್ರತಿಸಾಲುಗಳೂ ಮನಗಾಣಿಸುತ್ತವೆ. 'ಹೊಲೆತನದ ಬೆಂಕಿಯಲ್ಲಿ ಸುಟ್ಟುಹೋದವು ಎದೆಯ ಹೂವು' ಎನ್ನುವಲ್ಲಿ ಕವಿಯ ವೇದನೆ ಎಷ್ಟು ಶಕ್ತಿಶಾಲಿಯಾದದ್ದು ಎಂಬುವನ್ನು ಗಮನಿಸಬೇಕು.

ಉಳ್ಳುವರ ಪ್ರೇಮದ ಆಹ್ವಾನ–ನಿರಾಕರಣೆ ಎರಡೂ ಮೃತ್ಯುಸೂಚಕಗಳೇ ಎಂಬುದನ್ನು 'ರಾಣಿಯ ಪ್ರೇಮ' ಕವಿತೆ ವೀರ್ಯವತ್ತಾಗಿ ಚಿತ್ರಿಸುತ್ತದೆ

ತನ್ನನ್ನು ಸರಸಕ್ಕೆ ಕರೆಯುವ ರಾಣಿಗೆ ಆಳು ಕೇಳುತ್ತಾನೆ "ಕೊಕ್ಕರೆಯೊಂದು ಮೀನ ಪ್ರೀತಿಸಿತು. ಈ ಪ್ರೇಮದ ಗುಟ್ಟೇನು. ಮಸೆದ ಕತ್ತಿಯು ಕೊರಳ ಪ್ರೀತಿಸಿತು, ಈ ಒಲವಿನ ಪರಿಯೇನು ?" ಕೊಕ್ಕರೆ–ಮೀನು. ಕತ್ತಿ–ಕೊರಳುಗಳ ನಡುವೆ ಎಂಥ ಪ್ರೀತಿ ? ನಿರಾಕರಿಸುತ್ತಾನೆ ಆಳು. ತಲೆಗೇರಿದ ವಿರಹದ ರಾಣಿ ಕೇಳುವದಿಲ್ಲ— 'ಮನದಾಳದ ನೋವೇರುತಲಿಹುದು, ತಲೆಯುತಿಕ್ಕು ಬಾರೋ' ಎಂದು ಆಲ್ಪರಿಯುತ್ತಾಳೆ. ಇತಿಹಾಸದಿಂದ ಕ್ರೂರ ಅನುಭವಗಳ ಪಾಠ ಕಲಿತ ಈ ಶೂದ್ರ 'ನೆಲ ಮುಗಿಲುಗಳ ಸಂಗಮ' ದುಸ್ಸಾಧ್ಯ ಎಂಬುವನ್ನು ಬಲ್ಲ. ಅರಮನೆಗೂ ಗುಡಿಸಲಿಗೂ ಎಲ್ಲಿಯ ಬೆರಕೆ ? ಅಂತ್ಯ ನೋಡಿ :

ಜೀತಗಾರನು ಜೀವಭಯದಲ್ಲಿ
ಊರ ಬಿಡುವೆನೆಂದ
ಬೇಲಿಮರೆಯಲ್ಲಿ ಹೆಣ ಬಿದ್ದಿತ್ತು
ನೋಡಿ ಪ್ರೇಮದಂದ.

೯. ನಾವು ಹುಡುಗಿಯರೇ ಹೀಗೆ (ವಿ. ಆರ್. ಪ್ರತಿಭಾ) :

ಈ ಸಂಕಲನದ ಕೇಂದ್ರವಾದ ಸ್ತ್ರೀ ಮಧ್ಯಮ ವರ್ಗದಿಂದ ಬಂದ ವಿದ್ಯಾವಂತೆ :

ತಲೆತಲಾಂತರಗಳಿಂದಲೂ
ನಮ್ಮ ಮಧ್ಯಮ ವರ್ಗದ ಹುಡುಗಿಯರು
ಬರುವದು ಒಂದೇ ಬ್ಯಾಂಡಿನಲ್ಲಿ ('ಮಾಲು')

—ಎಂದು ಕೊರಗುವ, ಭಾವನೆಗಳ ಮುಕ್ತತೆಗೆ–ಸಹಜತೆಗೆ ಹಾತೊರೆಯುವ ಈಕೆಗೆ 'ಅಯ್ಯೋ ನಾವು ಗಂಡಾಗಲಿಲ್ಲವಲ್ಲಾ' ಎಂಬಂಥ ಮಿಡುಕಾಟ ಇದ್ದರೆ ಆಶ್ಚರ್ಯವಲ್ಲ.

ಪ್ರಿಯತಮನ ನೆನಪಲ್ಲಿ ಕನಸುವ ಈ ಹುಡುಗಿ ತನ್ನವನ ಪೆದ್ದುತನ, ಸುಂದರ ಸಂಜೆ। ಮಳೆಯ ಕುರಿತು ಲವಲವಿಕೆಯಿಂದ ಆಡಿಕೊಳ್ಳುತ್ತಾಳೆ. ನಹರ ಪ್ರಜ್ಞೆಯ ಈಕೆಗೆ ಸಾಮಾನ್ಯವಾದ ಕಸೂತಿ, ಕಾವ್ಯದ ಹುಚ್ಚು ಸಹಜವಾಗಿಯೇ ಇದೆ. ಸೀಮಿತ ಪರಿಧಿ ಮೀರುವ ಒತ್ತಾಸೆ ಇದ್ದರೂ ಮೀರಲಾಗದ ಗೃಹಿಣಿಯ ಮಾನ, ಮಕ್ಕಳ ಪ್ರೇಮ ಅವಳನ್ನು ಮನೆಗೆ ಇನ್ನಷ್ಟು ಬಂಧಿಸಿದೆ :

ನನಗೆ ಅದೂ ಮನೆಯಲ್ಲ
ಇದೂ ಮನೆಯಲ್ಲ
ನನ್ನದೊಂದು ಮನೆಯೇ ಇಲ್ಲ ('ನಾನು')

ಎನ್ನುವಲ್ಲಿನ ಪರಕೀಯತೆ, ಏಕಾಕಿತನ, 'ಏನೇನೊ ವಟಗುಟ್ಟಿದರೂ ಹೇಳಬೇಕಾದ್ದನ್ನು ಹೇಳದೆ' ಒಳಗೊಳಗೇ ಅನುಭವಿಸಿ ಸಾಯಬೇಕಾದ ಸಾಮಾಜಿಕ ನೀತಿ ಸಂಹಿತೆ ಸೃಷ್ಟಿಸಿದ ಅಸಹಾಯಕತೆ—ಹೀಗೆ ಹೆಣ್ಣಿನ ಹೊರ ಹಾಗೂ ಒಳ ಪ್ರಪಂಚದ ಚಡಪಡಿಕೆ–ತಲ್ಲಣಗಳ ಸಮರ್ಥ ಅಭಿವ್ಯಕ್ತಿ ಈ ಸಂಕಲನದಲ್ಲಿದೆ.

ಕವಯತ್ರಿ ಪ್ರತಿಭಾ ಎಲ್ಲರಂತೆ ಖಾಸಗಿಯಾಗಿ ತನ್ನನ್ನು ತೋಡಿಕೊಳ್ಳುತ್ತಿದ್ದರೂ ಅವರಿಗೆ ಹೆಣ್ಣಿಗೆ ಸಾಮಾನ್ಯವಾದ, ಹೆಣ್ಣಿನ ಸಮಗ್ರ ಬದುಕಿನ ಎಲ್ಲ ಸ್ತರಗಳನ್ನು ಮುಟ್ಟಿ ಮಾತಾಡುವ ತಾಕತ್ತು, ಆ ಗಂಭೀರ ತನ್ಮಯತೆ ಕಿಂಚಿತ್ತಾದರೂ

ಇರುವದರಿಂದ ಉಳಿದ ಲೇಖಕಿಯರಿಗಿಂತ ಅವರು ಭಿನ್ನವಾಗುತ್ತಾರೆ. ಅವರ ತಂತ್ರ ಕೌಶಲಕ್ಕೆ 'ಬೀರು'ವಿನಂಥ ಕವಿತೆಗಳು ಉತ್ತಮ ಮಾದರಿ.

ಹೆಣ್ಣಿನ ಮೇಲಾಗುವ ಪೋಲೀಸರ ಅತ್ಯಾಚಾರ। ಕ್ರೌರ್ಯ, ವರದಕ್ಷಿಣೆಯ ಸಾವುಗಳು, ಶ್ರೀಮಂತರ ಭೋಗಕ್ಕಾಗಿ ದುಡಿಯುವ ಮಹಿಳೆಯರು—ಹೀಗೆ ವಸ್ತು ವೈವಿಧ್ಯತೆಯಿಂದ ಪ್ರತಿಭಾ ಅವರ ಕಾವ್ಯಕ್ಕೆ ವಿಸ್ತಾರ ಬಂದಿದೆ. ಅನುಭವದ ಆಳ–ಅಗಲಗಳು, ಭಾಷೆಯ ಬಿಗುವು, ರೂಪಶಿಲ್ಪದ ಗಟ್ಟಿತನ, ಸಮಕಾಲೀನತೆಯ ಸ್ಪಂದನಗಳು ಪ್ರತಿಭಾ ಅವರ ಕಾವ್ಯಜೀವನವನ್ನು ಕುತೂಹಲದಿಂದ ಎದುರುನೋಡು ವಂತೆ ಮಾಡುತ್ತವೆ.

೧೦. ನಂ ರೊಪ್ಲಿ (ಬಿ. ಟಿ. ಲಲಿತಾ ನಾಯಕ) :

ರಾಜಕೀಯ ಸಿದ್ಧಾಂತ ಇಲ್ಲವೆ ಘೋಷಣೆಗಳಾಗಲೀ, ಸಾಮಾಜಿಕ ಪ್ರತಿಭಟನೆ ಗಳಾಗಲಿ ಅನುಭವದಲ್ಲಿ ರಸಾಯನಗೊಳ್ಳದೆ ಕಾವ್ಯದಲ್ಲಿ ತಪ್ಪತ್ತಾಗಿ ಅಚ್ಚಾದಾಗ ಎಂಥದೇ ಮಾತಿನ ಚಾತುರ್ಯದ ನಡುವೆಯೂ ಕವಿತೆ ಜಗ್ಗುತ್ತದೆ ಎಂಬುದನ್ನು ಲಲಿತಾ ಮರೆತಿದ್ದಾರೆ.

ಕೆಳವರ್ಗದ ನಾಯಕತ್ವ ಹೊಂದಿರುವ ಲಲಿತಾ ನಾಯಕರು ತಮ್ಮ ಸಾಮಾ ಜಿಕ ಹೋರಾಟದ ವ್ಯಕ್ತಿತ್ವದಿಂದ ನಮಗೆ ಪ್ರಿಯವಾಗುವಷ್ಟು ಕಾವ್ಯವ್ಯಕ್ತಿತ್ವದಿಂದ ಆಗುವದಿಲ್ಲವೆಂದೇ ಹೇಳಬೇಕು. ವೈಚಾರಿಕ ಒರಟುತನ ಮತ್ತು ಕಾವ್ಯಾತ್ಮಕ ನಯ ಗಳು ಕೂಡಿಹೋಗದೆ ಕಾವ್ಯಕಲೆ ಸಿದ್ಧಿಸುವದಿಲ್ಲ ಎಂಬುದನ್ನು ಮರೆಯಲಾಗದು.

ಅನುಭವದ ತಾಜಾತನದಿಂದ ರಂಜಿಸವ 'ವೇದಾವತಿ ನದಿಯಲ್ಲಿ ಮುಳುಗಿದ ಸೂಳೆ' ಅಭಿವ್ಯಕ್ತಿಯಲ್ಲಿ ಗಟ್ಟಿಯಾಗಿದ್ದು ರಂಜಿಸುತ್ತದೆ :

ಹಳ್ಳದ ನೆರೆ ಬಂದಾಗ ಕೊಚ್ಚಿಹೋದವಳು
ಪುರಲೆ ಕಟ್ಟಿಗೆ ಹೊತ್ತು ರೋಡಿನಲಿ ಬರುವಾಗ
ರಾಜಧಾನಿಗೆ ಹೊರಟಿದ್ದ ಕೆಂಬಸ್ಸಿನಡಿ ಸಿಕ್ಕಿ ಸತ್ತವಳು

ಎಂಬಲ್ಲಿನ ಪ್ರತಿಮಾ ವಿಧಾನ ಕಣ್ಣಿಗೆ ಕಟ್ಟುತ್ತದೆ. ಆದರೆ "ಗುಂ. ದರ್ಬಾರಿನಲ್ಲಿ ಅವನ ನೆನಪು 'ಭ್ರಮನಿರಸನ'-ಅನುಭವದ ತೇಲುತನದಿಂದ ಕೃಶವಾದ ಪದ್ಯಗಳು 'ಮುಂಜಾವು' ಪದ್ಯದಲ್ಲಿನ ಬಿಗುವು 'ಅಂಬೇಡ್ಕರ ಮಾಹಿತಿ ಅದ ನಿಮಗ' ಕವಿತೆಯಲ್ಲಿ ಉಳಿಯುವದೇ ಇಲ್ಲ.

ಶಿವಾಜಿ ಪ್ರತಾಪರಂಥ ರಾಜರನ್ನು ಗೆಲ್ಲಿಸುತ್ತ, ಗಾದಿಯಲ್ಲಿ ಕೂರಿಸುತ್ತ, ಹಿಂದೆ ಹಿಂದೆ ಉಳಿದುಹೋದ ಹಿಂದು ಜನಗಳು' ('ಸಂ ರೂಪ್ಲಿ ಮತ್ತು ಕಚ್ಚೆಹರುಕ ನಾಯಿ') ಎಂಬ ಸಾಲುಗಳಲ್ಲಿನ ಧ್ವನಿರಮ್ಯತೆ ಮೆಚ್ಚಿಗೆಯಾಗುತ್ತದೆ.

ಪ್ರಸ್ತುತ ಸಂಕಲನದ ಮೇಲೆ ಲಲಿತಾ ನಾಯಕರ ಕಾವ್ಯದ ಭವಿಷ್ಯವನ್ನು ನಿರ್ಧರಿಸುವದು ಸಾಧ್ಯವಿಲ್ಲ (ಸಾಧುವೂ ಅಲ್ಲ)ವಾದರೂ, ಅನುಭವ ಹರಳುಗಟ್ಟುವ ಕ್ರಿಯೆಯಲ್ಲಿ ಪ್ರಬಲ ಅಡ್ಡಿಯಾಗುತ್ತಿರುವ ಕಾವ್ಯದ ಬಹಿರ್ಮುಖತೆಯನ್ನು ಅವರು ನಿಯಂತ್ರಿಸಬೇಕಾದುದು ಅನಿವಾರ್ಯ ಎಂದಷ್ಟೇ ಹೇಳಬಹುದು.

೧೧. ನಾ ಬಸ್ಯಾ ಅಂತ (ಸಿದ್ದನಗೌಡ ಪಾಟೀಲ) :

ಬಂಡಾಯ–ದಲಿತ ಕಾವ್ಯ ಮಾರ್ಗದಲ್ಲಿ ಸಹಜವಾದ ಸಾಮಾಜಿಕ ಪ್ರತಿಭಟನೆ, ಶೋಷಣೆಯ ತಪ್ತತೆ, ತ್ರಸ್ತಜನಾಂಗದ ವಿಷಾದಗಳು ಹೊಸ ಕವಿಯಲ್ಲಿ ಕಾಣಿಸಿ ಕೊಂಡಾಗ ಅವು ಉಂಟು ಮಾಡುವ ಆವೇಶ, ರೊಚ್ಚು–ರಭಸಗಳು ಸಹಜ ಎನ್ನು ವಷ್ಟು ಅತಿಯಾಗಿ ಬರುತ್ತಿರುವ ಸದ್ಯದ ಸನ್ನಿವೇಶದಲ್ಲಿ ಕವಿ ಸಿದ್ದನಗೌಡ ಪಾಟೀಲ ತಕ್ಕಮಟ್ಟಿನ ಭರವಸೆ ಮೂಡಿಸುತ್ತಾರೆ. ಇದರರ್ಥ, ಈ ದೌರ್ಬಲ್ಯಗಳಿಂದ ಇವರು ಪೂರ್ತಿ ಪಾರಾಗಿದ್ದಾರೆ ಎಂದಲ್ಲ.

ಪಾಟೀಲರ ಈ ಚೊಚ್ಚಿಲು ಸಂಕಲನದ ನಾಯಕ ಮಾನವ ಸಹಜ ಪ್ರೀತಿ ಅಂತಃಕರಣಗಳಿಂದ ವಂಚಿತನಾದ ಒಬ್ಬ ದಲಿತ ಯುವಕ ತನ್ನನ್ನು ಸಾಮಾಜಿಕವಾಗಿ ತುಳಿಯುತ್ತಿರುವವರ ವಿರುದ್ಧ ಆತನಲ್ಲಿ ಸಹಜವಾದ ರೋಷವಿದೆ. ತನ್ನ ಮೇಲೆ ಸಾಹಿತ್ಯ ಬರೆದು, ಚಿತ್ರ ತೆಗೆದು ಹೆಸರು ಮಾಡಿದವರು ತಾನೇ ಎದುರಾದಾಗ ತನ್ನನ್ನು ಕಾಣುವ ಕ್ಷುಲ್ಲಕತನಕ್ಕೆ ಆತ ರೋಸಿ ಚೀತ್ಕರಿಸುತ್ತಾನೆ—

ನಮ್ಮ ಬಡೀತಿದ್ದ ಹೃದಯಾನ
ನಿಮ್ಮ ಮಕ್ಕಳಿಗೆ ಆಡಾಕ ಕೊಟ್ಟ ಜನ
ನಮ್ಮ ಜೀವದ ತಂತಿ ಹರಿಯೂವರೆಗೂ
ಮೀಟಿಸಿ ನಾದ ಹೊರಡಿಸಿ ಆನಂದಿಸಿದ ಜನ
ನಮ್ಮ ಮ್ಯಾಲ ನಿಮ್ಮ ಕಾರ ಹಾದಾಗ
ಕಣ್ಣೀರಿಸಿಂದ ನಕ್ಕ ಜನಾ ನೀವು ('ಕಣ್ಣೀರಿನಿಂದ ನಕ್ಕ ಜನ')

—ಹೀಗೆ ವಿವರಗಳನ್ನು ದಾಖಲಿಸುತ್ತ ಹೋಗುವ ಈ ಕವಿ ಕೊನೆಗೆ 'ಆದರ ಇವ್ರ ಅಂತವರಲ್ಲ' ಎಂದು 'ಕೆಂಪು ಸೂರ್ಯಾನ್ನ' ತೋರಿಸುವ ಜನಗಳ ಅಪ್ಪುಗೆಗೆ ಕಾತರಿಸು ತ್ತಾರೆ. ಮಾರ್ಕ್ಸವಾದಿ ಜನಗಳ ಸ್ನೇಹ ಮತ್ತು ಅವರ ಕ್ರಾಂತಿ-ಕನಸುಗಳ ನಿರೀಕ್ಷೆ

ಕಾವ್ಯದ ಒಂದು ಭಾಗವಾಗಿ ಬಂದರೆ ತಪ್ಪಲ್ಲ; ಆದರೆ ಅದೇ ಮುಂದಾಗಿ ಜೀವನಾನುಭವದ ಉತ್ಕಟತೆ ಹಿಂದೆ ಜಾರಿದರೆ ನಿಜವಾದ ಕಾವ್ಯ ಅದನ್ನು ಸಹಿಸುವದಿಲ್ಲ. ಬಹಳಷ್ಟು ಸಲ ಎಡವಟ್ಟಾಗುವದು ಇಲ್ಲಿಯೇ. ಮಾದರಿಗೆ ಕೆಳಗಿನ ಸಾಲುಗಳನ್ನು ನೋಡಿ :

ಅಸಮಾನತೆಯು ಮೆಟ್ಟಿ ಕೆಂಪು ಧ್ವಜ ಹಾರಲಿ
ಎಲ್ಲೆಲ್ಲೂ ಸಮಾನತೆಯು ಘೋಷಣೆ ಮೊಳಗಲಿ
ಎಲ್ಲೆಲ್ಲೂ ಸಮಾನತೆಯು ಮಹಾಪೂರ ಹರಿದುಬರಲಿ
('ಕೊಚ್ಚಿಹೋಗಲಿ')

ಮತ್ತೆ ಮುಂದುವರಿದು ಹೇಳುತ್ತಾರೆ–'ಓ ಮಹಡಿಯುವರೇ. ಅವರೂ ನಿಮ್ಮಂತೆ ಮಾನವರಂತೆ ತಿಳಿಯಿರಿ', 'ಇದಕ್ಕಿಂತ ಮೊದಲು ಮಾನವರಾಗಿರಿ'('ಮಾನವರಾಗಿರಿ) ಕ್ಲೀಷೆಯಾಗಿರುವ ಇಂಥ ಸಾಲುಗಳು ಕಾವ್ಯದ ಶ್ರೇಷ್ಠತೆಗೆ ಮಾರಕ. ಕ್ರಾಂತಿಯ ಉತ್ಸಾಹ ಪದ್ಯದಲ್ಲಿ ನುಗ್ಗುವ ಪರಿ ಇದಲ್ಲ. 'ಚಂಪಾ ಅವರ ತರುವಾಯ ಉತ್ತರ ಕರ್ನಾಟಕದ ಮಣ್ಣಿನಿಂದ ಮೂಡಿಬಂದ......ಜನಕವಿ ಸಿದ್ಧಲಿಂಗಯ್ಯ' ಎಂದಿರುವ ಬಸವರಾಜಕಟ್ಟೀಮನಿ ಅವರ ಅತ್ಯುತ್ಸಾಹದ ಮಾತುಗಳಿಗೆ ಅರ್ಥವಿಲ್ಲ.

೧೨. ಹೇಳುವಾಂಗ ಆತು (ಭಾಸ್ಕರ ಪತ್ತಾರ) :

ಚುರುಕಾದ ವ್ಯಂಗ್ಯ, ಕಿಲಾಡಿತನದಿಂದ ಮಿನುಗುವ, ಆದರೆ ಪದಬಳಕೆಯ ದುಂದುಗಾರಿಕೆಯಿಂದ ಬೇಸರ ತರಿಸುವ ಭಾಸ್ಕರ ಪತ್ತಾರ.' ಪ್ರಾಮಿಜಿಂಗ್' ಎನ್ನಬಹುದಾದ ಹಲವು ಪದ್ಯಗಳನ್ನು ಈ ಸಂಕಲನದಲ್ಲಿ ಕೊಟ್ಟಿದ್ದಾರೆ. ೬೦ ಕವಿತೆಗಳ ಈ ಸಂಕಲನದಲ್ಲಿ 'ಚಲೋ ಕವಿತಾ ಮೂಡತೈತಿ', 'ರಂಭೆ' 'ಬಸವಣ್ಣ', 'ಪ್ರಧಾನಿ ಜೋಗುಳ'ದಂಥ ಕವಿತೆಗಳು ಆಕರ್ಷಿಸುತ್ತವೆ.

ಕವಿತಾ ಬರಿಯೋದು
ಹ್ಯಾಂಗಂತ ನೀ ನನ್ನ ಕೇಳಬ್ಯಾಡ
ಕವಿತಾ ಬರಿಯೋದು ಕಲಿಸಾಕ
ನಮ್ಮಲ್ಲಿ ಅದಾವ ಎರಡು ಪಾಠಸಾಲಿ
ಒಂದು ಆಕ್ಸಫರ್ಡ್ ಮತ್ತೊಂದು ಕ್ಯಾಂಬ್ರಿಜ್
ಒಂದರ ಕುಲಪತ್ನಿ ಕುಂತಿ
ಮತ್ತೊಂದರ ಕುಲಪತ್ನಿ ಗಾಂಧಾರಿ
('ಚಲೋ ಕವಿತಾ ಮೂಡತೈತಿ')

ಎಂಬಂಥ ಸಾಲುಗಳಲ್ಲಿನ ತೀಕ್ಷ್ಣವ್ಯಂಗ್ಯ ಕವಿತೆಯುದ್ದಕ್ಕೂ ಕಾಣಿಸಿಕೊಂಡು ಹೊಸ ಅನುಭವ ನೀಡುತ್ತವೆ. ಇವರ ವಿಡಂಬನ ದೃಷ್ಟಿಗೆ ಇನ್ನಷ್ಟು ಚಿಂತನೆಯು ಕೂಡಿ ಮೂಡಿದರೆ ಇವರ ಜನಪದ ಭಾಷೆ–ಭಾವಕ್ಕೆ ಹೊಸ ಸತ್ವ-ಶಕ್ತಿ ಬರುವುದರಲ್ಲಿ ಸಂದೇಹವಿಲ್ಲ.

೧೩. ನಾನು ಮತ್ತು ಅವನು (ಎಚ್. ಎಸ್. ಮುಕ್ತಾಯಕ್ಕ) :

ಒಂದು ಕಾಲಕ್ಕೆ ನವ್ಯಕಾವ್ಯದ ಪುಟ ಪುಟಗಳಲ್ಲಿ ವಿಜೃಂಭಿಸಿದ್ದ ಬಿಚ್ಚುಕಾಮ ಆ ಕಾವ್ಯದ ಹಿನ್ನಡೆಯೊಂದಿಗೆ ಮರೆಯಾಯಿತು ಎನ್ನುವ ಹೊತ್ತಿಗೆ, ಈಗ ಬೇರೊಂದು ವೇಷ ತೊಟ್ಟು, ಅದೂ ಒಬ್ಬ ಲೇಖಕಿಯಿಂದ ಸಾಕಷ್ಟು ಬೆತ್ತಲೆಯಾಗಿ ಬಂದಿದೆ. ಪ್ರಣಯ ಮುಕ್ತಕಗಳಿಂದ ತುಂಬಿರುವ, ಎಚ್. ಎಸ್. ಮುಕ್ತಾಯಕ್ಕ ಅವರ 'ನಾನು ಮತ್ತು ಅವನು' ಅಂಥ ಒಂದು ಮುಕ್ತಕಾವ್ಯ. ಗಾಢ ಲೈಂಗಿಕಾ ಸಕ್ತಿಯ ವಿಕ್ಷಿಪ್ತ ನೋವುಗಳು ಮುಕ್ತಾಯಕ್ಕ ಅವರ ಈ ಪದ್ಯಗಳು; ಹೆಣ್ಣಿನ ಸಂಕೋಚ ಹಾಗಿರಲಿ, ಇವುಗಳ ಗುಣ 'ಶಾಂತ'ವಲ್ಲ ಎನ್ನುವುದು ಕಾವ್ಯಾಸಕ್ತರಿಗೆ ಕಳವಳ ತರುವ ಅಂಶ.

'ಲಿಬಿಡೊ ಕಾಮ'ದ 'ಅಬ್ಸೆಶನ್'ಗೆ ಒಳಗಾದಂತೆ ಬರೆಯುವ ಮುಕ್ತಾಯಕ್ಕ ಅವರ ಎಲ್ಲ ಪದ್ಯಗಳೂ ಲೈಂಗಿಕ ಚಿತ್ರಗಳಾಗಿವೆ ಎಂದು ನಾನು ಹೇಳಲಾರೆ. ಆದರೆ ಭಗ್ನ ಹೃದಯದ ಇಲ್ಲಿನ ನಾಯಕಿಯಲ್ಲಿ ತೀರಾ ಮುಕ್ತತೆ ವ್ಯಕ್ತವಾಗಿದ್ದು ಸುಳ್ಳಲ್ಲ. ಈ ವಿಕ್ಷಿಪ್ತತೆ ಮತ್ತು ವಿಷಾದ ಸಾಮಾಜಿಕ ಹಾಗೂ ಕಾವ್ಯಜೀವನಕ್ಕೆ ತುಂಬಾ ಆತಂಕಕಾರಿ. ಕನ್ನಡ ಕಾವ್ಯದ ಭಟ್ಟಿ ಹದಗೆಡುತ್ತಿರುವ ಈ ಸಂದರ್ಭದಲ್ಲಿ ಈ ಮಾತು ಗಳನ್ನು ಇನ್ನೂ ಒತ್ತಿ ಹೇಳುತ್ತಿದ್ದೇನೆ.

ನನ್ನ ಕವನಗಳೋದಿ
ತಮ್ಮನ್ನು ತಾವು
ಅದರಲ್ಲಿ ಕಂಡರೂ
ಮೂಗು ಮುರಿಯುವವರು
ಹಲವರಾದರೆ, ಮೆಚ್ಚಿ
ನಗುವವರು ಕೆಲವರು, ಈ
ಬದುಕಿಗೆ ಹೊರತಾದುದೇನನ್ನು
ನಾ ಬರೆದಿಲ್ಲವಲ್ಲ ?

—ಬದುಕು ಮತ್ತು ಕಾವ್ಯದ ಸಂಬಂಧವನ್ನು ಅಪಾರ್ಥ ಮಾಡಿಕೊಂಡಿರುವ ಈ ಲೇಖಕಿ, ತನ್ನ ಕಾವ್ಯಸಮರ್ಥನೆಗೆ ಮುಂದೆ ಮಾಡುವ ಸಮಜಾಯಿಷಿ ಇದು. ನಾವು

ಮೂಗು ಮುರಿಯುವವು ಹಾಗಿರಲಿ, ಬದುಕಿನ ಒಳಗೆ ಬರುವ ಏನೆಲ್ಲವನ್ನೂ ಕಾವ್ಯ ಮಾಡುವ ಈ ಹಟ ಎಷ್ಟು ಆರೋಗ್ಯಕರ ಎನ್ನುವವನ್ನು ಅವರು ಯೋಚಿಸಲಿ.

ಸ್ಯಾಂಪಲ್‌ಗೆ ಈ ಪದ್ಯ ನೋಡಿ :

ನಿನ್ನ ಬೇರು, ನನ್ನಲ್ಲಿ ಇಳಿದಂತೆ
ಇನ್ನೂ ಇಳಿಯಲೆಂಬ ಆಸೆ ಪ್ರಿಯಾ
ಆ ಬೇರ ಹಿಡಿಪು
ಹೊರಬಂದು ಅರಳುವವು
ಹೊಸ ಹೂವು ಮೈಯ ತುಂಬ, ನನ್ನ ಪ್ರಿಯಾ

ಇಲ್ಲಿ 'ಬೇರು' ಸಾಂಕೇತಿಕವಾಗಿದೆ, ಬಿಚ್ಚು ಏನು ಬಂತು ಅಂತಾ ವಾದಿಸಬಹುದು. ಗಂಡು-ಹೆಣ್ಣಿನ ಪ್ರಣಯಸಂಬಂಧದಲ್ಲಿ 'ಬೇರು,' ಆ 'ಇಳಿತರ' ಕ್ರಿಯೆ, ತತ್ಫಲವಾಗಿ ಮೈ ತುಂಬ ಅರಳುವ 'ಹೊಸ ಹೂವು' ಧ್ವನಿಸುವ ಅರ್ಥ ಅಷ್ಟು ನಿಗೂಢವಾಗಿದೆಯೆ ?

ಇಡೀ ಸಂಕಲನ ಎರಡು ಭಾಗಗಳಲ್ಲಿ ಹಂಚಲ್ಪಟ್ಟಿದೆ : (೧)' ನಮ್ಮ ಮುತ್ತಿನ ಹನಿಗಳು' (೨) 'ಈ ಜನಗಳ ನಡುವೆ'. ಇವರಲ್ಲಿ ಒಂದು ದಂಡೆ–ಗಂಡು–ಹೆಣ್ಣಿನ ಪ್ರಣಯ ಸಂಬಂಧದಿಂದ ಎದ್ದ 'ವಿಕ್ಷಿಪ್ತ'ದ ಅಲೆಯಾಗಿದ್ದರೆ, ಇನ್ನೊಂದು ದಂಡೆ-ಪ್ರಣಯಭಗ್ನತೆಯಿಂದ ಉಂಟಾದ 'ಒಂಟಿತನ'ದ ಕಿರುಸುಳಿಯಾಗಿದೆ. 'ನಾನೊಂದು ಸರಳ ರೇಖೆ,' 'ಏಕಾಂಗಿ' ಮುಂತಾದ ಪದ್ಯಗಳಲ್ಲಿ ಮಡುಗಟ್ಟಿರುವ ನೈರಾಶ್ಯ, ಅಸಹಾಯಕತೆ, ಏಕಾಕಿತನವನ್ನು ನೋಡಬಹುದಾಗಿದೆ. ಉತ್ತಮ ಕಾವ್ಯಪ್ರತಿಭೆ, ಭಾಷಿಕ ಎಚ್ಚರವನ್ನು ಹೊಂದಿರುವ ಮುಕ್ತಾಯಕ್ಕ ಅವರಿಂದ ಒಳ್ಳೆಯ ಕಾವ್ಯದ ನಿರೀಕ್ಷೆ ಮಾಡಬಹುದಾಗಿದೆ.

೧೪. ಬತ್ತದ ನೆನಪಿಗೆ ಬಾಡದ ಕಾವ್ಯ (ಬಸವಲಿಂಗ ಸೊಪ್ಪಿಮಠ) :

"ನೆಲದಾಳ ಹೊಕ್ಕ ಬೀಜ
ತನ್ನ ಸೀಳಿಕೊಳ್ಳದೆ
ಮಣ್ಣವಾಸನೆಯುಂಡು ನೀರ ಸೆಂಡದೆ
ಹಾಲ್ಗಚ್ಚಿ ಹಡೆಯುತ್ತೇನೋ ಇಡಿಗಾಳ ಬಾಳ ? ('ಔವಲ')

ಎಂದು ಕೇಳುವ ಬಸವಲಿಂಗ ಸೊಪ್ಪಿಮಠರು, ತಮ್ಮ ಈ ಪ್ರಥಮ ಸಂಕಲನದಲ್ಲಿ ಅನುಭವದ ತೆನೆ ಎಂದು ಹೇಳಬಹುದಾದ ಕೆಲವು ಕವಿತೆಗಳನ್ನಾದರೂ ಕೊಟ್ಟಿದ್ದು

ಸಮಾಧಾನಕರವಾಗಿದೆ. ಸಾರ್ಥಕ ಆಶಯುವ ಜೀವಂತ ಪ್ರತಿಮೆ 'ಔಡಲ', ಸಂಕಲನದ ಗಮನಾರ್ಹ ಕವಿತೆಗಳಲ್ಲೊಂದು.

ಬದುಕಿನ ಕ್ರೌರ್ಯದಿಂದ ಹುಟ್ಟಿದ ವಿಷಣ್ಣತೆ ಸೊಪ್ಪಿಮಠರ ಕವಿತೆಗಳ ಹಿಂದಿನ ನೋವಾಗಿದ್ದು ಬದುಕುವ ಛಲವನ್ನು ಪ್ರಕಟಿಸುತ್ತವೆ. 'ಇಂದಲ್ಲ ನಾಳೆ ನೋವು ಹಕ್ಕಳೆ ಮಾದು ನಗುವು ಚಿಮ್ಮೀತೆ ?' ಎಂದು ಎದುರು ನೋಡುವ ಕವಿಗೆ, ಹಾಗೆ ಎದುರಾಗುವದು ಬದುಕಿಗೆ ಚೈತನ್ಯ ತುಂಬುವ ನಗುವಲ್ಲ. 'ಬದುಕು-ಬಂದೂಕು'! 'ದಮ್ಮು ಸತ್ತಿಲ್ಲ, ಯುದ್ಧ ದಣಿವಲ್ಲಿಂದ' ಎಂಬ ಆತ್ಮವಿಶ್ವಾಸದ ಮಾತಾಡುವಲ್ಲಿ, ಕವಿ ಬದುಕನ್ನು ಹೋರಾಟವಾಗಿ ಸ್ವೀಕರಿಸಿರುವದು ವ್ಯಕ್ತವಾಗುತ್ತದೆ. 'ಕ್ರಾಂತಿ ಕಾಯುವದಿಲ್ಲ,' 'ಚಿತ್ರ', 'ಗಾಂಧಿ ಮತ್ತು ಜಗದಂಬಾ ಕ್ಯಾಲೆಂಡರ್' ಸಂಕಲನದ ಉತ್ತಮ ರಚನೆಗಳು. 'ಬನವಾಸಿ ಹಾಡು' ಈ ಸಂಕಲನದ ಬಹಳಷ್ಟು ಪುಟಗಳನ್ನು ಆಕ್ರಮಿಸಿದ ನೀಳ್ಗವನವಾಗಿದ್ದು ಅದರ ರಚನೆಯ ಉದ್ದೇಶವೇ ಅರ್ಥವಾಗುವದಿಲ್ಲ. 'ಅಮೃತಮತಿಯ ವಿರಹಗೀತ' ಪದ್ಯ, ಜಾನಪದ ಧಾಟಿಯಿಂದ ಆಕರ್ಷಿಸುತ್ತಿದ್ದರೂ ತನ್ನ ವಾಚ್ಯಗುಣದಿಂದ ನಿರೀಕ್ಷಿತ ಪರಿಣಾಮವನ್ನು ಕಳೆದುಕೊಳ್ಳುತ್ತದೆ. ಉತ್ತಮ ಕಾವ್ಯಪ್ರತಿಭೆ ಉಳ್ಳ ಸೊಪ್ಪಿಮಠರ ಮೇಲೆ ಚೆನ್ನವೀರ ಕಣವಿಯವರ ಪ್ರಭಾವ ದಟ್ಟವಾಗಿದೆ (ಉದಾ.ಗೆ–'ಫ. ಗು. ಹಳಕಟ್ಟಿ ಮತ್ತು ನಾವು' ಕವಿತೆ); ಅದರಿಂದ ಬಿಡಿಸಿಕೊಳ್ಳದ ಹೊರತು ಈ ಕವಿಗೆ ಸ್ವೋಪಜ್ಞತೆ ಸಾಧ್ಯವಾಗುವದಿಲ್ಲ.

೧೫. ಪಂಚಾಗ್ನಿ ಮಧ್ಯೆ (ಸುಕನ್ಯಾ ಮಾರುತಿ) :

"ಬರ ಹಿಡಿದಿದೆ ನನಗೆ
ಏನೇನೊ ಬರೆಯುವ
ಏನೆಲ್ಲ ಬರೆದು ಬೀಸಾಡುವ ಬರ" ('ಬರ ಹಿಡಿದಿದೆ')

ಎನ್ನುವ ಈ ಲೇಖಿಕಿ, ತಮ್ಮ 'ಬರ' ಓದುಗ–ವಿಮರ್ಶಕರ ಪಾಲಿಗೆ 'ಗರ'ವಾಗಿದೆ ಎನ್ನುವದನ್ನು ಮರೆತಿದ್ದಾರೆ. 'ಬರೆದು ಬೀಸಾಡುವ'ದು ರದ್ದಿಯಾಗುತ್ತದೆ, ಕವಿತೆಯಾಗುವದಿಲ್ಲ.

ಸುಕನ್ಯಾ ಅವರ ಕವಿತೆಗಳಲ್ಲಿ, ಸಂಕೇತ–ಪ್ರತಿಮೆ–ಪ್ರತೀಕಗಳ ಪುಷ್ಕಳ ತೂರಾಟ, ಭಾವೋನ್ಮಾದ, ವೈಚಾರಿಕ, ಅಸ್ಪಷ್ಟತೆ ಮತ್ತು ಅಸಹಾಯಕತೆ ಸಮೃದ್ಧವಾಗಿವೆ. ಅಪ್ರಬುದ್ಧ ಭಾವನೆಗಳ ಸುಸಂಗತತೆಗೆ ಇವರ ಭಾಷೆ ಕೂಡ ನೆರವಾಗದಿರುವದು ಶೋಚನೀಯ. ಕವಿತೆಯ ಒಟ್ಟು ಧೋರಣೆ ಮತ್ತು ರೂಪದಲ್ಲಿ ಇವರ ಕಾವ್ಯ ರಕ್ತಹೀನತೆಯಿಂದ ನರಳುವದೇ ಹೆಚ್ಚು.

ನೆಲೆಯು ನಾಲಿಗೆ ಚಾಚಿ
ಧಗಧಗಿಸುವ ದಳ್ಳುರಿ
ಕತ್ತಲು ಕೋಣೆಯಲ್ಲಿ
ಹೂತಿಟ್ಟ ಹುಳು ಹಿಡಿದ
ದವಸ ಧಾನ್ಯ
ವಸ್ತ್ರ ವಗೈರೆ
ಉರಿ ತಾಗಿದರೆ ಉಳಿದೀತೆ ? ('ಕಾಳ್ಗಿಚ್ಚು')

ಕವಯತ್ರಿಯು ಕ್ರಾಂತಿಕಲ್ಪನೆಯ ಬಾಲಿಶತನಕ್ಕೆ ಸಾಕ್ಷಿ ಈ ಚಿತ್ರ. ಇವರ ಕ್ರಾಂತಿಯ ಉರಿ ತಾಕುವದು ಉಳ್ಳವರ ದೌರ್ಜನ್ಯ. ಅಟ್ಟಹಾಸಗಳಿಗಲ್ಲ ಎಲ್ಲರ 'ಅನ್ನ'ದೇವರನ್ನ ('ದವಸ ಧಾನ್ಯ'). ದವಸ ಧಾನ್ಯ, ವಸ್ತ್ರ–ವಗೈರೆ ಸುಟ್ಟರೆ ಕ್ರಾಂತಿಯಾಗುತ್ತದೆ ಎಂದು ಯಾರು ಹೇಳಿದರು ಇವರಿಗೆ ? ದವಸ ಧಾನ್ಯ ಹೂತಿಡುವದು ಹೋಗಲಿ, ವಸ್ತ್ರ-ವಗೈರೆ ಹೂತಿಡುವವನ್ನು ನಾವು ಕಲಿತದ್ದು ಯಾವಾಗಿನಿಂದ ?!

'ನಾನು ನಾನಾಗುತ್ತೇನೆ' ಇವರ ಅಸಂಬದ್ಧತೆಯ ಅತಿರೇಕವನ್ನು ಪರಿಚಯಿಸುವ ಕವನ. 'ಹೆಣ್ಣು-ಗಂಡಿನ ಪ್ರೇಮವದು ಮರವಾಗಿ. ಟಿಸಿಲಾಗಿ, ಹೂವಾಗಿ. ಹೀಚಾಗಿ, ಕಾಯಾಗಿ, ಹಣ್ಣಾಗಿ, ಲಕ್ಷಾಂತರ ಬೀಜವಾಗಿ, ಜಗತ್ತಿನ ಮೂಲೆ ಮೂಲೆಗೆ ಹಬ್ಬಿ ಹರಡಿದಾಗ 'ನಾನು ಇಲ್ಲವಾಗಿ ನಾನು ನಾನಾ'ಗಿ "ವಿಶ್ವಮಾನವ" ವೈವಳಿಯುತ್ತಾನಂತೆ ! ಹ್ಯಾಗಿದೆ ಲೇಖಕಿಯ "ವಿಶ್ವಮಾನವ" ಕಲ್ಪನೆ ? ಗಂಡು–ಹೆಣ್ಣಿನ ಜೀವಸೃಷ್ಟಿಯ ವಿಸ್ತಾರವೇ 'ವಿಶ್ವಮಾನವತೆ' ಎನ್ನುವದಾದರೆ. ಜನಸಂಖ್ಯಾ ಸ್ಫೋಟದ 'ವರ'ದಿಂದ ನಾವೀಗ 'ಅತಿ ವಿಶ್ವಮಾನವ'ರಾಗಿ ಬೆಳೆದಿದ್ದೇವೆಂದು ಹೇಳಬೇಕಲ್ಲವೆ ?

ಇಲಿ ಹೆಗ್ಗಣಗಳು ಹೊಕ್ಕು ಅರಮನೆ ಕುಸಿಯೋದು ('ಒಂದು ಕಲ್ಲಿನ ಕಥೆ'). ಹಸುವೊಂದು 'ಕಾಡ ಮೃಗಗಳ ಜೊತೆ ಸ್ನೇಹ' ಬೆಳೆಸಿ (ಜಾಬಾಲಿ ಋಷಿಗಳ ಆಶ್ರಮದಿಂದ ತಪ್ಪಿಸಿಕೊಂಡ ಹಸುವಿರಬೇಕು ಇದು !) ಕಾಡಿನಲ್ಲಿ 'ಸ್ವತಂತ್ರ ಜೀವನ' ನಡೆಸೋದು ('ಒಂದು ಹಸುವಿನ ಕಥೆ'). 'ಮುದ್ದು ಮಕ್ಕಳ' ಬಾಯಲ್ಲಿ 'ಸೋಮೇಶ್ವರ ಶತಕ'ದ 'ಏಡಿ ಪಣ್ಣಾಗದೆ ಹರ ಹರಾ ಶ್ರೀ ಚೆನ್ನಸೋಮೇಶ್ವರಾ....' ಪದ್ಯ ಕೇಳಿಸೋದು ('ಮೂಕರೋದನ') ಮುಂತಾದ ಪವಾಡಗಳ ಮಾಲಿಕೆಯೇ ಈ ಸಂಕಲನದಲ್ಲಿದೆ. 'ಗೆಜ್ಜೆಯ ಝೇಂಕಾರ'. 'ಸಿದ್ಧತೆಯ ಸನ್ನಾಹ' ಮುಂತಾದ ರೂಪಕ ಸಂಚಯಕ್ಕೆ ಮಿತಿಯೇ ಇಲ್ಲ. ಸಂಕೇತ–ಪ್ರತಿಮೆಗಳನ್ನು ಎತ್ತಿಕೊಳ್ಳುವಾಗ ಅವುಗಳಿಗಿರುವ ಮೂಲ ಭಾವ ಪರಿಸರವನ್ನು ಲಕ್ಷಿಸದಿರುವದು ಇಷ್ಟೆಲ್ಲಾ ಅನಾಹುತಕ್ಕೆ ಕಾರಣ ಎಂಬುದನ್ನು ಬೇರೆ ವಿವರಿಸಬೇಕಿಲ್ಲ.

೧೬. ಭವ್ಯಮಾನವ (ಪ್ರಾ. ಸಂ. ಶಿ. ಭೂಸನೂರಮಠ) :

"ಸಕೃದ್ದರ್ಶನಕ್ಕೆ 'ಭವ್ಯಮಾನವ' ಕಾವ್ಯದ ಕಥಾನಾಯಿಕೆ ಮಹಾದೇವಿಯಕ್ಕ ನೆಂದು ತೋರಬಹುದು. ಆದರೆ ಕಾವ್ಯದೊಳಗೆ ಪ್ರವೇಶ ಮಾಡಿ ಆ ಪೂರ್ಣವಾಗಿ ಅವನ್ನು ಓದಿದರೆ 'ಮಾನವ'ನೆ ಮಹಾನಾಯಕನೆಂಬ ಮಾತು ತಾನೆ ಮನವರಿಕೆ ಯಾಗುತ್ತದೆ. ಒಂದು ದೇಶ ಪ್ರಾಂತ ಕಾಲ ಅವಧಿಯ, ಒಂದು ಧರ್ಮದರ್ಶನ ಜಾತಿ ಕುಲ ಪಕ್ಷ ಪಂಗಡದ ಮಾನವನಲ್ಲ ಈ ಮಾನವ" (ಪ್ರಸ್ತಾವನೆ : XLiii). ಹೀಗೆ ಅಂಖಿಡ ಮನುಕುಲವು ತಾಳಬೇಕಾದ ಪೂರ್ಣತ್ವದ ನಿಲವನ್ನು, ಏಕತೆಯ ನೆಲೆಯನ್ನು, ಮಾನವ–ಮಹಾಮಾನವನಾಗುವ ಪರಿಯನ್ನು, ಅದರ ವಿಸ್ತಾರದ ಎಲ್ಲ ಸೂಕ್ಷ್ಮಗಳನ್ನು ಮಹಾದೇವಿಯಕ್ಕನ ಜೀವನದ ಹಿನ್ನೆಲೆಯಲ್ಲಿ ಬಿಡಿಸಿಡುವ ಮಹಾ ಪ್ರಯತ್ನವನ್ನು ಸಂ. ಶಿ. ಭೂಸನೂರಮಠರು ಕೈಗೊಂಡು ಅವರಲ್ಲಿ ಯಶ ಸಾಧಿಸಿ ದ್ದಾರೆ. 'ಮಾನವ'ನೇ ಕಾವ್ಯದ ನಾಯಕನಾದುದು ನಮ್ಮಲ್ಲಿ ವಿರಳ. ಇಲ್ಲಿ ಮಹಾ ದೇವಿಯಕ್ಕ ಆ ಮಾನವನ ಸಂಕೇತ ಮಾತ್ರ. ೮೩೨ ಪುಟಗಳ ಈ ಬೃಹತ್ ಕಾವ್ಯ, ತನ್ನ ವಸ್ತುವಿನ ವಿಶಿಷ್ಟತೆಯಿಂದ, ಪ್ರಸನ್ನ ಬರವಣಿಗೆಯಿಂದ, ಶಕ್ತಿಶಾಲಿ ಭಾಷೆ ಹಾಗೂ ಅನುಭವದ ಗಟ್ಟಿತನದಿಂದ ನಮ್ಮನ್ನು ಗೆಲ್ಲುತ್ತದೆ. ಅನುಭಾವಲೋಕದ ವಿಶಾಲತೆಕ್ಕೆಗೆ ಬಿದ್ದು ಗೆದ್ದಿರುವ ಭೂಸನೂರಮಠರು ಈ ಮಹತ್ ಕೃತಿಯ ಮೂಲಕ ಕನ್ನಡ ನೆಲದಲ್ಲೊಂದು ಹೊಸ ಪವಾಡವನ್ನೇ ಮಾಡಿದ್ದಾರೆ. ಶೂನ್ಯಸಂಪಾದನೆಯ 'ಪರಾಮರ್ಶೆ' ಬರೆದ ಕೈಗಳಲ್ಲಿ ಇಂಥಭವ್ಯಕೃತಿ ಮೈದಾಳಿದ್ದು ಅಚ್ಚರಿಯೇನೂ ಅಲ್ಲ. ಈ ಕೃತಿಯು ಬಿಡುಗಡೆಯ ಸಂದರ್ಭದಲ್ಲಿ, ಕೀರ್ತಿನಾಥ ಕುರ್ತಕೋಟಿಯವರು ಈ ಕಾವ್ಯವನ್ನು 'ಮಹಾಕಾವ್ಯ'ವೆಂದು ಎತ್ತಿಹೇಳಿದ್ದಾರೆ. 'ಭವ್ಯಮಾನವ'ದಲ್ಲಿ ವಸ್ತು-ಭಾಷೆಯ ಮಹೋನ್ನತ ದರ್ಶನವನ್ನು ಕವಿ ಕಾಣಿಸಿದ್ದು ಸುಳ್ಳಲ್ಲವಾದರೂ, 'ಮಹಾ ಕಾವ್ಯ'ವಾಗಿ ಅದರ ನೆಲೆ–ಬೆಲೆಗಳನ್ನು ಗುರುತಿಸುವ ದೀರ್ಘಶ್ರಮವನ್ನು ಪ್ರಸ್ತುತ ಪ್ರಬಂಧದ ಮಿತಿಯಲ್ಲಿ ಚರ್ಚಿಸುವದು ನನಗೆ ಅಸಾಧ್ಯವಾಗಿದೆ. ರಾಮನ ಪುರಾಣ ಕತೆಯಲ್ಲಿ ಮಾನವೀಯ ಮೌಲ್ಯಗಳ ಮಹೋನ್ನತ ದರ್ಶನ ಮಾಡಿಸಿದ ಮಹಾಕವಿ ಕುವೆಂಪು ಅವರಿಂದ ಮೊದಲಾದ ಆಧುನಿಕ ಕನ್ನಡ 'ಮಹಾಕಾವ್ಯ'ದ ಪರಂಪರೆಯು ನಿಂತಿಲ್ಲ ಎನ್ನಲು ಸಂ. ಶಿ. ಭೂಸನೂರಮಠರ ಈ ಕಾವ್ಯ ಜೀವಂತ ಸಾಕ್ಷಿಯಾಗಿದೆ. ತನ್ನೆಲ್ಲ ಮಿತಿಗಳ ಮಧ್ಯೆಯೂ ಇದೊಂದು ಹೊಸಪ್ರಯೋಗವಾಗಿ ಕಾಣುತ್ತದೆ. ಮಾನವ ಲೋಕದ ಒಳಹೊರಗೆ ಮುತ್ತಿದ ಕತ್ತಲೆ ಕಳೆಯಲು ಈ ಕಾವ್ಯದಲ್ಲಿ ಮಹಾ ದೇವಿಯಕ್ಕನ 'ಗುರು ತಂದೆ' ಗುರುಚೆನ್ನಮಲ್ಲನಿದ್ದಾನೆ. ನಮ್ಮೆಲ್ಲರ ವರ್ತಮಾನ ಹಾಗೂ ಭವಿಷತ್ತಿಕ ಆತಂಕಗಳಿಗೆ ನಾಲಗೆಯಾಗಿರುವ ಗುರು ಚೆನ್ನಮಲ್ಲಯ್ಯನ ಶಿಷ್ಯ ಗಿರಿಮಲ್ಲನಿದ್ದಾನೆ. ಇಷ್ಟು ವಿಸ್ತಾರ ಹಿನ್ನೆಲೆಯಲ್ಲಿ ಎದ್ದುಕಾಣುವ 'ಮಹಾಮಾನವ' ಮಹಾದೇವಿಯಕ್ಕ ಇವರೆಲ್ಲರಿಗಿಂತ ಮುಂದೆಯೇ ಇದ್ದಾಳೆ.

ಕಲ್ಯಾಣಕಾಂಡ, ಶ್ರೀಶೈಲಕಾಂಡ, ಕತ್ತಲೆಯಕಾಂಡ, ಉದಯಕಾಂಡ, ಉಜ್ವಲಕಾಂಡ, ಭವ್ಯಕಾಂಡ—ಹೀಗೆ ಆರು ಕಾಂಡಗಳಲ್ಲಿ ಹರಡಿಕೊಂಡಿರುವ ಅಕ್ಕನ ಕಥೆಗೆ 'ಕಲ್ಯಾಣ' ಮೂಲವಾದರೆ 'ಭವ್ಯ' ಆಕೆಯ ನಿಜದ ನೆಲೆಯಾಗಿದೆ. ಕತ್ತಲೆಯಿಂದ ಉದಯಕ್ಕೆ, ಉದಯದಿಂದ ಉಜ್ವಲಕ್ಕೆ ಹೀಗೆ ಆಕೆಯ ಬೆಳಕಿನ ಜೀವನ ವಿಕಾಸಗೊಳ್ಳುತ್ತಲೇ ಹೋಗುತ್ತದೆ. ಹೃದ್ಯನಿರೂಪಣೆಯ ಕಾವ್ಯಸಿದ್ಧಿಗೆ 'ಕಲ್ಯಾಣ ಕಾಂಡ' ಉತ್ಕೃಷ್ಟ ಮಾದರಿಯಾಗಿದೆ. ಕಲ್ಯಾಣ ಪರಿಸರದಲ್ಲಿ ತಾ ಬಂದ ಹಾದಿಯ ಕತೆ ಬಿಚ್ಚುವ ಮಹಾದೇವಿಯಕ್ಕ ತಾನು ಕಲ್ಯಾಣದ ಹಾದಿ ಹಿಡಿಯಲು ನೆಪವಾದ ಕೌಶಿಕ ಅರಸನನ್ನು ಕ್ಷಮಿಸುವದು ಹಾಗಿರಲಿ, 'ವಂದಿಸುವೆ ಕೌಶಿಕನೆ ನೀ ಮಾಡಿದುಪಕಾರ, ಮೇರುಪರ್ವತ ಮೀರಿ ಭಾರವಾಗಿಹುದಯ್ಯ' (ಪುಟ. ೬೬) ಎಂದು ಕೈ ಮುಗಿಯುತ್ತಾಳೆ; ವಿಷಯ ಸಂಸಾರವನು ಕಿತ್ತೊಗೆವಂತೆ ಮೈಮೇಲಿನ ಹೊದಿಕೆ ತೊರೆದು ದಿಗಂಬರೆಯಾಗುತ್ತಾಳೆ. ಅರಸನ ಕಾಮಾಂಧತೆಯ ಬಗ್ಗೆ ಇಲ್ಲಿ ಅಕ್ಕನಲ್ಲಿ ಅನುಕಂಪವಿದೆ, ರೊಚ್ಚು ಉನ್ಮಾದಗಳಿಲ್ಲ. 'ಹರಿದು ಹಾಕಿದೆನರಸಾ–ಲೌಕಿಕದ ಕೃತಕವಾ! ಕಾರಣಿಕ ಮೂರುತಿಯೆ ಕೌಶಿಕ ಮಹಾದೊರೆಯೆ' (ಪುಟ–೬೭) ಎನ್ನುವಲ್ಲಿ ಸಂಸಾರ ಕುರಿತಾದ ಮೂಲಭೂತ ಜಿಗುಪ್ಸೆಯೇ ಅಕ್ಕನ ದಿಗಂಬರತನದ ಕಲ್ಯಾಣ ಹಾದಿಗೆ ಕಾರಣವಾಯ್ತು ಎನ್ನುವದು ಹೊಸವಿಚಾರವೆನಿಸಿದರೂ ಕಾವ್ಯಸಂದರ್ಭದಲ್ಲಿ ಅದು (turning point) ಪರಿಣಾಮಕಾರಕವಾಗಿಲ್ಲವೆಂದೇ ಹೇಳಬೇಕು. 'ಹೇಳರಸ ಹೇಳರಸ ಗಾಳಿಯುಟ್ಟಿಹುದೇನು ? ಬೆಳುದಿಂಗಳುಟ್ಟ ಬಟ್ಟೆಯ ಬಣ್ಣವೇನಯ್ಯ ? ಗಿಡು ಬಳ್ಳಿ ಕೆರೆ ಬಾವಿ ಸಾಗರಕೆ ಹೊದಿಕೆಯೆ ?' (ಪುಟ. ೬೭) ಎಂದು ತನ್ನ ದಿಂಗಬರತನಕ್ಕೆ ಮಹಾದೇವಿಯಕ್ಕ ಮಾಡಿಕೊಳ್ಳುವ ಸಮರ್ಥನೆ, ಕೊಡುವ ಸಮಜಾಯಿಷಿ ಹಾಸ್ಯಾಸ್ಪದವಲ್ಲವೆ ? ಬೆತ್ತಲೆ ಪ್ರಕೃತಿ ಮತ್ತು ಬೆತ್ತಲೆ ಹೆಣ್ಣಿನ ನಡುವಿನ ಅಂತರ. ಔಚಿತ್ಯಗಳನ್ನು ಗುರುತಿಸಿಕೊಳ್ಳದಷ್ಟು ಅಕ್ಕ ಸಾಮಾಜಿಕವಾಗಿ ಕುರುಡಳೆ ? ಅಲೌಕಿಕ ಜಗತ್ತಿನಾಕರ್ಷಣೆಗೆ ಒಳಗಾದ ಭಾವೋನ್ಮಾದಳೆ ಆಕೆ ? ಇದೊಂದು ಕುಂದು ಬಿಟ್ಟರೆ 'ಕಲ್ಯಾಣ ಕಾಂಡ' ಮಿಕ್ಕೆಲ್ಲ ವಿವರಗಳಲ್ಲಿ ಹೃದಯಸ್ಪರ್ಶಿಯಾಗಿದೆ. ಸಾವಿಲ್ಲದ ರೂಹಿಲ್ಲದ ಚೆಲುವ ಚೆನ್ನಮಲ್ಲಿಕಾರ್ಜುನನನ್ನು ಕೂಡಲು ಧಾವಂತಗೊಳ್ಳುವ ಅಕ್ಕನ ಅಂತರಂಗದ ವಿರಹ. ಶರಣಗಣದಿದಿರು ತನ್ನನ್ನು ತೋಡಿಕೊಳ್ಳುವದು ಮಾರ್ಮಿಕವಾಗಿದೆ. ವಿಶಿಷ್ಟವಾದ ಭಾಷೆಯನ್ನು ಲೀಲಾಜಾಲವಾಗಿ ಬಳಸಿಕೊಳ್ಳುವ ಸಾಮರ್ಥ್ಯವನ್ನು ಭೂಸನೂರಮಠರು ಖಂಡಿತ ಪಡೆದಿದ್ದಾರೆ. ಶರಣರ ವಚನಾಧ್ಯಯನದಲ್ಲಿ ಹುರಿಗೊಂಡ ಭಾಷೆ ಅವರದು.

'ಭವ್ಯಕಾಂಡ'ದಲ್ಲಿ ಗುರುಚೆನ್ನಮಲ್ಲಯ್ಯ ಪ್ರಶ್ನಿಸಿಕೊಳ್ಳುತ್ತಾನೆ—'ಸಂದಿಗ್ಧ ಮಾನವನ ಕೈಯೊಳಗಮಾನುಷವ ಶಕ್ತಿಚೈತನ್ಯಗಳು ವಶವಾಗಿ ನಡೆದರೆ, ಯಾರು ಬಲ್ಲರು ತಂದೆ ಜಗ ಬದುಕಬಹುದೆಂದು ?' (ಪುಟ ೮೨೮). ವಿನಾಶದಂಚಿನಲ್ಲಿರುವ

ವಿಜ್ಞಾನ ಜಗತ್ತಿನ ಇಂಥ ಆತಂಕದ ನಡುವೆಯೂ ನಮ್ಮೊಡನೆ ನಿಲ್ಲುವ ಅಕ್ಕನ ಈ ಮಾತು ನೋಡಿ :

"ಮರ್ತ್ಯಲೋಕದ ರುಚಿಯು ಬಿಡಲಾರೆನಯ್ಯಾ
ದೇಹ ಬಿದ್ದರು ಹರಣ ಹಾರಿದರು ಮನವಾರಿ
ಹೋದರೂ ಹೋಗಲಿ ಬಿಡಲಾರೆ ಮರ್ತ್ಯವನು" (ಪುಟ ೮೩೧)

—ಪರವನ್ನು ತಾಕಿಯೂ ಅಕ್ಕ ಉಳಿಸಿಕೊಂಡಿರುವ ಈ ಇಹದ ಮೋಹ ನಮಗೆ ಆಪ್ತವಾಗಿ ನಿಲ್ಲುವ ಅಂಶ. 'ಭವ್ಯಮಾನವ' ದಂಥ ಬೃಹತ್‌ಕೃತಿಗಳ ಶ್ರಮದ ಸಾರ್ಥಕತೆ ಇರುವುದು ಈ-ಇಂಥ ದರ್ಶನ/ಸಂದೇಶಗಳಲ್ಲಿ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಬಹುಳಷ್ಟು ಇಂಥ ಕಾರಣಗಳಿಂದ 'ಭವ್ಯಮಾನವ' ನಮಗೆ ಇವತ್ತು 'ರೆಲವಂಟ್' ಆಗಿ ಕಾಣಿಸುತ್ತದೆ.

'ಭವ್ಯಮಾನವ'ದೊಂದಿಗೆ ಈ ವಿಮರ್ಶಾಪ್ರಬಂಧವನ್ನು ಮುಗಿಸುತ್ತಿದ್ದೇನೆ. ೮೩ರ ಎಲ್ಲ ಸಂಕಲನಗಳು ಇದರಲ್ಲಿ ಸಮಾವೇಶವಾಗಲಿಲ್ಲವೆಂಬ ಅತೃಪ್ತಿ।ಅಸಹಾಯಕತೆಯನ್ನು ಪುನರುಚ್ಚರಿಸುವುದು ನನಗೆ ಅನಿವಾರ್ಯವಾಗಿದೆ. ಸಿಗದಿರುವ ಸಂಕಲನಗಳಲ್ಲಿ ಇನ್ನೂ ಅತ್ಯುತ್ತಮ ಕಾವ್ಯಮಾದರಿಗಳು ಇದ್ದಿರಬಹುದೆಂಬ ನಿರೀಕ್ಷೆ ಇಟ್ಟುಕೊಂಡರೂ ಸತ್ವದ ದೃಷ್ಟಿಯಿಂದ ೮೩ರ ಕನ್ನಡಕಾವ್ಯ ಸಮೃದ್ಧಬೆಳೆಯೇನಲ್ಲ. ಪ್ರಯೋಗಶೀಲತೆ, ಪಕ್ವತೆ, ಅಪ್ರಬುದ್ಧತನ—ಹೀಗೆ ಸಮ್ಮಿಶ್ರ ಫಲ ೮೩. ಉತ್ಸಾಹದಿಂದ ಕಾವ್ಯಜಗತ್ತಿಗೆ ಕಾಲಿಟ್ಟ ಹೊಸಕವಿಗಳಲ್ಲಿ ಕಾವ್ಯಶ್ರದ್ಧೆ ಕಡಿಮೆಯಾದರೂ ಪ್ರತಿಭೆ ನಿರಾಕರಿಸುವಂತಿಲ್ಲ. ತನ್ನ ಮಿತಿಗಳ ನಡುವೆಯೂ ಮಹಿಳಾಕಾವ್ಯ ದಿಟ್ಟತನ ಹಾಗೂ ವಿಸ್ತಾರವನ್ನು ಪಡೆದುಕೊಳ್ಳುತ್ತಿರುವುದು ಗಮನಾರ್ಹವಾಗಿದೆ. ಬಂಡಾಯ ದಲಿತ ದನಿಗಳಿಗೆ ಕೊರತೆಯಿಲ್ಲವಂತೆ ಗಮನಾರ್ಹ ಸಂಖ್ಯೆಯ ಸಂಕಲನಗಳು ಬಂದಿದ್ದರೂ ಶಿಥಿಲ ರಚನೆಯ ಅಪಾಯದಿಂದ ಅವು ಪೂರ್ತಿ ಪಾರಾಗಿಲ್ಲ. ಏನು ಹೇಳಿದರೂ, ಸಂಕ್ರಮಣ ಸ್ಥಿತಿಯಲ್ಲಿ ನೆಲಕಟ್ಟಿರುವ ಕನ್ನಡ ಕಾವ್ಯದ ಚೇತರಿಕೆಗೆ ನಮ್ಮ ಕವಿಗಳು ಎದುರಿಸಬೇಕಾದ ಸವಾಲು, ಹೊರಬೇಕಾದ ಜವಾಬ್ದಾರಿ ಮಹತ್ತರವಾಗಿದೆ ಎಂಬುದನ್ನು ಮರೆಯದೆ ಕಾಣಿಸಬೇಕು. ೮೪ ಆ ಕೊರತೆಯನ್ನು ತುಂಬಿಕೊಡಲು ಶಕ್ತವಾಗಿದೆಯೆ ? ಬರಲಿರುವ ದಿನಗಳೇ ಆ ವಿಶ್ವಾಸವನ್ನು ದೃಢಪಡಿಸಬೇಕು.

ಕೊನೆಯದಾಗಿ, ನನ್ನ ಪರಿಶೀಲನದಿಂದ ತಪ್ಪಿಸಿಕೊಂಡ, 'ಗ್ರಂಥಲೋಕವಲ್ಲಿ' ಪ್ರಮುಖವಾಗಿ ಕಾಣಿಸಿಕೊಂಡ, 'ಸಂಕ್ರಮಣ'ದಂಥ ನಿಯತಕಾಲಿಕಗಳಲ್ಲಿ 'ಸ್ವೀಕಾರ'ವಾದ ಕೆಲವು ಸಂಕಲನಗಳ ಹೆಸರನ್ನಿಲ್ಲಿ ಕಾಣಿಸುತ್ತೇನೆ

ಅಜ್ಞಾತ (ಅರವಿಂದ ನಾಡಕರ್ಣಿ), ನವಪಲ್ಲವ (ಕೆ. ಎಸ್. ನರಸಿಂಹಸ್ವಾಮಿ), ಹಾಡು ಕಟ್ಟುವ ಮಾತು (ಜಯಸುದರ್ಶನ), ನಿಮ್ಮವೂ ಇರಬಹುದು (ಸುಬ್ರಾಯ ಚೊಕ್ಕಾಡಿ), ಅಗ್ನಿಕಾವ್ಯ (ರವಿ ಬೆಳಗೆರೆ), ಅಂಬಾರ ಕೊಡಲು (ವಿಷ್ಣು ನಾಯ್ಕ), 'ಉಡಿದಾರ' ಮತ್ತು 'ಸೊನ್ನೆಯಿಂದರ ನಡುವೆ' (ಸುಜನಾ), ಆಂತ್ಯಜ (ಬಿ. ರಾಮ ಕೃಷ್ಣ), ಮಾತಾಡಿ ಹೆಣಗಳೆ (ಡಾ। ಬಸವಪ್ರಭು ಪಾಟೀಲ), ಯಕ್ಷಪ್ರಶ್ನೆ (ಬಾಳೇಶ ಲಕ್ಷೆಟ್ಟಿ), ಹೊಸಕಾಲ ಬಂತ (ಧರಣೇಂದ್ರ ಕುರಕುರಿ), ಮರೆತ ಸಾಲುಗಳು (ಎಚ್. ಎಸ್. ವೆಂಕಟೇಶಮೂರ್ತಿ), [illegible] (ಮುರಿಗೆಯ್ಯ ಬಿಜಾಪುರ), ಹೆಜ್ಜೆಗೆಜ್ಜೆ (ಬಿ. ಎಸ್. ಹರನ್), ಮಹಾಂತ ಚಿಂತನ (ಮಹಾಂತ ಪ್ರಿಯ), ಮಿಂಸು ಮಲ್ಲಿಗೆ (ಭವಾನಿ ಶಂಕರ), ಜೀವರಾಗ (ವೇದವ್ಯಾಸ ಜೋಶಿ), ಗರಿಗೆದರಿ (ಮಾಲತಿ ಪಟ್ಟಣ ಶೆಟ್ಟಿ), ನೋವೇ ಹೂವಾದಾಗ (ಜಿ. ಆರ್. ಕುಲಕರ್ಣಿ), ಮಳೆ ಬಿದ್ದ ನೆಲದಲ್ಲಿ (ಎಚ್. ಎಸ್. ಶಿವಪ್ರಕಾಶ್), ನಿರೀಕ್ಷೆ (ಒಡೆಯರ್ ಡಿ. ಹೆಗ್ಗಡೆ). ಮುಂಜಾವದ ಮುನ್ನ (ಟಿ. ನಾಗರಾಜ್), ನಿನ್ನ ಹೆಜ್ಜೆ ಗುರುತಿನ ಬಳಿ (ಸಿ. ವಿ. ಮುರಳೀಧರ), ನೆನೆನೆನೆದು (ದಸ್ತಗೀರ್ ಅಲ್ಲೀಭಾಯಿ), ತಮ್ಮ ನಾಡಿನ ಹಾಡು (ಸಿದ್ಧಲಿಂಗಯ್ಯ), ಕಣ್ಣಗಲಿಸದೆ ಕೇಳು ಗೆಳೆಯಾ (ಎಂ. ಬಿ. ಅಡ್ನೂರ), ಬಯಕೆ ತಂಗಾಳಿ (ನಾಗೇಂದ್ರ ಲಾಡ), ದನಿಗಳು (ಹಂಪಣ್ಣ), ಒಡನಾಡಿ (ಗಂಗಾಧರ ನಂದಿ).

೧೯೮೩ ರ ಗಮನಾರ್ಹ ಕಾದಂಬರಿಗಳು ಸಮೀಕ್ಷೆ

● ಶಾಮಸುಂದರ ಬಿದರಕುಂದಿ

ವಾಚಕ ವರ್ಗದಲ್ಲಿ ಅತ್ಯಂತ ಜನಪ್ರಿಯವಾಗಿರುವ ಕಾದಂಬರಿಯು ಬಹುಜನ ಓದುಗರನ್ನು ಸಹಜವಾಗಿ ಸೆಳೆಯಬಲ್ಲ, ಸಮಕಾಲೀನ ಬದುಕಿನ ಕುರಿತು ಬಿಡುಬೀಸಾಗಿ, ಮೂರ್ತವಾಗಿ ಚಿಂತಿಸಬಲ್ಲ ಸಾಹಿತ್ಯರೂಪವಾಗಿದೆ. ವಿಸ್ತಾರವಾದ ಕತೆ ನಿರೂಪಿಸುವ ಮೂಲಕ ಓದುಗನನ್ನು ಸಾಕಷ್ಟು ಹೊತ್ತು ಸೆರೆಹಿಡಿಯಬಲ್ಲ ಕಾದಂಬರಿ, ಎಂಥ ಸಾಮಾನ್ಯ ಲೇಖನಿಂದಲೂ ಬರೆಸಿಕೊಳ್ಳಬಲ್ಲ ನಮ್ಯಗುಣ ಪಡೆದಿರುವುದರಿಂದ ಸಾಧಾರಣ ಉದ್ದಗಲದ ಒಂದು ಕತೆಯನ್ನು ಅವನ ಅನುಭವ, ಕಲ್ಪಕತೆ, ದೃಷ್ಟಿಕೋನದ ಆಳ-ಎತ್ತರಕ್ಕೆ ತಕ್ಕಂತೆ ಹಿಗ್ಗಿಸಿ, ಶೋಧಿಸಬಹುದಾದ ಸಾಧ್ಯತೆ ಈ ಪ್ರಕಾರಕ್ಕಿದೆ. ಪರಿಣಾಮವಾಗಿ, ಲೇಖನವೇ ವ್ಯವಸಾಯವಾಗಿರುವ ಲೇಖಕರಿಂದ ಹಿಡಿದು, ಹವ್ಯಾಸಕ್ಕಾಗಿ, ಹಣಗಳಿಕೆಗಾಗಿ. ಅಭಿವ್ಯಕ್ತಿಯ ವೈಯಕ್ತಿಕ ಒತ್ತಡದಿಂದಾಗಿ ಬರೆಯುವ ಲೇಖಕರವರೆಗೆ ಹಲವು ನಮೂನೆಯ, ವಿವಿಧ ಮಟ್ಟದ ಕಾದಂಬರಿಕಾರರಿಗೆ ಈ ಮಾಧ್ಯಮ ತನ್ನನ್ನು ಒಡ್ಡಿಕೊಂಡಿದೆ.

೧೯೮೩ರಲ್ಲಿ ಪ್ರಕಟಗೊಂಡ ಕಾದಂಬರಿಗಳ ಒಟ್ಟು ಸಂಖ್ಯೆ ಒಂದು ಅಂದಾಜಿನ ಪ್ರಕಾರ ಇನ್ನೂರಾ ಐವತ್ತನ್ನು ದಾಟಬಹುದು. "ಗ್ರಂಥಲೋಕ" ಉಲ್ಲೇಖಿಸಿರುವ ಕಾದಂಬರಿಗಳ ಸಂಖ್ಯೆ ಮಾತ್ರ ಒಂದು ನೂರಾ ಎಂಬತ್ನಾಲ್ಕು.[೧] ಇವನ್ನು ಹೊರತುಪಡಿಸಿ, ಅಸಂಖ್ಯಾತ ಪತ್ತೇದಾರಿ (ಮನರಂಜನೆಗಾಗಿ ಬರೆದವುಗಳು; ವ್ಯಾಪಾರೀ ಸರಕಾಗಿರುವ ಪುಸ್ತಕಗಳು) ಹಾಗೂ ಸ್ಥಳೀಯವಾಗಿ ಮಾತ್ರ ಮಹತ್ವ ಪಡೆದು ಉಳಿಯುವ ಅನಾಮಧೇಯ ಕಾದಂಬರಿಗಳೂ ಅನೇಕ ಇವೆ. ಸಾಹಿತ್ಯದ ಪ್ರಜ್ಞೆ; ಬದುಕಿಗೂ-ಸಾಹಿತ್ಯಕ್ಕೂ ಇರುವ ಸಂಬಂಧದ ಅರಿವೇ ಇಲ್ಲದೆ ಕತೆ ಹೇಳಬೇಕೆಂದು ಬರೆಯುವ ಕಾದಂಬರಿಕಾರರ ಒಂದು ಪಡೆಯೇ ಇರುತ್ತದೆ. ಇಂಥವನ್ನು ಗಮನಿಸಬೇಕಾಗಿಲ್ಲ. ಏಕೆಂದರೆ ಅವುಗಳ ಬಗ್ಗೆ ಎತ್ತಿ ಆಡುವಂಥ ಅಂಶ ಏನೂ ಇರುವದಿಲ್ಲ. ಹೀಗಿದ್ದೂ ಲೆಕ್ಕಕ್ಕೆ ಸಿಕ್ಕ ೧೮೪ ಕಾದಂಬರಿಗಳನ್ನು ಓದುವುದಂತಿರಲಿ,

---

೧. ಗ್ರಂಥಲೋಕ ಸಂಪುಟ : ೮; ಸಂಚಿಕೆ : ೬; ಜೂನ್ ೧೯೮೪

ನೋಡುವುದಕ್ಕೂ ಸಾಧ್ಯವಾಗದು. ಸಮಯಾಭಾವ, ಸ್ಥಳಾಭಾವದ ಕಾರಣದಿಂದಾಗಿ, ನಾನು ನನ್ನ ಸಮೀಕ್ಷಾ ಕೆಲಸವನ್ನು ಈ ಕೆಳಗೆ ಸೂಚಿಸಿದ ಮಾರ್ಗದಲ್ಲಿ, ಮಿತಿಯಲ್ಲಿ ಮಾತ್ರ ನಿರ್ವಹಿಸಲಿದ್ದೇನೆ :

೧. ಕತೆ, ವಸ್ತು, ಜೀವನದೃಷ್ಟಿ ಮತ್ತು ಶೈಲಿ-ತಂತ್ರಗಳಿಂದ ವಿಶಿಷ್ಟ ಹಾಗೂ ಅಪರೂಪ ಎನ್ನಿಸಿದ ಕೃತಿಗಳನ್ನು 'ಗಮನಾರ್ಹ' ಎಂಬ ಕಾರಣಕ್ಕಾಗಿ ಆರಿಸಿಕೊಳ್ಳಲಾಗಿದೆ.

೨. ಕಾದಂಬರಿ ಬರಹವನ್ನು ಸೃಜನಶೀಲ ಕಾರ್ಯವೆಂದು ಬಗೆದು, ಈ ಸಾಹಿತ್ಯಪ್ರಕಾರದ ಮೂಲಕ ತಮ್ಮನ್ನು ಶೋಧಿಸಿಕೊಳ್ಳಲು ಪ್ರಯತ್ನಿಸಿರುವ ಲೇಖಕರ ಕೃತಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಹೀಗಾಗಿ ಇಲ್ಲಿ ಗಣನೆಗೆ ಬಂದ ಕಾದಂಬರಿಗಳ ಸಂಖ್ಯೆ. ಇವನ್ನು ಬರೆದ ಲೇಖಕರಲ್ಲಿ ಕೆಲವರು ಈಗಾಗಲೇ ಖ್ಯಾತನಾಮರಾಗಿದ್ದವರು: ಉಳಿದವರು ತರುಣ (ಉದಯೋನ್ಮುಖರೂ ಅಹುದು) ಲೇಖಕರಾಗಿಯೂ ಹೊಸ ಭರವಸೆ ಹುಟ್ಟಿಸಬಲ್ಲವರಾಗಿದ್ದಾರೆ.

ನೆಲೆ

ಎಸ್. ಎಲ್. ಭೈರಪ್ಪನವರ ಈ ಕಾದಂಬರಿ, ಅವರ ಹದಿನಾಲ್ಕನೆಯ ಕೃತಿ. ಕಥನಗಾರಿಕೆಯಲ್ಲಿ ಹದವಾದ ಕಲಾಸಿದ್ಧಿ ಗಳಿಸಿರುವ ಭೈರಪ್ಪನವರು 'ಪರ್ವ'ದ ನಂತರ, ಅದೇ ಕಥನ ಶೈಲಿ-ತಂತ್ರ ಅನುಸರಿಸಿ ತಾತ್ತ್ವಿಕ ಆಲೋಚನೆಗಳ ಮೊತ್ತದಂತಿರುವ **'ನೆಲೆ'**[೨] ಬರೆದಿದ್ದಾರೆ. ವಿವೇಚನೆಗೆ ಒಳಗಾಗುವ ವಿಚಾರಾಂಶಗಳನ್ನು ಪಾತ್ರ ಮತ್ತು ಸನ್ನಿವೇಶಗಳ ನಿಕಟ ಸಂಯೋಜನೆಯೊಂದಿಗೆ ಪ್ರತಿಪಾದಿಸುವಲ್ಲಿ ಇವರು ಪಡೆದಿರುವ ಸಫಲತೆ. 'ನೆಲೆ'ಯ ಯಶಸ್ಸಿನ ಸಾಧನೆ. 'ಅನ್ವೇಷಣೆ'ಯ ನಂತರ ಭೈರಪ್ಪನವರು ಘಟನಾ ಪ್ರಧಾನ ಕಥನ ನಿರೂಪಣೆ ಬಿಟ್ಟು, ಪಾತ್ರಗಳ ಪ್ರಜ್ಞಾ ಪ್ರಧಾನ ಅನುಭವಗಳ ನಿರೂಪಣೆಯ ಕಡೆಗೆ ಹೊರಳಿದ್ದು, ಅವರ ಕಾದಂಬರಿಗಾರಿಕೆಯಲ್ಲಿಯ ಮಹತ್ವದ ಬೆಳವಣಿಗೆಯೂ ಆಗಿದೆ. ಮುಖ್ಯ ಪಾತ್ರಗಳ ಪ್ರಜ್ಞೆಯನ್ನು ಕೇಂದ್ರವಾಗಿಟ್ಟುಕೊಂಡು ಮನಸ್ಸು-ವಿಚಾರ-ಕ್ರಿಯೆ ಮತ್ತು ಪ್ರಸಂಗೋಚಿತ ಎದುರು ಬೀಳುವ ಅನುಭವಕ್ಕೆ ಆ ಪಾತ್ರ ನೀಡುವ ಪ್ರತಿಕ್ರಿಯೆಗಳನ್ನು ಒಟ್ಟೊಟ್ಟಿಗೇ ಗ್ರಹಿಸಿ, ನಿರೂಪಿಸಬಲ್ಲ ಪ್ರಜ್ಞಾ ಪ್ರವಾಹ ತಂತ್ರ, ಕಾದಂಬರಿ

---

೨. ನೆಲೆ : ಎಸ್. ಎಲ್. ಭೈರಪ್ಪ: ಸಾಹಿತ್ಯ ಭಂಡಾರ, ಬೆಂಗಳೂರು, ಪುಟಗಳು ೧೭೮: ಬೆಲೆ : ೧೨-೫೦

ಕಾರನ ವ್ಯಕ್ತ–ಸುಪ್ತ ಆಶಯಗಳನ್ನು ಸಾಕಷ್ಟು ವಿವರವಾಗಿ ವಿಶ್ಲೇಷಿಸಲ್ಲಿ ಸಾಧನೆಯಾಗುತ್ತದೆ. ಅಮೂರ್ತ ವಿಚಾರ ಮತ್ತು ಕಲ್ಪನೆಗಳಿಗೆ ಮೂರ್ತರೂಪ ಕೊಡುವದಕ್ಕೂ; ಕಾದಂಬರಿಕಾರನ ಪರ–ವಿರೋಧ ಧೋರಣೆಗಳನ್ನು ಕಾದಂಬರಿಯಲ್ಲೇ ನಿರ್ಮಾಣಗೊಳ್ಳುವ ಸನ್ನಿವೇಶದ ನಡುವೆ ಇಟ್ಟು ಪರೀಕ್ಷಿಸುವುದಕ್ಕೂ, ಒಟ್ಟಿನಲ್ಲಿ ಕಾದಂಬರಿಯ ಆಶಯ, ನಂಬಲರ್ಹ ವಸ್ತುವನ್ನಾಗಿಸುವುದಕ್ಕೂ ಈ ತಂತ್ರ ಹೆಚ್ಚು ಸಹಾಯಕ.

ಭೈರಪ್ಪನವರು ಪ್ರತಿಪಾದಿಸುವ ರಾಜಕೀಯ, ಸಾಮಾಜಿಕ, ಧಾರ್ಮಿಕ ನೀತಿ-ನಂಬಿಕೆಗಳನ್ನು ನಾವು ಒಪ್ಪಲಿ, ಬಿಡಲಿ. ಕಳೆದ ೨೫ ವರ್ಷಗಳಿಂದ ಅವರು ಕಾದಂಬರಿ ಪ್ರಕಾರದ ಮೂಲಕ ಅನೇಕ ಮೂಲಭೂತ ಸಮಸ್ಯೆಗಳನ್ನು ನಮ್ಮೆದುರು ಪ್ರಸ್ತಾಪಿಸಿದ್ದಾರೆ: ಚರ್ಚಿಸಿದ್ದಾರೆ. ಸಮಸ್ಯೆಗಳ ಸಹಜತೆ ಅಥವಾ ಸಂಕೀರ್ಣತೆಗಳನ್ನು ಅತ್ಯಂತ ಸೊಗಸಾದ ಕತೆಗಳಲ್ಲಿ ಅಳವಡಿಸುವ ಅವರ ಕೌಶಲ್ಯ ಅವರನ್ನು ಒಬ್ಬ ಗಮನಾರ್ಹ. ಜನಪ್ರಿಯ ಲೇಖಕರನ್ನಾಗಿ ಮಾಡಿರುವುದು ವಾಸ್ತವಿಕ ಸಂಗತಿ. ಈಗ 'ನೆಲೆ'ಯಲ್ಲಿ ಅವರು ವ್ಯಕ್ತಿ-ಕುಟುಂಬ-ವಿಶ್ವದ ಸಂಬಂಧದಲ್ಲಿ ಗೋಚರವಾಗುವ ಮೂರ್ತ-ಅಮೂರ್ತ ಕಲ್ಪನೆಗಳನ್ನು; ತಿಳುವಳಿಕೆಯ ಬಿರುಕುಗಳನ್ನು: ಸಾಮಾಜಿಕ ನೀತಿಯ ನೆಲೆ ಮೀರಿದ ವ್ಯಕ್ತಿಯ ಆಕಾಂಕ್ಷೆಗಳನ್ನು ಕಥೆ ಮಾಡಿದ್ದಾರೆ. ಇಲ್ಲಿಯ ಕತೆ, ವಸ್ತುನಿಷ್ಠೆಗೆ ಬಾಗಿ ಲೇಖಕನನ್ನು ವಸ್ತುನಿಷ್ಠ ನಿರೀಕ್ಷಕನನ್ನಾಗಿ ಮಾಡಿರುವುದು ಕಾದಂಬರಿಯ ಹೆಗ್ಗಳಿಕೆ.

ಸಾವಿನ ಗಾಢ ಹಿನ್ನೆಲೆಯಲ್ಲಿ ವ್ಯಕ್ತಿ ಜೀವನದ ಗೊತ್ತು–ಗುರಿ; ಅರ್ಥ ನಿರರ್ಥಕತೆಯನ್ನು ಹುಡುಕುತ್ತಿರುವ ಸಾಣೆಗೆರೆ ಕಾಳಪ್ಪ, ಕಾದಂಬರಿಯ ಪ್ರಧಾನ ಪ್ರಜ್ಞೆ. ಯಶಸ್ವೀ ಬಿಜಿನೆಸ್ ಮೆನೇಜರ್‌ನಾಗಿದ್ದು, ಜೀವಮಾನದ ಬಹುಕಾಲವನ್ನು ಸಫಲತೆಯ ತೃಪ್ತಿಯಲ್ಲಿ ಸವೆಸಿ, ಈಗ ವೃತ್ತಿ ವಿಶ್ರಾಂತಿ ಪಡೆಯುತ್ತಿರುವ ಕಾಳಪ್ಪ, ಅವಿವಾಹಿತ. ಶ್ರೀಮಂತ ವೃದ್ಧ. ಅವನ ಬಾಲ್ಯದ ಒಡನಾಡಿ, ಆತ್ಮೀಯ ಮಿತ್ರ ಜವರಾಯಿ, ಅರವತ್ತೈದನೆಯ ಪ್ರಾಯದಲ್ಲಿ ತೀರಿಕೊಂಡ ಸುದ್ದಿ ಕೇಳಿದೊಡನೆ ಕಾಳಪ್ಪ ಹಳ್ಳಿಗೆ ಧಾವಿಸುತ್ತಾನೆ. ಜವರಾಯಿ ಸತ್ತನಂತರ ಉಂಟಾದ ಅವನ ಕುಟುಂಬದ ಬಿಕ್ಕಟ್ಟಿನ ಸ್ಥಿತಿ ಗಮನಿಸುತ್ತಲೇ ಕಾಳಪ್ಪ ಸೂತಕದ ಹನ್ನೆರಡೂ ದಿನಗಳನ್ನು ಆ ಹಳ್ಳಿಯಲ್ಲಿ ಕಳೆಯುತ್ತಾನೆ. ಆಗ ಅವನ ಗಮನಕ್ಕೆ ಬಂದ ವಿವರಗಳು ಅವನ ಜೀವನ ದೃಷ್ಟಿಯನ್ನು ಇನ್ನಷ್ಟು ಪಕ್ವಗೊಳಿಸುತ್ತವೆ: ತನ್ನ ಬಗ್ಗೆ ತಾನೇ ಶೋಧಿಸಿಕೊಳ್ಳಲು ಹಾಗೂ ಒಟ್ಟು ಜೀವನದ ಅರ್ಥದ ನೆಲೆಯನ್ನು ಸ್ಥಿರ ಪಡಿಸಿಕೊಳ್ಳಲು ಕಾರಣವಾಗುತ್ತದೆ.

ಒಂಟಿತನ, ಲೈಂಗಿಕ ಹಸಿವು, ಸಂತಾನದ ಹಂಬಲ ಸಾವಿನ ನಿಗೂಢತೆಯಂತಹ ವೈಯಕ್ತಿಕ ಸಮಸ್ಯೆಗಳ ಸುಳಿಯಲ್ಲಿರುವ ಕಾದಂಬರಿಯು ಇತರ ಪಾತ್ರಗಳ ಸಫಲತೆ ವಿಫಲತೆಯ ಬೆಳಕಿನಲ್ಲಿ ಕಾಳಪ್ಪ ತನ್ನನ್ನು ಪರೀಕ್ಷಿಸಿಕೊಳ್ಳುತ್ತಾನೆ. ಈ ಆತ್ಮ ನಿರೀಕ್ಷಣೆಯ ಪ್ರತಿಫಲನಕ್ಕೆ ಪ್ರಜ್ಞಾಪ್ರವಾಹತಂತ್ರ ಬೆಂಬಲವಾಗಿದೆ. ಸತ್ತುಹೋದ ಜವರಾಯಿಯ ಮಗ ಕುಮಾರ; ಅವನ ಆಧುನಿಕ ಪ್ರವೃತ್ತಿಯ ಮಗ ಹೆಂಡತಿ; ಜವರಾಯಿಯ ಮೊದಲ ಹೆಂಡತಿ ಸುಬ್ಬಲಕ್ಷ್ಮಿ, ಪ್ರೇಯಸಿ ಪಾರ್ವತಿ; ಇವರೆಲ್ಲರ ನೆನಪಿನಿಂದ ಉದ್ಭವಿಸುವ ಸಂಗತಿಗಳು ಹಾಗೂ ವರ್ತಮಾನದ ನಡೆವಳಿಕೆಯಿಂದ ಹುಟ್ಟುವ ಪ್ರತಿಕ್ರಿಯೆಗಳು ಕಾಳಪ್ಪನ ವೀಕ್ಷಣೆಗೆ ಒಳಗಾಗುತ್ತವೆ. ಅವರವರ ದೃಷ್ಟಿಯಲ್ಲಿ ಹಣ, ಸಂತಾನ (ದ ಬೇಕು-ಬೇಡಗಳ ಒದ್ದಾಟ): ಲೈಂಗಿಕ ಆಸೆ. ಸಂಬಂಧ; ಪ್ರೀತಿ-ಮೋಹ, ಸಂಸಾರದ ಜವಾಬ್ದಾರಿ–ಇವು ವಹಿಸಿದ ಪಾತ್ರ ಏನೇನು ಎಂಬುದರ ವಿವೇಚನೆ ಕಾದಂಬರಿಯುದ್ದಕ್ಕೂ ಹರಡುತ್ತದೆ. ಜವರಾಯಿ ಬರೆದಿಟ್ಟ ಡೈರಿ, ಪಾರ್ವತಿಯ ಆತ್ಮವೃತ್ತಾಂತದ ಪುಟಗಳು: ಸ್ವತಃ ಕಾಳಪ್ಪನೇ ಭೆಟ್ಟಿಯಾದಾಗ ಕಾಣುವ ಪಾತ್ರಗಳ ಪ್ರವೃತ್ತಿ—ಈ ಒಂದೊಂದೂ ಜವರಾಯಿ ಸಾಧಿಸಿದ ಜೀವನದ 'ನೆಲೆ'ಯನ್ನು ಸ್ಪಷ್ಟಪಡಿಸಿದಂತೆ, ಕಾಳಪ್ಪನಿಗೂ ಅವನದೇ ಸ್ವಂತ ನೆಲೆಯೊಂದನ್ನು ಕಲ್ಪಿಸಿಕೊಳ್ಳಲು, ನಿಶ್ಚಯಿಸಿಕೊಳ್ಳಲು ಸೂಚನೆ ನೀಡುತ್ತವೆ.

ಕಾಳಪ್ಪನಿಗೆ ಜೀವನಾಂತ್ಯದಲ್ಲಿ, ಜೀವಿಸಿದ ಬದುಕಿನ ಬಗ್ಗೆ ಸಾರ್ಥಕತೆ ಮೂಡಿಸುವ ಕಡೆಗೆ ಕಾದಂಬರಿಕಾರರ ಗಮನವಿದೆ. ಇತ್ಯಾತ್ಮಕವಾದ ಒಂದು ನಂಬಿಕೆಯಿಂದ ಮಾತ್ರ ಬದುಕಿಗೊಂದು ನೆಲೆ ಹಾಗೂ ಸಾವಿನ ಮುಂದೆ. ಬದುಕಿದ್ದಕ್ಕೆ ಸಿಗುವ ಸಾರ್ಥಕತಾ ಭಾವ. ಕಾಳಪ್ಪನ ಈ ಬಯಕೆಗೆ ಹತ್ತಿರವಾಗುವ ಪಾತ್ರ ಪಾರ್ವತಿಯದು. "ಹುಟ್ಟಿನ ಅನುಭವ ಗಂಡಿಗಿರಲಾರದು. ಹೆಣ್ಣಿಗೆ ಇದೆ (ಪು. ೧೪೭) ಗಂಡಸಿಗೆ ಸಾವೇ ಹೆಚ್ಚಿನ ವಾಸ್ತವತೆಯಾಗುತ್ತದೆ: ಹೆಣ್ಣಿಗೆ ಸೃಷ್ಟಿಸಿ ಪಡೆಯುವ ಸುಖದಲ್ಲಿ ಸಾರ್ಥಕತೆ." ಪಾರ್ವತಿಯ ಸಂತಾನದ ಹಂಬಲವನ್ನು ಈಡೇರಿಸದೆ ಸಾಯುತ್ತಾನೆ ಜವರಾಯಿ. ಅವಳಿಗಿರುವ ಸೃಷ್ಟಿಯ ತೀವ್ರ ಬಯಕೆಗೂ ರಾಮುವಿನಂಥ ನಕ್ಷತ್ರವೀಕ್ಷಣಾ ಹುಚ್ಚಿರುವ ವಿದ್ಯಾರ್ಥಿಗಳಿಗೆ ತನ್ನ ಪಶ್ಚಾತ್ ಆಸ್ತಿ-ಹಣವೆಲ್ಲ ಶಿಷ್ಯವೇತನವಾಗಿ ಸಿಗಲಿ ಎಂಬ ಕಾಳಪ್ಪನ ಆಕಾಂಕ್ಷೆಗೂ ಒಂದು ಗುಪ್ತ ಭಾವ ಸಂಬಂಧವಿದೆ. ಆ ಕಾರಣಕ್ಕಾಗಿಯೇ ಕಾದಂಬರಿಯ ಆಶಯ ಇತ್ಯಾತ್ಮಕವಾಗಿ ಪರಿಣಾಮಗೊಳ್ಳುತ್ತದೆ.

ಮುಖ್ಯ ಪಾತ್ರದ ಅಂತರಂಗ-ಬಹಿರಂಗಗಳೆರಡನ್ನೂ ಬಿಚ್ಚಲು, ಪರೀಕ್ಷಿಸಲು ಹಾಗೂ ವಿಶಿಷ್ಟ ಕಾರಣಕ್ಕಾಗಿ 'ನೆಲೆ' ದೊರಕಿಸಿಕೊಳ್ಳಲು ಸಹಾಯಕವಾದ ಪ್ರಜ್ಞಾ ಪ್ರವಾಹ ತಂತ್ರವು ಕಾದಂಬರಿಯ ಬಂಧವನ್ನೂ ಬಿಗಿಯಲೂ ಕಾರಣವಾಗಿದೆ. ಓದು

ವಾಗಲೂ, ಓದಿದ ನಂತರವೂ ಮನಸ್ಸನ್ನು ಸಾಕಷ್ಟು ಕಲಕುವ, ವಿಚಾರಗಳ ತುಮುಲವೆಬ್ಬಿಸುವ ವಿಶಿಷ್ಟ ಬರಹ ಈ ಕಾದಂಬರಿ. ಅನುಭವದ ಸೂಕ್ಷ್ಮಗಳಿಗೆ, ಅನಿಸಿಕೆಯ ಗೂಢಗಳಿಗೆ ಭೈರಪ್ಪನವರು ಕೊಟ್ಟಿರುವ ಭಾಷಾಭಿವ್ಯಕ್ತಿ ಪ್ರೌಢವಾಗಿದೆ; ಕಲಾತ್ಮಕವಾಗಿದೆ.

ಬೀಜ

ಇಪ್ಪತ್ತನಾಲ್ಕು ವರ್ಷಗಳ ಹಿಂದೆ, ಕನ್ನಡಕ್ಕೆ ಮೊಟ್ಟಮೊದಲ ನವ್ಯ ಪ್ರಜ್ಞೆಯ ಕಾದಂಬರಿ (ಮುಕ್ತಿ) ಯನ್ನು ಕೊಟ್ಟ ಶಾಂತಿನಾಥ ದೇಸಾಯಿಯವರು '**ಬೀಜ**'[೩] ಕಾದಂಬರಿಯ ಮೂಲಕ ತಮ್ಮ ಸೃಜನಶೀಲತೆಯ ಮತ್ತೊಂದು ಮಜಲನ್ನು ತಂದಿದ್ದಾರೆ. ಮುಕ್ತಿ ಹಾಗೂ ವಿಕ್ಷೇಪಗಳಲ್ಲಿ ಪ್ರೇಮ–ಕಾಮದ ಸಂದಿಗ್ಧದಲ್ಲಿ ತೊಳಲಾಡುವ, ಪ್ರಕ್ಷುಬ್ಧಗೊಳ್ಳುವ ತರುಣರನ್ನು, ಅವರ ಸಮಸ್ಯೆಗಳ, ಕ್ಷೋಭೆಗಳ ನಡುವೆ ನಿಲ್ಲಿಸಿ ಪರೀಕ್ಷೆಗೆ ಒಳಪಡಿಸುತ್ತಾರೆ ಲೇಖಕರು. ಆತ್ಮ ಕೇಂದ್ರಿತ ಪ್ರಜ್ಞೆಯ ಆ ಕಥಾನಾಯಕರು ಸಂಕೀರ್ಣ ಮನಸ್ಥಿತಿಯವರು. ಆ ಮನಸ್ಸುಗಳ ವಿಶ್ಲೇಷಣೆಯಲ್ಲಿ ತೊಡಗಿ, ಅಪರಿಚಿತವಾದ, ಅತ್ಯಂತ ವಿಕ್ಷಿಪ್ತವಾದ ವ್ಯಕ್ತಿಗಳನ್ನು ನಮ್ಮೆದುರು ನಿಲ್ಲಿಸಿ ಆಘಾತ ಉಂಟು ಮಾಡುತ್ತಾರೆ ದೇಸಾಯಿಯವರು. ನವ್ಯ ಸಂವೇದನೆಯ ಆ ವಿಚಿತ್ರ, ವ್ಯಕ್ತಿವಿಶಿಷ್ಟತೆಯ ಹಾಗೂ ಅಂತರ್ಮುಖೀ ದೃಷ್ಟಿಕೋನಕ್ಕೆ ಹೊರತಾಗಿರುವ, ಹೊಸ ಸಾಮಾಜಿಕ-ರಾಜಕೀಯ ಸನ್ನಿವೇಶದಲ್ಲಿ ಅಂಥ ವ್ಯಕ್ತಿಯೇ ಪಡುವ ತಹತಹವನ್ನು; ಕೊನೆಗೆ ತಾನೇ ಕಂಡುಕೊಳ್ಳುವ (ಬಹಿರ್ಮುಖಿಯಾಗಿ) ಇತ್ಯಾತ್ಮಕ ಪರಿಣಾಮವನ್ನು 'ಬೀಜ'ದಲ್ಲಿ ಪ್ರತಿಪಾದಿಸಿದ್ದಾರೆ. ತಾರುಣ್ಯದ ಮೊದಲ ಎರಡು ಘಟ್ಟಗಳಲ್ಲಿ ಯುವ ವ್ಯಕ್ತಿತ್ವ ಪಡುವ ಮಾನಸಿಕ ಸಂಘರ್ಷ; ಗಳಿಸುವ ಅನಿಶ್ಚಿತ ಜೀವನ ಮೌಲ್ಯದ ಚಿತ್ರಣ ಆವೆರಡು ಕಾದಂಬರಿಗಳಲ್ಲಿದ್ದರೆ, 'ಬೀಜ'ದಲ್ಲಿ ತಾರುಣ್ಯದ ಮೂರನೆಯ ಘಟ್ಟದಲ್ಲಿ (ಕೊನೆಯದು ಕೂಡ) ಯುವ ವ್ಯಕ್ತಿತ್ವ ಗಳಿಸುವ ಮಾಗಿದ ಅನುಭವದ ಫಲ ಚಿತ್ರಿತವಾಗಿದೆ. ಈ ದೃಷ್ಟಿಯಿಂದ ದೇಸಾಯಿಯವರ ಕಾದಂಬರಿಗಳ ಬೆಳವಣಿಗೆಯಲ್ಲಿ ವಸ್ತುವಿನ-ಸೃಜನಶೀಲ ಧೋರಣೆಯ ಒಂದು ಕ್ರಮಬದ್ಧ ವಿಕಾಸವಿರುವುದೂ ಕಾಣುತ್ತದೆ.

ಬದುಕಿನ ವಾಸ್ತವಕ್ಕೆ ಹತ್ತಿರವಾಗುವ ಪ್ರಕ್ರಿಯೆಯಲ್ಲಿ ಸಾಮಾಜಿಕ ಅರಿವಿಗೆ ಬದ್ಧವಾಗುತ್ತಿರುವ ಇತ್ತೀಚಿನ ಸಾಹಿತ್ಯ ಚಳುವಳಿಯಿಂದ ನವ್ಯ ಬರವಣಿಗೆಯು ಹೇಗೆ ಪ್ರಭಾವಿತವಾಗಿದೆ ಮತ್ತು ತನ್ನ ಊನಗಳನ್ನು ತಿದ್ದಿಕೊಂಡು ಗಟ್ಟಿಮುಟ್ಟಾಗಿ

---

೩. ಬೀಜ : ಶಾಂತಿನಾಥ ದೇಸಾಯಿ; ಪ್ರಿಂಟರ್ಸ್ ಪ್ರಕಾಶನ ಬೆಂಗಳೂರು.
ಪುಟಗಳು ೨೫೯; ಬೆಲೆ : ೨೬-೦೦

ಮುಂದುವರಿಯಲು ಅಣಿಯಾಗಿವೆ ಎನ್ನುವುದಕ್ಕೆ 'ಬೀಜ' ಗಮನಾರ್ಹ ಉದಾಹರಣೆ ಆಗಿದೆ.

ಕಥಾನಾಯಕ ಶ್ರೇಯಾಂಸನ ಪ್ರಜ್ಞೆಯನ್ನು ಮುಖ್ಯವಾಗಿಟ್ಟುಕೊಂಡು ಒಡಮೂಡುವ 'ಬೀಜ'ದ ಕತೆ ಸ್ಥೂಲವಾಗಿ ಇಷ್ಟು : ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದ. ಕೃಷ್ಣಾಪುರದ ಪ್ರತಿಷ್ಠಿತ ವ್ಯಕ್ತಿ ಅಪ್ಪಾಸಾಹೇಬರ ಮಗ ಶ್ರೇಯಾಂಸ, ಸ್ವತಂತ್ರ ಮನೋವೃತ್ತಿಯ, ಆಧುನಿಕ ವಿಚಾರಗಳಿಗೆ ಪಕ್ಕಾದ ತರುಣ. ಬಾಲ್ಯದ ಗೆಳತಿ ರೇವತಿಯನ್ನು ಪ್ರೀತಿಸಿ, ಮದುವೆಯಾಗಲು ತಯಾರಾದಾಗ ಅಪ್ಪನಿಂದ ಅಡ್ಡಿ ಬಂದು, ಅಪ್ಪನನ್ನೇ ವಿರೋಧಿಸಿ ಊರು, ಮನೆ–ಎಲ್ಲ ತೊರೆದು ಮುಂಬೈ ಸೇರುತ್ತಾನೆ. ಒಳ್ಳೇ ನೌಕರಿ ಗಿಟ್ಟಿಸಿ ವೈಚಾರಿಕವಾಗಿ ಪ್ರೌಢನೂ ಆಗಿ. ಕ್ರಿಶ್ಚಿಯನ್ ಹುಡುಗಿ ಎಲಿಝಬೆತ್‌ಳನ್ನು ಮದುವೆಯಾಗಿ ಶ್ರೇಯಾಂಸ ಅಪ್ಪನಿಗೇ ಸವಾಲೆಸೆಯುತ್ತಾನೆ. ಮುಂಬೈಯ ಭೌತಿಕ ಹಾಗೂ ಬೌದ್ಧಿಕ ಸುಖದಲ್ಲಿ ತನ್ನ ಊರು. ತಾಯಿ ತಂದೆಯನ್ನೂ ಅಲಕ್ಷಿಸುತ್ತಾನೆ: ಆಸ್ತಿಯ ಆಸೆಯೂ ಅವನನ್ನೂ ಬಾಧಿಸುವುದಿಲ್ಲ.

ಇಪ್ಪತ್ನಾಲ್ಕು ವರ್ಷ ಗತಿಸಿದ ಮೇಲೆ, ತಂದೆಯ ಸಾವಿನಸುದ್ದಿ ಕೇಳಿದ್ದೇ ಕೃಷ್ಣಾಪುರಕ್ಕೆ ಧಾವಿಸುತ್ತಾನೆ ಶ್ರೇಯಾಂಸ. ತಂದೆಯ ತಿಥಿ–ಕರ್ಮದ ಆ ೮–೧೦ ದಿನಗಳಲ್ಲಿ ಅವನಿಗೆ ಕೃಷ್ಣಾಪುರದ ಬಗ್ಗೆ ಮಮತೆ ಉಕ್ಕುತ್ತದೆ. ಹಳೆಯ ನೆನಪು–ಸ್ನೇಹ ಸಂಬಂಧಗಳು ಬಾಧಿಸುತ್ತವೆ. ಮುಂಬೈಯಲ್ಲಿ ಕಳೆದ ಇಷ್ಟು ವರ್ಷದ ತನ್ನ ಜೀವನವೇ ಬರಡಾಗಿ ಹೋಯಿತು ಎನಿಸುತ್ತದೆ. ಏಕೆಂದರೆ. ತನ್ನ ವ್ಯಕ್ತಿತ್ವದ ಸಹಜ ಬೇರುಗಳು ಕೃಷ್ಣಾಪುರದಲ್ಲಿವೆ: ತನ್ನ ಕರ್ಮಭೂಮಿ ಕೃಷ್ಣಾಪುರ: ಹೋಗಿ ಸೇರಿದ, ಕೃತಕ ವಾತಾವರಣದ ಮುಂಬೈ ಅಲ್ಲ. ಎಂಬುದು ಅವನಿಗೆ ಮನದಟ್ಟಾಗುತ್ತದೆ. ಪಿತ್ರಾರ್ಜಿತ ಆಸ್ತಿಯ ವಹಿವಾಟು ನೋಡಿದಂತೆಯೂ ಆಯಿತು: ವಿಧವೆಯರಾದ ತಾಯಿ–ಅಕ್ಕಂದಿರ ಸಂರಕ್ಷಣೆ ಮಾಡಿದಂತೆಯೂ ಆಯಿತು. ಆದ್ದರಿಂದ ಮುಂಬೈ ತೊರೆದು ಊರಿಗೇ ಬರಬೇಕೆಂಬ ತೀವ್ರ ಹಂಬಲ ಅವನನ್ನೂ ಜೀವನದ ಮರುವ್ಯವಸ್ಥೆಗೆ ಪ್ರೇರಿಸುತ್ತದೆ.

ಶ್ರೇಯಾಂಸನ ಹಳೆಯ ಪ್ರೇಮ. ಬಾಲ್ಯದ ಗೆಳತಿ ರೇವತಿ ಈಗ ವಿಧವೆಯಾಗಿದ್ದು ಅವಳ ಮೇಲಿನ ಮಿಡಿತವೂ ಅವನನ್ನು ಕೃಷ್ಣಾಪುರಕ್ಕೆ ಸೆಳೆಯುತ್ತಿದೆ. ಮಧ್ಯವಯಸ್ಕ; ಹದಿಹರೆಯದ ಒಬ್ಬ ಮಗಳ ತಂದೆ: ಮುಂಬೈಯ ವೃತ್ತಿಯಲ್ಲಿ ತುತ್ತತುದಿ ತಲುಪಿರುವ ಶ್ರೀಯಾಂಸ ಕೃಷ್ಣಾಪುರಕ್ಕೆ ಮರಳಿ. ನೆಲೆಯೂರಲು ನಿಶ್ಚಯಿಸುತ್ತಾನೆ.

ಆದರೆ ಕೃಷ್ಣಾಪುರ ಶ್ರೇಯಾಂಸನಂತಹ ಆಧುನಿಕ ಮನೋವೃತ್ತಿಯ, ಉದಾರ ಸ್ವಭಾವದ ನಾಗರಿಕನನ್ನು ಸ್ವೀಕರಿಸುವ ಸ್ಥಿತಿಯಲ್ಲಿಲ್ಲ. ಶ್ರೇಯಾಂಸ ಪ್ರೌಢನಾಗಿರುವಂತೆ, ಅವನ ಹುಟ್ಟೂರು ಪ್ರೌಢವಾಗಿಲ್ಲ; ಹೊರಗಿನ ಪ್ರಭಾವಗಳನ್ನು ಅರಗಿಸಿಕೊಳ್ಳುವ ತಾಕತ್ತೂ ಅದಕ್ಕೆ ಬಂದಿಲ್ಲ. ಅತ್ತ ಮುಂಬೈಯಿಂದಲೂ ಸುಲಭವಾಗಿ ಬಿಡಿಸಿಕೊಂಡು ಬರುವ ಹಾಗಿಲ್ಲ. ಎರಡೂ ಕಡೆ ಅವನಿಗೆ ಅನಾಯಾಸವಾದ ಭೌತಿಕ ಸೌಕರ್ಯಗಳಿವೆ: ಒಂದನ್ನೂ ಬಿಟ್ಟು ಇನ್ನೊಂದನ್ನು ಹಿಡಿಯುವಲ್ಲಿ ಅನಾನುಕೂಲಗಳೂ ಇವೆ. ಜೊತೆಗೆ ನೆಮ್ಮದಿ ಕದಡುವ ನೋವುಗಳು. ಈ ಇಕ್ಕಟ್ಟಿನ ಪರಿಸ್ಥಿತಿ ಬಗೆಹರಿಸುವ ಪ್ರಯತ್ನದಲ್ಲಿ ಶ್ರೇಯಾಂಸನ ಬುದ್ಧಿಯ ಎತ್ತರ ಹಾಗೂ ಭಾವನೆಗಳ ಆಳ ಎಷ್ಟು ಎನ್ನುವುದರ ಶೋಧನೆ ಕಾದಂಬರಿಯನ್ನು ಆವರಿಸಿದೆ. ಭಾವನೆಯ ಸೆಳೆತಕ್ಕೆ ಒಳಗಾಗಿ ಕೆಡುವ ಅಪಾಯವಿದ್ದಾಗ "ಬುದ್ಧಿಜನ್ಯ ಪಾತಳಿ"ಯ ಮೇಲೆ ನಿಂತು ಶ್ರೇಯಾಂಸ ನಿರ್ಣಯ ತೆಗೆದುಕೊಳ್ಳುತ್ತಾನೆ. ಕೃಷ್ಣಾಪುರ ಒಡ್ಡಲಿರುವ ಕೆಡಕನ್ನು ನೈತಿಕ ಧೈರ್ಯದಿಂದ ಎದುರಿಸಲು ಸನ್ನದ್ಧನಾಗುತ್ತಾನೆ. ಈ ತಯಾರಿ ಆತ ಸ್ವೀಕರಿಸಲಿರುವ ಹೊಸ ಜೀವನ ಕ್ರಮಕ್ಕೆ ಅಂಕುರವಾಗುವ ಬೀಜವಾಗುವುದೇ ಕಾದಂಬರಿಯ ಮುಖ್ಯ ಆಶಯ.

ವೈಯಕ್ತಿಕ ಆದರ್ಶ. ಕನಸುಗಾರಿಕೆ, ಸ್ವಾತಂತ್ರ್ಯದ ತೀವ್ರ ಹಂಬಲ ಇವು ಒಂದ ಕಡೆಗೆ; ಸಾಮಾಜಿಕವಾದ ನಿಷ್ಠುರ ವಾಸ್ತವತೆ, ಅನಿರೀಕ್ಷಿತ ಬೀಳುವ ಪೆಟ್ಟು, ಪರಾಧೀನತೆಯ ಸಂಕಟ, ಇನ್ನೊಂದು ಕಡೆಗೆ. ಇವೆರಡನ್ನೂ ಸಂಭಾಳಿಸುವಂತಹ ನಡುವಿನ ಹಾದಿಯನ್ನು ಶ್ರೇಯಾಂಸ ತಾನೇ ನಿರ್ಮಿಸಿಕೊಂಡು ಮುನ್ನಡೆಯುವ ಜವಾಬ್ದಾರಿ ಹೊರುತ್ತಾನೆ. ಆಗ ನವ್ಯಕತೆಗಳ ನಾಯಕನ ಹಾಗೆ ಈ ಶ್ರೇಯಾಂಸನೂ ಇಬ್ಬಂದಿತನದ ನೋವಿನಿಂದ ಪರಿತಪಿಸುತ್ತಾನೆ. ಆದರೆ ತನ್ನೊಬ್ಬನ ನೋವು. ಜಗತ್ತಿನ ನೋವು ಎಂಬ ಭ್ರಮೆ ಅವನಿಗಿಲ್ಲ ವೈಯಕ್ತಿಕ ನೋವು ಸುಖ ಎರಡನ್ನೂ ಒಟ್ಟೊಟ್ಟಿಗೆ ಕೊಟ್ಟು, ಬೌದ್ಧಿಕ ಸಂಯಮದಿಂದ ವರ್ತಿಸುವ ಲಿಲಿಯ ಹಾಗೂ ಗೆಳತಿ ರೇವತಿ ಇವರಿಬ್ಬರಿಂದಲೂ ದೂರವಿರುವುದಕ್ಕೆ ಶ್ರೇಯಾಂಸ ಸಮ್ಮತಿಸುವುದೇ ಅವನ ಗೆಲುವಿನ ಸೂಚನೆ. ಕೃಷ್ಣಾಪುರದಲ್ಲೇ ತಾನು ನೆಲೆಯೂರಬೇಕೆಂಬ ಅವನ ಹಟ ಭಾವುಕತೆಯಿಂದ ಪಾರಾಗಿ ಬೌದ್ಧಿಕ ನಿಲುವಾಗಿ ಮಾರ್ಪಡುವುದು ಶ್ರೇಯಾಂಸನ ಪುರುಷಾರ್ಥದ ಸಾಧನೆಯೂ ಅಹುದು. ಮುಕ್ತಿ, ವಿಕ್ಷೇಪ ಕಾದಂಬರಿಗಳ ನಾಯಕರಾದ ಗೌರೀಶ, ರಾಹುಲರ ಹಾಗೆ ಶ್ರೇಯಾಂಸನಲ್ಲೂ ಪ್ರಕ್ಷುಬ್ಧತೆ. ತೊಳಲಾಟ ತುಳುಕಾಡಿದೆ; ಆದರೆ ವಯಸ್ಸಿನಲ್ಲಿ, ತಿಳುವಳಿಕೆಯಲ್ಲಿ ಈತ ಪ್ರಬುದ್ಧ. ಪರಿಪಕ್ವ ಆಗಿರುವವರಿಂದ ಅವನ ಪ್ರಕ್ಷುಬ್ಧತೆ ಪಡೆಯುವ ಪರಿಣಾಮ ಮೌಲಿಕವಾಗುತ್ತದೆ. ಶ್ರೇಯಾಂಸನ ಪ್ರೌಢಿಮೆಯು ಪ್ರತಿಕೃತಿಯಾಗಿ ಅವನ ಹದಿಹರಯದ ಮಗಳು ಕಲ್ಪನಾ ಚಿತ್ರಣಗೊಂಡಿದ್ದಾಳೆ.

ಸನ್ನಿವೇಶ ನಿರ್ಮಾಣದಲ್ಲಿ ದೇಸಾಯಿಯವರದೇ ವೈಶಿಷ್ಟ್ಯವಾಗಿರುವ ನಾಟಕೀಯ ಕೌಶಲ; ಆಡುಮಾತಿನ ಸಂಭಾಷಣೆಯ ಸೊಗಡು ಕಾದಂಬರಿಯ ಕಥಾ ಪ್ರಪಂಚವನ್ನು ಸಾಕಷ್ಟು ಉಲ್ಲಸಿತ ಮತ್ತು ಕೌತುಕಪೂರ್ಣ ಗೊಳಿಸಿವೆ.

ನಷ್ಟ ದಿಗ್ಗಜಗಳು

ವರ್ಷ ಅಥವಾ ಎರಡು ವರ್ಷಕ್ಕೊಂದರಂತೆ ಒಪ್ಪದೆ ಕಾದಂಬರಿ ಬರೆಯುವ ರೂಢಿ ಇಟ್ಟುಕೊಂಡಿರುವ ಶಿವರಾಮ ಕಾರಂತರು, ಎರಡು ವರ್ಷದ ಹಿಂದೆ ಇಟಲಿ-ರೋಂ ಪ್ರವಾಸ ಮಾಡಿ ಬಂದ ಮೇಲೆ, ಪ್ರವಾಸದಿಂದ ರೂಪುಗೊಂಡ ಕಲ್ಪನೆಯನ್ನೇ ಪ್ರೇರಣೆಯಾಗಿಟ್ಟುಕೊಂಡು ಬರೆದಿರುವ **"ನಷ್ಟ ದಿಗ್ಗಜಗಳು"**[೧] ಕಾದಂಬರಿ ರೂಪದಲ್ಲಿಯ ಒಂದು "ಚರಿತ್ರೆ". ಆಯ್ದುಕೊಂಡ ವಸ್ತುವನ್ನು ಪ್ರತಿಪಾದಿಸುವ ಕ್ರಮಬದ್ಧ ಕತೆಯಾಗಲಿ. ಪಾತ್ರವಾಗಲಿ ಇದರಲ್ಲಿಲ್ಲ. ಲೇಖಕರೇ ಸ್ಪಷ್ಟಪಡಿಸಿರುವಂತೆ ಇದು ಆಧುನಿಕ ಮಧ್ಯಭಾರತದ ಮಾನಾಡಿನ ರಾಜಧಾನಿಯಾದ ಮಾಗಾಂವ (ಮಹಾನಗರ)ದ ನಿಜವಾದ ಚರಿತ್ರೆ. ಪ್ರಬಂಧವೂ ಅಲ್ಲ, ಕಾದಂಬರಿಯೂ ಅಲ್ಲ. ನಷ್ಟ ದಿಗ್ಗಜಗಳ ಒಂದು ಚರಿತ್ರೆ ಎನ್ನಬಹುದು. ಮಾಗಾಂವದ ನಗರೋದ್ಯಾನದಲ್ಲಿ ಲೇಖಕರು ವಿಹರಿಸ ತೊಡಗಿದಾಗ, ಆ ವನದ ಎಂಟು ಮೂಲೆಗಳ ಪೈಕಿ ಆರರಲ್ಲಿ ಸ್ಥಾಪಿಸಲಾದ ಪ್ರತಿಮೆಗಳನ್ನೂ; ಇನ್ನುಳಿದ ಎರಡು ಮೂಲೆಗಳಲ್ಲಿ "ಮುಂಬರುವ ಪ್ರತಿಮೆಗಳಿಗಾಗಿ ಸಿದ್ಧಪಡಿಸಿದ ಉನ್ನತ ವೇದಿಕೆಗಳನ್ನು ಕಾಣುತ್ತಾರೆ. ಆ ಆರು ಪ್ರತಿಮೆಗಳ ವ್ಯಕ್ತಿಗಳು ಕಾಲಗರ್ಭದಲ್ಲಿ ಸಂದವರು. ಆದ್ದರಿಂದ ಅವರು ನಷ್ಟ. (ಅಷ್ಟ ಅಲ್ಲ) ದಿಗ್ಗಜರೇ ಸರಿ. ಈ ಷಷ್ಟ ದಿಗ್ಗಜಗಳ ಕತೆಯನ್ನು ಸಂಗ್ರಹಿಸಿ ಓದುಗರಿಗೆ ಮುಂದಿಟ್ಟು ಮಾಡುವ ಪತ್ರಕರ್ತನ ವರದಿ ನಿರೂಪಣೆಯೇ ಈ ಕೃತಿ ರಚನೆ. ಇದು ಪ್ರವಾಸ ಸಾಹಿತ್ಯ ಎಂದು ತಿಳಿದರೂ ತಪ್ಪಾಗದು ಎಂದು ಕಾರಂತರು ತಮ್ಮ ಬರವಣಿಗೆಯನ್ನು ವ್ಯಾಖ್ಯಾನಿಸಿಕೊಂಡಿದ್ದಾರೆ. ಈ ದೃಷ್ಟಿಯಿಂದ ಇದು ಪ್ರಾಚೀನ-ಸಮಕಾಲೀನಗಳನ್ನು ಅನ್ಯೋಕ್ತಿಯಿಂದ ವಿಮರ್ಶಿಸುವ, ವಿಡಂಬಿಸುವ ಲಘು ಬರಹವೆಂಬುದು ಸ್ಪಷ್ಟ.

ಉತ್ತಮ ಪುರುಷ ನಿರೂಪಣೆಯಲ್ಲಿ ಸಾಗುವ ಪ್ರವಾಸಾನುಭವದ ವರ್ಣನೆಯಲ್ಲಿ ನಮ್ಮ ದೇಶದ ಇತಿಹಾಸ, ವರ್ತಮಾನಗಳ ವಿಮರ್ಶೆಯೇ ಹೆಚ್ಚು. ಗತಕಾಲದ ಜೀವನದ ನಂಬಿಕೆ, ಮೌಲ್ಯಗಳ ಪ್ರತೀಕವಾಗಿ ಅಲ್ಲಲ್ಲಿ ಕಾಣಬರುವ ಶಿಲ್ಪ, ವಾಸ್ತು, ಕಲೆಗಳ, ಸ್ಮಾರಕಗಳು, ಅವಶೇಷಗಳು ಅಪಮೌಲ್ಯಗೊಂಡ ಇಂದಿನ ಜೀವನಕ್ಕೆ

---

೧. ನಷ್ಟ ದಿಗ್ಗಜಗಳು : ಶಿವರಾಮ ಕಾರಂತ; ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು. ೩೩೪ ಪುಟಗಳು; ರೂ. ೨೦-೦೦.

ಕಲಿಸುವ ಪಾಠ, ಏನು–ಹೇಗೆ ಎಂಬುದರ ಪರಿಶೀಲನೆಯೇ ಕಾದಂಬರಿ ರೂಪ ತಳೆದಿದೆ. ಧರ್ಮ, ಜಾತಿ, ರಾಜಕೀಯ, ಗತಾನುಗತಿಕ ರೂಢಿ-ನಂಬಿಕೆ ಪುರಾಣದ ನಡೆ ನುಡಿಗಳನ್ನು ವಿಡಂಬನೆಯ ಧಾಟಿಯಲ್ಲಿ ಪೋಣಿಸುತ್ತ ಸಾಗುವ ಮಾತುಗಳಿಂದ ಈ ಕೃತಿ ಕಾರಂತರ ವಿಚಾರ ವಿಲಾಸಗಳ ಮುಕ್ತ ಮಾಧ್ಯಮವಾಗಿ ಬಿಟ್ಟಿದೆ. ಈ ಮುಂಚಿನ ಕಾದಂಬರಿಗಳಲ್ಲಿ, ಪ್ರವಾಸ ಕಥನಗಳಲ್ಲಿ ಹೇಳಿದುದಕ್ಕಿಂತ ಭಿನ್ನವಾದ ಯಾವ ಅಂಶಗಳನ್ನಾಗಲಿ, ವಿಚಾರವನ್ನಾಗಲಿ ಕಾರಂತರಿಗೆ ಇದರ ಮೂಲಕ ಹೇಳಲಿಕ್ಕಾಗಿಲ್ಲವಾದ್ದರಿಂದ ಈ ಬರಹ, ಅವರ ಹೇಳಿಕೆಗಳ ಮತ್ತೊಂದು ದಾಖಲೆಯಾಗಿ ಮಾತ್ರ ಉಳಿಯುತ್ತದೆ. ವಿಡಂಬನೆಯೂ ಹರಿತವಾಗಿಲ್ಲ: ಹರಳುಗಟ್ಟಿಕೊಂಡು ಒಡಮೂಡುವುದಿಲ್ಲ. ಈ ಕಾರಣಗಳಿಂದ, ಕಾದಂಬರಿಗೆ ಬೇಕಾದ ಬಂಧವೊಂದು ನಿರ್ಮಾಣವಾಗದೆ ಹೋಗುತ್ತದೆ.

ಹೋರಾಟ

ವಚನ ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನ ಮಾಡಿರುವ ಪಿ. ವಿ. ನಾರಾಯಣ ಅವರು ಒಬ್ಬ ಪ್ರೌಢ ಅಧ್ಯಯನಶೀಲರಾಗಿ ಖ್ಯಾತರಾಗಿದ್ದಾರೆ. ಸೃಜನಶೀಲತೆಯಲ್ಲಿಯೂ ಇವರಿಗೆ ಆಸಕ್ತಿಯಿರುವುದು ಕುತೂಹಲದ ಸಂಗತಿ. ಈ ವರ್ಷ ಪ್ರಕಟಗೊಂಡಿರುವ '**ಹೋರಾಟ**'[೫] ಇವರ ಆರನೆಯ ಕಾದಂಬರಿ ಕೃತಿ.

ಬಾಲ್ಯದಲ್ಲಿಯೇ ಪೋಲಿಯೋ ವ್ಯಾಧಿಗೆ ಬಲಿಯಾಗಿ ದುರ್ಬಲ ದೇಹಿಯಾಗಿ ಮಾರ್ಪಟ್ಟ ರವೀಂದ್ರನಾಥ ಬೌದ್ಧಿಕವಾಗಿ, ಮಾನಸಿಕವಾಗಿ ಒಬ್ಬ ಪ್ರತಿಭಾವಂತ. ಸಾಮಾಜಿಕ ಪ್ರಜ್ಞೆಯಿಂದ ಪ್ರೇರಿತನಾಗಿ ರವೀಂದ್ರ ಒಂದು ನಾಗರಿಕ ವೇದಿಕೆ ರೂಪಿಸಿ ನಡೆಸುವ ಒಂದು ಚಳುವಳಿಯ (ಹೋರಾಟ) ಸೋಲು–ಗೆಲುವಿನ ಕತೆ 'ಹೋರಾಟ'ದ ವಸ್ತು.

ರವೀಂದ್ರ ದೈಹಿಕ ದೌರ್ಬಲ್ಯಕ್ಕೆ ಒಳಗಾಗಿ, ಅದರ ವಿರುದ್ಧ ವೈಯಕ್ತಿಕವಾಗಿ ಆತನೇ ನಡೆಸುವ 'ಹೋರಾಟ'ದ ವೃತ್ತಾಂತ ಒಂದು ಪಾತಳಿಯಲ್ಲಿ; ಹಾಗೂ ಆತನ ಪರಿಸರದಲ್ಲಿ ಉಂಟಾದ ಒಂದು ಅನ್ಯಾಯ, ಅಕ್ರಮ ವಿದ್ಯಮಾನದ ನಿವಾರಣೆಗೆ ಸಂಘಟನಾತ್ಮಕವಾಗಿ ನಡೆಸುವ 'ಹೋರಾಟ'ದ ವೃತ್ತಾಂತ ಇನ್ನೊಂದು ಪಾತಳಿಯಲ್ಲಿ—ಹೀಗೆ ಎರಡು ಸಮಾಂತರ ರೇಖೆಗುಂಟ ಕಾದಂಬರಿಯ ಕತೆ ನಿರೂಪಿತವಾಗಿದೆ. ಎರಡೂ ಪರಸ್ಪರ ಪೂರಕವಾಗಿ ಬೆಳೆಯುವುದೇ ಇಲ್ಲಿಯ ವಿಶೇಷತೆ.

---

೫. ಪಿ. ವಿ. ನಾರಾಯಣ; ಭಾಗ್ಯಲಕ್ಷ್ಮಿ ಪ್ರಕಾಶ, ಬೆಂಗಳೂರು. ೧೬೩ ಪುಟಗಳು; ರೂ. ೧೦-೦೦

ಹೊಸ ಸಮಾಜ ನಿರ್ಮಾಣಕ್ಕೆ ಅಣಿಯಾದ ತರುಣರ ಒಂದು ಸಂಘಟನೆಯನ್ನೇ ಆರಂಭಿಸಿ ಪ್ರಾಮಾಣಿಕತೆ, ನಿಷ್ಠೆಯಿಂದ ಚಳುವಳಿ ನಡೆಸುವ ರವೀಂದ್ರ ಎದುರಿಸುವ ಆತಂಕಗಳು ಹಲವು. ಚಳುವಳಿಯ ಮಾರ್ಗ; ತಾಳಬೇಕಾದ ಧೋರಣೆಯ ಬಗ್ಗೆ ನಾಜೂಕಾಗಿ ವಿಚಾರ ಮಾಡಿ ಕಾರ್ಯ ಪ್ರವೃತ್ತನಾಗುವ ರವೀಂದ್ರನ ಪಾತ್ರ ಕಾದಂಬರಿಯ ಉದ್ದಕ್ಕೂ ಆದರ್ಶದ ಪ್ರತೀಕವಾಗುತ್ತ ಬೆಳೆಯುತ್ತದೆ.'ಹೋರಾಟ'ದ ಈ ನಾಯಕನ ಮಾನವ ಸಹಜ ಪ್ರವೃತ್ತಿಗಳನ್ನು ಶೋಧಿಸುವ ಪ್ರಯತ್ನವನ್ನು ಮಾಡಿದ್ದರೂ ಅದು ಮೇಲ್ಪದರಿನಲ್ಲಷ್ಟೆ ನಡೆಯುತ್ತದೆ. ಇದರಿಂದ ಕಾದಂಬರಿಯ ಪರಿಣಾಮ ತೆಳ್ಳಗಾಗಿದೆ. ಸನ್ನಿವೇಶಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವಲ್ಲಿ ಕಾದಂಬರಿಕಾರರು ಸಫಲರಾಗಿದ್ದು ಆರಿಸಿಕೊಂಡ ವಸ್ತು ಮತ್ತು ಸಮಸ್ಯೆ ಮಾಮೂಲೀ ಜಾಡಿನಲ್ಲಿಲ್ಲವೆಂಬ ಕಾರಣಕ್ಕಾಗಿ 'ಹೋರಾಟ' ವಿಶೇಷ ಕೃತಿಯಾಗಿ ಕಾಣಲು ಸಾಧ್ಯವಾಗಿದೆ.

ಹಂತ

ಗ್ರಾಮೀಣ ಬೆಳಗಾವಿ ಕಡೆಯ ಕತೆಗಾರ ಕುಂದರನಾಡ ಪಾಟೀಲ, ಹಳ್ಳಿಯ ಹಿನ್ನೆಲೆಯ ಕೆಲವು ಕತೆ ಬರೆದು ಪಳಗಿದ ಲೇಖಕರೆನಿಸಿದ್ದಾರೆ. ಅತ್ಯಂತ ಸಮಕಾಲೀನವಾದ ರೈತ ಚಳುವಳಿಯ ಒಂದು ನಿಟ್ಟಿನ ಕಾರಣ, ಪರಿಣಾಮಗಳನ್ನು ಚಿಕಿತ್ಸಕ ನೋಟದಿಂದ ಪರಿಶೀಲಿಸುವ '**ಹಂತ**'[೬] ಕಾದಂಬರಿ ವಸ್ತು–ದೃಷ್ಟಿಕೋನಗಳ ಕಾರಣದಿಂದ ಅನನ್ಯ ಬರವಣಿಗೆಯೆನಿಸುತ್ತದೆ. ಸಮಸ್ಯೆಯನ್ನು ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಶೋಧಿಸುವ ಪ್ರಯತ್ನದಿಂದಾಗಿ ಇದು ವಾಸ್ತವ ಪೂರ್ಣ ಕೃತಿಯಾಗಲು ಸಾಧ್ಯವಾಗುತ್ತದೆ. ಬಂಡಾಯ, ಪ್ರತಿಭಟನೆಯ ಹಸಿಬಿಸಿ ಮಾತುಗಳನ್ನು, ಘೋಷಣೆಗಳನ್ನು ಪೋಣಿಸುವ ಪ್ರಯತ್ನವಾಗಲಿ. ಆದರ್ಶದ ಒಣ ಕನಸುಗಾರಿಕೆಯನ್ನು ರಂಜಿತಗೊಳಿಸುವ ಭಾವುಕತೆಯಾಗಲಿ ಪಾಟೀಲರಿಂದ ನಡೆದಿಲ್ಲ. ರೈತ ಸಮುದಾಯದ ಅಜ್ಞಾನ, ನಿಸ್ಸಹಾಯಕತೆಗಳನ್ನು ಕಂಡು ಮರುಕಪಡುವ ಜಮೀಂದಾರೀ ವರ್ಗದ ಕಥಾನಾಯಕ ಈ ಮರುಕಕ್ಕೆ ಬೌದ್ಧಿಕ ಪ್ರಾಮಾಣಿಕತೆ ಬೆರೆಸುವ ಮೂಲಕ ಸಮುದಾಯವನ್ನೇ ಹೋರಾಟಕ್ಕೆ ಅಣಿ ಮಾಡುತ್ತಾನೆ. ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತಗಳನ್ನು ಅರಗಿಸಿಕೊಂಡವನಾದ್ದರಿಂದ ಜಗಪಾಲ, ವಾಸ್ತವದಲ್ಲಿ ಈ ಸಿದ್ಧಾಂತದ ಅನ್ವಯಕ್ಕೆ ಹೇಗೆ ತೊಡಗುತ್ತಾನೆ, ಯಶಸ್ವಿಯಾಗುತ್ತಾನೆ ಎಂಬುದು ಕಾದಂಬರಿಯ ತಿರುಳಾಗಿದೆ.

---

೬. ಹಂತ : ಕುಂದರನಾಡ ಪಾಟೀಲ; ಪ್ರಿಂಟರ್ ಪ್ರಕಾಶನ, ೧೨೮ ಪುಟಗಳು: ರೂ. ೧೨-೦೦

ರೈತ ಸಮಸ್ಯೆಯ ಪ್ರತ್ಯಕ್ಷ ಅರಿವು ಹಾಗೂ ಅನುಭವದ ಜತೆಗೆ, ಈ ಕಾದಂಬರಿಕಾರನಿಗೆ ಆದರ್ಶ-ವಾಸ್ತವತೆಯ ನಡುವಿನ ಭೇದ ಎಷ್ಟು ನಾಜೂಕಾಗಿದೆ ಎಂಬುದೂ ತಿಳಿದಿರುವುದು ಬರವಣಿಗೆಯ ವಿಶೇಷವಾಗಿದೆ. ಹೀಗಾಗಿ, ಕತೆಯ ಆರಂಭದಲ್ಲಿ ವಿಷಯಲಂಪಟನಾಗಿ, ಶ್ರೀಮಂತಿಕೆಯ ದುಂದುಗಾರನಾಗಿ ಚಿತ್ರಿತವಾದ ಜಗ್ಗು ಕ್ರಮೇಣ ಪರಿಸರದ ಕ್ರೌರ್ಯಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸುವ ಸಂವೇದನಾಶೀಲ, ವ್ಯವಸ್ಥೆಯ ವಿರುದ್ಧವೇ ಸಿಡಿದೇಳುವ ವ್ಯಕ್ತಿಯಾಗಿ ಮಾರ್ಪಡುತ್ತಾನೆ. ವ್ಯವಸ್ಥೆಯ ಶಿಶುವಾಗಿ ಬೆಳೆದರೂ ವಿಷಮ ಪರಿಸ್ಥಿತಿಯನ್ನು ಕಿತ್ತೊಗೆಯಲು ಜಗ್ಗು ತೊಡುವ ಪಣ, ಅವನ ವ್ಯಕ್ತಿತ್ವದ ಗಟ್ಟಿತನಕ್ಕೆ ಸಾಕ್ಷಿ. "ಬೀಜ" ದ ಶ್ರೇಯಾಂಸನ ಹಾಗೆ ಜಗ್ಗೂ ಕೂಡ ಒಂದೆಡೆ ಸ್ವಚ್ಛಂದ ಪ್ರವೃತ್ತಿಯ ಯುವಕ. ಆದರೆ ಹೊಣೆಗಾರಿಕೆಯ ಸಂದರ್ಭ ಬಂದಾಗ ವ್ಯಕ್ತಿಯಾಗಿ ಉಳಿಯದೆ, ಸಮಾಜ ಪ್ರಜ್ಞೆಯನ್ನು ಹೊತ್ತ ಒಂದು ಶಕ್ತಿಯಾಗಿ ಪರಿಣಮಿಸುತ್ತಾನೆ.

'ಹಂತ'ದ ಕಥನ ನಿರೂಪಣೆ ಚುರುಕಾಗಿದೆ; ನಾಟಕೀಯವಾಗಿದೆ. ಆಡುಮಾತಿನ ಸಹಜ-ಸೊಗಸು, ಬೆಳಗಾಂವೀ ಕಡೆಯ ನುಡಿಕಟ್ಟಿನ ಬನಿ, ಅದರ ವ್ಯಂಜಕತೆ, ಕತೆಯನ್ನು ವಾಸ್ತವತೆಯ ವಾತಾವರಣದಲ್ಲಿಡಲು ಸದಾ ನೆರವಾಗಿವೆ.

ಒಳಗಿನದೇ ಬೇರೆ

ಇದು ಗುಡಿಬಂಡೆ ಪೂರ್ಣಿಮಾ ಅವರ ಮೊದಲ ಕಾದಂಬರಿಯಾದರೂ ವಸ್ತುವಿನ ಆಯ್ಕೆ. ವೈಯಕ್ತಿಕ ಜರೂರಿನಿಂದ ಮೂಡಿದ ನಿರೂಪಣಾ ರೀತಿಯ ಕಾರಣಕ್ಕಾಗಿ ಪ್ರೌಢ ಮತ್ತು ಗಮನಾರ್ಹ ಬರವಣಿಗೆಯಾಗಿ ಸೆಳೆಯುತ್ತದೆ. ಈ ದಶಕದಲ್ಲಿ ಕಾದಂಬರಿ ಬರೆಯುವ ಲೇಖಕಿಯರ ಸಂಖ್ಯೆ ಜಾಸ್ತಿಯಾಗಿದೆ. ಮಾರಾಟದ ದಾಖಲೆಯಲ್ಲೂ ಮಹಿಳೆಯರ ಕಾದಂಬರಿಗಳದೇ ಮೇಲುಗೈ. ಆದರೆ ಸತ್ತ್ವಪೂರ್ಣ ಅನುಭವ ಜೀವನದ ವಿಶಿಷ್ಟ ನೋಟ, ಮನೋಧರ್ಮದಲ್ಲಿ ಪ್ರಯೋಗಶೀಲತೆ ಮಾತ್ರ ಲೇಖಕಿಯರಲ್ಲಿ ಕಾಣಸಿಗದಷ್ಟು ಅಭಾವ. ಮಾಮೂಲೀ ಜೀವನದ ಸಮಸ್ಯೆಗಳ ಚರ್ವಿತ ಚರ್ವಣದಲ್ಲೇ ಹೆಚ್ಚಿನ ಲೇಖಕಿಯರು ತೊಡಗಿರುವಾಗ, ಪೂರ್ಣಿಮಾ ಅವರ ಪ್ರಸ್ತುತ ಒಳಗಿನದೇ ಬೇರೆ[೭] ಮಾತ್ರ ಅಪರೂಪದ ವಸ್ತು-ವಿಚಾರದ ಕಡೆ ಗಮನ ಹರಿಸಿದೆ.

ನಿರೂಪಣಾ ರೀತಿಯೇ ಕಾದಂಬರಿಯ ಮೊದಲ ವೈಶಿಷ್ಟ್ಯ. ಕೋಲಾರ ಕಡೆಯ ಆಡುಮಾತಿನ ಧಾಟಿಯಲ್ಲಿ ಮುಖ್ಯ ಪಾತ್ರಗಳ (ಪ್ರಜ್ಞಾ ಪ್ರವಾಹ ತಂತ್ರದಲ್ಲಿ)

೭. ಒಳಗಿನದೇ ಬೇರೆ : ಗುಡಿಬಂಡೆ ಪೂರ್ಣಿಮಾ; ಐ. ಬಿ. ಎಚ್. ಪ್ರಕಾಶನ, ಬೆಂಗಳೂರು. ೧೮೨ ಪುಟಗಳು: ರೂ. ೧೨-೦೦.

ಅನುಭವ-ಅನಿಸಿಕೆಗಳ ನಿರೂಪಣೆ ಕಾದಂಬರಿಯ ಕತೆಯನ್ನು ರೂಪಿಸುತ್ತ ಸಾಗುತ್ತದೆ. ಲೇಖಕಿಯಾದವಳು ಸಂಕೋಚ-ಹೆದರಿಕೆಯಿಂದ ಹೇಳಲು ಹಿಂಜರಿಯುವ ತೀರ ವೈಯಕ್ತಿಕ ಅನಿಸಿಕೆ-ಪ್ರತಿಕ್ರಿಯೆಗಳನ್ನು ಈ ಲೇಖಕಿ ನಿಸ್ಸಂಕೋಚವಾಗಿ ದಿಟ್ಟತನದಿಂದ ಬಿಚ್ಚಿ ಇಡುವ ಕ್ರಮ, ಕಾದಂಬರಿಯನ್ನು ವಿಭಿನ್ನವಾಗಿಸುತ್ತದೆ. ಹೆಣ್ಣಿನ ಸ್ವಸಿರೀಕ್ಷಣೆಯ ಮೂಲಕ ಆಕೆಯ ಕಾಮ-ಪ್ರೇಮದ ತುಡಿತ-ಮಿಡಿತಗಳನ್ನು ಪರಿಶೀಲಿಸುವ ಕ್ರಮ ಇಲ್ಲಿಯದು.

ಲಲಿತಮ್ಮ ಗೃಹಿಣಿ. ಗಂಡನಿಂದ ದೊರಕದ ವೈವಾಹಿಕ ಸುಖದಿಂದ ವಂಚಿತಳಾಗಿರಲಿಚ್ಛಿಸದೆ, ವಿವಾಹೇತರ ಸಂಬಂಧಗಳಲ್ಲಿ ಸ-ಖದ ಮೃಗಜಲದ ಬೆಂಬೀಳುತ್ತಾಳೆ. ಗಂಡನೂ ಅಸಹಾಯಕ. ಈಕೆಯ ಮೂವರು ಮಕ್ಕಳಲ್ಲಿ ಒಬ್ಬ ಡಾಕ್ಟರು. ತಾಯಿ-ತಂದೆಯರಿಗಿಂತ ಬೇರೆಯಾದ ಹಾದಿ ಹುಡುಕಿಕೊಂಡು ಪ್ರೇಮವಿವಾಹ ಮಾಡಿಕೊಂಡು ಪರಿಶುದ್ಧನಾಗಿ ಉಳಿಯುತ್ತಾನೆ ಈತ. ಎರಡನೆಯವಳು ಸರಳಾ. ತಾಯಿಯ ವಿಶೃಂಖಲ ನೀತಿ-ನಡತೆಯಿಂದ ಕನಲಿರುವ ಸೂಕ್ಷ್ಮ ಸಂವೇದನೆಯ ಹುಡುಗಿ. ಇವಳ ಸಂಕೀರ್ಣ ಮನುಸ್ಥಿತಿಯೇ ಕಾದಂಬರಿಯ ನೈತಿಕ ಸಮಸ್ಯೆಯನ್ನು ಅವರ ಕಾರಣ-ಪರಿಣಾಮಗಳನ್ನು ವಿವೇಚಿಸುವ ಕೇಂದ್ರವೂ ಆಗಿದೆ. ಒಂದು ಕಡೆ ಹೆದರಿಸುವ ತಂದೆಯ ನಿರ್ಬಂಧ ಇನ್ನೊಂದೆಡೆ. ತನ್ನನ್ನು ಮೀರಿ ಬೆಳೆಯುವ ತಂಗಿ ಪದ್ದಿ ಇವರೆಲ್ಲರನ್ನು ಎದುರಿಸುತ್ತ ತನ್ನ ನೈತಿಕ ನೆಲೆ ಕಂಡುಕೊಳ್ಳುವ ಹವಣಿಕೆಯಲ್ಲಿ ತೊಡಗಿದ್ದಾಳೆ ಸರಳಾ. ಪ್ರೀತಿ, ಮದುವೆಯ ಬಗ್ಗೆ ಸರಳೆಗಿರುವ ದೃಷ್ಟಿ ಮತ್ತು ವರ್ತನೆ ಆರೋಗ್ಯಪೂರ್ಣವಾದದ್ದು ತಾಯಿಯ ವ್ಯಭಿಚಾರ, ತಂಗಿಯ ಗರ್ವ-ಎರಡನ್ನೂ ಪ್ರತಿಭಟಿಸುವ ರೀತಿಯಲ್ಲಿ ಸರಳಾ ತನ್ನ ವೈವಾಹಿಕ ಜೀವನ ರೂಪಿಸಿ ಕೊಳ್ಳುತ್ತಾಳೆ.

ಹೀಗೆ, ಲಲಿತಮ್ಮನಂತಹ ವಿಪರೀತ ಲೈಂಗಿಕ ದಾಹದ ಹೆಣ್ಣಿನ ವಿಕೃತ ಚಿತ್ರ ಒಂದೆಡೆ; ಪ್ರೀತಿ-ಕಾಮದ ಬಯಕೆಯನ್ನು ವಿವೇಕ, ಭಾವ ಶುದ್ಧಿಗಳಿಂದ ಗಳಿಸಿ ಮೌಲ್ಯವಾಗಿಸಿಕೊಳ್ಳುವ ಸರಳೆಯ ಚಿತ್ರ ಇನ್ನೊಂದೆಡೆ. ಕಾದಂಬರಿಗಾರ್ತಿಯ ನಿಲುವನ್ನು ಇವೆರಡೂ ಸ್ಪಷ್ಟಪಡಿಸುತ್ತವೆ.

ಕಾದಂಬರಿಗೆ ನೇರವಾದ, ಸ್ಪಷ್ಟವಾದ ಕಥನಗಾರಿಕೆಯ ವಿಧಾನವಿಲ್ಲ. ಕೇವಲ ಅನುಭವ ಅನಿಸಿಕೆಗಳ ಮೆಲುಕು ಹಾಕುತ್ತ, ಘಟನೆಗಳನ್ನು ನೆನಪಿಸುತ್ತ ಉಲ್ಲೇಖಿಸುತ್ತಹೋಗುವ ರೀತಿಯಿದೆ. ಪಾತ್ರಗಳ ಒಳಗನ್ನು ಅನಾವರಣಗೊಳಿಸಲು ಪ್ರಜ್ಞಾಪ್ರವಾಹ ತಂತ್ರದ ಬಳಕೆಯಾಗಿದೆ. ಇಷ್ಟಾಗಿಯೂ ಕಾದಂಬರಿಯ ಆಶಯ ಎಲ್ಲಿಯೂ ಪರಳು ಗಟ್ಟಿಕೊಂಡು ಕೇಂದ್ರೀಕೃತಗೊಳ್ಳುವುದಿಲ್ಲ. ಆಡುಮಾತಿನ ನಿರೂಪಣೆ ಸಹಜತೆ ತಂದು ಕೊಟ್ಟಿದ್ದರೂ ಅನೇಕ ಕಡೆ ಸಂವಹನಕ್ಕೆ ಅಡ್ಡಿಯೂ ಆಗುತ್ತದೆ.

ಮನುಷ್ಯನ ಮೂಲ ಸ್ವಭಾವಗಳ ಅಧ್ಯಯನದತ್ತ ಲಕ್ಷ್ಯ ಸೆಳೆಯುವ ಲೇಖಕಿಯ ಪ್ರಯತ್ನ ಹೊಸದೇನೋ ಹೌದು; ಆದರೆ ಮೂರ್ತ ಸ್ವರೂಪದ ಕತೆ ಮತ್ತು ಪಾತ್ರಗಳ ಸಂಬಂಧದಲ್ಲಿಯ ಸ್ಪಷ್ಟತೆ ಮೂಡದೇ ಹೋಗುವದರಿಂದ ವಸ್ತುವಿನ ಗುರಿಯೂ ಅಸ್ಪಷ್ಟ, ಅಪೂರ್ಣವಾಗಿ ಉಳಿಯುತ್ತದೆ.

ವೃತ್ತ

ಕತೆಗಾರ ಕೃಷ್ಣ ಮಾಸಡಿಯವರು ಬರೆದಿರುವ ಮೊದಲ ಕಾದಂಬರಿ '**ವೃತ್ತ**[೮]' ವಟ್ಟ ಅನುಭವಗಳ ಚಿತ್ರಣದಲ್ಲಿ ಹದಿಹರಯದವರ ಪ್ರೇಮ–ಕಾಮದ ತೊಡಕನ್ನು ಬೇರೆಬೇರೆ ಸಂದರ್ಭಗಳಲ್ಲಿಟ್ಟು ನೋಡುವ ಶೋಧನ ಗುಣದಿಂದಾಗಿ ಕಾದಂಬರಿ ಲಕ್ಷ್ಯ ಸೆಳೆಯುತ್ತದೆ. ಶೀನ ಹಳ್ಳಿಯ ಹುಡುಗ. ತಾರುಣ್ಯಪೂರ್ವ ದಿನಗಳಲ್ಲಿ ಮತ್ತು ಆ ನಂತರದ ತಾರುಣ್ಯ ತುಂಬಿ ತುಳುಕುವ ಹೊತ್ತಿನಲ್ಲಿ ಪ್ರೇಮ ಕಾಮಗಳ ವಿಚಿತ್ರ ಗೊಂದಲದಲ್ಲಿ ಬಿದ್ದು, ಅದರ ಸುಖ–ದುಃಖಗಳನ್ನು ಮೈ–ಮನಸ್ಸಿಗೆ ಹಚ್ಚಿಕೊಳ್ಳುತ್ತಾನೆ. ಗಂಡು–ಹೆಣ್ಣಿನ ಸಂಬಂಧದಲ್ಲಿಯ ವೈಚಿತ್ರ್ಯ, ವಿಕೃತಿ, ಆಕಸ್ಮಿಕತೆಗಳ ನಿರೂಪಣೆಯಿಂದ ಕತೆ ಕುತೂಹಲಪೂರ್ಣವೆನಿಸುತ್ತದೆ. ಅಲ್ಲಲ್ಲಿ ಮಾಮೂಲೀ ಸನ್ನಿವೇಶಗಳ ಚಿತ್ರಣವಿದ್ದರೂ, ಮುಗ್ಧ ಭಾವುಕತೆಯನ್ನು ಸ್ವ–ವಿಡಂಬನೆಯಿಂದ ನೋಡುವ ಲೇಖಕನ ದೃಷ್ಟಿ ವಿಶಿಷ್ಟವೆನಿಸುತ್ತದೆ. ಕಾದಂಬರಿ ಒಳಗೊಳ್ಳುವ ಪ್ರಪಂಚದ ಸಹಜತೆ, ಪಾತ್ರ ಚಿತ್ರಣದಲ್ಲಿ ತೋರಿದ ಸ್ಪಷ್ಟತೆ ಸೊಗಸಾಗಿದೆ. ನಿರೂಪಣೆ ಯಾಂತ್ರಿಕವಾಗದೆ ಆತ್ಮೀಯತೆಯಿಂದ ಆಕರ್ಷಿಸುತ್ತದೆ.

ಬೇಲಿ ಮತ್ತು ಹೊಲ

ವರ್ಗಪ್ರಜ್ಞೆ ಮತ್ತು ದಲಿತಪ್ರಜ್ಞೆಯಿಂದ ಪ್ರೇರಿತನಾಗಿ–ವಿಪುಲ ಪ್ರಮಾಣದಲ್ಲಿ ಬರೆದರೂ–ಸತ್ವಪೂರ್ಣ ಕತೆ ರಚಿಸುತ್ತಿರುವ ಕುಂ. ವೀರಭದ್ರಪ್ಪನವರು 'ಕಪ್ಪು' ಕಾದಂಬರಿಯಾದ ಮೇಲೆ '**ಬೇಲಿ ಮತ್ತು ಹೊಲ**[೯]' ರಚಿಸಿದ್ದಾರೆ. ವಸ್ತುವಿನ ಪರಿಮಿತಿಯಿಂದಾಗಿ ಇದು ನೀಳ್ಗತೆಯಾಗಿ ಕಂಡರೂ ಅನುಭವದ ಬಹುಮುಖತೆ, ಒಳಗೊಂಡ ಸಮಸ್ಯೆಯ ಸಂಕೀರ್ಣತೆಯಿಂದಾಗಿ ಕಾದಂಬರಿಯ ಸ್ವರೂಪವನ್ನು ಗಳಿಸಿದೆ.

---

೮. ವೃತ್ತ : ಕೃಷ್ಣ ಮಾಸಡಿ; ಬ್ರದರ್ಸ್ ಪ್ರಕಾಶನ, ಬೆಂಗಳೂರು. ೨೨೬ ಪುಟಗಳು; ರೂ. ೧೮-೦೦.

೯. ಬೇಲಿ ಮತ್ತು ಹೊಲ : ಕುಂ. ವೀರಭದ್ರಪ್ಪ; ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು. ೯೨ ಪುಟಗಳು; ರೂ. ೬-೫೦.

ಸುಸ್ಥಿತಿಯಲ್ಲಿದ್ದ ಬಡಕೊಟ್ರಯ್ಯಾನೆಂಬ ಹಳ್ಳಿರೈತನ ಮನೆ ಕಳುವಾಗುತ್ತದೆ. ತನಿಖೆಗೆ ಬಂದ ಇನ್ಸ್‌ಪೆಕ್ಟರ್ ಪೋತರಾಜು ಮತ್ತು ಇಬ್ಬರು ಪೋಲೀಸು ಪೇದೆಗಳು ಹಳ್ಳಿಗರ ಅಜ್ಞಾನ, ಸ್ವಾರ್ಥ, ಅಸಹಾಯಕತೆಗಳನ್ನು ದುರುಪಯೋಗಿಸಿಕೊಂಡು ಹಣ ಸುಲಿಯುವದಷ್ಟೇ ಅಲ್ಲ, ಅಮಾನುಷ ಅತ್ಯಾಚಾರ ಎಸಗುತ್ತಾರೆ: ದೌರ್ಜನ್ಯ ದಿಂದ ಹಳ್ಳಿಯನ್ನ ದಾರುಣಸ್ಥಿತಿಗೆ ಎಳೆಯುತ್ತಾರೆ. ನಿರಪರಾಧಿ ಕುಡುಕಿಸಿ ರಾಮ ನನ್ನು ಅಪರಾಧಿ ಮಾಡಲು ಅವನ ಕಗ್ಗೊಲೆಗೂ ಹೇಸದ ಪೋತರಾಜು, ಪೋಲಿಸ್ ವ್ಯವಸ್ಥೆಯ ಕರಾಳ ಪ್ರತೀಕವಾಗಿ ಮೂಡಿದ್ದಾನೆ ಕತೆಯಲ್ಲಿ. ಬಡಕೊಟ್ರಯ್ಯನ ಮಗ ಆಸ್ತಿಯನ್ನೇ ಕಳೆದುಕೊಂಡು ಊರು ಬಿಟ್ಟು ಅನಾಥವಾಗುವದರೊಂದಿಗೆ ಮುಗಿಯುವ ಕತೆ, ದೌರ್ಜನ್ಯದ ದಳ್ಳುರಿಯಿಂದಾಗಿ ಆಕ್ರೋಶವನ್ನು: ಶೋಷಿತರ ದಾರುಣಸ್ಥಿತಿಯಿಂದಾಗಿ ಕರುಣೆಯನ್ನು ಒಮ್ಮೆಲೇ ಹುಟ್ಟಿಸುತ್ತದೆ.

ಕೊಟ್ಟೂರು ಕಥೆಯ ಆಡುಮಾತಿನಲ್ಲೇ ನಿರೂಪಿತವಾಗುವ ಈ ಕತೆ, ಹಳ್ಳಿಗಾಡಿನ ಜನರ ಭಾವ–ನಂಬಿಕೆಗಳನ್ನು ಯಥಾರ್ಥವಾಗಿ, ಸಹಜವಾಗಿ ತೋರಿಸುವಲ್ಲಿ ಪರಿಣಾಮಕಾರಿಯಾಗಿದೆ. ಹಳ್ಳಿಗರ ನಾಣ್ಣುಡಿ. ನುಡಿಗಟ್ಟುಗಳ ಸೊಗಸು ಕತೆಯನ್ನು ಸಜೀವವಾಗಿಸುತ್ತದೆ. ನವಿರಾದ-ಪ್ರಸಂಗೋಚಿತ ಹಾಸ್ಯ ಮತ್ತು ವಿಡಂಬನೆಯು ದಾಟಿಯ ನಿರೂಪಣೆ ವೀರಬದ್ರಪ್ಪನವರಿಗೆ ತನ್ನ ಪಾತ್ರಗಳ ಜತೆಗಿರುವ ಆತ್ಮೀಯ ಸಂಬಂಧವನ್ನು ಎತ್ತಿ ತೋರುತ್ತದೆ. ಆಳುವ ವ್ಯವಸ್ಥೆಯ ಬಹುಮುಖ್ಯ ಸಾಧನವಾದ ಆರಕ್ಷಕಪಡೆ, ಭೀತಗೊಂಡ–ಹಾನಿಗೊಂಡ ಒಂದು ಹಳ್ಳಿಗೆ ರಕ್ಷಕರಾಗುವ ಬದಲು ರಾಕ್ಷಸರಾಗಿ ಹಾಳುಗೆಡವಲು ಕಾರಣರಾಗುವ ಸನ್ನಿವೇಶ ಒಂದು ಸಂಕೀರ್ಣ ಸಮಸ್ಯೆಯನ್ನೇ ಉದ್ಭವಗೊಳಿಸುತ್ತದೆ. ಈ ದೃಷ್ಟಿಯಿಂದ ಕಥಾವಸ್ತು ಕನ್ನಡಕ್ಕೇ ಅಪರೂಪ. ಆದರೂ 'ಕಪ್ಪು' ಕಾದಂಬರಿಯಲ್ಲಿ ವೀರಭದ್ರಪ್ಪನವರಿಗೆ ಸಾಧ್ಯವಾಗಿದ್ದ ಗ್ರಾಮೀಣ ಜೀವನದ ಬಿಕ್ಕಟ್ಟಿನ ತೀವ್ರ ಚಿತ್ರಣ ಹಾಗೂ ಕ್ರೌರ್ಯಕ್ಕೆ ಕಾರಣವಾಗುವ ಮಾನವ ಸ್ವಭಾವದ ಒಡಲಲ್ಲೇ ಅಡಗಿರುವ ಪ್ರವೃತ್ತಿಗಳ ಶೋಧನೆ 'ಬೇಲಿಮತ್ತು ಹೊಲ' ದಲ್ಲಿ ಸೂಕ್ಷ್ಮವಾಗಿ, ವಿವರವಾಗಿ ನಡೆದಿಲ್ಲ. ಈ ಕಿರುಕಾದಂಬರಿಯ ಪರಿಮಿತ ಅಳತೆಯಲ್ಲಿ ಆ ಕೆಲಸ ನಿರ್ವಹಿಸಲು ಲೇಖಕರಿಗೆ ಆಗಿರಲಿಕ್ಕಿಲ್ಲ.

ಹೇ ಕಾಪುರುಷ; ಯುಗಾಂತರ; ಸ್ವರ್ಣಮೃಗ ಮತ್ತು ಅಶ್ರುತಗಾನ

ಇತ್ತೀಚಿನ ದಿನಗಳಲ್ಲಿ ವಿಪುಲ ಪ್ರಮಾಣದಲ್ಲಿ ಕಾದಂಬರಿ ರಚಿಸುತ್ತ ಜನಪ್ರಿಯ ಲೇಖಕರಾಗಿ ಹೆಸರಾಗುತ್ತಿರುವ. ಕೆ. ಟಿ. ಗಟ್ಟಿಯವರು ನಾಲ್ಕು ಕೃತಿಗಳನ್ನು ಪ್ರಕಟಿಸಿರುವುದು ಈ ವರ್ಷದ ವಿಶೇಷ ಉಲ್ಲೇಖ.

ವಿಪುಲ ಬರವಣಿಗೆಯು ಹಿನ್ನಲೆಯಾಗಿ ಮಾಗಿದ. ವೈವಿಧ್ಯಮಯವಾದ ಅನುಭವ ಕೋಶ: ವಿವೇಚನೆಯ ಆಳ; ಎತ್ತಿಕೊಂಡ ಸಮಸ್ಯೆಯನ್ನು ಶೋಧಿಸುವ.

ಪರೀಕ್ಷಿಸುತ್ತ ಮೌಲ್ಯವನ್ನು ಹರಳುಗಟ್ಟಿಸುವ ದೃಷ್ಟಿಕೋನ ಸಮಾಹಿತವಾಗಿದ್ದರೆ ಅನನ್ಯ ಗುಣವ. ಕಲಾತ್ಮಕ ಮೌಲ್ಯದ ಕೃತಿಗಳ ನಿರ್ಮಾಣ ಸಾಧ್ಯವಾದೀತು. ಗಟ್ಟಿಯವರ ಕಾದಂಬರಿಗಳ ರಚನೆಗೆ ವಿಷಯ, ಸನ್ನಿವೇಶ, ವಿವರಗಳ ವೈವಿಧ್ಯಮಯ ಸಂಗ್ರಹ; ಕೆಲಮಟ್ಟಿಗೆ ಸಮಕಾಲೀನ ಆಗುಹೋಗುಗಳ ಅರಿವು, ಹಿನ್ನೆಲೆ ಮತ್ತು ಆದರ್ಶ (ಮಾದರಿ) ಪೂರ್ಣ ಜೀವನ ಸೃಷ್ಟಿಯ ಭಾವುಕ ಆಶೆ, ಕಲ್ಪನೆಗಳಿವೆ. ಬರವಣಿಗೆಯಲ್ಲಿ ಉತ್ಸಾಹ ಮತ್ತು ಲವಲವಿಕೆ ತೋರುವ ಗಟ್ಟಿಯವರಿಗೆ ಕಥಾ ಸಂವಿಧಾನದ ಚಾತುರ್ಯ, ಸನ್ನಿವೇಶಗಳನ್ನು ನಾಟಕೀಯ ರೂಪದಲ್ಲಿ ಚಿತ್ರಿಸಿ ಸಮಸ್ಯೆಯ ಬೇರೆ ಬೇರೆ ಮುಖಗಳನ್ನು ಚರ್ಚಿಸಬಲ್ಲ ಕೌಶಲ ಕರಗತವಾಗಿದೆ. ಈ ಕಾರಣಕ್ಕಾಗಿ ಗಟ್ಟಿಯವರು ಉಳಿದ ಅಸಂಖ್ಯ ಜನಪ್ರಿಯ ಲೇಖಕರಿಗಿಂತ ಭಿನ್ನ ಹಾಗೂ ಗಂಭೀರರೆನಿಸುತ್ತಾರೆ.

'ಹೇ ಕಾಪುರುಷ'[೧೦] ಕಾದಂಬರಿಯು ಒಬ್ಬ ಸೋಗಿನ ಸಾಧುಪುರುಷನ ಸಮಾಜ ವಿರೋಧೀ ಕೃತ್ಯಗಳ ಕರಾಳ ಜೀವನವನ್ನು ವಿಡಂಬನೆ ಹಾಗೂ ನಿಷ್ಠುರ ಶೈಲಿಯಿಂದ ಟೀಕಿಸುವ ಕುತೂಹಲಪೂರ್ಣ ಕತೆ ಹೊಂದಿದೆ. ಅತ್ಯಂತ ಸುಶಿಕ್ಷಿತರು, ಶ್ರೀಮಂತರು ಭಕ್ತಿಮೌಢ್ಯಕ್ಕೆ ಬಲಿ ಬಿದ್ದು ವ್ಯಕ್ತಿತ್ವವನ್ನು ಹಾಳುಗೆಡವಿಕೊಂಡು ಸಾಮಾಜಿಕ–ರಾಜಕೀಯ ದಿವಾಳಿತನಕ್ಕೂ ಆನುಷಂಗಿಕವಾಗಿ ಹೇಗೆ ಕಾರಣರಾಗುತ್ತಾರೆನ್ನುವುದರ ಕಣ್ಣಿಗೆ ಕಟ್ಟುವ ಚಿತ್ರಣ ಇಲ್ಲಿದೆ. ಶ್ರೀ ದೇವಾಧಿದೇವ ಎಂಬ ಅಮಾನುಷ ಶಕ್ತಿ–ಯುಕ್ತಿಯ ಒಬ್ಬ ದೈವೀಪುರುಷ (ಭಗವಾನ್ !) ಇಂದ್ರಜಾಲ–ಮಹೇಂದ್ರಜಾಲ ವಿದ್ಯೆಯಿಂದ ಹಣವನ್ನು (ಅದನ್ನು ಅನುಸರಿಸುವ ಆಧುನಿಕ ಸುಖೋಪಭೋಗಗಳನ್ನು), ಹೆಣ್ಣುಗಳನ್ನು ವಶೀಕರಣಗೊಳಿಸುವ ತಂತ್ರಗಳ ಚಿತ್ರಣ; ಬುದ್ಧಿ–ವಿವೇಚನೆ ಕೈಯಾರೆ ಕಳೆದುಕೊಂಡು ಭಗವಾನ್‌ನಲ್ಲಿ ಮರುಳಾಗಿ ಭಕ್ತಿ ಕೊಡುವ ಉಚ್ಚ ವಿದ್ಯಾವಂತರ ಮೌಢ್ಯ: ಇವೆಲ್ಲ ಅಸಹಜ, ಅಮಾನವೀಯ ವಿದ್ಯಮಾನಗಳನ್ನು ಬುದ್ಧಿ–ತರ್ಕದ ಸ್ಪಷ್ಟ ಪ್ರಜ್ಞೆಯಿಂದ ಗಮನಿಸುತ್ತಲೇ ತಳಮಳಗೊಳ್ಳುವ ಸುದರ್ಶನನಂತಹ ಏಕಾಕಿ ಪ್ರಜ್ಞಾವಂತ. ಕೊನೆಗೆ, ಸುದರ್ಶನನೇ ಕುಟಿಲೋಪಾಯ ಹೂಡಿ ಭಗವಾನ್ ಕಟ್ಟಿಕೊಂಡಿದ್ದ ಜಾದೂ ಪ್ರಪಂಚದ ಭವ್ಯ ಕಟ್ಟಡಕ್ಕೆ ಬಾಂಬ್ ಇಟ್ಟು ವಿಧ್ವಂಸಗೊಳಿಸುತ್ತಾನೆ.

ಭಕ್ತಿ ಅಧ್ಯಾತ್ಮದ ಹೆಸರಿನಲ್ಲಿ ಮೂಢ ನಂಬಿಕೆ ಕೊಡುವ ಅನಿಷ್ಟಗಳನ್ನು ಖಂಡಿಸುವ ವಾದ ಭೂಮಿಯನ್ನು ಗಟ್ಟಿಯವರು ಕಾದಂಬರಿಯಲ್ಲಿ ಸ್ಥಾಪಿಸಿದ್ದಾರೆ.

---

೧೦. ಹೇ ಕಾಪುರುಷ : ಕೆ. ಟಿ. ಗಟ್ಟಿ : ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು. ೩೧೫ ಪುಟಗಳು. ರೂ. ೨೮-೦೦.

ನಂಬಿಕೆಯ ಪರ-ವಿರೋಧ ವಾತಾವರಣ ಹುಟ್ಟಿಸಿ, ಹುಸಿ-ದಿಟಗಳ ಸೆಣಸಾಟವನ್ನು ನಾಟಕೀಯ ಸನ್ನಿವೇಶಗಳಿಂದ ಚಿತ್ರಿಸುತ್ತ ಕತೆ ಕಟ್ಟುತ್ತಾರೆ. ಹೀಗಾಗಿ ಕಾದಂಬರಿಯ ಗತಿ ಸೂತ್ರ ಬದ್ಧವಾಗುತ್ತದೆ; ಯಾಂತ್ರಿಕವಾಗುತ್ತದೆ. ನಂಬಿಕೆಗಳ ಹಿಂದಿನ ಸೂಕ್ಷ್ಮಗಳನ್ನು; ಪರಿಣಾಮದ ವಿಕೃತಿಗಳನ್ನು ಸ್ಥೂಲವಾಗಿ ಮಾತ್ರ ಸ್ಪರ್ಶಿಸುತ್ತಾರೆ.

'ಯುಗಾಂತರ'೧೧ ಕಾದಂಬರಿಯ ವಸ್ತು ಮತ್ತು ನಿರ್ವಹಣೆ(ನಿರೂಪಣೆಯ ಶೈಲಿ.ಧಾಟಿ) ಹಾಗೂ ಒಟ್ಟಿನಲ್ಲಿ ಬೀರುವ ಪರಿಣಾಮ 'ಹೇ ಕಾಪುರುಷ'ಕ್ಕಿಂತ ಭಿನ್ನವಾದುದೇನಲ್ಲ. ಅಲ್ಲಿ ಧರ್ಮ-ದೇವರ ಕಲ್ಪನೆಯ ಮುಸುಕಿನಲ್ಲಿ ನಡೆಯುವ ಕಪಟಿಗಳ, ಢಟಿಂಗರ ನಾಟಕವಿದ್ದರೆ, ಇಲ್ಲಿ ಸಮಾಜಸೇವೆ, ರಾಜಕೀಯ ಮುಖಂಡತ್ವದ ಸೋಗಿನಲ್ಲಿ ಜರುಗುವ ಪ್ರತಿಗಾಮಿ ಶಕ್ತಿಗಳ ದುರಾಶೆ, ಅತ್ಯಾಚಾರಗಳ ಭೀಕರ ನಿದರ್ಶನಗಳಿವೆ. ಸಭ್ಯತೆಯ ನಟನೆಯ ಹಿಂದಿರುವ ದೌರ್ಜನ್ಯ ಭಯಂಕರವಾಗಿದೆ.

ನಿರುದ್ಯೋಗಿಯಾಗಿರುವ ಮಧ್ಯಮವರ್ಗದ ಯುವಕ-ಯುವತಿಯರನ್ನು ತಮ್ಮ ಲೈಂಗಿಕ ದಾಹಕ್ಕೆ ಆಹಾರ ಮಾಡಿಕೊಳ್ಳುವ ರಾಜಕೀಯ ಗೂಂಡಾಗಳ ಒಂದು ವ್ಯವಸ್ಥಿತ ಪ್ರಯತ್ನವನ್ನು, ಎಚ್ಚೆತ್ತ ಯುವಕರ ಪಡೆಯೊಂದು ಅಷ್ಟೇ ವ್ಯವಸ್ಥಿತ-ವಾಗಿ, ರಚನಾತ್ಮಕವಾಗಿ ಪ್ರತಿಭಟಿಸುತ್ತದೆ. ಅಜ್ಞ, ಅಸಹಾಯಕ ಜನತೆಯಲ್ಲಿ ರಾಜಕೀಯ. ಸಾಮಾಜಿಕ, ನೈತಿಕ ಸ್ಥೈರ್ಯ ತುಂಬಲು ಜೀವವನ್ನು ಪಣಕ್ಕಿಟ್ಟು ಹೋರಾಡುವ ಪ್ರಜ್ಞಾವಂತರ ಪಡೆ, ಹೋರಾಟದಲ್ಲಿ ಸಾವು-ನೋವು ಅನುಭವಿಸುತ್ತದೆ. ಕೊನೆಗೆ, ಅನ್ಯಾಯದ ಮೂಲೋತ್ಪಾಟನೆಗೆ ಹಿಂಸೆಯೇ ಮದ್ದು ಎಂಬ ತೀರ್ಮಾನವಿದೆ.

ಸಮಕಾಲೀನ ಭಾರತದ ರಾಜಕೀಯ ಹಿನ್ನೆಲೆಯಲ್ಲಿಯ ಹಿಂಸೆ. ದೌರ್ಜನ್ಯಗಳನ್ನು ವೈಭವೀಕರಿಸುವ ಗಟ್ಟಿಯವರು ಸಮಸ್ಯೆಗಳನ್ನು ಕ್ರೂರ ವಿಡಂಬನೆಗೂ ಈಡು ಮಾಡಿದರೂ ಕಾದಂಬರಿ ಪ್ರಪಂಚವನ್ನು ಉದ್ದೇಶಪೂರ್ವಕವಾಗಿ ಕಾಲ್ಪನಿಕಗೊಳಿಸುತ್ತಾರೆ. ಹೀಗಾಗಿ ಕ್ರಾಂತಿ, ಪ್ರಗತಿಪರತೆ. ಬೌದ್ಧಿಕ ಪ್ರಾಮಾಣಿಕತೆಯ ಮೌಲ್ಯಗಳೆಲ್ಲ ವಾಸ್ತವಿಕ ನೆಲೆಗಟ್ಟಿನ ಮೇಲೆ ನಿಲ್ಲದೆ ಹಸಿ-ಬಿಸಿ ಆಕಾಂಕ್ಷೆಯಾಗಿ ಮಾತ್ರ ಉಳಿಯುತ್ತವೆ. ಆದರ್ಶಗಳನ್ನು ನಿಜಮಾಡಲು ತಡಕಾಡುವ ಪಾತ್ರಗಳು ಲೇಖಕರ ಕೈಗೊಂಬೆಯಾಗಿ ವರ್ತಿಸುತ್ತವೆ. ಎಲ್ಲಿಯೂ ಈ ಪಾತ್ರಗಳು ಸಜೀವ ಅಥವಾ ಸಹಜ ಆಗುವುದಿಲ್ಲ.

---

೧೧. ಯುಗಾಂತರ : ಕೆ. ಟಿ. ಗಟ್ಟಿ; ಬಾಪ್ಕೋ ಪ್ರಕಾಶನ, ಬೆಂಗಳೂರು, ೧೪೭ ಪುಟಗಳು; ರೂ. ೧೨-೫೦.

'ಶ್ರುತಗಾನ'[೧೨]

'ಸುಧಾ' ವಾರಪತ್ರಿಕೆ ಏರ್ಪಡಿಸಿದ ಕಾದಂಬರಿ ಸ್ಪರ್ಧೆಯಲ್ಲಿ ಎರಡನೆಯ ಬಹುಮಾನ ಗಿಟ್ಟಿಸಿ, 'ಯುಗಾದಿ ಸಂಚಿಕೆ' ಪುರವಣಿ ಪುಸ್ತಕವಾಗಿ ಪ್ರಕಟಗೊಂಡ ಈ ಕಾದಂಬರಿ ಗಟ್ಟಿಯವರ ಅವಸರದ ಬರವಣಿಗೆಯಾದಂತೆ ತೋರುತ್ತದೆ.

ಪ್ರೀತಿಯನ್ನು ಆರಾಧನೆಯ ಮಟ್ಟಕ್ಕೆ ಒಯ್ಯುವ ಭಾವುಕ ಆದರೆ ಪ್ರಬುದ್ಧನಾದ ಯುವಕನೊಬ್ಬನ ಪ್ರೇಮಾನ್ವೇಷಣೆಯ ಕತೆ. 'ಅಶ್ರುತಗಾನ'. ಮೈಥಿಲಿಯನ್ನು ಪ್ರೀತಿಸಿದ್ದ ಅವಿನಾಶ, ಆರ್ಥಿಕ ಅಂತಸ್ತಿನ ಕಾರಣಕ್ಕಾಗಿ ಅವಳನ್ನು ಮದುವೆಯಾಗದೇ ವಂಚಿತನಾಗುತ್ತಾನೆ. ಭಗ್ನಗೊಂಡೂ ಜೀವನದಲ್ಲಿ ಆಸೆ ಕಾಣಲು ಪ್ರಯತ್ನಿಸುತ್ತಾನೆ. ಅತ್ಯಂತ ರೂಪವತಿಯಾದ ತನ್ನ ವಿದ್ಯಾರ್ಥಿನಿ ಶ್ರೀಯ ಬಗ್ಗೆ ಅವಿನಾಶನಲ್ಲಿ ಆಕರ್ಷಣೆಗಿಂತ ಹೆಚ್ಚಾಗಿ ಮೂಡಿ-ಬೆಳೆದದ್ದು ಅಂತಃಕರಣದ ಒಲವು. ಆದರೆ ಮದುವೆಯಾದದ್ದು ಶಾಮಲೆಯ ಜತೆ. ಈ ಹೆಂಡತಿಯ ರಾಕ್ಷಸತ್ವದಿಂದ ನೊಂದು. ಬೆಂದು ಅವಿನಾಶ್ ಸ್ವಸಂತೋಷದಿಂದ ಮನೆ-ಉದ್ಯೋಗ ತ್ಯಜಿಸಿ ದೇಶಾಂತರ ಯಾತ್ರೆ ಹೋಗುತ್ತಾನೆ. ಈ ಹೊತ್ತಿಗಾಗಲೇ ಗಂಡುಗಳ ಸ್ವಾರ್ಥ, ಸುಲಿಗೆಗೆ ಒಳಗಾಗಿ ದಾರುಣಸ್ಥಿತಿ ಅನುಭವಿಸುತ್ತಿರುವ ಶ್ರೀಯನ್ನು ಹುಡುಕುತ್ತ ಹೋಗುವ ಅವಿನಾಶನಿಗೆ, ಆಕೆ ಮಥುರೆಯ ಒಂದು ಬೀದಿಯಲ್ಲಿ ಸೂಳೆಯಾಗಿದ್ದುದು ಕಾಣಸಿಗುತ್ತದೆ. ರೋಗಿಷ್ಟಳಾಗಿದ್ದರೂ ಅವಳನ್ನು ತನು-ಮನಗಳಿಂದ ಸ್ವೀಕರಿಸುತ್ತಾನೆ ಅವಿನಾಶ.

ಭಾವುಕ ಕತೆ ಘಟನಾಪ್ರಧಾನವಾಗಿ ಬೆಳೆಯುವುದರಿಂದ ಪಾತ್ರಗಳ ಭಾವಸಂಬಂಧ ಕ್ರಿಯಾತ್ಮಕವಾಗಿ ರೂಪುಗೊಳ್ಳುವುದಿಲ್ಲ, ಕತೆಯನ್ನು ಬಿಡಿಬೀಸಾಗಿ ಹಬ್ಬಿಸಿ ಮುನ್ನುಗುವಂತೆ ಸಂಘಟಿಸುವ ಗಟ್ಟಿಯವರು ಇಲ್ಲಿ ಬಿಡಿ ಬಿಡಿ ಘಟನೆಗಳ ವರದಿಯನ್ನಷ್ಟೇ ಮಾಡುತ್ತಾರೆ. ಹೀಗಾಗಿ ಕಾದಂಬರಿ ಯಾವ ಗಾಢ ಪರಿಣಾಮವನ್ನೂ ಬೀರದೆ ಸೋಲುತ್ತದೆ.

ಸ್ವರ್ಣಮೃಗ

ಭಾರತದಲ್ಲಿ ಉದ್ಯೋಗಾವಕಾಶ ಸಿಕ್ಕದೇ ಆಫ್ರಿಕಾದ ನೈಜೀರಿಯಾಕ್ಕೆ ವಲಸೆ ಹೋದ ಯುವಕನೊಬ್ಬನ ಉದ್ಯೋಗಬೇಟೆಯಿಂದಾರಂಭವಾಗುವ 'ಸ್ವರ್ಣ

---

೧೨. ಅಶ್ರುತಗಾನ : ಕೆ. ಟಿ. ಗಟ್ಟಿ; 'ಸುಧಾ' ಯುಗಾದಿ ಸಂಚಿಕೆ ೧೯೮೩.
ಪುಟಗಳು : ೯೯, ಬೆಲೆ : ಉಚಿತ ಕೊಡುಗೆ.

ನ್ಯ್ರಗ೧೩' ಕತೆ, ಆ ದೇಶದಲ್ಲಿ ರೂಪುಗೊಂಡಿರುವ ಆರ್ಥಿಕ ಸಂಸ್ಕೃತಿಯ ಕುರೂಪ ಗಳನ್ನು ಚರ್ಚೆಗೆ ಒಳಪಡಿಸುತ್ತ ಸಾಗುತ್ತದೆ. ಆರ್ಥಿಕ ಕಾರಣಗಳಿಗಾಗಿ ಉಂಟಾಗುವ ಸಂಬಂಧಗಳ ವಿಕೃತಿಯನ್ನು ವಾಸ್ತವಿಕವಾದ ವರ್ಣನೆ-ವಿವರಗಳಿಂದ ಓದುಗರ ಮುಂದಿಡುವುದರಲ್ಲಿ ಕಾದಂಬರಿಯ ಯಶಸ್ಸಿದೆ. ಭಾರತದಿಂದ ಹಣಗಳಿಕೆಗಾಗಿಯೇ ಹೋದ ಭಾರತೀಯರ ಆಸೆಬುರುಕತನ, ನೈತಿಕಶಕ್ತಿ ಉಳಿಸಿಕೊಳ್ಳಲಿಕ್ಕಾಗದ ಅಸ ಹಾಯತೆ, ಆತ್ಮಾಭಿಮಾನ, ಅಸ್ತಿತ್ವದ ಮರ್ಯಾದೆಯನ್ನೆಲ್ಲ ಮಾರಿ ನಡೆಸಬೇಕಾದ ಬದುಕಿನ ಅನಿವಾರ್ಯ ಒತ್ತಡ, ಸಂಸ್ಕೃತಿ–ನಾಗರಿಕತೆ (ಸಂಪ್ರದಾಯ ಸ್ವಚ್ಛಂದತೆ) ಗಳ ನಡುವಿನ ಸೆಣಸಾಟ–ಕಾದಂಬರಿಯ ಮುಖ್ಯ ಕಾಳಜಿಯಾಗಿದ್ದರೂ ಬಿಡಿ ಬಿಡಿ ಘಟನೆಗಳ ನಿರೂಪಣೆ, ವರ್ಣನೆಯ ನಡುವೆ ವಸ್ತು ಒಂದು ಬಂಧವಾಗಿ ರೂಪು ಗೊಳ್ಳದೇ ಹೋಗಿದೆ. ಸುರೇಶ–ಶಾಲಿನಿಯರ ಪ್ರೇಮ ಮತ್ತು ದಾಂಪತ್ಯ ಜೀವನ, ಯಾವ ವಿಕೃತಿಯಿಂದಲೂ ಪರಿಣಾಮಗೊಳ್ಳದೇ ತನ್ನ ಶುದ್ಧ ಅಸ್ತಿತ್ವವನ್ನು ಬಳಿಸಿ ಕೊಂಡು ಬರುವ ಉದಾತ್ತತೆ ಕಾದಂಬರಿಯ ಕೇಂದ್ರವಾಗಿದೆ. ಆದರೆ ಪಟ್ಟಿ ವಿವರ– ವರ್ಣನೆಗಳ ನಡುವೆ ಈ ಕೇಂದ್ರವೂ ತೆಳುವಾಗಿ ಬಿಟ್ಟಿದೆ. ಎಂದಿನಂತೆ ಗಟ್ಟಿಯವರ ಆಕರ್ಷಕ ಶೈಲಿ, ನಾಟಕೀಯ ಸನ್ನಿವೇಶಗಳ ನಿರ್ಮಾಣ, ಕಾದಂಬರಿಯನ್ನು ಲವಲವಿಕೆ ಯಿಂದಿಟ್ಟಿವೆ. ಇಲ್ಲಿಯ ಅನುಭವಗಳು ಮಾತ್ರ ಕನ್ನಡ ಕಾದಂಬರಿ ಪ್ರಪಂಚಕ್ಕೆ ಹೊಸವು ಎನ್ನಬಹುದು.

'ಅಜ್ಞಾತ' ನ ನಂಜುಂಡಾಯಣ

ಪ್ರಸಿದ್ಧ ಕತೆಗಾರ ಅಶ್ವತ್ಥ ಅವರ '**ನಂಜುಂಡಾಯಣ**'೧೪ ಕಾದಂಬರಿ, ಸಾವಿನ ಬಾಯಿಯಲ್ಲಿರುವ ಅಪರಾಧಿಯೊಬ್ಬನ ಆತ್ಮ ನಿವೇದನೆಯಾಗಿದ್ದು ಅವನ ಜೀವನದಲ್ಲಿ ಘಟಿಸಿದ ಅಪರೂಪದ ಅನುಭವವೊಂದರ ವಿಶ್ಲೇಷಣೆ–ತಪ್ಪೊಪ್ಪಿಗೆಯ ಧಾಟಿಯಲ್ಲಿ ಇದರ ವಸ್ತು. ವಿಶ್ಲೇಷಣೆಯ ವಿಧಾನವಿರುವವರಿಂದ ಬರವಣಿಗೆಯು ಮಿತಿಮೀರಿ ಲಂಬಿಸಿದ್ದು ಕೃತಿಗೆ ಬೃಹದ್ ರೂಪ ಒದಗಿಸಿದೆ. ಓದಿ ಮುಗಿಸಿದ ಮೇಲೆ ಕಾದಂಬರಿ ಈ ಗಾತ್ರಕ್ಕೆ ಲಂಬಿಸುವ ಸಾಹಿತ್ಯಕ ಅಥವಾ ಕಲಾತ್ಮಕ ಅಗತ್ಯ ಏನಿತ್ತು ಎಂಬ ಪ್ರಶ್ನೆ ಕಾಡದೆ ಬಿಡುವುದಿಲ್ಲ.

ಕಥಾವಸ್ತು ಭಾವುಕ ಪ್ರೇಮ ಪ್ರೇಮ ಪ್ರಕರಣವನ್ನು ಕೇಂದ್ರವಾಗಿಸಿಕೊಂಡಿದೆ. ಹಿಂದೆ ಕೇರಳದಲ್ಲಿ ನಡೆದ ಕೊಲೆ ಮೊಕದ್ದಮೆಯೊಂದರ ವಾರ್ತೆಯಿಂದ ಪ್ರೇರಿತ

---

೧೩. ಸ್ವರ್ಣಮೃಗ : ಕೆ. ಟಿ. ಗಟ್ಟಿ: ಎಸ್. ಬಿ. ಪ್ರಕಾಶನ, ಬೆಂಗಳೂರು.
೪೨೧ ಪುಟಗಳು: ರೂ. ೨೦-೫೦.

೧೪. 'ಅಜ್ಞಾತ'ನ ನಂಜುಂಡಾಯಣ : 'ಅಶ್ವತ್ಥ': ಉಷಾ ಪ್ರಕಾಶನ, ಮೈಸೂರು.
ಡೆಮಿ ೬೨೪ ಪುಟಗಳು; ರೂ. ೬೦-೦೦.

ನಾಗಿ ತಾವು ಈ ದೀರ್ಘ ಕಾದಂಬರಿ ಬರೆಯುವಂತಾಯಿತೆಂದು ಹೇಳಿಕೊಂಡಿರುವ ಲೇಖಕರು ಆ ಸತ್ಯ ಘಟನೆಯ ವಿವರವನ್ನು ಕೊಟ್ಟದ್ದು ಹೀಗೆ...... "ಬ್ರಹ್ಮಚರ್ಯೆಗೆ ಬದ್ಧನಾಗಿರಬೇಕಾಗಿದ್ದ ಕ್ಯಾಥೊಲಿಕ್ ಪಾದ್ರಿಯೊಬ್ಬ, ಗಂಡನನ್ನು ತೊರೆದು ಮಕ್ಕಳನ್ನು ಹೊಂದಿದ್ದ ಹೆಂಗಸು ಒಬ್ಬಳೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ. ಅವಳು ತನಗೆ ಸಾಕಾದಷ್ಟು ಹಣವನ್ನು ಅವನು ಕೊಡದಿದ್ದರೆ ಅಕ್ರಮ ಸಂಬಂಧದ ರಹಸ್ಯವನ್ನು ಬಹಿರಂಗ-ಮಾಡುವುದಾಗಿ ಬೆದರಿಕೆ ಹಾಕಿದಾಗ, ಅವನು ಬೇರೆಯ ಕಡೆ ವರ್ಗ ಮಾಡಿಸಿಕೊಂಡು ಹೋದ. ಅವಳು ಅಲ್ಲಿಗೂ ಹೋದಾಗ, ಅವನು ಅವಳನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ, ಹರಿತ ಆಯುಧದಿಂದ ಕೊಲೆಮಾಡಿದ. ಈ ಅಪರಾಧಕ್ಕಾಗಿ ಅವನಿಗೆ ಗಲ್ಲು ಶಿಕ್ಷೆಯನ್ನು ವಿಧಿಸಲಾಯಿತು."

'ನಂಜುಂಡಾಯಣ' ದಲ್ಲಿಯ ಕತೆ.ಮೇಲಿನ ಘಟನೆಗಿಂತ ಆಶಯದಲ್ಲಿ ಹಾಗೂ ಪರಿಣಾಮದಲ್ಲಿ ಭಿನ್ನವಾಗಿದೆ. ಇಲ್ಲಿಯ ಕಥಾನಾಯಕ ನಂಜುಂಡ, ಒಬ್ಬ ಶಾಲಾ ಮುಖ್ಯೋಪಾಧ್ಯಾಯ; ಸುಂದರವಾದ ಸಂಸಾರ ಜೀವಿ. ಮಧ್ಯವಯಸ್ಸಿನಲ್ಲಿ ಅವನಿಗೆ ಸೂಳೆಯ ಕುಲದಲ್ಲಿ ಹುಟ್ಟಿದ ನಂಜಿಯೆಂಬ ಚೆಲುವೆಯ ಮೇಲೆ ಮೋಹ ಹುಟ್ಟಿ. ಅವಳಿಗಾಗಿ ಉದ್ಯೋಗ, ಊರು ಕೂಡ ಬಿಡಲು ನಿರ್ಣಯಿಸುತ್ತಾನೆ. ನಂಜಿಯೊಂದಿಗಿನ ಪ್ರೇಮಜೀವನ ಅವನಿಗೆ ಅನೈತಿಕವೆನ್ನಿಸದೆ, ತನ್ನನ್ನು ಒಬ್ಬ 'ಹೊಸ ಮನುಷ್ಯ'ನನ್ನಾಗಿ ಮಾರ್ಪಡಿಸಿದ ವಿಶೇಷಾನುಭವವೆನಿಸುತ್ತದೆ. ನಂಜಿ ಅವನಿಗೆ ತ್ರಿಕರಣ ಪೂರ್ವಕ ಪ್ರೀತಿ, ನಿಷ್ಠೆ, ಪಾತಿವ್ರತ್ಯ ತೋರಿದರೂ ಅವಳ ಮೇಲೆ ಕಣ್ಣಿಟ್ಟಿದ್ದ ಅನಾಮಿಕ ದುಷ್ಟರು ಕೆಲವರು ಹೂಡಿದ ಪಿತೂರಿಯಿಂದಾಗಿ, ನಂಜುಂಡ ಅವಳ ನಿಷ್ಠೆ, ಪರಿಶುದ್ಧಿಯ ಬಗ್ಗೆ ಸಂಶಯ ಗ್ರಸ್ತನಾಗುತ್ತಾನೆ; ಅವಳನ್ನು ಕೊಂದು ತೃಪ್ತಿಪಡಲು ಹೋಗುತ್ತಾನೆ. ಕೊನೆಗೆ ಕಾನೂನಿನ ಹಿಡಿತಕ್ಕೆ ಸಿಕ್ಕು ನೇಣುಗಂಬ ಏರುವ ಮುನ್ನ ತನ್ನ ಪ್ರೇಮ ಕತೆಯ ಸ್ವಾರಸ್ಯ, ದುರಂತವನ್ನು ನಿವೇದಿಸಿಕೊಂಡು 'ಅಜ್ಞಾತ'ನಾಗಿ ಉಳಿಯ ಬಯಸುತ್ತಾನೆ.

ಅಪರಾಧಿಯೊಬ್ಬನ ಆಂತರಿಕ ತಳಮಳ, ತನ್ನ ಕೃತಿಯ ಬಗೆಗಿನ ಭಾವನಾತ್ಮಕ. ಬೌದ್ಧಿಕ ಸಮರ್ಥನೆ ಕಾದಂಬರಿಯ ತುಂಬ ವಿವರ ವಿವರವಾಗಿ ದಾಖಲಾಗಿದೆ. ಈತನದು ಆದರ್ಶ ಪ್ರೇಮಿಯ ಮನೋವೃತ್ತಿ. ಆದರೆ ವ್ಯಕ್ತಿತ್ವದಲ್ಲಿ 'ಒಥೆಲೋ'ನ ಕ್ರೌರ್ಯವೂ ಸೇರಿಕೊಂಡಿದೆ. ನಿಷ್ಪಾಪಿ ಪ್ರೇಯಸಿಯನ್ನು ಕೊಂದುದಕ್ಕಾಗಿ: ಹಾಲಿನಂಥ ತನ್ನ ಸಂಸಾರವನ್ನು ಹಾಳುಗೆಡವಿದುದಕ್ಕಾಗಿ ಪರಿತಾಪ ಪಡುವ ಈ ಅಪರಾಧಿಯ ವೃತ್ತಾಂತವಿಡೀ 'ಒಪ್ಪಿಗೆ(?)' ವಿಧಾನದಲ್ಲಿ ನಿರೂಪಣೆಗೊಂಡಿದೆ. ನಂಜಿಯ ಮೇಲೆ ತನ್ನಲ್ಲಿ ಹುಟ್ಟಿದ್ದು ಪ್ರೇಮವೋ ಮೋಹವೋ ಎಂಬ ಜಿಜ್ಞಾಸೆಯೊಂದಿಗೆ ಆರಂಭವಾಗುವ ನಿವೇದನೆ ಅವನ ಮೈ, ಮನಸ್ಸುಗಳೆರಡು ಆ "ಪರ್ವ

ಗಳಿಗೆ"ಯಿಂದ ಆರಂಭಿಸಿ, ಸಾವಿನ ಕರೆ ಕೇಳಿ ಬರುವ ಕ್ಷಣಗಳ ತನಕ ನಡೆವ ಆಲೋಚನೆ, ವರ್ತನೆ, ಪ್ರತಿಕ್ರಿಯೆಗಳನ್ನು ದಾಖಲಿಸುತ್ತ ಹೋಗುತ್ತದೆ. ಅಪರಾಧಿಯ ಪ್ರಾಮಾಣಿಕ ತಪ್ಪೊಪ್ಪಿಗೆಯ ಮಾನವೀಯ ಕಾರಣಕ್ಕಾಗಿ ಲೇಖಕರು ಈ ವಿಧಾನ ಅನುಸರಿಸಿದ್ದಾರೆಂದು ಒಪ್ಪಿಕೊಂಡರೂ ಅದರಿಂದ ಸಾಧಿತವಾದ ತಾತ್ತ್ವಿಕ ಅಂಶ ಏನು ಎಂಬ ಪ್ರಶ್ನೆಗೆ ಸಮಾಧಾನವಿಲ್ಲ. ಪ್ರೇಮ-ಕಾಮದ ಇಲ್ಲಿನ ತೊಡಕು ಕೂಡ ತೀರ ಸಂಕೀರ್ಣವಾದುದಲ್ಲ; ಆಳವಾದದ್ದೂ ಅಲ್ಲ. ಭಾವುಕತೆಯ ಅತಿಸಾರದಿಂದಾಗಿ ನಿರೂಪಣೆ ಸಡಿಲಾಗಿ ಕಾದಂಬರಿಯಲ್ಲಿ ರೂಪುಗೊಳ್ಳಬೇಕಾದ ಶಿಲ್ಪ, ಗಟ್ಟಿಯಾಗಿ ಮೂಡದೇ ಹೋಗಿದೆ. ವಸ್ತುವನ್ನು, ಅದರ ಆಶಯವನ್ನು ಧ್ವನಿಪೂರ್ಣವಾಗಿಸುವ ಕಡೆ ಲೇಖಕರು ಗಮನಿಸುತ್ತಿದ್ದರೆ ಕಲಾತ್ಮಕ ಶಿಸ್ತಿಗೆ ಒಳಪಟ್ಟು ಈ ಕೃತಿ ಒಂದು ಪ್ರಭಾವೀ ಕಾದಂಬರಿಯಾಗಿ ಉಳಿಯಬಹುದಿತ್ತು.

ಬೀಸು

ಸಣ್ಣ ಕತೆಗಾರರಾಗಿ ಹೆಸರಾಗಿರುವ ಶೇಷನಾರಾಯಣ ಅವರ ಎಂಟನೆಯ ಕಾದಂಬರಿ '**ಬೀಸು**'[೧೫] ಕೂಡ ಸಾಕಷ್ಟು ವಿಸ್ತಾರವಾದ ಕಥಾನಕವುಳ್ಳ ಕೃತಿ. ಆರು ಹಂತಗಳಲ್ಲಿ ನಿರೂಪಿತವಾಗಿರುವ, ಸ್ವಾತಂತ್ರ್ಯಪೂರ್ವ ಕಾಲದ ಹಳ್ಳಿಯೊಂದರ ಸಾಮಾಜಿಕ ಅವಸ್ಥೆಯ ಮುಕ್ತ ಚಿತ್ರಣ ಇದರ ವಸ್ತು. ಪ್ರಾದೇಶಿಕ ಹಿನ್ನೆಲೆಯ ಘಟನೆಗಳು—ಆ ಹಳ್ಳಿಯ ಜಾತಿವ್ಯವಸ್ಥೆಯ ವಿಷಮತೆ, ಪಂಚಾಯ್ತಿ ವ್ಯವಹಾರಗಳು, ಕ್ರೈಸ್ತರ ಧರ್ಮ ಪ್ರಚಾರ, ಆನೆಗಳ ಹಾವಳಿ, ಪಾರ್ಟಿ ಹೊಡೆದಾಟಗಳು, ಅಧಿಕಾರಿಗಳ ದರ್ಪ—ಈ ಎಲ್ಲ ವಿಷಯಗಳ ಪ್ರಸ್ತಾಪ ಇಲ್ಲಿರುವ ಮುಖ್ಯ ಕತೆಗೆ ಕಾದಂಬರಿಯ ವಿಸ್ತಾರವನ್ನು ಒದಗಿಸಿಕೊಟ್ಟಿವೆ. ಕಥಾವಸ್ತುವಿನ ಮುಖ್ಯ ಗಮನವಿರುವುದು, ಕೆಂಪ ಶೆಟ್ಟಿ ಮತ್ತು ಹೊಲೆಯರ ವೆಂಕಟನ ಕುಟುಂಬಗಳ ಆಗು—ಹೋಗಿನ ಸುತ್ತ.

ಕೆಂಪಶೆಟ್ಟಿ ಧೂರ್ತ ವ್ಯಾಪಾರಿ. ಕ್ರಮೇಣ ಇವನಲ್ಲಿ ಹಣವಂತಿಕೆಯ ಸೊಕ್ಕು ಮತ್ತು ದುರ್ಬಲರನ್ನು ಸುಲಿದು ದುಡಿಸುವ ಕ್ರೌರ್ಯವೂ ಸೇರಿ ಹಳ್ಳಿಯ ಸಾಹ್ಕಾರನಾಗಿ ಮೆರೆಯುವಂತಾದವನು. ಸಿದ್ಧಮ್ಮ ಜಬರ್‌ದಸ್ತ ವ್ಯಕ್ತಿತ್ವದ ಇವನ ಹೆಂಡತಿ. ಇವರ ಮಗಳೇ ಚೆಲುವೆ ಪುಟ್ಟತಾಯಿ. ಹೊಲೆಯ ವೆಂಕಟ, ಶೆಟ್ಟಿಯ ಆಳು. ಇವನ ಮಗ ಚೆಲುವ ಹನುಮನನ್ನು ಬಾಲ್ಯದಿಂದಲೇ ಹಚ್ಚಿಕೊಂಡ ಪುಟ್ಟತಾಯಿ, ಹರಯದಲ್ಲಿ ಮದುವೆಯಾಗುವ ಸಾಹಸ ಮಾಡುತ್ತಾಳೆ. ಹೊಲತಿಯಾಗಿ, ಶೆಟ್ಟಿಯ ಮನೆಯಿಂದ ದೂರವಾಗುತ್ತಾಳೆ.

೧೫. ಬೀಸು : ಶೇಷ ನಾರಾಯಣ; ಗೀತಾ ಬುಕ್ ಹೌಸ್, ಮೈಸೂರು.
೪೮೭ ಪುಟಗಳು; ರೂ. ೩೦-೦೦

ಹೊಲೆಯರ ಮೇಲೆ ಸವರ್ಣೀಯರ ದೌರ್ಜನ್ಯ ನಡೆದೇ ಇರುತ್ತದೆ. ಇಂಗ್ಲಿಷ್ ಸರಕಾರದ ಅಧಿಕಾರಿಗಳ ದರ್ಪ ಅವರ ಜತೆ ಶಾಮೀಲಾದ ಹಳ್ಳಿಯ ಪಟೇಲ-ಶಾನುಭೋಗರ ದರ್ಪವೂ ಸೇರಿದೆ. ಕ್ರೈಸ್ತಪಾದ್ರಿಗಳ ಮತಾಂತರದ ಹಾವಳಿಯನ್ನು ಸಾಂಕೇತಿಕವಾಗಿ ಸಮರ್ಥಿಸುವಂತೆ ಬೆಳೆನಾಶಮಾಡುವ ಆನೆಗಳ ಹಾವಳಿಯ ವಾಸ್ತವಿಕ ವರ್ಣನೆಯೂ ಸೇರಿಕೊಂಡಿದೆ. ಹಳ್ಳಿಗರ ನೈತಿಕ, ಆರ್ಥಿಕ ಜೀವನವನ್ನು ವ್ಯಾಖ್ಯಾನಿಸುವ ಲೇಖಕರ ದೃಷ್ಟಿಯಿಂದಾಗಿ ಕಾದಂಬರಿಯಲ್ಲಿ ಪ್ರಸ್ತಾಪಿತವಾಗಿರುವ ಸಂಗತಿಗಳು ವೈವಿಧ್ಯಮಯವಾಗಿವೆ.

ಸವರ್ಣಿಯರಿಗೂ ಹೊಲೆಯರಿಗೂ ನಡೆದ ಸೆಣಸಾಟದಲ್ಲಿ ಹೊಲೆಯ ರುದ್ರನ ಕೊಲೆ ಮಾಡಿದ ಆರೋಪಕ್ಕೆ ತುತ್ತಾದ ಕೆಂಪಶೆಟ್ಟಿ, ಜೀವಾವಧಿ ಶಿಕ್ಷೆಗೆ ಒಳಪಟ್ಟು ಸೆರೆಮನೆ ಸೇರುತ್ತಾನೆ. ಸಿದ್ಧಮ್ಮ ಗಂಡನಿಂದ ವಂಚಿತಳಾಗಿ, ಹಿಂದಿನ ಪ್ರೇಮಿಗಳ ಆಧಾರವನ್ನೂ ಕಳೆದುಕೊಂಡು ಏಕಾಂಗಿಯೂ ಅಸಹಾಯಳೂ ಆಗುತ್ತಾಳೆ. ತಂದೆಯ ಮರವಸ್ಥೆಗೆ. ತಾಯಿಯ ದೀನಾವಸ್ಥೆಗೆ ಹೊಲತಿಯಾದ ತಾನೇ ಕಾರಣ ಎಂದು ಪುಟ್ಟತಾಯಿ ಕೊರಗಿನಿಂದ ನವೆಯುತ್ತಾಳೆ. ಹನುಮನಿಗೆ ಗಂಡುಮಗುವನ್ನು ಹೆತ್ತು ಕೊಟ್ಟರೂ ಪುಟ್ಟತಾಯಿಗೆ ಸಿದ್ಧಮ್ಮನ ಮೇಲೆ ಮಮತೆ ಅಳಿಯುವುದಿಲ್ಲ. ಹತಾಶಳಾದ ಸಿದ್ಧಮ್ಮ ಆತ್ಮಹತ್ಯೆಗೆ ಸಿದ್ಧಳಾದಾಗ ತಾಯಿಯನ್ನು ಬದುಕಿಸುವ ಭರದಲ್ಲಿ ಪುಟ್ಟ ತಾಯಿಯೇ ಆಕಸ್ಮಿಕ ಬಾವಿಗೆ ಬಿದ್ದು ದುರಂತ ತಂದುಕೊಳ್ಳುತ್ತಾಳೆ.

ಘಟನೆಗಳ ಸರಮಾಲೆಯಿಂದಾಗಿ ಕಾದಂಬರಿಯ ವಸ್ತುವಿಗೆ ಗಟ್ಟಿಯಾದ ಕೇಂದ್ರವೊಂದು ನೆಲೆಗೊಳ್ಳದೆ, ಕತೆ ಉದ್ದೇಶರಹಿತವೆನಿಸುತ್ತದೆ. ಅಂದರೆ ಇವರ ಮೂಲಕ ಲೇಖಕರು ಧ್ವನಿಸುವುದೇನೆಂಬುದು ಅರಿವಿಗೆ ಬಾರದೇ ಹೋಗುತ್ತದೆ. ಸ್ವಾತಂತ್ರ್ಯಪೂರ್ವದ ಹಳ್ಳಿಯ ಸಾಮಾಜಿಕ ಸ್ಥಿತಿಗತಿಯ ಇತಿಹಾಸದ ಒಂದು ವರ್ಣನಾತ್ಮಕ ದಾಖಲೆಯಾಗಿ ಮಾತ್ರ ಈ ಘಟನೆಗಳಿಗೆ ಮಹತ್ವ ಬರುತ್ತದೆ. ಪಾತ್ರ ಚಿತ್ರಣದಲ್ಲಿ ವಿಚಿತ್ರತೆ ಈ ಕಾರಣದಿಂದಾಗಿಯೇ ಮೂಡದೇ ಹೋಗಿದೆ. ಸನ್ನಿವೇಶಗಳ ಚಿತ್ರಣದಲ್ಲಿ ಕೆಲವೆಡೆ ಶಕ್ತಿಶಾಲಿ ನಿರೂಪಣೆ ಇದ್ದು, ಪ್ರಾದೇಶಿಕ ವೈಶಿಷ್ಟ್ಯಗಳನ್ನು ವರ್ಣಿಸುವ ವಟ್ಟ ವಿವರಗಳ ಸಹಜತೆಯಿಂದಾಗಿ ಕಾದಂಬರಿ ಓದಿಸಿಕೊಳ್ಳುತ್ತದೆ.

* * * *

ಅನುಭವವನ್ನು ಸ್ವೀಕರಿಸಿ (ಸಂಗ್ರಹಿಸಿ) ಕಲ್ಪಿಸುವ ಕ್ರಮ ಮತ್ತು ಭಾಷೆಯಲ್ಲಿ ಶಿಲ್ಪವಾಗಿಸುವ ಕೌಶಲ ಇವೆರಡನ್ನು ಸಾಧ್ಯ ಮಾಡಿಕೊಂಡ ಕಾದಂಬರಿಕಾರ, ತನ್ನ ವಸ್ತುವಿನ ವಿವರಗಳನ್ನು ಬಿಚ್ಚಿಡುವ ವರದಿಗಾರನಾಗದೆ. ಹೇಳದೇ ಉಳಿದಿರುವ ಸಂಗತಿ ಅಥವಾ ಮುಚ್ಚಿಟ್ಟ ಅನುಭವಗಳಿಗಿಂತ ಹೆಚ್ಚಿನದೇನನ್ನೋ

ಧ್ವನಿಸುವ ಕ್ರಮ ಸಾಧಿಸಿರುತ್ತಾನೆ. ಆಗ ಕಾದಂಬರಿ ಹೇಳಿದ ಕತೆ ಅವನ ನಂಬಿಕೆ, ಆಶಯಗಳನ್ನು ದರ್ಶನ ಮೂಡಿಸಬಲ್ಲ ಕೃತಿಯಾಗುತ್ತದೆ.

ಎಸ್. ಎಲ್. ಭೈರಪ್ಪ (ನೆಲೆ) ಮತ್ತು ಶಾಂತಿನಾಥ ದೇಸಾಯಿ (ಬೀಜ) ಹಾಗೂ ಕೆಲಮಟ್ಟಿಗೆ ಕುಂದರನಾಡ ಪಾಟೀಲ (ಹಂತ) ಮತ್ತು ಕುಂ. ವೀರಭದ್ರಪ್ಪ (ಬೇಲಿ ಮತ್ತು ಹೊಲ) ಇವರ ಬರವಣಿಗೆಯಲ್ಲಿಯ ಅನುಭವ-ವಿವರ ಅನಿಸಿಕೆಗಳು ಧ್ವನ್ಯರ್ಥದ ಅಲೆಗಳನ್ನು ಹುಟ್ಟಿಸುತ್ತವೆ; ಪರಿಣಾಮವಾಗಿ ಅವರ ಕತೆಗಳ ಆಶಯಕ್ಕೆ ಆಳವೂ ಸಿಕ್ಕಿದೆ; ಎತ್ತರವೂ ನಿಲುಕಿದೆ.

೧೯೮೩ ರ ಸಣ್ಣ ಕಥೆ

● ಸರೋಜಿನಿ ಚವಲಾರ

ಕಥೆ ಕೇಳುವ ಹೇಳುವ ಪದ್ಧತಿ ನಮ್ಮ ದೇಶ, ಭಾಷೆಗೆ ಅಷ್ಟೇನೂ ಹೊಸದಲ್ಲ. ಬಾಲಕರಿಂದ ಹಿಡಿದು ಮುದುಕರವರೆಗೆ ತಲೆದೂಗುವ, ಮನವನ್ನು ಸೆರೆ ಹಿಡಿಯುವ ಕಥೆಗಳು ಜನಪ್ರಿಯವಾಗಿರುವದು ಅಷ್ಟೇನೂ ಸೋಜಿಗದ ವಿಷಯವಲ್ಲ. ಪಂಚತಂತ್ರ, ವಡ್ಡಾರಾಧನೆಯ ಕಥೆಗಳಂತೆ ನೀತಿತತ್ತ್ವ ಹಿಡಿದು ಪರತತ್ತ್ವದವರೆಗೆ ಹಾಸು-ಬೇಸಾಗಿ ಬೆಳೆದ ಕಥಾ ಪರಂಪರೆ ನಮಗೆ ಅಷ್ಟೇನೂ ಅಪರಿಚಿತವಲ್ಲ.

ಇಂಗ್ಲಿಷ ಭಾಷೆಯ ಸಾಹಿತ್ಯದ ಇತರ ಪ್ರಕಾರಗಳಂತೆ ಸಮುದ್ರಾಚೆಯಿಂದ ತೇಲಿಬಂದ ವಜ್ರಗಳಲ್ಲಿ ಸಣ್ಣಕಥೆಯ ಸ್ವರೂಪವು ಒಂದು. ಜಾನಪದ ರೂಪದಿಂದ ಮೈಕೊಡವಿ ನಮ್ಮ ಭಾಷೆಯಲ್ಲಿ ಸಣ್ಣಕಥೆಯ ಪ್ರಕಾರವು ಪ್ರೌಢ ಮತ್ತು ಅಭಿಜಾತ ಸಾಹಿತ್ಯ ಪ್ರಕಾರವಾಗಿ ಬೆಳೆಯಲು ಇಂಗ್ಲಿಷ ಗಾಳಿಯ ಚಲನೆಯೆ ಕಾರಣ.

ಒಂದು ಶತಮಾನದ ಹಿಂದೆಯಷ್ಟೆ, ಎಡ್ಗರ ಆಲನ್‌ಪೋಸಿನಿಂದ ಹುಟ್ಟಿದ ಸಣ್ಣ ಕಥೆಯ ರೂಪವು ಫ್ರಾನ್ಸ, ಇಂಗ್ಲೆಂಡ, ರಶಿಯಾ, ಜರ್ಮನಿ, ನಾರ್ವೆ ಮೊದಲಾದ ಕಡೆಗಳಲ್ಲಿ ಪ್ರಖ್ಯಾತವಾಗಿ "ಅಲ್ಪ ವೇಳೆಯಲ್ಲಿ ಅಪಾರ ಸಂತೋಷ"ವನ್ನು ಕೊಡುವ ಹೊಸತನದಿಂದ ಎಲ್ಲರ ಮಾನ್ಯತೆ ಪಡೆಯಿತು. "ಸಣ್ಣಕಥೆ"ಯೆಂಬ ಶಬ್ದ ಇಂಗ್ಲಿಷಿನ 'short story' ಪದದ ಬದಲಿಗೆ ಬಳಕೆಯಾಯಿತು. ಸಣ್ಣಕಥಾ ಕ್ಷೇತ್ರವು ಬೆಳೆದಂತೆ ಅವು "ಇಂಗ್ಲಿಷ ಭಾಷೆಯ ಅನುಕರಣವಲ್ಲ, ಅನುಕೂಲತೆ"ಗಳಾದವು. ಅವುಗಳ "ಉದ್ದೇಶ, ವಸ್ತು, ಭಾವಗಳ ನಾವಿನ್ಯ. ನಿರೂಪಣೆಯ ಹೊಸತನವೆಲ್ಲವೂ ಸ್ವಾಭಾವಿಕವಾಗಿ ಬಂದಿದೆ"ಯೆನ್ನುವಷ್ಟು ಚಿರಪರಿಚಿತವಾದವು.

'ಸಂಕ್ಷಿಪ್ತತೆ' ಸಣ್ಣಕಥೆಯ ಮುಖ್ಯಲಕ್ಷಣ. ಅದಕ್ಕೆ ನಿಶ್ಚಿತವಾದ ರೂಪ ಮತ್ತು ನಿಶ್ಚಿತವಾದ ಜೀವಗುಣಗಳ ಬೆಳವಣಿಗೆ ಇರುತ್ತದೆ. ಆದರೆ ಅದು ಕಾದಂಬರಿಯ ಸಾರಸಂಗ್ರಹ ಅಥವಾ ಚಿಕ್ಕರೂಪವಲ್ಲ. ಆರಂಭದ ಹಂತದಲ್ಲಿ ಒಕೆನ್ಸನ ಕ್ರಿಸ್‌ಮಸ್ ಬುಕ್ಸ ದಂತಹ ಕಥೆಗಳು ಜೀವಾಳದಲ್ಲಿ ಕಾದಂಬರಿಗಳಾಗಿದ್ದವು. ಬರುಬರುತ್ತಾ ಸಣ್ಣಕಥೆ-ಕಾದಂಬರಿಗಳ ನಡುವೆ ಸ್ಪಷ್ಟವಾದ ಅಂತರವನ್ನು

ಗುರುತಿಸಲು ಸಾಧ್ಯವಾಗಿದೆ. ಆದರೂ ಇವತ್ತಿನವರೆಗೆ ಈ ಎರಡು ಪ್ರಕಾರಗಳ ನಡುವಿನ ಸೀಮಾರೇಖೆಯ ಮೇಲೆ ನಿಂತ ರಚನೆಗಳು ದೊರೆಯುತ್ತವೆ. ಕಥೆ ದೀರ್ಘತೆಯಲ್ಲಿ ಕಾದಂಬರಿಗಿಂತ ಭಿನ್ನವಾಗಿರುವಂತೆ ಗುರಿ–ವಿಧಾನ ಹಾಗು ರಚನೆಯಲ್ಲಿಯೂ ಭಿನ್ನವಾಗಿದೆ.

ಸಣ್ಣ ಕಥೆಯು ವಸ್ತು ಕಥಾಪರಿಮಿತಿಗಳೊಳಗೆ ಸಮರ್ಪಕವಾಗಿ, ಪರಿಣಾಮಕಾರಿಯಾಗಿ ನಿರ್ವಹಿಸಲ್ಪಡುತ್ತದೆ. ವಸ್ತು ಮತ್ತು ನಿರೂಪಣೆಗಳು ಒಂದರೊಡನೊಂದು ಅನಿವಾರ್ಯವಾಗಿ ಬದ್ಧವಾಗಿರುತ್ತವೆ. ಅದರ ರೂಪ–ರೇಷೆಗಳು ಸಂಪೂರ್ಣ ಸ್ಫುಟವಾಗಿ, ಪ್ರಮಾಣಬದ್ಧವಾಗಿ, ಉದ್ದೇಶಕ್ಕೆ ತಕ್ಕಂತೆ ತುಂಬಿಕೊಂಡು, ಗೋಜಲಾಗದೆ ತನ್ನ ಚೌಕಟ್ಟಿನೊಳಗೆ ಸಮಗ್ರವಾಗಿದ್ದು ಪರಿಣಾಮಕಾರಿಯಾಗಿರುತ್ತದೆ.

ಸಣ್ಣ ಕಥೆಯು ಗುರಿಯ ಏಕಾಗ್ರತೆ ಮತ್ತು ಪರಿಣಾಮದ ಏಕಾಗ್ರತೆಯನ್ನು ಸಾಧಿಸಬೇಕಾಗುತ್ತದೆ. ಕಾದಂಬರಿಯಲ್ಲಿ ವಿಭಿನ್ನಾಂಶಗಳ ಪೇರಿಕೆಯಿಂದ ವ್ಯವಸ್ಥಾಪಕ ಕೇಂದ್ರ ತತ್ತ್ವವನ್ನು ಕಂಡು ಹಿಡಿಯುವದು ಕಷ್ಟವಾಗುತ್ತದೆ. ಅಲ್ಲಿ ಎರಡು ಅಥವಾ ಹಲವು ಸ್ವಾರಸ್ಯ ಕೇಂದ್ರಗಳು ವ್ಯಕ್ತವಾಗುತ್ತವೆ. ಸಣ್ಣ ಕಥೆಯಲ್ಲಿ ಹಾಗೆ ಗಮನ ಹರಿದು–ಹಂಚಿಹೋಗಲು ಅವಕಾಶವಿಲ್ಲ. ಮೂಲಭಾವನೆ ಸಂಪೂರ್ಣವಾಗಿದ್ದು ಅದರಿಂದ ಹುಟ್ಟುವ ಸ್ವಾರಸ್ಯ ಮತ್ತಾವುದೇ ವಿಚಾರದಿಂದ ಸಂಕೀರ್ಣವಾಗಬಾರದು. ಒಂದೇ ಒಂದು ಭಾವನೆಯನ್ನೊಳಗೊಂಡು ಆ ಭಾವನೆ ತರ್ಕಬದ್ಧವಾಗಿ ಮುಕ್ತಾಯಗೊಳ್ಳುವಂತೆ ಅದನ್ನು ಸಂಪೂರ್ಣ ಏಕಾಗ್ರತೆಯಿಂದ, ನೇರ ವಿಧಾನದಿಂದ ನಿರ್ವಹಿಸಲಾಗಿರುತ್ತದೆ. ಗುರಿ ಮತ್ತು ಪರಿಣಾಮದ ಏಕಾಗ್ರತೆಗಳು ಸಣ್ಣ ಕಥೆಯ ಮೌಲ್ಯವನ್ನು ನಿರ್ಧರಿಸುವ ಮೂಲ ಸೂತ್ರಗಳೆಂದರೆ ತಪ್ಪಾಗಲಾರದು.

'ಸಣ್ಣ ಕಥೆಯೊಂದು ಭಾವಗೀತೆ'ಯಂತೆ, ಕಿರಿದರಲ್ಲಿ ಹಿರಿದಾದ ಭಾವ–ಜ್ಞಾನ–ಅನುಭವಗಳನ್ನು ತುಂಬಿ ಜೀವನಕ್ಕೆ ಬೆಳಕು ಬೀರುವದು ಅದರ 'ವೈಶಿಷ್ಟ್ಯ'ವಾಗಿದೆ. "ಅರೆಚಣದಲ್ಲಿ ರಚಿಸಿದ ತಾಜಮಹಲಿನಂತಿ"ರುವ ನಮ್ಮ ಸಣ್ಣ ಕಥೆಗಳು ಉದ್ದೇಶ, ವಸ್ತು, ಭಾವಗಳ ನಾವಿನ್ಯ ನಿರೂಪಣೆಯ ಹೊಸತನವೆಲ್ಲವೂ ಸ್ವಾಭಾವಿಕವಾಗಿ ಬಂದಿವೆ.

ಕನ್ನಡದಲ್ಲಿ ಸಣ್ಣ ಕಥೆಗಳ ಸೃಷ್ಟಿ ಸುಂದರವಾಗಿ, ಆಳವಾಗಿ ವ್ಯಾಪಕವಾಗಿ ವಿಶ್ವದ ಯಾವುದೇ ಭಾಷೆಯ ಕಥಾಸೃಷ್ಟಿಗಿಂತ ಕಡಿಮೆಯದಲ್ಲವೆನಿಸುವಂತೆ ಬೆಳೆದು ಬರಲು ಮಾಸ್ತಿಯವರಿಂದ ಹಿಡಿದು ಅನೇಕರು ಕಾರಣರಾಗಿದ್ದಾರೆ. ಅನಂತಮೂರ್ತಿ, ಲಂಕೇಶ, ಚಿತ್ತಾಲ, ದೇಸಾಯಿ, ತೇಜಸ್ವಿ, ಸದಾಶಿವ, ನಾಡಿಗ, ದ್ಯಾವನೂರು ಮೊದಲಾದವರು ಸಣ್ಣ ಕಥೆಯ ಬೆಳವಣಿಗೆಯಲ್ಲಿ ಗುರುತಿಸಬಹುದಾದ ಘಟ್ಟಗಳನ್ನು ಒದಗಿಸಿಕೊಟ್ಟಿದ್ದಾರೆ.

ನಮ್ಮ ಕತೆಗಾರರ ಗತಿಶೀಲ ಸಂವೇದನೆ, ಸಾಹಿತ್ಯದ ಏಕರೂಪತೆ, ಸಾಂಗತ್ಯಗಳನ್ನು ತಂದುಕೊಡುವ ಮೂಲಭೂತ ಆಸ್ಥೆ–ಅನುಭವಗಳಿಂದ ತಮ್ಮದೇ ಆದ ಜೀವನದೃಷ್ಟಿ; ಅದರ ಜೊತೆಗೆ ಸ್ಪಂದಿಸಬಲ್ಲ ಚೈತನ್ಯ ವಿಶಿಷ್ಟ ದರ್ಶನದ ವಿವಿಧ ಮುಖಗಳಿಗೆ ತಕ್ಕ ಶರೀರವನ್ನು ಸೃಷ್ಟಿಸಬಲ್ಲ ಕಲೆ: ಅದನ್ನು ಸಾಧಿಸುವ ಪರಿಶ್ರಮ–ಪೂರ್ವ ಚಿಂತನ, ಪ್ರಯೋಗ ಶೀಲತೆ, ಭಾಷಾ ಸಂಪತ್ತು, ಇವು ಕನ್ನಡ ಸಾಹಿತ್ಯದ ಅಮೋಘ ಆಸ್ತಿಯಾಗಿವೆ.

ನಮ್ಮ ಸಣ್ಣ ಕಥೆಗಾರರು ಉಗ್ರರೂಪದ ಸ್ವಾತಂತ್ರ್ಯ ಚಳುವಳಿಯಿಂದ, ದ್ವಿತೀಯ ಮಹಾಯುದ್ಧದ ದುಷ್ಪರಿಣಾಮಗಳಿಂದಾದ ಅನಾಹುತಗಳಿಂದ ಪ್ರಚೋ–ದಿಸಲ್ಪಟ್ಟರು. ನಂತರದಲ್ಲಿ ಸಂಪ್ರದಾಯದ ಕಥೆಗಳನ್ನು ವಿರೋಧಿಸಿ ಪ್ರಗತಿಶೀಲ ಕಡೆಗಣಿಸಲ್ಪಟ್ಟವರ ಅವಸ್ಥೆಯನ್ನು ಓದುಗರ ಅಂತಃಕರಣಕ್ಕೆ ಅಂಟುವಂತೆ ಮಾಡಿದ ಸಾಧನೆ ಪ್ರಗತಿಶೀಲರದಾಗಿದೆ. ಇವರಲ್ಲಿ ಮಾಸ್ತಿ ಆನಂದ, ಕಟ್ಟೀಮನಿ. ತ.ರಾ.ಸು. ರಾಜಲಕ್ಷ್ಮಿ ಎನ್. ರಾವ್, ಕೆ. ಸದಾಶಿವ, ಬಾಗಲೋಡಿ ದೇವರಾಯ ಮೊದಲಾದವರು ನವ್ಯ ಪಂಥದ ಆದ್ಯಪ್ರವರ್ತಕರು.

ನವ್ಯ ಕಥೆಗಾರರಿಗೆ ಮನುಷ್ಯನ 'ಮನಸ್ಸಿನಲ್ಲಿ' ಹೆಚ್ಚಿನ ಆಸಕ್ತಿ. ಮನಸ್ಸಿನ ಮತ್ತು ಅನುಭವದ ವಿಶ್ಲೇಷಣೆಗೆ ಪ್ರಯತ್ನಿಸಿ: ಧ್ವನಿ. ಪ್ರತಿಮೆ ಮತ್ತು ಸಂಕೇತಗಳ ಮೂಲಕ ಅನುಭವಕ್ಕೆ ಮಾತಿನ ಶರೀರ ಕೊಡಲು ಸಣ್ಣ ಕಥೆಗಳು ಯತ್ನಿಸಿವೆ.

ವೈಯಕ್ತಿಕವಾದ, ದುರ್ಬಲ ನಾಯಕನ ಅಂತರ ಮುಖತ್ವದ ಮೇಲೆ ಒತ್ತು ಹಾಕುವ, ದೌರ್ಬಲ್ಯದ ವಿಶ್ಲೇಷಣೆಯೆ ಮುಖ್ಯವಾಗಿರುವ ನವ್ಯ ಕಥೆಗಳನ್ನು ಮೀರಿ ನವ್ಯೋತ್ತರ ಕಥೆಗಳು ಕಾಣಿಸಿಕೊಂಡವು. ಇಲ್ಲಿ ಹಳ್ಳಿಯ ಜನಜೀವನದ ಏಳು ಬೀಳುಗಳಲ್ಲಿ ರಾಜಕೀಯ, ಬಡತನ, ಅನಕ್ಷರತೆಯ ಪರಿಣಾಮದಿಂದಾಗುವ ಸ್ಥಿತ್ಯಂತರಗಳನ್ನು ಕಥೆಗಾರರು ಎತ್ತಿಕೊಂಡರು. ಭಾಷೆಯಲ್ಲಿ ಮುಂದುಗಾರರಾದ ಪ್ರಗತಿಶೀಲರಿಗಿಂತ ನವ್ಯೋತ್ತರ ಕಥೆಗಾರರು ಹೆಚ್ಚಿನ ಕಲಾಪ್ರಜ್ಞೆ ಮಿತ ಭಾಷೆಯನ್ನು ಅಳವಡಿಸಿಕೊಂಡರೂ ಈಚೆಗಿನ ಕಥೆಗಳು ಪ್ರಗತಿಶೀಲ ಸಾಹಿತ್ಯಕ್ಕೆ ಮುಖಮಾಡುತ್ತಿವೆ.

ನವ್ಯೋತ್ತರದ ಕಥಾಸೃಷ್ಟಿಯಲ್ಲಿ ಎದ್ದು ಕಾಣುವ ಬಂಡಾಯ ಸಾಹಿತ್ಯವು ಪ್ರಚಾರ ಸಾಹಿತ್ಯವಾಗದೆ ತನ್ನ ಕಲಾವಂತಿಕೆಯನ್ನು ಶಿಸ್ತನ್ನು ಉಳಿಸಿಕೊಂಡು ಬಂದಿದೆ. ಸಣ್ಣ ಕಥೆಗಾರರು ಜೀವನದ ಸಮಸ್ಯೆಗಳೊಂದಿಗೆ ನಿರಂತರವೂ ಸ್ಪಂದಿಸುತ್ತಾ ಬಂದಿದ್ದಾರೆ. ಅಂತೆಯೆ ಇಂದಿನ ಜೀವನದಲ್ಲಿ ಹಾಸುಹೊಕ್ಕಾಗಿರುವ ಹಿಂಸೆ—ಕ್ರೌರ್ಯ, ಕಾಮ, ಸಸ್ಪೆನ್ಸ ಮೊದಲಾದ ವಿಷಯಗಳು ಸಣ್ಣ ಕಥೆಯಲ್ಲಿ ಸ್ಥಾನ

ಪಡೆದಿವೆ. ೧೯೮೩ರ ಕಥಾಸಾಹಿತ್ಯವು ನವ್ಯೋತ್ತರದ ಕಾಲಮಾನಕ್ಕೆ ಅನ್ವಯಿಸುವಂತಿದ್ದರೂ ಪ್ರಗತಿಶೀಲ ಮನೋಭಾವನೆ, ನವ್ಯದ ಗುಣಧರ್ಮಗಳನ್ನು ಸಂಪೂರ್ಣ ತೊರೆದು ನಿಂತಿಲ್ಲ.

ಸಣ್ಣಕಥೆಯ ಸೂತ್ರಗಳ ಹಿನ್ನೆಲೆಯಲ್ಲಿ ೧೯೮೩ರ ಎಲ್ಲ ಸಣ್ಣ ಕಥೆಗಳನ್ನು ತತ್ತ್ವಸತ್ತ್ವದ ದೃಷ್ಟಿಯಿಂದ ಅಳೆಯಲು ಹೋದರೆ ಸಾಹಿತ್ಯದ ಯಾವುದೇ ಪ್ರಕಾರದಂತೆ ಇಲ್ಲಿಯೂ ಪರಿಪೂರ್ಣತೆಯನ್ನು ಕಾಣುವದು ಅಷ್ಟು ಸುಲಭವಲ್ಲ. ವಿಪುಲವಾದ ಕಥೆಗಳನ್ನು ಏಕಸೂತ್ರಗೊಳಿಸಿ ವಿಭಜಿಸಬೇಕೆಂದರೆ ಒಬ್ಬನೇ ಕಥೆಗಾರನ ಕಥೆಗಳು ವಿವಿಧ ಮನೋಧರ್ಮಕ್ಕೆ ಅನ್ವಯಿಸುವದು ಸಹಜವೇ. ಈ ದೃಷ್ಟಿಯಿಂದ ಸಣ್ಣ ಕಥೆಗಳನ್ನು ವಿಭಜಿಸುವದು ಸಮಂಜಸವಾಗಲಾರದು. ಆದರೂ ಅಭ್ಯಾಸದ ಅನುಕೂಲಕ್ಕಾಗಿ ಈ ವರ್ಷದ ಕಥೆಗಳ ವಿಷಯಕ್ಕನುಗುಣವಾಗಿ ಸ್ಥೂಲವಾಗಿ ಕೆಳಗಿನಂತೆ ವಿಂಗಡಿಸುವ ಪ್ರಯತ್ನ ಮಾಡಿದ್ದೇನೆ.

೧. ಹಳ್ಳಿಯ ಜೀವನ ಸಮಸ್ಯೆ : ಭಾಷೆಗಳನ್ನು ದುಡಿಸಿಕೊಂಡ ಕಥೆಗಳು (ಸೆನ್ಸೇಶನಲ್) ಕರಿಮಣ್ಣಿನ ಗೊಂಬೆಗಳು—ಕರಿಗೌಡ ಬೀಚನಹಳ್ಳಿ (ರೂಪಧ್ವನಿ ಪ್ರಕಾಶನ, ಬೆಂಗಳೂರು) ಸಿಡಿದವರು—ಆರ್. ಜಿ. ಹಳ್ಳಿ ನಾಗರಾಜ (ಅರುಣ, ಯುವಲೇಖನದ ಬಳಗ, ಬೆಂಗಳೂರು) ಈಡು—ವಸಂತ ಕುಮಾರ ಮಳಲಿ. ಆವರ್ತನ—ಶರತ್ ಕಲ್ಕೊಡು (ಸ್ನೇಹ ಪ್ರಕಾಶನ, ಒಳಕಾಡು-ಉಡುಪಿ)

೨. (ಅ) ಭಾವನಾ ಪ್ರಧಾನ ಕಥೆಗಳು (ಇಮೋಷನಲ್) : ನಿನಗೊಂದು ಮಾತು—ವರದರಾಜ ಹುಯಿಲಗೋಳ (ನೀರದ ಪ್ರಕಾಶನ, ಸಾಧನಕೇರಿ, ಧಾರವಾಡ). ಸಾವು ಮತ್ತು ಇತರ ಕಥೆಗಳು—ಬಿ. ವಿ. ದೇಸಾಯಿ (ಪ್ರಿಂಟರ್ಸ ಪ್ರಕಾಶನ, ಬೆಂಗಳೂರು).

(ಆ) ಭಾವನಾ ಪ್ರಧಾನ ಮಧ್ಯಮ ದರ್ಜೆಯ ಮಹಿಳೆಯರ ಜೀವನ ಸಮಸ್ಯೆಗಳನ್ನು ಕುರಿತ ಕಥೆಗಳು : ಒಂದು ಗಿಣಿಯ ಕಥೆ—ಅನುಪಮಾ ನಿರಂಜನ (ಡಿ. ವಿ. ಕೆ. ಮೂರ್ತಿ, ಮೈಸೂರು) ಷೋಕೇಸಿನ ಗೊಂಬೆ— ಜಿ. ಎಸ್. ಸುಶೀಲಾದೇವಿ, ಆರ್. ರಾವ್. (ಯುವಕರ ಸಂಘ, ರಾಮನಗರ, ಹಗರಿ ಬೊಮ್ಮನಹಳ್ಳಿ (ಬಳ್ಳಾರಿ ಜಿಲ್ಲೆ).

೩. ಹಾಸ್ಯ ಪ್ರಧಾನ ಕಥೆಗಳು : ಕುಚೋದ್ಯದ ಕಥೆಗಳು—ಶ್ರೀನಿವಾಸ ಹಾವನೂರ (ಬಾಪ್ಕೊ ಪ್ರಕಾಶನ, ಬೆಂಗಳೂರು).

೪. ದೇಶಾಭಿಮಾನ. ಶೌರ್ಯ ಜೀವನದ ಕಥೆಗಳು : ವಿದ್ರೋಹಿಯ ವೀರ ಗಾಥೆ—ರೇಣುಕ (ಕೀರ್ತಿ ಪ್ರಕಾಶನ, ಬೆಂಗಳೂರು).

೫. ಸಸ್ಪೆನ್ಸ ಕಥೆಗಳು : ಕೊಲ್ಲಿಯ ಹಣ—ಟಿ. ಕೆ. ರಾಮರಾವ್.

೬. ಸಂಪಾದಿತ ಕಥಾ ಸಂಕಲನಗಳು :

(ಅ) ಸಮತಾ— ಸಂ. ಡಾ. ವೀರಣ್ಣ ರಾಜೂರ, ಪ್ರೊ. ಕಾಶಿಪುಟ್ಟ ಸೋಮಾರಾಧ್ಯ. (ಮಂಗಳಪ್ರಕಾಶನ, ಕಲ್ಯಾಣನಗರ, ಧಾರವಾಡ).

(ಆ) ವರ್ಷ—ಸಂ. ಮೋಹನ್ ವೇರ್ಣೆಕರ್. (ಜೈಸು ಪ್ರಕಾಶನ, ಶಿಕಾರಿಪುರ, ಶಿವಮೊಗ್ಗ).

(ಇ) ಕಥಾಸಂಪದ—ಸಂ. ಮಾದಿನಕೆರೆ ರಂಗನಾಥನ್ (ಸುಭಾಷ್ ಪ್ರಕಾಶನ, ಬೆಂಗಳೂರು).

೧೯೮೩ರಲ್ಲಿ ಬೆಳಕಿಗೆ ಬಂದ ಮೂವತ್ತೊಂದು ಕಥಾ ಸಂಕಲನಗಳಲ್ಲಿ ಬಿಡಿಬಿಡಿಯಾಗಿ ಬಂದು ಈಗ ಸಂಪಾದನೆಯ ರೂಪದಲ್ಲಿ ಕಂಡ ಪ್ರಕಟಣೆಗಳನ್ನು ಕೈಬಿಡಲಾಗಿದೆ. (ಚಿತ್ತಾಲರ ಕಥೆಗಳು ಪೂರ್ಣಚಂದ್ರ ತೇಜಸ್ವಿಯವರ ಎಲ್ಲ ಕಥೆಗಳು). ಪುನರ್ಮುದ್ರಣಕಂಡ ತ್ರಿವೇಣಿ ಮತ್ತು ಉಷಾ ನವರತ್ನರಾಮರ ಕಥಾಸಂಕಲನಗಳನ್ನು ಬಿಡಲಾಗಿದೆ. ಇನ್ನುಳಿದ ಕೃತಿಗಳಲ್ಲಿ ನನಗೆ ಲಭ್ಯವಾಗಿರುವ ಹದಿನಾಲ್ಕು ಕೃತಿಗಗಳನ್ನು ಮಾತ್ರ ಇಲ್ಲಿ ಎತ್ತಿಕೊಳ್ಳಲಾಗಿದೆ. ಈ ವರ್ಷದ ಕಥೆಗಾರರಲ್ಲಿ ಕರಿಗೌಡ ಬೀಚನಹಳ್ಳಿ ಮತ್ತು ಶ್ರೀಮತಿ ಜಿ.ಎಸ್. ಸುಶೀಲಾದೇವಿ ಆರ್. ರಾವ್ ಈ ಇಬ್ಬರು ತಮ್ಮ ಚೊಚ್ಚಲು ಕೃತಿಗಳನ್ನೂ ಕೊಟ್ಟಿದ್ದಾರೆ.

೧. ಹಳ್ಳಿಯ ಜೀವನ ಸಮಸ್ಯೆಗಳಲ್ಲಿ ಬಡತನ, ನಿರುದ್ಯೋಗ. ಜಾತೀಯತೆ, ಮೂಢ ನಂಬಿಕೆಗಳು ಹೆಚ್ಚು ತೊಳಲಾಡಿಸುತ್ತವೆ. ಅವುಗಳಿಗೆ ಬಿಡುಗಡೆಯದಾರಿ ವಿದ್ಯಾಭ್ಯಾಸದಿಂದ ಕೆಲ ಮಟ್ಟಿಗಾದರೂ ಲಭ್ಯ, ಆದರೆ ಕಲಿಯುವ ಅವಕಾಶ ದುರ್ಲಭ. ಬಡಬಾಳಿನ ಗೋಳಿಗೆ ಸಿಲುಕಿ ತುತ್ತಿನ ಚೀಲ ತುಂಬಲು ಪರದಾಡುವ ಹಳ್ಳಿಗರ ಸತ್ಯದ ಜೀವನ ಚಿತ್ರ. **'ಕರಿಮಣ್ಣಿನ ಗೊಂಬೆಗಳಲ್ಲಿ'** ಬರುವ ಒಂಬತ್ತು ಕಥೆಗಳಲ್ಲಿ ಅಪೂರ್ವಸಂಸಾರದ ಸಾಯಿಕಲ್ ಅಂಗಡಿಯಲ್ಲಿ ದುಡಿಯುವ ಮಕ್ಕಳು. 'ಒಡಲ ತವಕಕ್ಕೆ ಕಾಡುಹೊಕ್ಕ 'ಒಕ್ಕಲಿಗ', ಹಿಡಿದವರ 'ಲ್ಲಿ ಮಂಜ. ದುರುಗರು ಬಡತನದ ಬವಣೆಗೆ ಸಿಕ್ಕು ಬಳಲಿದವರ ಕಥೆಗಳಾಗಿವೆ. ಪ್ರತಿಭಟನೆ ಈ ಪಾತ್ರಗಳ ನಾಡಿಯಲ್ಲಿ ಒಮ್ಮೊಮ್ಮೆ ಹಿಡಿದೆದ್ದರೂ ವ್ಯರ್ಥವಾಗಿದೆ. ವಿದ್ಯೆ ಕಲಿಯುವ ಛಲಹೊತ್ತ ಮಕ್ಕಳಿಗೆ ಕನಿಷ್ಠ ಅವಶ್ಯಕತೆಗಳಾದ ದೀಪ ಪೆನ್ನುಗಳು ಕೂಡ ಅಪರೂಪ. ಕೆಲವೊಮ್ಮೆ ಮೂಢ ನಂಬಿಕೆಯೇ ದೊಡ್ಡ ಆತಂಕ. ಮಾಟ-ಮದ್ದಿನಲ್ಲಿ ನಂಬಿಕೆಯಿಟ್ಟ ಹಳ್ಳಿಯ ಮುಗ್ಧರನ್ನು ಮೋಸಮಾಡುವವರ ಒಳಗುಟ್ಟನ್ನು ಹೊರಗೆಡಹುವ ಯುವ ಪೀಳಿಗೆಯ ಪ್ರತೀಕವಾಗಿದ್ದಾರೆ—ಗಂಗಣ್ಣ, ಜವರ, ಶಂಕರರು. ಕೆರೆಹಾರಿ ಸತ್ತ ಚೆನ್ನಿ ಮೊದಲಾದವರು.

ಹಳ್ಳಿಯ ಜೀವನದ ನೈಜತೆ 'ಕರಿಮಣ್ಣಿನ ಗೊಂಬೆಗಳ'ಲ್ಲಿ, ನೋವಿನಲ್ಲಿ ನಲಿವು, ಶಾಲೆ ಕಲಿಯಲು ತೊಳಲಾಡುವ ಪಾತ್ರಗಳು ಕರಿಗೌಡರ ಕಥೆಗಳಲ್ಲಿ ಜೀವಕಳೆ ತುಂಬಿವೆ. ಕಲಾತ್ಮಕತೆಯನ್ನು ಮೀರವಂತೆ ಪ್ರತಿಭಟನೆಯ ಕೂಗು ಕೇಳಿಬರುತ್ತದೆ. ಕರಿಗೌಡರ ಭಾಷೆ, ನಿರೂಪಣೆಯನ್ನು ನೋಡಿದರೆ ಇದು ಅವರ ಮೊದಲ ಕಥೆಯೆನಿಸ ದಂತೆ ಕಥನಕೌಶಲ ಅವರಲ್ಲಿದೆ. ಸರ್ವೋತ್ತರ ಸಾಹಿತ್ಯದ ಬಂಡಾಯ ಪ್ರವೃತ್ತಿ ನಿಚ್ಚಳವಾಗಿ ಮೂಡಿವೆ. ಒಡಲ ತವಕಕೆ ಕಾಡುಹೊಕ್ಕ ಕಥೆ ಸಣ್ಣಕಥೆಯ ಚೌಕಟ್ಟಿಗೆ ಮೀರಿದ ಕಥೆಯಾದರೂ ಕಥೆಗಾರರು, ಅವಕ್ಕೆ ಹೊಂದಿಸುವ ಪ್ರಯತ್ನ ಮಾಡಿದ್ದಾರೆ.

ಐದು ಕಥೆಗಳ "ಸಿಡಿದವರು" "ಸಂಗ್ರಹದ ಸಿಡಿದವ"ರು ಕಥೆಯಲ್ಲಿ ಮಂಜ, ದುರುಗರು ಶೋಷಿತ ವ್ಯಕ್ತಿಗಳ ಪ್ರತೀಕವಾಗಿ ಬರುತ್ತಾರೆ. ಶ್ರೀಮಂತರ ಕ್ರೌರ್ಯದ ಒಂದು ಮುಖ ಇಲ್ಲಿ ವ್ಯಕ್ತವಾಗಿದೆ. ಮತ್ತೊಂದು ಮುಖವನ್ನು ೧೦ ಕಥೆಗಳ 'ಈಡು' ಕಥೆಯ ಮಂಜುಳೆ, ಕಾವೇರಿ, ರಾಮಪ್ಪಗೌಡರ ಮಕ್ಕಳು ಜಲಜರು ಎತ್ತಿ ಹೇಳುತ್ತಾರೆ. ಹಣವಂತರನ್ನು ಪ್ರತಿಭಟಿಸಲು ಹೋಗಿ ಮಂಜ ಊರಿಗೆ 'ಹೊಗೆ' ಕಥೆಯ ದುರುಗ ಪ್ರಾಣಕ್ಕೆ ಎರವಾಗುತ್ತಾರೆ. ಈಡು ಕಥೆಯ ಮಂಜುಳೆ ಖಾಸಗೀ ಸಂಸ್ಥೆಯ ಕಾಲೇಜಿನ ಉಪನ್ಯಾಸಕಿ. ಆಡಳಿತ ವರ್ಗದವರ ಸ್ವೈರವನ್ನು ವಿರೋಧಿಸಿ ಅವರ ಕ್ರೋಧಕ್ಕೆ ಈಡಾಗಿ ನೌಕರಿಗೆ ಎರವಾಗುತ್ತಾಳೆ. ಅವರ ಕಾಮದ ಕೈಗೊಂಬೆ ಯಾದ ಕಾವೇರಿ ಸುಖವಾಗಿರುತ್ತಾಳೆ. ರಾಮಪ್ಪಗೌಡನ ಮಕ್ಕಳು ಅಂಗಡಿಯ ಉದ್ಧರಿಯ ಬವಲಿಗೆ ಶೀಲ ಕೊಡಬೇಕಾಗುತ್ತದೆ.

ಮದುವೆ ಮಾಡಿಕೊಳ್ಳುವ ಭರವಸೆ ನೀಡಿ ಕೈಕೊಟ್ಟ ಹೋದವನೊಬ್ಬ ಸಮಾಜ ಸುಧಾರಕನಾಗಿ, ಪ್ರತಿಷ್ಠಿನಾಗಿ ಶೋಷಿತರ ಬಗೆಗೆ ಪುಸ್ತಕ ಬರೆದಾಗ ಬಿಡುಗಡೆಗೆ ಅನಿರೀಕ್ಷಿತವಾಗಿ ಜಲಜಳೇ ಬಂದಾಗ ಸಭೆ ಕ್ಷಣದಲ್ಲಿ ಮಾಯವಾದ ಕಥೆ. ಇಂದಿನ ಸಮಾಜದಲ್ಲಿ ಹೆಣ್ಣಾದವಳು ಶೋಷಣೆಗೊಳಗಾಗಿ ಶೀಲ ಕಳೆದುಕೊಂಡು ಬದುಕ ಬೇಕಾಗುತ್ತದೆ; ಪುರುಷನಾದರೆ ಪ್ರಾಣಕ್ಕೆ ಎರವಾಗುವ ನಿತ್ಯಸತ್ಯಚಿತ್ರ ಈ ಕಥೆಗಾರ-ರಿಂದ ವ್ಯಕ್ತವಾಗುತ್ತದೆ.

ಮೇಲಿನ ಪರಿಸ್ಥಿತಿಗೆ ವ್ಯತಿರಿಕ್ತವಾಗಿ 'ಸಿಡಿದವ'ರು ಕಥೆಗಳಲ್ಲಿ ಬರುವ ಅಸ್ತ ಮಾನ, ಪ್ರಸ್ತಾಪ, ಕ್ಷಣಗಳು—ಸಾಮಾಜಿಕ ಕಟ್ಟಳೆಗಳಿಗೆ ಬಾಹಿರವಾದ ಕಾಮ ಮತ್ತು ಲೈಂಗಿಕ ಜೀವನ ಚಿತ್ರಣವಾಗಿವೆ.

ನಾಗರಾಜರ ಕಥೆಗಳಿಗೆ ಡಾ. ಚಿದಾನಂದ ಮೂರ್ತಿಯವರು ಬರೆದ ಬ್ಲರ್ಬ ಗಮನಿಸತಕ್ಕುದಾಗಿದೆ. "ಯುವ ಪೀಳಿಗೆಯ ಮೊದಲಹಂತದ ಪ್ರತಿಭಟನೆ. ಮುಂದಿನ ಹಂತದಲ್ಲಿ ಅನಿವಾರ್ಯವಾಗಿ ರಾಜಿಮಾಡಿಕೊಳ್ಳುವಿಕೆ, ಇಂಥ ಕ್ರೂರ

ಸ್ಥಿತಿಯು ಸುಳಿಹು ಮತ್ತು ದುರಂತಗಳು ಭವಿಷ್ಯದ ಬಗೆಗೆ ಗಾಬರಿಹುಟ್ಟಿಸುವಂಥ ಸ್ಥಿತಿಯನ್ನು ಸಿಡಿದವರಲ್ಲಿ ಕಂಡಿದ್ದರೂ ಪರಿಹಾರವನ್ನು ಸೂಚಿಸದಿರುವುದು ಹಿರಿಯರ ಬೇಜವಾಬ್ದಾರಿ, ಯುವ ಪೀಳಿಗೆಯ ದುರಂತವೆನ್ನಬಹುದು.

ಹಳ್ಳಿಯ ಜೀವನ ಚಿತ್ರಣವನ್ನು ಎತ್ತಿಕೊಂಡಿರುವ ಮತ್ತೊಂದು ಕಥಾಸಂಕಲನ ಆವರ್ತನ ಕಥೆಗಳ ಸಂಕಲನ ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಗಳಲ್ಲಿ ಕಾಡಿನಮಧ್ಯ ಬದುಕುವ ಬಡವರ ಗೋಳಿನ ಬಾಳನ್ನು ಅಲ್ಲಿಯ ಆಡುನುಡಿಯಲ್ಲಿ ಹಿಡಿದಿಟ್ಟ ಕಥೆಗಳಿವೆ. ಸರಕಾರದ ಹೊಸ ಹೊಸ ಕಾನೂನುಗಳಿಂದ ಹಳ್ಳಿಗರ ಜೀವನದಲ್ಲಿ ನಡೆದ ಅಲ್ಲಕಲ್ಲೋಲದ ಚಿತ್ರ ಈ ಕಥೆಗಳಲ್ಲಿದೆ. ಉಳುವವನೆ ಭೂಮಿಗೊಡೆಯನಾಗಲು ಹೋದ ರೈತ, ಗಾಡಿಯ ಸುಬ್ಬನ ಹಳ್ಳಿಯು ಮುಳುಗಡೆಯ ಭೂಮಿಯಾಗಲು ಹೊರಟಾಗ ಹಾಳಾದ ಸುಬ್ಬ ಮತ್ತು ಅವನ ಪರಿವಾರ ಅಡವಿಟ್ಟು ಹಣ ಪಡೆಯುವ ಪದ್ಧತಿಯನ್ನು ತೆಗೆದು ಹಾಕಿದಾಗ ಹಳ್ಳಿಗಳು ನಾಗರಿಕ ಜೀವನವನ್ನು ಅಳವಡಿಸಿಕೊಳ್ಳಲಾರದೆ ಆಧುನಿಕ ಪದ್ಧತಿಗಳು 'ಭಸ್ಮಾಸುರನ' ನ ಅವಸ್ಥೆಯನ್ನು ಒದಗಿಸಿದ ಕಥೆಗಳು ಮಾರ್ಮಿಕವಾಗಿವೆ. ಕಾಡಿನ ಸಿಪಾಯಿಯೊಬ್ಬ ನಿಷ್ಠಾವಂತನಾಗಿ ದುಡಿಯಲು ಹೋಗಿ 'ಶಿಕ್ಷೆ'ಗೆ ಬಲಿಯಾದದ್ದು, ಕಪಟಿಯೊಬ್ಬ ಹಣದಾಸೆಗಾಗಿ ಒಲ್ಲದ ಮದುವೆಯಾಗಿ ಕಾಲೇಜಿನ ಚೆಲುವೆಯರ ಸಂಗ ಬಯಸಿದ 'ಸಂದಿಗ್ಧ' ಕಥೆಯ ಉಪನ್ಯಾಸಕ, 'ಉಂಗುರ'ದ ಸುತ್ತ ನಡೆದ ಪ್ರೇಮ ಪ್ರಕರಣ' ಮೊದಲಾದ ಹಲವು ನೈಜ ಚಿತ್ರಗಳು ಕಲ್ಕೋಡರ ಕಥೆಗಳಲ್ಲಿ ಧ್ವನಿಪೂರ್ಣವಾಗಿ ಬಂದಿವೆ.

ಬಂಡಾಯ ಪ್ರವೃತ್ತಿಯಲ್ಲಿ ಕಾಲಿಟ್ಟಿರುವ ಸಣ್ಣಕಥೆಗಳು ಕಾಮ-ಕ್ರೌರ್ಯವನ್ನು ಹೇರಳವಾಗಿ ಬಳಸಿಕೊಂಡಿರುವದನ್ನು ಕಾಣುತ್ತೇವೆ. 'ಈಡು' ಮತ್ತು 'ಆವರ್ತನ'ದ ಕಥೆಗಳ ಮೇಲೆ ನವ್ಯತೆಯ ಪ್ರಭಾವವು ಪ್ರಸರಿಸಿದೆ. ಬೀಚನಹಳ್ಳಿ, ಮಳಲಿ, ಕಲ್ಕೋಡರ ಕಥಾಸಂಕಲನಗಳಲ್ಲಿನ ಕಥೆಯ ದೃಷ್ಟಿಯಿಂದ ಕೆಲವು ಕಥೆಗಳು ಪೂರ್ಣ ಕಲಾಪೂರ್ಣವಾಗಿವೆ. ಸಣ್ಣಕಥೆಯ ತಂತ್ರಗಳನ್ನು ಮೀರವಂತೆ ಗುರಿ ಮತ್ತು ಪರಿಣಾಮದ ದೃಷ್ಟಿಯಿಂದ ಐಕ್ಯಸಾಧನೆ, ಕೇಂದ್ರ ಬಿಂದುವಾದ ಒಂದು ಭಾವನೆಯ ಸುತ್ತ ಕಥೆ ಹೆಣೆಯುವಲ್ಲಿ ಸಫಲರಾಗಿದ್ದಾರೆ. ಉದಾಹರಣೆಗೆ ಕರಿಮಣ್ಣಿನ ಗೊಂಬೆಗಳಲ್ಲಿ ಕ.ಗೊ. ಆವರ್ತನದಲ್ಲಿ ಉಂಗುರ, ಸಂದಿಗ್ಧ ಶಿಕ್ಷೆ ಆವರ್ತನ: 'ಈಡೆ'ನಲ್ಲಿ "ಈಡು", "ಅನಿರೀಕ್ಷಿತ" ಕಥೆಗಳು ಈಡು ಕಥೆಯಲ್ಲಿ ಘಟನೆಗಳು ಒಂದಕ್ಕೊಂದು ಪೂರಕವಾಗಿ ಒಂದಾದಮೇಲೊಂದು ಬಂದರೂ ಕಥೆಗಾರರ ಲಕ್ಷ್ಯ ಕಥಾನಾಯಕಿ ಮಂಜುಳೆಯು ಇಂದಿನ ಸಮಾಜಪರಿಸ್ಥಿತಿಯಲ್ಲಿ ಹಣ ಅಧಿಕಾರಕ್ಕೆ ಬಲಿಯಾಗದೇ ಪ್ರತಿಭಟಿಸಿದರೆ ಸಿಗುವ ಪ್ರತಿಫಲದ ಕಡೆಗೆ, ಅನ್ಯಾಯಕ್ಕೆ 'ಈಡಾ'ಗುವ ಮಂಜುಳೆಯ ಸಂದಿಗ್ಧ ಪರಿಸ್ಥಿತಿಯ ಕಡೆಗೆ. ಇಲ್ಲಿ ಮೊಪಸಾಂತನ 'ಲಾ ಪೆರುಕ'

ಕೃತಿಯು ನೆನಪಾಗುವಂತಿದೆ. ಇದೇ ರೀತಿ ಹರವಾದ ವಸ್ತುವನ್ನಾಯ್ದುಕೊಂಡ ಬೀಜಸ ಹಳ್ಳಿಯುವರ 'ಒಡಲು ತವಕಕ್ಕೆ ಕಾಡುಹೊಕ್ಕ' ಕಥೆ ಐಕ್ಯತೆಯು ಸಾಧನೆಯಲ್ಲಿ ಅಸಫಲವಾಗಿದೆ. ಹಿಡಿದವರಲ್ಲಿ ಕಥೆಗಾರರ ಗುರಿ ಮತ್ತು ಪರಿಣಾಮಗಳಲ್ಲಿ ಭಿನ್ನತೆ ಸ್ಪಷ್ಟವಾಗಿ ಕಾಣುತ್ತದೆ. ಕಥೆಯು ಕಲಾತ್ಮಕತೆಯು ದೃಷ್ಟಿಯಿದ ಅಸಫಲ ಇದು ಕಥೆಗಾರರ ಸೋಲು ಎನ್ನಬೇಕಾಗುತ್ತದೆ.

ನೈಜ ವಸ್ತುವಿನ ನೆಪದಲ್ಲಿ ಕಾಮ ಜೀವನದ ಹಸಿ–ಹಸಿಯಾದ ಭಾವನೆಗಳನ್ನು ಬೆತ್ತಲೆಯಾಗಿ ತೋರಿಸಿದ ನಾಗರಿಕ ಹಳ್ಳಿಯುವರ ಕಥೆಗಳಿಗೂ ಮಳಲಿಯುವರ 'ಈಡು' 'ಶಾಸ್ತ್ರ' ಕಥೆಗಳಿಗೂ ಹೋಲಿಸಬಹುದು. ಮಳಲಿಯುವರು ಲೈಂಗಿಕ ಜೀವನ ಚಿತ್ರಣವನ್ನೂ ಭಾಷೆಯು ಮೇಲಿನ ಹಿಡಿತದಿಂದ ಕಲಾತ್ಮಕಗೊಳಿಸಿದ್ದಾರೆ. ಗುರಿ–ಪರಿಣಾಮದ ದೃಷ್ಟಿಯಿಂದ ಮಳಲಿ ಮತ್ತು ಕಲ್ಕೋಡರ ಕಥೆಗಳು ಗಮನಾರ್ಹವಾಗಿವೆ. ಕರಿಗೌಡ, ವಸಂತ, ಶರಣರು ಭರವಸೆ ಹುಟ್ಟಿಸಬಲ್ಲ ಕಥೆಗಾರರಾಗಿದ್ದಾರೆ.

೨. ಅ) ಭಾವನಾಪ್ರಧಾನ ಕಥೆಗಳು ನಿನಗೊಂದು ಮಾತು. ಸಾವು ಮತ್ತು ಇತರ ಕಥೆಗಳು. 'ನಿನಗೊಂದು ಮಾತು' ೬ ಕಥೆಗಳಲ್ಲಿ ಸಂಕಲನದಲ್ಲಿ ಕಥೆಗಾರರು ಕಥೆಯ ಕೊನೆಗೆ ಅನಿರೀಕ್ಷಿತವಾದ ಮುಕ್ತಾಯವನ್ನು ಕಲ್ಪಿಸುತ್ತಾರೆ. ಕಥಾರಂಭದಿಂದ ಓದುಗನು ಎದುರು ನೋಡದ ಹೊಸ ತಿರುವು ಪಡೆದು ಕಥೆಕೊನೆಗೊಳ್ಳುವ ಪದ್ಧತಿ ಇಂಗ್ಲಿಷ ಕಥೆಗಾರ ಓ ಹೆನ್ರಿಯನ್ನು ನೆನಪಿಸುವಂತಿದೆ. 'ತಮಸ್ಸಿನಲ್ಲಿ ಜ್ಯೋತಿ' ಕಥೆ ಸುಳ್ಳು ಜಾತಿಯನ್ನು ಹೇಳಿ ವಿದ್ಯೆಪಡೆದು ನಂತರ ಅವನು ಕ್ಷೌರಿಕನೆಂಬ ಗುಟ್ಟು ಹೊರಬಿದ್ದಾಗ ಆತ್ಮಹತ್ಯೆಗೆ ಪ್ರಯತ್ನಿಸುತ್ತಾನೆ. ಗುರು ಗೋಕವಲರು ಕೂಡ ತಾವು ಕ್ಷೌರಿಕರೆಂಬ ಗುಟ್ಟನ್ನು ಹೇಳಿ ಶಿಷ್ಯನನ್ನು ಸಂತೈಸುತ್ತಾರೆ. 'ಕರ್ಮಪ್ರೇಮದ ಮೋಕ್ಷದ ದಾರಿ ಜನ್ಮತಃ ಇರುವ ಜಾತಿ ನಮಗೇನು ಮಾಡಿಯಾವು ?' ಇದು ಕಥೆಗಾರರು ಸ್ಥಾಪಿಸಬಯಸುವ ಆಶಯ.

ಪಾಪವರಿಯದ ಶಿವಣ್ಣ ಪೋಲಿಸನಿಗಾದ ಧನಲಾಭದ ಪರಿಣಾಮದಿಂದುಂಟಾದ ದುಃಖವನ್ನು ನಿವಾರಿಸಿಕೊಳ್ಳಲು 'ಧನತ್ಯಾಗ' ಮಾಡುವ ಹಠಾತ ನಿರ್ಣಯ ಕೈಕೊಳ್ಳುತ್ತಾನೆ.

ಬಿಜಾಪುರದ ಗೋಳಗುಮ್ಮಟವನ್ನು ತಾಜಮಹಲಿನಂತೆ ಪ್ರಸಿದ್ಧಗೊಳಿಸುವ ಆಶಯದೊಂದಿಗೆ ಬರೆದ ಕಥೆ 'ನಿನಗೊಂದು ಮಾತು'— ರಂಭಾಳ ಸ್ವಾರ್ಥರಹಿತ ಪ್ರೀತಿಯನ್ನು ಆಧರಿಸಿದೆ. ಪ್ರಾಮಾಣಿಕ ಮುದುಕಿ, ನಿಸ್ವಾರ್ಥಿಗಳ ಸ್ನೇಹ ಆದರ ಪರಿಣಾಮದ ಕಥೆಗಳು 'ಅವಳು ಒಲೆ ಊದಿದಳು'. 'ನಾವು ಬಡವರು' ತಂತ್ರದ

ದೃಷ್ಟಿಯಿಂದ ಹೊಸತನ ತೋರುವ ಕಥೆ 'ನಾನು—ಕಾರು' ಲೇಖಕನ ಶೋಷಣೆಯ ವ್ಯಥೆಯ ಕಥೆ.

'ತಮಸ್ಸಿನಲ್ಲಿಯೂ ಜ್ಯೋತಿ', 'ನಿನಗೊಂದು ಮಾತು' ಕಥೆಗಳಲ್ಲಿ ಕಥೆಯನ್ನು ಕೊಟ್ಟು ಲೇಖಕರು ಅವುಗಳ ಐತಿಹಾಸಿಕ ಮಹತ್ವವನ್ನು ವಿವರಿಸಿರುವುದು ಒಂದು ರೀತಿ ಸ್ತುತ್ಯ.

ಸಾವು ಮತ್ತು ಇತರ ಕಥೆಗಳ'ಲ್ಲಿ ೮ ಕಥೆಗಳು ಮೂರು ಹಳ್ಳಿಯ ಜೀವನದ, ಮೂರು ಪಟ್ಟಣದ ಜೀವನದ ಮಗ್ಗುಲುಗಳನ್ನು ಹೊರಳಿಸಿ ತೋರಿದ ಕಥೆಗಳಾಗಿವೆ. 'ಸುರಂಗ'ದ ಕೆಲಸ ಮಾಡುವ ಕಾರ್ಮಿಕರ ಜೀವನದ ಅಸ್ಥಿರತೆ, ವಿಧವೆ ಸಂಗವ್ವ ಆಸ್ತಿಗಳಿಸಿದ್ದು, ದುಷ್ಟರಿಗೆ 'ದುಷ್ಟ'ನಾದ ನಿಂಗಣ್ಣ ಮಾಸ್ತರರು ದೇಸಗತಿಯ ಉಸಿರಾಗಿದ್ದುದು, ಹಳ್ಳಿಯ ಜೀವನದ ಈ ಕಥೆಗಳ ಭಾಷೆ ಉತ್ತರ ಕರ್ನಾಟಕದ ಅಚ್ಚಗನ್ನಡ ಆಡುಭಾಷೆ. ಹೀಗಾಗಿ ವ್ಯಂಗ್ಯೋಕ್ತಿಗೆ ಮೂಲ ಅಭಿವ್ಯಕ್ತಿಯಾಗಿ ಭಾಷೆ ಹೆಚ್ಚು ಆಸ್ವಾದನೆಗೆ ಯೋಗ್ಯವಾಗಿದೆ. ಲೇಖಕರ ಸಮರ್ಥವಾದ ಶಬ್ದಚಿತ್ರ ಗಳಿಂದ ಪಾತ್ರಗಳು ಸ್ಫುಟವಾಗಿವೆ.

ಬಲಾತ್ಕಾರ, ಗಂಟುಗಳು, ಗದಿನಗಮ್ಮತ್ತು—ಕಥೆಗಳ ಭಾಷೆ ಅಲ್ಲಿಯ ಪಾತ್ರ ಗಳಂತೆ ಗ್ರಾಮ್ಯವಾಗಿಲ್ಲ. ಅಭಾದೇವಿಯ ಸ್ವಚ್ಛಂದತೆ, ಫೇಕ್ ನೋಟಿನ ವ್ಯವಹಾರ, ಪ್ರಿಜಿತ್‌ಹೆಣ್ಣಿನ ಬಾಳು ಈ ಕಥೆಗಳ ವಸ್ತು. ಗ್ರಾಮ್ಯರ ತೊಡಕುಗಳು, ನಗರವವರ ಗೋಜಲುಗಳು, ಕಥೆಗಾರರ ವಿಷಯ ಕಥೆಗಳು ರಮಣೀಯವಾಗಿವೆ. 'ನಿನಗೊಂದು ಮಾತಿನ' ಕಥೆಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿವೆ. ದುಯಿಲಗೋಳ ಮತ್ತು ದೇಸಾಯಿಯವರಿಗೆ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ. ಶೋಷಣೆಯ ವಿರುದ್ಧ ಕೂಗಿಡುವ ಉದ್ದೇಶವಿಲ್ಲ. ಈ ಕಥೆಗಳು ಸಮಾಜದ ಉನ್ನತಿ—ಅವನತಿಗಳಿಗೆ ಕನ್ನಡಿ ಹಿಡಿದಂತಿವೆ. ವಾಸ್ತವತೆಯನ್ನು ಗೊಂದಲಗೊಳಿಸದೆ, ಇದ್ದ ಗೊಂದಲ ಗಳನ್ನು ವಾಸ್ತವವಾಗಿ ತಿಳಿಯುವ ಪ್ರಯತ್ನದಲ್ಲಿ ದೇಸಾಯಿಯವರು ಸಫಲ ರಾಗಿದ್ದಾರೆ.

೨. ಅ) ಭಾರತೀಯನಾರಿ ಸಹನೆಯ ಪ್ರತಿಮೂರ್ತಿ; ವಿನೇಯತೆ ಮೃದುತ್ವ ಅವಳ ಹುಟ್ಟುಗುಣವಾಗಬೇಕು. ಪಾತಿವ್ರತ್ಯ, ಸಂಪ್ರದಾಯ ಶರಣತ್ವ ಅವಳ ಚಾರಿತ್ರ್ಯಕ್ಕೆ ಕಳಸವಿಟ್ಟಂತೆ; ಇಂಥವು ಆದರ್ಶಗುಣಗಳೆಂದು ತಿಳುವಳಿಕೆ ಮೂಡಿಸಿ ಅವಳು ಗಂಡಿನ ಗೊತ್ತಾಗುವಂತೆ, ಪ್ರಾಥಮಿಕ ಹಂತದಿಂದಲೂ ಹೆಣ್ಣಿನ ಕ್ಷೇತ್ರ ಅಡಿಗೆಮನೆಯೆಂದೂ, ಗಂಡು ಸರ್ವತಂತ್ರ ಸ್ವತಂತ್ರನೆಂದು ಬಿಂಬಿಸುತ್ತದೆ. ಸಂವಿಧಾನವಲ್ಲಿ ಸಮಾನ ಹಕ್ಕುಗಳನ್ನು ಸಾರಿದ್ದರೂ ಕೂಡ ಮಧ್ಯಪ್ರದೇಶದ

ಮುಖ್ಯಮಂತ್ರಿಗಳು ಹೆಣ್ಣಿನ ಬಗೆಗೆ ನಡೆದ ಅತ್ಯಾಚಾರದ ವಿಷಯದ ಚರ್ಚೆಯಲ್ಲಿ. ಅಸೆಂಬ್ಲಿಯೆದುರು "ಅತ್ಯಾಚಾರ ಮನುಷ್ಯ ಸಹಜವಾದದ್ದು" ಯೆಂದಿದ್ದಾರೆ. ಗಗನ ಸಖಿಯರ ವಿಷಯಕ್ಕೆ ಇಂದಿರಾಗಾಂಧಿಯರ ಅಭಿಪ್ರಾಯಕೂಡ ಹೆಣ್ಣಿನ ಅಸಮಾನತೆ ಯನ್ನು ಎತ್ತಿ ಹೇಳುತ್ತದೆ. ಇಂದಿಗೂ ಬದಲಾಗದ, ಬದಲಾವಣೆಯ ಸೋಗು ಹಾಕಿರುವ ನಮ್ಮ ಸಮಾಜ ಪದ್ಧತಿಯಲ್ಲಿ ಹೆಣ್ಣಿಗೊಂದು ಗಂಡಿಗೊಂದು ಮಾನದಂಡ ವಿರುವದು ಅಮಾನವೀಯ, ಜೈನ, ಬೌದ್ಧ, ವೈದಿಕ ಧರ್ಮಗಳು ಸ್ತ್ರೀಯರಿಗೆ ಸಮಾನತೆಯನ್ನು ಕೊಡದೆ ಬಂದಿರುವ ಪರಂಪರೆಯಿಂದ ಅಸಮಾನತೆಯು ಬೆಳೆಯು ತ್ತಲೇ ಬಂತು. ಶರಣರನ್ನು ಬಿಟ್ಟು ಯಾವದೇ ಮಾನವತಾವಾದಿಗಳು ಈ ವಿಷಯ ವನ್ನೂ ಗಮನಿಸಿಲ್ಲ. ಮಹಾತ್ಮ ನೆನಸಿದ ಗಾಂಧಿಕೂಡ ಸ್ತ್ರೀಯರನ್ನು ಅತ್ಯಾಚಾರ ಕ್ಕೊಳಗಾಗದಿರಲು ಪಟ್ಟಣದಿಂದ ಹಳ್ಳಿಗೆ ಹೋಗಲು ತಿಳಿಸಿದರು. ಇಂಥ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದುಬಂದ ನಮ್ಮ ಲೇಖಕಿಯರು ಸಹಜವಾಗಿ ಸಂಪ್ರದಾಯಸ್ಥರಾಗಿದ್ದಾರೆ. ಈ ವರ್ಷದಲ್ಲಿ ಪ್ರಕಟವಾಗಿರುವ "ಒಂದು ಗಿಣಿಯ ಕಥೆ" ೧೧ ಕಥೆಗಳ ಸಂಕಲನ, "ಷೋಕೇಸಿನ ಗೊಂಬೆ" ೧೩ ಕಥೆಗಳ ಸಂಕಲನಗಳಲ್ಲಿ ಮೇಲಿನ ಅಂಶಗಳು ಗಮನಾರ್ಹವಾಗಿವೆ. "ಒಂದು ಗಿಣಿಯ ಕಥೆ"ಯಲ್ಲಿ ಡಾಕ್ಟರ ನೊಬ್ಬ ಸಮಾಜದಲ್ಲಿ ಪ್ರತಿಷ್ಠಿತನಾಗಿ, ಹಣವಂತನಾಗಿ, ತಮ್ಮ ಸೊಸೆಯನ್ನು ಅಡಿಯಾಳಾಗಿ ಮಾಡಿಕೊಂಡು ಅತ್ಯಾಚಾರ ಮಾಡಿದ್ದನು "ಷೋಕೇಸಿನಗೊಂಬೆ"ಯಲ್ಲಿ ಬರುವ ಗೌಡರ ಚೆನ್ನವ್ವನ ತಂದೆ ಚಾಪಲ್ಯವಾಗಿ ಪರಜಾತಿಯ ಹೆಣ್ಣು ತಂದು ಉಪ ಪತ್ನಿಯನ್ನಾಗಿ ಮಾಡಿಕೊಂಡುದರ ಫಲವಾಗಿ ಚೆನ್ನವ್ವನ ಮದುವೆಯಾಗಲಿಲ್ಲ. ಈ ಎರಡು ಕಥೆಗಳಲ್ಲಿ ಶಿಕ್ಷಿತ ಮತ್ತು ಅಶಿಕ್ಷಿತ ಮನೆತನಗಳಲ್ಲಿ ಸಾಮಾಜಿಕ ಕಟ್ಟಳೆಗಳ ಹೆಸರಿನಲ್ಲಿ ಪುರುಷನು ನಡೆಸುವ ದೌರ್ಜನ್ಯದ ಚಿತ್ರನಿಂತಿದೆ. ಅನುಪಮಾರ 'ಅಪರೂಪದವರು' ಕಥೆಯ ತುಳಸೀಬಾಯಿ, ಸುಶೀಲಾರಾವ್‌ರ 'ಅವ್ವ' ಇಬ್ಬರೂ ಮರಣಶಯ್ಯೆಯಲ್ಲಿದ್ದಾಗ ಅನುಭವಿಸುವ ನೋವು—ದುಃಖಗಳು ಒಗೆಯುವೂ ಚಿವರುವಂತಿವೆ. ಈ ನಾಲ್ಕು ಕಥೆಗಳು ಹೆಣ್ಣಿನ ಅಸಹಾಯಕತೆಗೆ ಹಿಡಿದ ಕನ್ನಡಿ ಯಾಗಿವೆ.

ಅನುಪಮಾ ಮತ್ತು ಸುಶೀಲಾರ ಕಥೆಗಳಲ್ಲಿ ಹೆಣ್ಣು ತಾಯಿಯಾಗಿ. ಸೊಸೆ ಯಾಗಿ. ಅವಿವಾಹಿತ ಯುವತಿಯಾಗಿ. ಗಂಡನ ಪ್ರೇಮದಿಂದ ವಂಚಿತ ಹೆಂಡತಿ ಯಾಗಿ ಕೂಲಿಯವಳಾಗಿ, ನೌಕರಿ ಮಾಡುವವಳಾಗಿ ಪರಿತ್ಯಕ್ತಳಾಗಿ. ವಿಧವೆಯಾಗಿ ನಮ್ಮ ಪರಿಸರದಲ್ಲಿ ಅನುಭವಿಸುತ್ತಿರುವ ನೂರಾರು ಯಾತನೆಗಳ ಮಧ್ಯದಲ್ಲಿ ಅವಳ ಮನೋವ್ಯಥೆ. ಮಾನಸಿಕ ಸಂಘರ್ಷಗಳನ್ನು ಲೇಖಕಿಯರಿಬ್ಬರೂ ಬಿಚ್ಚಿ ತೋರಿ ದ್ದಾರೆ,

ಕಥೆಗಾರ್ತಿಯರು ಕೌಟುಂಬಿಕ ಜೀವನವನ್ನು ದಾಟಿ ಹೊರಗಿನ ವಿಶಾಲ ಜಗತ್ತಿಗೆ ಅವಜ್ಞರಾಗಿರುತ್ತಾರೆ ಎಂಬ ಆರೋಪಕ್ಕೊಳಗಾಗಿದ್ದಾರೆ. ಇವರು ಪಾರಿವಾರಿತ ಜೀವನದ ಪರಿಧಿಯನ್ನು ಮೀರಿ ಬರಲಾರರು ಎಂಬ ದೂಷಣೆಗೊಳಗಾಗಿದ್ದಾರೆ. ನೆಲ–ಮುಗಿಲುಗಳ ನಡುವಿನ ಎಲ್ಲ ಕ್ಷೇತ್ರಗಳತ್ತ ಕೈಚಾಚಿದ, ಶೋಷಣೆಯ ವಿರುದ್ಧ ಹೋರಾಡುವ ಲೇಖಕರು ಪಾರಿವಾರಿಕ ಜೀವನವನ್ನು ಅಷ್ಟಾಗಿ ಗಮನಿಸಿಲ್ಲ. ಸಣ್ಣ ಕಥೆಗಳಲ್ಲಿ ಅದೊಂದು ಕೊರತೆಯೆಂಬಂತೆ ಉಳಿದುಕೊಂಡಾಗ ಲೇಖಕಿಯರು ಅದನ್ನು ತುಂಬಿಕೊಟ್ಟಿದ್ದಾರೆ. ಇಂದು ಬದಲಾಗಿರುವ ಜೀವನ ಮೌಲ್ಯಗಳ ನಡುವೆ ಪುರುಷನ ಸ್ವಾರ್ಥಪೂರ್ಣ ಪರಂಪರೆಯ ಪ್ರಭಾವದ ಕಪಿಮುಷ್ಟಿಯಲ್ಲಿ ಸಿಲುಕಿದ್ದರೂ ಬಿಡಿಸಿಕೊಂಡು ಹೊರಬರುವ ಪ್ರಯತ್ನದಲ್ಲಿ ಲೇಖಕಿಯರು ನಡೆದಿದ್ದಾರೆ.

ಸಣ್ಣ ಕಥೆಯಾಗಲಿ ಸಾಹಿತ್ಯದ ಮತ್ತಾವುದೇ ಪ್ರಕಾರವಾಗಲಿ ಅದರ ಮಾನದಂಡವನ್ನು ವಿಷಯದ ಮೇಲೆ ನಿರ್ಣಯಿಸುವದು ಆರೋಗ್ಯಕರ ವಿಚಾರವಲ್ಲ. ಈ ದೃಷ್ಟಿಯಿಂದ ಸಣ್ಣ ಕಥೆಯ ಗುಣ ಲಕ್ಷಣಗಳ ಅನ್ವಯದಿಂದ ಲೇಖಕಿಯರ ಸಣ್ಣ ಕಥೆಗಳಲ್ಲಿ ಕಲಾನೈಪುಣ್ಯದ ಕೊರತೆಯಿಲ್ಲವೆಂಬುದನ್ನು ಎತ್ತಿಹೇಳಲು ಅನುಪಮಾರ ಕಥೆಗಳೇ ಸಾಕ್ಷಿ. ಓದುಗರ ಮನವನ್ನು ಸೆರೆಹಿಡಿಯುವ ತಂತ್ರ, ಕಥೆಯ ಗುರಿ ಪರಿಣಾಮದ ಐಕ್ಯತೆಯನ್ನು ಸಾಧಿಸುವ ಕಲೆಯನ್ನು ಅನುಪಮಾರ ಕಥೆಗಳು ಪಡೆದಿವೆ. ಸುಶೀಲಾರಾವರ ಚೊಚ್ಚಲು ಕೃತಿಯಾದ 'ಪೋಕೇಸಿನ ಗೊಂಬೆ', 'ಗೌಡರ ಸೊಸೆ', 'ದಾಕ್ಷಾಯಿಣಿ', 'ತುಂಗ', 'ಆಯ್ಕೆ'. ಕಥೆಗಳು, ತಕ್ಕಮಟ್ಟಿಗೆ ಕಲಾತ್ಮಕವಾಗಿವೆ. ವಸ್ತುವಿನ ದೃಷ್ಟಿಯಲ್ಲಿ 'ಪೋಕೇಸಿನ ಗೊಂಬೆ'ಯಾಗಲು ಒಪ್ಪದ ವಿನೂತಾ, ಗಂಡ–ಮದುವೆಯ ಹಂಗು ಮೊರೆದದ್ದು, 'ಭಿನ್ನ ಸಂಸ್ಕೃತಿ'ಯಲ್ಲಿ ಗಂಡ ಬಿಟ್ಟದ್ದು, ಪರಂಪರೆಯನ್ನು ಮೀರಿ ನಿಲ್ಲುವ ಲಕ್ಷಣ ಕಾಣುತ್ತದೆ. ಒಂದು ಭಾವನೆಯನ್ನೊಳಗೊಂಡು ತರ್ಕಬದ್ಧವಾಗಿ ಕಥೆ ಹೇಳುವ, ಸಹಜ ಆಕರ್ಷಣೆ ಈ ವರ್ಷವಲ್ಲಿ ಪ್ರಕಟವಾಗಿರುವ ಇಬ್ಬರು ಕಥೆಗಾರ್ತಿಯರಲ್ಲಿ ಕಾಣುತ್ತೇವೆ. 'ನಿನಗೊಂದು ಮಾತಿ'ನ ಕಥೆಗಳಿಗಿಂತ 'ಒಂದು ಗಿಣಿಯ ಕಥೆಗಳು ರಸಪಾಕವಾಗಿವೆ. ಸುಶೀಲಾರ ಕಥೆಗಳು ಕೂಡ ಈ ದಿಶೆಯತ್ತ ಪಕ್ವವಾಗಲು ಹೊರಟಿವೆ.

೨. ನಮ್ಮ ಸಣ್ಣ ಕಥೆಗಳಲ್ಲಿ ತಿಳಿಹಾಸ್ಯ, ವಿಡಂಬನೆ, ಟೀಕೆಗಳು, ಶ್ರೀನಿವಾಸರ ಆನಂದ, ಅಶ್ವತ್ಥ, ದಾಶರಥಿ ದೀಕ್ಷಿತ ಮೊದಲಾದವರಿಂದ ಬಳಕೆಯಾಗಿದೆ. ಹಾಸ್ಯವು ಒಮ್ಮೊಮ್ಮೆ ಕಟುವಾಗಿ ಮನಚುಚ್ಚಿದರೆ ಒಮ್ಮೊಮ್ಮೆ ಮುಕ್ತಮನಸ್ಸಿನಿಂದ ಸಂತೋಷಪಡಿಸುತ್ತದೆ.

ಹಳ್ಳಿಯ ಜೀವನದ ಓರೆಕೋರೆಗಳನ್ನು ಎತ್ತಿ ಹೇಳಲು ಅಲ್ಲಿಯ ಅಸೂಯೆ, ಮೇಲುಕೀಳು, ಸಂಚು, ಅಲ್ಲಿಯ ಲವಲವಿಕೆ, ಪ್ರಸನ್ನತೆ, ಅನುಕಂಪಗಳನ್ನು ಹಾಸ್ಯ

ಬೆರತ ದೃಷ್ಟಿಯಲ್ಲಿ ಕಂಡು ಆರೋಗ್ಯಕರವಾದ ಹಾಸ್ಯವನ್ನು ಕಥೆಗಳಲ್ಲಿ ಬಳಸಿ ಕೊಳ್ಳುವದನ್ನು ಗೋರೂರು ರಾಮಸ್ವಾಮಿ ಅಯ್ಯಂಗಾರ್, ಬಾಗಲೋಡಿ ದೇವರಾಯರು ಸಣ್ಣ ಕಥಾ ಪ್ರಪಂಚಕ್ಕೆ ತಂದರು

ವ್ಯಂಗ ವಿಡಂಬನೆಯನ್ನು ಕಲಾ ಕ್ಷೇತ್ರಕ್ಕೆ ತಂದವರು ಬೀಚಿ. ಇವರ ಕಥೆಗಳಲ್ಲಿ ವ್ಯಂಗದ ತುಣುಕಿಗಾಗಿ ಕಥೆಯ ಹರವನ್ನು ಸುತ್ತಬೇಕಾಗುತ್ತದೆ. ವಿಡಂಬನೆಯನ್ನು ತೀಕ್ಷ್ಣಗೊಳಿಸದೆ ಕೆಲವು ಹನಿಗತೆಗಳನ್ನು ಬೀಚಿಯವರು ಕೊಟ್ಟಿದ್ದಾರೆ. ಪ್ರಗತಿಶೀಲರು ವಿಡಂಬನೆಯನ್ನು ಬಳಸಿಕೊಂಡಿದ್ದಾರೆ. ಅವರಲ್ಲಿ ರಾಮಚಂದ್ರ ಶರ್ಮಾರ "ವಿಟ್ಟಿ" ಕಥೆಯಿಂದ ಕನ್ನಡದಲ್ಲಿ ಅಪೂರ್ವವಾದ ವಿಷಾದ ಅನುಕಂಪ–ಹಾಸ್ಯಗಳನ್ನು ಒಂದುಗೂಡಿಸುವ ರೂಢಿ ಬಂದಿತು. ಟಿ. ಸುನಂದಮ್ಮ; ಮನೋಹರಚಂದ್ರ ಮೊದಲಾದವರು ಹಾಸ್ಯ ಕಥೆಗಳೆಂದಿದ್ದರೂ ಹಾಸ್ಯವಿಲ್ಲದ ಕಥೆಗಳೇ ಹೆಚ್ಚಾಗಿ ನಮ್ಮಲ್ಲಿ ಬಂದಿವೆ.

ಡಾ. ಶ್ರೀನಿವಾಸ ಹಾವನೂರರು ಕುಚೋದ್ಯದ ಒಂಬತ್ತು ಕಥೆಗಳಲ್ಲಿ ಗಂಭೀರ ನಡೆಯ ಸಂಶೋಧಕರಾಗಿದ್ದರೂ ವಿಶಿಷ್ಟವಾದ ಅಣಕವನ್ನು ತಂದಿದ್ದಾರೆ. ಅವರ 'ಪ್ರತಿಬಿಂಬ', ಕಾಮದಹನ ದ ಕಥೆಗಳಲ್ಲಿ, ಧಮನ ತತ್ತ್ವಗಳನ್ನು ಅರ್ಥಹೀನಗೊಳಿಸಿ ಅನಾಗರಿಕರಾಗಿ ನಡೆಯುವ ಸ್ವಾರ್ಥಿ, ಮತ್ಸರಿಗಳಾದ ಹೀರಾ, ತಾರಾ ಮತ್ತು ಕಾಮುಕನ ವಿಷಯವಿದೆ. ಈ ಕಥೆಗಳು ದೇವರಾಯರ ವಿಶಿಷ್ಟ ದೃಷ್ಟಿಯನ್ನು ನೆನಪಿಸುತ್ತವೆ. ಮಾನವೀಯತೆ ಇಲ್ಲದ ಅತಿ ಮಡಿಯನ್ನು ಯಾಂತ್ರಿಕವಾಗಿ, ಆಧ್ಯಾತ್ಮಿಕ ಸಾಧನೆ ಮಾಡಲು ಹೊರಟವರ ಬಗೆಗೆ ಹಾಸ್ಯವನ್ನು ಲವಲವಿಕೆಯಿಂದ ಮಾಡಿದ್ದಾರೆ. ಈ ಕಥೆಗಳ ಕೊನೆಯಲ್ಲಿ ಹಾಸ್ಯಕ್ಕೆ ನೋವಿನ ಪರಿತತೆ ಬರುತ್ತದೆ. ಹೀರಾ–ತಾರಾ ಒಬ್ಬರ ಮೇಲೆ ಇನ್ನೊಬ್ಬರು ಮತ್ಸರಪಟ್ಟು ಇಬ್ಬರೂ ಯೌವನವನ್ನು ಹಾಳು ಮಾಡಿಕೊಂಡರು. ಕಾಮದಹನದಲ್ಲಿ ಕಾಮುಕನೊಬ್ಬ ಕಾಮಕ್ಕೆ ಬಲಿಯಾಗಿ ಸತ್ತು ಹೋದ ಕಥೆಯಿದೆ.

ಕಷ್ಟಜೀವಿ ಅಣ್ಣನಿಗೆ ಆಲಸೀ ತಮ್ಮನಿರುವ 'ಇರುವೆ ಮತ್ತು ಜಿಟ್ಟೆ' 'ಪ್ರತಿಭಾಯಿ ಶಾಸ್ತ್ರಿಗಳು ಆದರ್ಶಬಿಟ್ಟು ಹಣಕ್ಕಾಗಿ ಕಥೆಗೀಚಿದ್ದು, 'ವಿಷಾರಿ' ವ್ಯಾಪಾರಿ ಹಣಗಳಿಸಿದ ರೀತಿ, ಈಗ "ನಿಸ್ಸಂತಾನ" ಳಾದವಳಿಗೆ ಮದುವೆಗೆ ಮೊದಲು ಹುಟ್ಟಿದ ಮಗುವನ್ನು ಮದುವೆಯ ಗಂಡ ಸ್ವೀಕರಿಸಿದ್ದು. ಈ ಕಥೆಗಳು ವ್ಯಂಗದಿಂದ ರಂಜಿಸುತ್ತವೆ.

ಕಾರಣವಿಲ್ಲದೆ ಗಂಡನನ್ನು ಸಂದೇಹಿಸಿದ ಹೆಂಡತಿ "ಜೊತೆಗಾತಿ". ಸೀರೆಯ ಕಳ್ಳನನ್ನು ಹಿಡಿಯುವ ಬದಲು 'ತನಿಖೆನಾಯಿ' ಸಾಕಿದವನನ್ನೇ ಹಿಡಿದ ಕಥೆಗಳು ತಿಳಿಹಾಸ್ಯ–ಅಣಕಗಳಿಂದ ಕೂಡಿವೆ.

ಹಾವನೂರರ ಕಥೆಗಳಲ್ಲಿ ಕಥನ ಕೌಶಲದ ದೃಷ್ಟಿಯಿಂದ ಸಂಕ್ಷಿಪ್ತತೆ ಗುರಿ–ಪರಿಣಾಮಗಳಲ್ಲಿ ಐಕ್ಯತೆಯನ್ನು 'ಜೊತೆಗಾರ್ತಿ, ತನಿಖೆಯ ನಾಯಿ ಪ್ರತಿಭಾಶಾಲಿ' ಕಥೆಗಳು ಸಾಧಿಸಿ ಕುಶಲ ಕಥೆಗಳಾಗಿವೆ. ಇವರ ಕಥೆಯ ವಸ್ತು ಬೇರೆ ಬೇರೆ ದೇಶಗಳಿಂದ ಎತ್ತಿಕೊಂಡವುಗಳಾದರೂ ಅವರ ಕೈಚಳಕದಿಂದ ನಮ್ಮ ದೇಶದ, ನಮ್ಮ ಜನದ ನಮ್ಮ ನೆಲದ ಕಥೆಗಳೇ ಆಗಿ ಪರಿಣಮಿಸಿವೆ.

೪. ದೇಶಾಭಿಮಾನ, ಶೌರ್ಯ ಜೀವನದ ಕಥೆಗಳು : "ವಿದ್ರೋಹಿಯ ವೀರಗಾಥೆ"ಯೆಂಬ ರೇಣುಕರ ಹತ್ತು ಕಥೆಗಳ ಸಂಕಲನವು ಸೈನಿಕರ ಕರುಣಕಥೆಗಳಾಗಿವೆ. ಬಂಡಾಯ ಪ್ರವೃತ್ತಿಯಲ್ಲಿರುವ ಹಸಿ–ಬಿಸಿ ಸಮಾಜ ಸುಧಾರಣಾ ಭಾವವು ತಾತ್ತ್ವಿಕ, ಪರಿಹಾರವಾಗುವದು ಅದೆ ಭರವಸೆಯ ಮಾತು. ವೀರಗಾಥೆಯ ಕಥೆಗಳು ಅಂತಃಸ್ಸತ್ವವನ್ನು ತಟ್ಟುವಂತಹ ಯೋಧಕ ಪ್ರಾತ್ಯಕ್ಷಿಕೆಗಳಾಗಿವೆ. ಕ್ರೌರ್ಯ–ಕಾಮಗಳು ಸಾಹಿತ್ಯದಲ್ಲಿ ಪ್ರಚುರತೆಯನ್ನು ಪಡೆದಿರುವ ಸಮಯದಲ್ಲಿ ನಾಡಿಗಾಗಿ ಮುಡಿಪಾದವರ ಕಥೆಗಳು ಕೂಡ ಚಿತ್ತಾಕರ್ಷಕವಾಗಬಲ್ಲವೆಂದು ಈ ಕಥೆಗಳು ಸಾರಿದಂತಿವೆ.

ದೇಶ ರಕ್ಷಣೆಗಾಗಿ ಹೋರಾಡುವಾಗ ಬದುಕಿ ಉಳಿಯುವ ಅವಕಾಶ ಸಿಕ್ಕಾಗ ಐದು ವರ್ಷದವರೆಗೆ ಕಾಡಿನಲ್ಲಿ ಏಕಾಂಗಿಯಾಗಿದ್ದು ಬಂದ ಗೂರ್ಖಾ ಸಿಪಾಹಿ ಕಥೆ ಸುಂದರವಾಗಿದೆ. ಸಿಪಾಹಿಗಳನ್ನು ಅಮಾನುಷವಾಗಿ ಕಾಣುವ ವೈದ್ಯರು. ಮೇಲಾಧಿಕಾರಿಗಳು ಕಟುಕರಾಗಿದ್ದರೂ ಕರ್ತವ್ಯಭ್ರಷ್ಟರಾಗದ ಸಿಪಾಹಿಗಳ ಜೀವನದ ದಯನೀಯ ಸ್ಥಿತಿಯನ್ನು ಕುರಿತ ಕಥೆಗಳು "ಸಿಪಾಹಿಯೊಬ್ಬನ ವ್ಯಥೆಯ ಕಥೆ", "ಒಂದು ಹತ್ಯಾಕಾಂಡದ ನೆನಪು", "ಪಾಕ್ ಸೆರೆಮನೆಯಲ್ಲಿ" ರಣದಲ್ಲಿ ಸತ್ತರೂ ಗೆದ್ದ ಸುಬೇದಾರ. ಸೈನಿಕ ಶಿಸ್ತನ್ನು ಅತಿಕ್ರಮಿಸಿ ವೀರಚಕ್ರ ಪಡೆದ ಅಧಿಕಾರಿ ಸ್ಕಾಟ ಸಾಹೇಬರ ಕಥೆಗಳು ಪರಿಣಾಮಕಾರಿಯಾಗಿವೆ. ಸೇನಾ ತರಬೇತಿಯ ಕಾಲದ "ನಾವು ನದಿಯನ್ನು ದಾಟಿದೆವು". ಆದರ್ಶ ದೇಶಪ್ರೇಮಿಯ ರೋಮಾಂಚಕ ಕಥೆ, ಪೀಟರ ಮತ್ತು ಸ್ಕಾಟನಂತಹ ಸೈನಿಕ ಮತ್ತು ಅಧಿಕಾರಿಗಳು ಕರ್ತವ್ಯ ಭ್ರಷ್ಟರಾಗುವವರು ಸೇನೆಯಲ್ಲಿದ್ದಾರೆ. ಸೈನಿಕರಿಗೆ ದೇಶಾಭಿಮಾನದ ಪಾಠ ಕಲಿಸುವ ಬಂಡುಗಾರ ನಾಗಾನಂಥವರು, ಸೆರೆ ಸಿಕ್ಕರೂ, ಸತ್ತರೂ ವೀರಗಾಥೆಯನ್ನು ಹಾಡುವವರಿದ್ದಾರೆ.

ರೇಣುಕರು ಸರಳವಾಗಿ ಕಥೆ ಹೇಳುತ್ತ ಹೋದರೂ ಪ್ರಭಾವಬೀರುತ್ತಾರೆ. ಪ್ರಕೃತಿಯ ಸಹಜ–ಸೌಂದರ್ಯವು ಕಥೆಗೆ ತಕ್ಕ ಹಿನ್ನೆಲೆಯಾಗಿ ಬಂದಿದೆ. ಸೈನಿಕ ಜೀವನದಲ್ಲಿ ನಡೆಯುವ ಶಿಸ್ತು ಪಾಲನೆ ಉಲ್ಲಂಘನೆ. ಪರಿಣಾಮ ಪ್ರಭಾವಗಳ ಬಗೆಗೆ ವಿವಿಧ ಅನುಭವವನ್ನು ರೇಣುಕರು ರೋಚಕವಾಗಿ ಮನತಟ್ಟುವಂತೆ ಹೆಣೆದಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ದೇಶಭಕ್ತಿಯನ್ನು ಕೆರಳಿಸುವ ಉದ್ದೇಶದಿಂದ ದೇಶಭಕ್ತರ ಕಥೆಗಳು ರೂಢಿಯಲ್ಲಿ ಬಂದವು. ಬರಬರುತ್ತ ವೀರಾವೇಶ ಕೆರಳಿಸುವ ವಿರಳವಾಗಿರುವ ಕಾಲದಲ್ಲಿ ರೇಣುಕರ ಪ್ರಯತ್ನ ಸ್ತುತ್ಯ.

೫. ಸಸ್ಪೆನ್ಸ ಕಥೆಗಳು : ಎಂಟು ಕಥೆಗಳ ಸಂಗ್ರಹವಾಗಿರುವ "ಕೊಲ್ಲಿಯ ಹಣ" ಬರೆದ ಟಿ. ಕೆ. ರಾಮರಾವರು ಕನ್ನಡದ ಆಲ್‌ಫ್ರೆಡ್ ಹಿಚ್‌ಕಾಕ್ ಎಂದು ಹೆಸರು ಪಡೆದವರು. ಇವರ ಮೊದಲಿನ ಕಥಾಸಂಗ್ರಹಗಳಂತೆ 'ಕೊಲ್ಲಿಯ ಹಣ'ದ ಕಥೆಗಳು ಕೂಡ ಕುತೂಹಲ ಕೆರಳಿಸಲು ಸಮರ್ಥವಾಗಿವೆ.

'ಕೊಲ್ಲಿಯ ಹಣ' ದಕ್ಕಿಸಿಕೊಳ್ಳುವ ಪೈಪೋಟಿಯಲ್ಲಿ ನಡೆದ ಕೊಲೆ. ರಾತ್ರಿಯ ಭೋಜನ' ದ ಹಿನ್ನೆಲೆಯಲ್ಲಿ ನಡೆದ ಪ್ರೇಯಸಿಯ ಕೊಲೆಯ ಕಥೆಗಳು, ಕೊಲೆಗೈದ ವಿಧಾನ, ಶೋಧನೆ, ಕೊಲೆಗಾರನನ್ನು ಕಂಡುಹಿಡಿದ ವಿಷಯಗಳು ಆಸಕ್ತಿಯನ್ನು ಕುದುರಿಸುವ ಕಥೆಗಳಾಗಿವೆ. ಬಣ್ಣದ ವ್ಯಾಮೋಹಕ್ಕೆ ಸಿಲುಕಿ ರಂಭಾಳಂಥ ಯುವತಿ ಬಿಳಿಯನನ್ನು ಮದುವೆಯಾಗಿ ಮೋಸ ಹೋಗಿ ಆತ್ಮಹತ್ಯೆ ಮಾಡಿ ಕೊಳ್ಳುವ ಪ್ರಸಂಗವೊದಗುತ್ತದೆ. ಈ ಕಥೆಗಳಲ್ಲಿ ಕೊಲೆ ಮತ್ತು ಸಾವಿಗೆ ಕಾರಣ ವಾದ ಪ್ರಸಂಗವನ್ನು ಕಥೆಗಾರರು ನಿಗೂಢವಾಗಿ ಚಿತ್ರಿಸಿದ್ದಾರೆ.

ಸಾಮಾಜಿಕ ಕಥಾವಸ್ತುವನ್ನು ಕುತೂಹಲಪೂರ್ಣ ಘಟನೆಗಳ ಜೊತೆಗೆ ತಿಳಿಸಿ ತರ್ಕಬದ್ಧವಾಗಿ, ವೈಜ್ಞಾನಿಕವಾಗಿ ಕಥೆಗಾರರು ಮಂಡಿಸಿ ಓದುಗರನ್ನು ಮುಗ್ಧ ಗೊಳಿಸುತ್ತಾರೆ.

೬. ಬೇರೆ ಬೇರೆ ಕಥೆಗಾರರ ಉತ್ತಮ ಕಥೆಗಳನ್ನು ಸಂಗ್ರಹಿಸಿದ ಸಂಪಾದ ನೆಯ ಮೂರು ಕೃತಿಗಳು ಈ ವರ್ಷದಲ್ಲಿ ಬಂದಿವೆ. ಗುರುದಕ್ಷಿಣೆಯಾಗಿ ಅರ್ಪಿಸುವು ದಕ್ಕಾಗಿ 'ಸಮತಾ, ದಲ್ಲಿ ಹತ್ತು ಕಥೆಗಳು ಹೊಸ ಲೇಖಕರಿಗೆ ಅವಕಾಶ ಒದಗಿಸಲು 'ವರ್ಷ', ಶ್ರೇಷ್ಠ ಕಥೆಗಾರರ ಉತ್ತಮ ಕಥೆಗಳನ್ನು ಒಂದೆಡೆ ಕಾಣಲು ಸಂಗ್ರಹಿಸಿದ 'ಕಥಾಸಂಪದ'' ಗಳಿಗೆ ಬೇರೆ ಬೇರೆ ಉದ್ದೇಶದಿಂದ ಮಾಡಿದ ಸಂಪಾದನೆಗಳಾಗಿವೆ. ಈ ಕೃತಿಗಳನ್ನು ವಿವೇಚನೆಗೊಳಪಡಿಸುವದು ಸೂಕ್ತವಾಗಲಾರದು. ಇಲ್ಲಿ ಬರುವ ಕಥೆಗಾರರ ಒಂದೊಂದೇ ಕಥೆಗಳನ್ನು ಎತ್ತಿಕೊಳ್ಳುವದು ಅಪಚಾರವಾಗುತ್ತದೆ. ಸಂಕಲನಗಳಲ್ಲಿ "ಸಮತಾ"ದಲ್ಲಿರುವಂತೆ ಕೆಲವು ಸಣ್ಣ ಕಥೆಗಳ ಚೌಕಟ್ಟಿಗೆ ಒಳಪಡದ ಹಸಿ–ಹಸಿ ಭಾವನೆಗಳನ್ನು ಕೆಲವರು ವರದಿಯಂತೆ, ಕೆಲವರು ಹೆಚ್ಚಿನ, ಉತ್ಸಾಹದಲ್ಲಿ ಮನಬಂದಂತೆ ಹೊರಗೆಡಹುತ್ತಾರೆ. ಇಲ್ಲಿ ಒಟ್ಟು ಸಂಗ್ರಹಕಾರರ ಆಯ್ಕೆ ಮುಖ್ಯ ವಾಗಿರುತ್ತದೆ. ಆದ್ದರಿಂದ ಕಥಾ ಸಂಕಲನಗಳನ್ನು ಶ್ರೇಷ್ಠ ಅಥವಾ ಕನಿಷ್ಠವೆಂದು ಹೇಳುವದು ಸಮಂಜಸವಾಗದು.

ಈ ವರ್ಷ ಪ್ರಕಟವಾದ ಕಥೆಗಳು ನಮ್ಮ ಸಾಚಾ ಸಂಸ್ಕೃತಿಯಲ್ಲಿ ಮುಚ್ಚುಮರೆಯಲ್ಲಿ ನಡೆಯುತ್ತಿದ್ದ ಕಾಮಲೀಲೆಯನ್ನು ಬಿಚ್ಚಿನುಡಿದಿವೆ. ಸಂಪ್ರದಾಯಬದ್ಧ ಮಡಿವಂತರು ಸಿಡಿದೇಳುವದು ಸ್ವಾಭಾವಿಕ. ಮಾನವಸಹಜ ಕಾಮನೆಗಳನ್ನು ಹೊರತುಪಡಿಸಿ ಸಾಹಿತ್ಯವು ಬದುಕಲಾರದು. ಅಂದಂದಿನ ಕಾಲಮಾನಕ್ಕೆ ತಕ್ಕಂತೆ ಅಭಿವ್ಯಕ್ತಿಸುವ ಬಗೆ ಕಥೆಗಾರನ ಆಯ್ಕೆ ಮುಂಬರುವ ಜನಾಂಗವನ್ನು ಅಡ್ಡದಾರಿಗಳಸುವ ಹಕ್ಕು ಚಲಾಯಿಸುವದು ಕಥೆಗಾರನಿಗೆ ಯೋಗ್ಯವಲ್ಲ. ಇಲ್ಲಿ ಪ್ಲೇಟೋನ ಮಾತನ್ನು ನೆನಸಿಕೊಳ್ಳಬೇಕು. ಅವನು ಅಶ್ಲೀಲ ಸಾಹಿತ್ಯ ನಿರ್ಮಾತೃಗಳನ್ನು ಆದರ್ಶರಾಜ್ಯದ ಹೊರಗೆ ಅಟ್ಟಿದ ಕಾಲಮಾನದ ಮೌಲ್ಯವನ್ನು ಗುರುತಿಸಿಕೊಳ್ಳಬೇಕು. ಅಂದಿಗೂ ಇಂದಿಗೂ ಜೀವನದ ನೆಲೆ–ಸೆಲೆ ಶೃಂಗಾರವಾಗಿದ್ದರೂ ಸಾಮಾಜಿಕ ಜೀವನದಲ್ಲಿ ಅದರದೇ ಆದ ಸ್ಥಾನ ಅದಕ್ಕಿರಬೇಕು. ಇದ್ದುದನ್ನು ಇದ್ದಂತೆ ಹೇಳುವದನ್ನು ಒಪ್ಪಿಕೊಂಡರೆ ಲಿಖಿತರೂಪದಲ್ಲಿ ಸ್ಥಿರಗೊಳಿಸುವ ಕೆಲಸವು ಹೊಣೆಗಾರಿಕೆಯದಾಗಿರಬೇಕಲ್ಲದೆ ಹೊಣೆಗಾರಿಕೆ ಆಗಬಾರದು.

ಮಹಿಳಾ ಸಮಾಜವು ತನ್ನ ಧೀಶಕ್ತಿಯಿಂದ ಎಷ್ಟೇ ಹೋರಾಡಿದರೂ ಪುರುಷ ಪ್ರಾಧಾನ್ಯವನ್ನು ಗಾಢವಾಗಿ ಹಿಡಿದುಕೊಂಡಿರುವದು ಸ್ಪಷ್ಟವಿದೆ. ಹೆಣ್ಣಿನ ಶೋಷಣೆ ದೈಹಿಕವಾಗಿ ಮಾನಸಿಕವಾಗಿ ಎಲ್ಲ ಕಾಲದಲ್ಲಿ ನಡೆದು ಬಂದಿದೆ. ಎಲ್ಲ ಕ್ಷೇತ್ರಗಳಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿದು ಪ್ರಗತಿಯಲ್ಲಿ ಒಂದು ಹೆಜ್ಜೆ ಮುಂದಾಗಿ ತೋರಿಸುವ ಮಹಿಳೆಯ ಶೋಷಣೆ ಇಂದಿಗೂ ತಪ್ಪಿಲ್ಲವೆಂಬ ಕಟುಸತ್ಯವನ್ನು ಈ ವರ್ಷದ ಕಥಾ ಸಾಹಿತ್ಯವು ಎತ್ತಿಹಿಡಿದಿದೆ.

ವಸ್ತುವಿನ ಆಯ್ಕೆಯ ದೃಷ್ಟಿಯಿಂದ ಈ ವರ್ಷದ ಗಮನಾರ್ಹ ಕಥೆಗಳೆಂದರೆ ವಿದ್ರೋಹಿಯ ವೀರಗಾಥೆ ಮತ್ತು ಕುಚೋದ್ಯದ ಕಥೆಗಳು. ನವ್ಯದ ಧಾಟಿಯ ನಿನಗೊಂದು ಮಾತು. ಸಾವು ಮತ್ತು ಇತರ ಕಥೆಗಳು ತಕ್ಕಮಟ್ಟಿಗೆ ಸಮಾಧಾನಕರವಾಗಿದೆ. ಬಂಡಾಯ ಪ್ರವೃತ್ತಿಯ ಒಳದನಿಯನ್ನು ಹೊಂದಿದ ಮಳಲಿ ಬೀಜನ ಹಳ್ಳಿಯವರು ನವ್ಯೋತ್ತರ ಕಥೆಯ ಸಾಲಿಗೆ ಹೊಸ ಕಳೆ ಕಟ್ಟಿದ್ದಾರೆ. ಪುರುಷ ಲೇಖಕರ ನಿರ್ಲಕ್ಷಿತ ಕ್ಷೇತ್ರವನ್ನು ವಸ್ತುವನ್ನಾಗಿ ಮಾಡಿಕೊಂಡು ಅನುಪಮಾ ಮತ್ತು ಸುಶೀಲಾರು ಸಣ್ಣ ಸಾಹಿತ್ಯದಲ್ಲಿ ಪಾರಿವಾರಿಕ ಕಥೆಗಳನ್ನು ಕೊಟ್ಟು ಕೊರತೆಯನ್ನು ತುಂಬುವ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಸುಶೀಲಾರ ಕಥೆಗಳ ವಸ್ತುವಿನಲ್ಲಿ ಸಂಪ್ರದಾಯದ ಗಡಿಯನ್ನು ಮುಟ್ಟಿ ಹೊಸ ಮೌಲ್ಯಗಳನ್ನು ಒಪ್ಪಿಕೊಳ್ಳುವ ಕೌಟುಂಬಿಕ ಜೀವನ ಚಿತ್ರಣದ ಪ್ರಯತ್ನವು ತೋರುತ್ತದೆ.

ಈ ವರ್ಷದ ಕಥೆಗಳು ಹಳೆಯ ಜಾಡಿನಲ್ಲಿ ಮುಂದುವರಿದಿದ್ದರೂ, ಹೊಸ ನೆಲೆಯನ್ನು ಹುಡುಕಿಕೊಂಡಿವೆ. ಇಂದಿನ ಜನಜೀವನದಲ್ಲಿ ಬೂದಿಮುಚ್ಚಿದ ಕೆಂಡ

ದಂತೆ ಸಮಸ್ಯೆ'ಗಳು ಒಳಗೊಳಗೆ ಜ್ವಲಿಸುತ್ತಿವೆ. ಮಧ್ಯಮ ವರ್ಗದವರು ತಮ್ಮನ್ನು ತಾವು ಬಿಚ್ಚಿಕೊಳ್ಳಲು ಆರರು, ಮುಚ್ಚಿಕೊಳ್ಳಲು ಆರರು. ಬಡವರು. ಮಧ್ಯಮ ವರ್ಗದವರೇ ಹೆಚ್ಚಾಗಿ ಕಥೆಗಳಿಗೆ ಆಹಾರವಾಗಿದ್ದಾರೆ. ಅಶ್ಲೀಲಸಾಹಿತ್ಯವೆಂದು ದೂರವಿಟ್ಟ 'ಕಾಮ'ವು ವ್ಯಕ್ತವಾಗಿಯೂ, ಅವ್ಯಕ್ತವಾಗಿಯೂ ಕಥೆಗಳನ್ನು ತುಂಬಿದೆ. ಶ್ರೀಮಂತರ ಕ್ರೌರ್ಯವು, ಅಧಿಕಾರಿಗಳ ಗರ್ವವು ನಿಚ್ಚಳವಾಗಿ ಜನಜೀವನದಲ್ಲಿ ಸ್ಥಿತ್ಯಂತರವನ್ನು ತರುತ್ತಿವೆ. ಕಲಿಯುವ ಆಸಕ್ತಿಯಿದ್ದ ಹಳ್ಳಿಗರ ಹಂಬಲವು ಮೊಳಕೆಯಲ್ಲಿ ಚಿವುಟಿ ಹಾಕುವ ವಿದ್ಯಮಾನಗಳು ನಡೆಯುತ್ತಿರುವಾಗ ಮುಂಬರುವ ಪೀಳಿಗೆಯ ಬಗ್ಗೆ, ದೇಶದ ಬಗ್ಗೆ ಮಾನವೀಯ ಕಳಕಳಿಯುಳ್ಳವರು ಚಿಂತಿಸಿ ಹೊಸ ಆಯಾಮವನ್ನು ಒದಗಿಸಿ ಸಣ್ಣಕಥಾಪ್ರಪಂಚ 'ಕಾಂತಾಸಮ್ಮಿತ ಉಪದೇಶ' ಮಾಡಲು ಸಮರ್ಥ ಸಾಧನವಾಗಿ ತನ್ನ ಕೈಚಳಕ ತೋರಲಿ.

೧೯೮೩ ರ ನಾಟಕ ಸಾಹಿತ್ಯ

● ಬಾಳಣ್ಣ ಶೀಗೀಹಳ್ಳಿ

*೧ "ಸಂಖ್ಯೆಯ ದೃಷ್ಟಿಯಿಂದ ನಾಟಕ ಯಾವಾಗಲೂ ಇತರ ಪ್ರಕಾರಗಳಿಗಿಂತ ಹಿಂದೆ ಇರುತ್ತದೆ"—ಎಂದು ೮೨ ರ ನಾಟಕ ಸಾಹಿತ್ಯ ಕುರಿತು ಶ್ರೀ ಉಮೇಶ ಅವರು ಹೇಳಿದ ಮಾತು ೮೩ರ ನಾಟಕ ಸಾಹಿತ್ಯಕ್ಕೂ ಅನ್ವಯವಾಗುವಂತಿದೆ. ಯಾವುದೇ ಒಂದು ಸಾಹಿತ್ಯಪ್ರಕಾರ ಬರೀ ಸಂಖ್ಯಾಪ್ರಮಾಣದಿಂದ ಗೌರವಿಸಲ್ಪಡಬಾರದೆಂದುಕೊಂಡು ಸತ್ವದ ದೃಷ್ಟಿಯಿಂದ ನೋಡಹೊರಟಾಗಲೂ ೮೩ರ ನಾಟಕ ಸಾಹಿತ್ಯದಿಂದ ನಿರಾಶೆಯಾಗುತ್ತದೆ.

೮೩ ರ ನಾಟಕಗಳ ಸಂಖ್ಯೆ ಅಂದಾಜು ೩೩. ಈ ಪರಿಮಿತ ಲೇಖನದಲ್ಲಿ ಈ ಎಲ್ಲ ನಾಟಕಗಳನ್ನು ಸಮೀಕ್ಷಿಸುವದು ಸಾಧುವೂ ಅಲ್ಲ ಸಾಧ್ಯವೂ ಇಲ್ಲ ಅನಿಸಿ ಕೆಲವು ಮುಖ್ಯ ಕೃತಿಗಳನ್ನು ಮಾತ್ರ ಸಮೀಕ್ಷಿಸಲು ಪ್ರಯತ್ನಿಸಿದ್ದೇನೆ. ಅಲ್ಲದೆ ನನ್ನ ಲೇಖನದ ಅನುಕೂಲಕ್ಕಾಗಿ ನಾನು ಒಟ್ಟು ನಾಟಕಗಳನ್ನು ೧) ಹೊಸ ಅಲೆಯ ನಾಟಕಗಳು ೨) ಅನುವಾದಗಳು ೩) ರೇಡಿಯೋ ನಾಟಕಗಳು ೪) ಬೀದಿ ನಾಟಕಗಳು ೫) ಇತರೇ ನಾಟಕಗಳು. ಎಂದು ವಿಭಾಗಿಸಿಕೊಂಡಿದ್ದೇನೆ.

೧. ಹೊಸ ಅಲೆಯ ನಾಟಕಗಳು

೧. **ದೊಡ್ಡಪ್ಪ**: (ಲೇ—ಶ್ರೀ ಗೋಪಾಲ ವಾಜಪೇಯಿ: ಅಕ್ಷರ ಪ್ರಕಾಶನ. ಸಾಗರ)

ಹೊಸ ಅಲೆಯ ನಾಟಕಗಳಲ್ಲಿ ಒಂದು ಗಮನಾರ್ಹ ಕೃತಿ. ಬೆಂಗಳೂರಿನ ಸೂತ್ರಧಾರ ತಂಡದವರಿಂದ ಪ್ರಯೋಗದಲ್ಲಿ ನೂರಕ್ಕೆ ನೂರರಷ್ಟು ಯಶಸ್ಸು ಕಂಡಾದ ಮೇಲೆ ಪ್ರಕಟಗೊಂಡದ್ದು. ಒಂದು ಜನಪದ ಆಖ್ಯಾಯಿಕೆಯನ್ನು ಆಧಾರವಾಗಿಟ್ಟುಕೊಂಡು ಅದರಗುಂಚಿಯ ದೊಡ್ಡಪ್ಪನ ಮೂರ್ತಿಯ ಸುತ್ತಲೂ ಹೆಣೆದ ಜಾನಪದ ತಂತ್ರದ ಕತೆ ಇದು. ಉತ್ತರದ 'ಅಜೇಯಮಲ್ಲ' ಬಾರಾಸಿಂಗನೊಂದಿಗೆ

---

*೧. ಗ್ರಂಥಲೋಕ—೧೯೮೨ರ ಕನ್ನಡ ಪುಸ್ತಕಗಳ ಸಮೀಕ್ಷಾ ವಿಶೇಷಾಂಕ-ನಾಟಕ ೧೯೮೨ ಪುಟ ೩೪.

ಸೆಣಸಿಗೆದ್ದ 'ದಡ್ಡಪ್ಪ' ಬಿಜಾಪುರದ ಸುಲ್ತಾನ ಆದಿಲ್‌ಷಹಾನ ಪ್ರೀತಿಪಾತ್ರನಾಗಿ 'ದೊಡ್ಡಪ್ಪ'ನೆಂದು ಹೆಸರುಪಡೆದು ಕೋಟೆ ಕಾವಲುಗಾರ ಮೇಲ್ವಿಚಾರಕನಾಗಿ ನೇಮಕಗೊಳ್ಳುವುದರ ಮೂಲಕ ಬೆಳವಣಿಗೆ ಹೊಂದುವ ಈ ನಾಟಕದಲ್ಲಿ ನಾಟಕೀಯತೆಗೆ ಬೇಕಾದ ಉತ್ತಮ ಘಟನಾವಳಿಗಳಿವೆ.

ಸಿಂಗನ 'ಷಾಗಿರ್ದ' ಆಗಿ ಆಜನ್ಮ ಬ್ರಹ್ಮಚಾರಿಯಾಗಿ ಉಳಿಯುತ್ತೇನೆಂದು ಮಾತುಕೊಡುವ ದೊಡ್ಡಪ್ಪ ಬಂಕಾಪುರದ ಗೌಡನ ಮಗಳು ಸಿಂಗಾರಿಯ ಮೋಹದ ಬಲೆಯಲ್ಲಿ ಸಿಲುಕಿ ಆದಿಲ್‌ಷಾಹಾನಿಗೆ ಕೊಟ್ಟಮಾತನ್ನು ಉಳಿಸಿಕೊಳ್ಳಲಾಗದೆ ವಚನಭ್ರಷ್ಟನಾಗಿ ಕೊಲೆಗಾರರ ವಂಶ 'ನಿರ್ವಂಶ' ವಾಗುವಂತೆ ಶಪಿಸಿ ಹುತಾತ್ಮನಾಗುವುದು; ಅದೇ ಸಂದರ್ಭಕ್ಕೆ ಅಲ್ಲಿ ಬಿದ್ದಿದ್ದ ಮೂರ್ತಿಯನ್ನು ಅಲ್ಲಿನ ಜನ 'ದೊಡ್ಡಪ್ಪ'ನೆಂದು ಭ್ರಮಿಸಿ ಪೂಜೆ ಸಲ್ಲಿಸುವದು, ಬರುಬರುತ್ತ ಪೂಜಾರಿಯ ಪ್ರೇರಣೆಯಿಂದ ದೊಡ್ಡಪ್ಪನ ಉತ್ಸವದ ಹೆಸರಿನಲ್ಲಿ ಊರಿನ ಹೊಸಮಾಲಗಿತ್ತಿಯರನ್ನು 'ಕತ್ತಲೆ-ಬೆತ್ತಲೆ' ಸೇವೆಗೆ ಒಪ್ಪಿಸುವುದು; ಗೌಡನ ಸೊಸೆ ಈ ಮೂಢನಂಬಿಕೆಯ ಬಲಿಪಶುವಾಗಿ ಪೂಜಾರಿಯ ಕೊಲೆಮಾಡಿ ಹುಚ್ಚಳಾಗುವುದು ಮತ್ತೊಂದು ಘಟ್ಟ. ಇಂಥ ಮೌಢ್ಯಗಳನ್ನು ಪ್ರಶ್ನಿಸುತ್ತಾ ಹೋಗುವ ಹೊಸತಲೆಮಾರಿನ ಯುವಕ ಊರಿನ ಸಂಪ್ರದಾಯಬದ್ಧನೆನಿಸಿದ ಮುದುಕನೊಂದಿಗೆ ಭ್ರಮೆಗಳನ್ನು ಅಲ್ಲಗಳೆಯುತ್ತಾ ಅಲ್ಲಿಯ ಮುಗ್ಧ ಜನರಿಗೆ 'ಆ ವಿಗ್ರಹ' ಜೈನ ತೀರ್ಥಂಕರನದೆಂದು ತೋರಿಸಿಕೊಟ್ಟರೂ ನಂಬದ ಅವರ ಹಲ್ಲೆಗೆ ಒಳಗಾಗಿ 'ಸತ್ಯ ಸಾಯುವದಿಲ್ಲ' ಎಂದು ಮುಕ್ತಾಯವಾಗುವ ನಾಟಕ ಕೊನೆಗೆ ಶೋಷಣೆ ವಿರೋಧಿ ಪ್ರಚಾರಕ್ಕೆ ಬಂದು ನಿಲ್ಲುತ್ತದೆ.

ಈ ಆಸ್ಥಾನದಲ್ಲಿ ದೊಡ್ಡಪ್ಪ ತನ್ನ ಪ್ರೇಯಸಿ ಸಿಂಗಾರಿಯನ್ನು ಕೂಡಲು ಪಟ್ಟ ಪರಿಶ್ರಮ ಮತ್ತು ಹವಣಿಕೆಗಳು ನಾಟಕದಲ್ಲಿ ತುಂಬ ಕಾವ್ಯಮಯವಾಗಿ ಚಿತ್ರಿತವಾಗಿವೆ. ಶ್ರೀ ವಾಜಪೇಯಿಯವರು ಉತ್ತರ ಕರ್ನಾಟಕದ ಭಾಷೆಯನ್ನು ಎಷ್ಟು ಸಮರ್ಥವಾಗಿ ದುಡಿಸಿಕೊಳ್ಳಬಲ್ಲರೆಂದರೆ 'ದೊಡ್ಡಪ್ಪ' ಕೃತಿ ಒಂದು ಸುಂದರ ಕಾವ್ಯಾನುಭವವನ್ನು ನೀಡಿ ರಸೋತ್ಕರ್ಷವನ್ನುಂಟುಮಾಡುತ್ತದೆ. ಆದರೆ ಮೂಢನಂಬಿಕೆಗಳ ವಿರುದ್ಧ ಬಂಡೇಳುವ 'ಸತ್ಯ ಸಾಯುವದಿಲ್ಲ' ಎಂಬ ಯುವಧ್ವನಿ ಹಲ್ಲೆಗೊಳಗಾಗಿ ಕುಸಿದು ಬಿಡುವುದರಿಂದ ಆ ಮಾತು ಬರೀ ಘೋಷಣೆಯ ಮಟ್ಟದಲ್ಲೇ ಉಳಿದು ಲೇಖಕರ ಉದ್ದೇಶ ಫಲಕಾರಿಯಾಗುವದಿಲ್ಲ.

ರಂಗ ಪ್ರದರ್ಶನದ ದೃಷ್ಟಿಯಿಂದ ಹೇಳಬೇಕೆಂದರೆ: ಮುದುಕ-ಯುವಕರ ಸಂಭಾಷಣೆಯಿಂ ರಂಗರೂಪ ಪಡೆಯುತ್ತ ಹೋಗುವುದರಿಂದ ನಾಟಕ ಸರ್ವೇಸಾಮಾನ್ಯರನ್ನೂ ಮುಟ್ಟುತ್ತದೆ. ಸಂಗೀತ, ಅಭಿನಯ ಬೆಳಕು, ಧ್ವನಿಗಳಿಗೆ ಇಲ್ಲಿ ವಿಪುಲ ಅವಕಾಶ ಇರುವುದರಿಂದ ಪ್ರಯೋಗದ ಯಶಸ್ಸಿನ ಬಗ್ಗೆ ಸಂದೇಹವೇ ಉಳಿಯುವದಿಲ್ಲ.

ಶ್ರೀ ವಾಜಪೇಯಿಯವರು ಇನ್ನೆರಡು ನಾಟಕಗಳನ್ನು ಬರೆದಿದ್ದಾರೆ. ಒಂದು **'ಪುಲಪೇಡಿ'** ಮತ್ತೊಂದು ಜರ್ಮನ್ ನಾಟಕ (ಬ್ರೆಕ್ಟನ) 'ದಿ. ಕಕೇಶಿಯನ್ ಚಾಕ್ ಸರ್ಕಲ್'ದ ಕನ್ನಡ ರೂಪಾಂತರ **'ಧರ್ಮಪುರಿಯ ಶ್ವೇತನೃತ್ತ.'** ಅವರ ಬೆಳವಣಿಗೆ ಮೆಚ್ಚುವಂತಹದು. ಆದರೆ ಒಂದು ನಾಟಕದ ಸೊಗಸಾದ ಮಾತುಗಳನ್ನು ಮತ್ತೆ ಮತ್ತೆ ಬೇರೆ ನಾಟಕಗಳಲ್ಲಿಯೂ ಸೇರಿಸಿ ಖುಶಿಪಡುವ ಹವ್ಯಾಸ ಇವರ ಆರೋಗ್ಯಕರ ಬೆಳವಣಿಗೆಯನ್ನು ಕೆಡಿಸುತ್ತದೆ.

೨. **ಅಗ್ನಿರಾಜ :** ಲೇ–ಶ್ರೀ ಚೆನ್ನಣ್ಣ. ವಾಲೀಕಾರ (ಅಕ್ಷರ ಪ್ರಕಾಶನ, ಸಾಗರ)

ವಡ್ಡಾರಾಧನೆಯಲ್ಲಿ ಬರುವ ಕಾರ್ತಿಕ ಋಷಿಯ ಕತೆಯೊಂದನ್ನು 'ಅಗ್ನಿರಾಜ' ಎಂಬ ನಾಟಕ–ರೂಪದಲ್ಲಿ ಇಡೆದು ಕೊಟ್ಟಿದ್ದಾರೆ. ಈ ಬಗೆಯ ಮಾರ್ಪಾಟು ಬಹಳ ಹಳೆಯ ವಿಧಾನ. ಇಷ್ಟನ್ನೇ ಮಾಡಿದ್ದರೆ ಆಕ್ಷೇಪಣೆ ಇದ್ದಿರಲಿಲ್ಲ. ಆದರೆ ಅವರು [೨]"೧೯೭೫ ರಲ್ಲಿ ತುರ್ತುಪರಿಸ್ಥಿತಿ ಸಾರಿದ ಕಾಲಕ್ಕೆ ಸರ್ವಾಧಿಕಾರ ಕೈಗೆ ಬಂದಾಗ ಆಗುವ ಅನಾಹುತ ಮತ್ತು ಭ್ರಷ್ಟ ವ್ಯವಸ್ಥೆಯ ವಿರುದ್ಧ ಯುವ ಮನ ಸಿಡಿದೇಳಿಸಲು ಈ ನಾಟಕ ರಚಿಸಿದ್ದೇನೆ...... ಶಿವಕೋಟ್ಯಾಚಾರ್ಯರಿಂದ ಭಿನ್ನವಾಗಿ ಮಾರ್ಕ್ಸ–ಮಾವೋರ ವಿಚಾರಗಳಿಂದ ಉತ್ತೇಜಿತನಾಗಿ ವ್ಯವಸ್ಥೆಯ ವಿರುದ್ಧ ಸಿಡಿದೇಳಿಸಲು ಪ್ರೇರಿಸಿದ್ದೇನೆ" ಎಂದು ನಿವೇದಿಸಿಕೊಂಡಿದ್ದಾರೆ. ಈ ಪ್ರಯತ್ನ ಮೆಚ್ಚ–ತಕ್ಕದ್ದೇ. ಆದರೆ ಈ ಪ್ರಯತ್ನದಲ್ಲಿ ಇವರು ಯಶಸ್ವಿಯಾಗಿದ್ದಾರೆಯೇ ? ಎಂಬುದು ಪ್ರಶ್ನೆ. ಓದಿದ ಮೇಲೆ ಇಲ್ಲವೆಂದೇ ಹೇಳಬೇಕಾಗುತ್ತದೆ. ಯಾವುದೇ ಒಂದು ವಿಚಾರ ಆ ಪಾತ್ರದ ಅನುಭವದ ಒಂದು ಭಾಗವಾಗಿ ಬರಬೇಕೇ ವಿನಃ ಅದರ ತಲೆಯಲ್ಲಿ ಮುದ್ದಾಂ ಆಗಿ ಮಾರ್ಕ್ಸನನ್ನು ತಂದು ತುರುಕುವುದರಿಂದಲ್ಲ. ವಾಲೀಕಾರರ ಕಾರ್ತಿಕ ಏನು ಮಾತನಾಡಿದರೂ ಬಂಡಾಯದ ಪ್ರಭಾವ ವಲಯದಲ್ಲಿಯೇ ನಿಂತು ಮಾತನಾಡಿದಂತೆನಿಸುತ್ತದೆ. ಇದರಿಂದಾಗಿ ಪಾತ್ರ ಅಸಹಜತೆಯಿಂದ ನರಳುತ್ತದೆ. ಉದಾಹರಣೆಗೆ : ಕಾರ್ತಿಕನ ಈ ಮಾತು ನೋಡಿ [೩]"ನಾವು ಊರೂರು ತಿರುಗೋಣ ಜನ ಜಾಗೃತಿ ಮಾಡೋಣ ಜನರಿಗೆ ಸತ್ಯ ಯಾವುದು ಸುಳ್ಳು ಯಾವುದು ತಿಳಿಸೋಣ ಅಕ್ಷರ ವಿದ್ಯೆ ಕಲಿಸೋಣ" ಇಂಥ ಮಾತುಗಳು ತುರ್ತುಪರಿಸ್ಥಿತಿಯ ಬರೀಘೋಷಣೆಗಳಂತೆ ಕಳಪೆಯಾಗಿ ಬಿಡುವುದರಿಂದ ಕಾರ್ತಿಕ ಸೋಲುವುದು ಆ ಪಾತ್ರ ಪರಿಪೋಷಣೆಯ ವಿಫಲತೆಯಿಂದಾಗಿ–ಎನಿಸುತ್ತದೆ.

---

೨. ಅಗ್ನಿರಾಜ : ಲೇ—ಶ್ರೀ ಚೆನ್ನಣ್ಣ ವಾಲೀಕಾರ; ನಾಟಕಕಾರನ ನಿವೇದನೆ.

೩. ಅದೇ : ,, ,, ಪುಟ ೩೮.

ಮೂಲ ಕಥೆಯಲ್ಲಿ ಅಗ್ನಿರಾಜ ತನ್ನ ಮಗಳನ್ನೇ ಮದುವೆ ಮಾಡಿಕೊಂಡ ಸಂಗತಿಗೆ ಮಗನೂ-ಮೊಮ್ಮಗನೂ ಆದ ಕಾರ್ತಿಕ ಹೇಸಿಗೆಪಟ್ಟು ವೈರಾಗ್ಯ ತಾಳಿ ತಪಕ್ಕೆ ಹೋಗುವ ವಿಚಾರವಿದ್ದರೆ, ನಾಟಕದಲ್ಲಿ ಈ ರಾಕ್ಷಸ ಪ್ರವೃತ್ತಿಗೆ ಪ್ರತಿಘಟಿಸಿ ನಿಂತರೂ ೪"ಒಂಟಿ ಪ್ರಯತ್ನಕ್ಕೆ ಕ್ರಾಂತಿ ಎಂತು ಎಂತು ಬರುವುದೋ... ಪೂರ್ಣ ಕ್ರಾಂತಿ...ಭ್ರಾಂತಿ ಆಗ್ಯಾದೋ" ಎಂಬ ಹಾಡಿನಿಂದ ಕೊನೆಗೊಳ್ಳುವುದರಿಂದ ನಾಟಕದ ಉದ್ದೇಶದ ಒಳದನಿಯೂ ಸೋತುಬಿಡುತ್ತದೆ. ನಾಟಕವು ಕಥನ ಕ್ರಮ ದಲ್ಲಿದ್ದು; ನಾಟಕದ ಜೀವಾಳವಾದ ಅಭಿನಯ, ದ್ವಂದ್ವ, ಘರ್ಷಣೆಗಳಿಗೆ ಅಷ್ಟವಕಾ ಸಿಗದೇ ನಾಟಕ ಪ್ರದರ್ಶನದಲ್ಲಿ ಅಯಶಸ್ವಿಯಾಗುತ್ತದೆ. ಆದರೆ ಒಂದು ಮಾತು ಮಾತ್ರ ನಿಜ. ಶ್ರೀ ಪಾಲೀಕಾರರು ಮನಸ್ಸು ಮಾಡಿದರೆ ಒಳ್ಳೆಯ ನಾಟಕಗಳನ್ನು ಕೊಡಬಲ್ಲರು.

೩. **ಹರಕೆಯ ಕುರಿ:** (ಲೇ–ಡಾ॥ ಚಂದ್ರಶೇಖರ ಕಂಬಾರ, ವರ್ಧಮಾನ ಪ್ರಕಾಶನ, ಬೆಂಗಳೂರು)

ಇದು ಪ್ರಸಕ್ತ ವರ್ಷದ ನಾಟಕಗಳಲ್ಲಿ ಇನ್ನೊಂದು ವಿಶಿಷ್ಟ ಕೃತಿ. ಮಧ್ಯಮ ವರ್ಗದ ದುಡಿಯುವ ಹೆಣ್ಣು ಸರೋಜ ಮತ್ತು ಭಾವಜೀವಿ ಪ್ರಕಾಶಕರ ತೃಪ್ತ ಆದರೆ ಪ್ರಚಲಿತ ರಾಜಕೀಯಕ್ಕೆ ನಿರ್ಲಿಪ್ತರಾದ ದಂಪತಿಗಳನ್ನು ಗುಂಪುಗಾರಿಕೆಯ ಅರ್ಥವಾಗದ ರಾಜಕೀಯ ಹೇಗೆ ಉಸಿರು ಕಟ್ಟಿಸುತ್ತದೆ: ಮಾನವೀಯ ಮೌಲ್ಯಗಳನ್ನೆಲ್ಲ ಗಾಳಿಗೆ ತೂರಿ ನಿಂತು ಕ್ಷಣ ಕ್ಷಣಕ್ಕೂ ಹೇಗೆ ಸದ್ದು ಹೊಡೆಯುತ್ತದೆ: ಈ 'ಆಕ್ಟೋಪಸ್' ಹಿಡಿತಕ್ಕೆ ಸಿಕ್ಕು ಹಾವಿನ ಹೆಡೆಯ ನೆರಳಲ್ಲಿ ವಾಸಿಸುವ ಕಪ್ಪೆಯ ಹಾಗೆ ಅರಿವಿಲ್ಲದೆ ವಾಸಿಸುವ 'ಸಿದ್ಧಲಿಂಗು' ನಂತವರೂ ಕೊನೆಯಲ್ಲಿ ಹೇಗೆ 'ಹರಕೆಯ ಕುರಿ'ಗಳಾಗುತ್ತಾರೆ ಎಂಬುದರ ಬಗ್ಗೆ ನಾಟಕ ಬೆಳಕು ಚೆಲ್ಲುತ್ತದೆ. ಸ್ವತಃ ಡಾ॥ ಕಂಬಾರರೇ ಈ ನಾಟಕವಲ್ಲಿ ೫"ಖಾಸಗಿ ಯೆಂದು ಭ್ರಮಿಸಿದ್ದ ಮನೆ ಸಾರ್ವಜನಿಕವಾಗುತ್ತ—'ಹರಕೆಯ ಕುರಿ'ಯ ಬಲಿ ಯಿಂದ ಈ ಮನೆಯಲ್ಲೊಂದು ಬೆಳಕು ಮೂಡುತ್ತದೆ. ನಮ್ಮ ಬದುಕಿಗೆ ಇದು ಪ್ರಾರಂಭವಾಗಬೇಕು. ಇದು ಈ ನಾಟಕದ ಉದ್ದೇಶ" ಎಂದಿದ್ದಾರೆ. ಆದರೆ ಇದನ್ನು ಮೀರಿ ಕಂಬಾರರು ನಮ್ಮನ್ನು ಒಂದು ಪ್ರಜ್ಞಾವಂತ ಸ್ತರಕ್ಕೆ ಒಯ್ದು ನಿಲ್ಲಿಸುತ್ತಾರೆ. ಉದಾಹರಣೆಗೆ : ಸಿದ್ಧಲಿಂಗು ಹೇಳುವ ೬"ಶ್ರೀಕಾಂತಜಿ ರುದ್ರಪ್ಪನ ಶತ್ರುವಾದರೆ ನನಗೆ ಅವರಿಬ್ಬರೂ ಶತ್ರುಗಳು ಇಬ್ಬರೂ ನಮ್ಮ ವಡ್ಡತನದಿಂದಲೇ ಬೆಳೆದವರು........ಶ್ರೀಕಾಂತಜೀ ಗುಂಡಿನಿಂದ ಸಾಯಬಲ್ಲವನಾಗಿದ್ದ ಸತ್ತ. ಆದರೆ...

೪. ಅಗ್ನಿರಾಜ : ಲೇ—ಶ್ರೀ ಚೆನ್ನಣ್ಣ ವಾಲೀಕಾರ; ಪುಟ ೪೮.
೫. ಹರಕೆಯ ಕುರಿ : ಲೇ—ಡಾ॥ ಚಂದ್ರಶೇಖರ ಕಂಬಾರ, ಪುಟ ೯೯-೧೦೦.
೬. ಅದೇ ,, ,, ಒಂದು ಮಾತು.

ಆ ಉಪ್ಪರಿಗೆ ದೇವರು ರುದ್ರಪ್ಪ ಗುಂಡಿನಿಂದ ಸಾಯೋದಿಲ್ಲ. ರಕ್ತ ಬೀಜಾಸುರ ಇದ್ದ ಹಾಗೆ. ಸಪ್ತ ಸಮುದ್ರ ದಾಟಿ ನಡುಗಡ್ಡೆಯ ಆಲದಮರದ ಪೊಟರೆಯಲ್ಲಿರೋ ಗಿಳಿಯಲ್ಲಿ ತನ್ನ ಜೀವ ಇಟ್ಟಿದ್ದಾನೆ. ಆ ಹಕ್ಕಿ ಎಲ್ಲಿದೆ ಗೊತ್ತಾ ನನ್ನ ನಿನ್ನ ಎದೆಯಲ್ಲಿ ...ಇಂಥವನನ್ನು ಸುಲಭವಾಗಿ ಕೊಲ್ಲೋದು ಸಾಧ್ಯವಿಲ್ಲ: ಕೊಂದರೂ ಅವನ ನೆತ್ತರ ಹನಿ ಬಿದ್ದಲ್ಲೆಲ್ಲಾ ಅವನ ವಂಶದ ಸಾವಿರ ಜನಾ ರಾಕ್ಷಸರು ಹುಟ್ಟುತ್ತಾರೆ. ಅವನನ್ನು ಈ ತನಕ ಪೋಷಿಸುತ್ತಿದ್ದ ನಾವೆಲ್ಲ ನಾಲಿಗೆ ಚಾಚಿ ಕೊಂದು ನೆಲಕ್ಕೆ ಬೀಳದ ಹಾಗೆ ಕುಡಿಯಬೇಕು." ಈ ಮಾತುಗಳು ನಮ್ಮ ರಾಜಕೀಯ ಎಷ್ಟು ದೈತ್ಯಶಕ್ತಿಯಾಗಿ ಬೆಳೆದಿದೆ; ಮತ್ತು ಅದನ್ನು ಪೋಷಿಸುತ್ತ ಬಂದವರು ಯಾರು ಎಂಬುವರತ್ತ ದಿಕ್ಸೂಚಿಯಾಗಿ ನಿಲ್ಲುತ್ತವೆ. ಪ್ರಚಲಿತ ಆಂದ್ರ ವಿದ್ಯಮಾನಗಳ ಬೆಳಕಿನಲ್ಲಂತೂ ಈ ಮಾತುಗಳು ಮತ್ತೊಮ್ಮೆ ಥಳಥಳಿಸುತ್ತವೆ.

ಈ ನಾಟಕಕ್ಕೆ ಮುನ್ನುಡಿ ಬರೆದ ಖ್ಯಾತ ವಿಮರ್ಶಕರಲ್ಲೊಬ್ಬರಾದ ಶ್ರೀ ಕೀರ್ತಿನಾಥ ಕುರ್ತಕೋಟಿಯವರು[೭] "ಕಂಬಾರರ ಈ ನಾಟಕ ಕನ್ನಡದಲ್ಲಿ ಮಹತ್ವದ ಪಾತ್ರವಹಿಸಬಲ್ಲುದೆಂದು ನನ್ನ ನಂಬಿಕೆಯಾಗಿದೆ" ಎಂದು ಹೇಳಿ ಅದಕ್ಕೆ ಕಾರಣವನ್ನು ಕೊಡುತ್ತ[೮] "ತಮ್ಮ ವಾಡಿಕೆಯ ಗೌಡ, ಸೂಳೆ ಮತ್ತು ಮಿಂಡರ ಜಗತ್ತನ್ನು ಬಿಟ್ಟು ಕಂಬಾರರು ಇನ್ನೂ ಹೆಚ್ಚು ಪರಿಷ್ಕೃತವಾದ ಮತ್ತು ಹೆಚ್ಚು ನಿರ್ದಯವಾದ ರಾಜಕೀಯದ ಲೋಕವನ್ನು ಪ್ರವೇಶಿಸಿದ್ದು" ಎಂದಿದ್ದಾರೆ. ಈ ಮಾತನ್ನು ಇದ್ದಕ್ಕಿದ್ದಂತೆ ಒಪ್ಪಬಹುದಾದರೂ ಕಂಬಾರರ ಇನ್ನುಳಿದ ನಾಟಕಗಳಾದ ಜೈಸಿದನಾಯಕಾ, ಜೋಕುಮಾರಸ್ವಾಮಿ ಮುಂತಾದ ನಾಟಕಗಳ ಭಾಷೆಯಂತೆ ಇದು ನಮ್ಮನ್ನು ತಟ್ಟುವುದೇ ಇಲ್ಲ.

ಈಗಾಗಲೇ ಇದು ಬೆಂಗಳೂರಿನ 'ರಂಗ ಸಂಪದ'ದ ಕಲಾವಿದರಿಂದ ಪ್ರಯೋಗಗೊಂಡು ಯಶಸ್ಸು ಪಡೆದದ್ದರಿಂದ ಪ್ರದರ್ಶನದ ಬಗ್ಗೆ ಬೇರೆ ಹೇಳಬೇಕಾದ್ದಿಲ್ಲ.

೪. **ಕುದುರೆ ಬಂತು ಕುದುರೆ :** (ಲೇ–ರಾಮಚಂದ್ರದೇವ ಮತ್ತು ಟಿ. ಎನ್. ನರಸಿಂಹನ್–ಪ್ರಕಾಶನ : ಸಂಯುಕ್ತ ಡಿ. ವಿ. ಜಿ. ಸಿವಿಕ್ ಸೆಂಟರ್, ಗೋಖಲೆ ಸಾರ್ವಜನಿಕ ಸಂಸ್ಥೆ, ಬೆಂಗಳೂರು)

ಪಲಾಯನವಾದಿಯಾದ ಗಂಡನಿಂದ ಸಂಸಾರಸುಖಕ್ಕೆ ಎರವಾಗಿ, ಆದರೂ ಅವನ ಆಗಮನವನ್ನೇ ಎದುರುನೋಡುತ್ತ, ಮಗುವಿನ ಹುಡುಗಾಟಿಕೆಯಲ್ಲಿ ಸುಖ

೭. ಹರಕೆಯ ಕುರಿ : ಲೇ—ಡಾ॥ ಚಂದ್ರಶೇಖರ ಕಂಬಾರ, ಮುನ್ನುಡಿ.
ಶ್ರೀ ಕೀರ್ತಿನಾಥ ಕುರ್ತಕೋಟಿ, ಪುಟ-೬

೮. ಅದೇ ,, ,, ,, ಪುಟ ೬.

ಪಡುತ್ತ ಯಾವುದೋ ಆಂತರಿಕ ಶಕ್ತಿಯಿಂದಲೇ ಹೋಟೆಲ್ಲೊಂದನ್ನು ನಡೆಸುತ್ತಿರುವ ಹೆಣ್ಣು-ತಾಯಿ; ಸಿನಿಮಾ ಪ್ರಪಂಚದ ಭ್ರಮೆಗಳಲ್ಲಿಯೇ ಯಾವಾಗಲೂ ಸುತ್ತುತ್ತ ಕೊನೆಗೆ ಆ ಭ್ರಮೆ ನಿರಸನವಾಗಿ ಬಿಟ್ಟುಬಂದ ಹೆಂಡತಿ ಮಕ್ಕಳನ್ನು ನೆನಪಿಸಿ ಹೊರ ಡುವ ಸಿನಿಮಾ ನಟ; ಟೊಳ್ಳು ಶ್ರೀಮಂತಿಕೆಯ ಹುಚ್ಚಿನಲ್ಲಿ ವಿಜೃಂಭಿಸುವ ಪೋಸ್ಟ ಮನ್, ಲಾಟರೀ-ವರ್ಗಾವಣೆಯ ಗುಂಗಿನಲ್ಲಿ ಸುಖಪಡುವ ಕ್ಲಾರ್ಕ, ಜೀವನಾದರ್ಶ ಗಳನ್ನೇ ಕಚ್ಚಿಕುಳಿತ ಮೇಷ್ಟ್ರು, ಇವರೆಲ್ಲರನ್ನು ಬಾಲ್ಯಸಹಜ ಮುಗ್ಧತೆಯಿಂದಲೇ ಸಾಕ್ಷಿಕವಾಗಿ ನೋಡುವ ಕನಸುಣಿಯಾದ ಹುಡುಗ, ಇದಾವುದಕ್ಕೂ ತಲೆ ಕೆಡಿಸಿ ಕೊಳ್ಳದೆ ತನ್ನ ವ್ಯವಹಾರ ಚಾತುರ್ಯವನ್ನು ಮೆರೆಯುವ ಹಾಲಿನವ ಮುಂತಾದವ ರಿಂದ ನಾಟಕ ವಾಸ್ತವ ಬದುಕಿನ ಸುತ್ತ ಹೆಣೆದ ಕತೆಯಾಗಿದೆ.

ಇಲ್ಲಿಯ ಬಹುತೇಕ ಪಾತ್ರಗಳು ಭ್ರಮೆಗಳಲ್ಲೇ ತೊಳಲಾಡುವುದರಿಂದ ಇಲ್ಲಿ ಬರುವ ಕೀಲುಕುದುರೆಯ ಕಲ್ಪನೆ ಸಾಂಕೇತಿಕವಾಗಿ ಬಂದು ನಾಟಕದ ಕಲಾತ್ಮಕತೆ ಯನ್ನು ಹೆಚ್ಚಿಸಿದೆ. ಆದರೆ ನಾಟಕದ ಬಹುತೇಕ ಕ್ರಿಯೆ ನಡೆಯುವುದು ಹೊಟೆಲ್ಲಿ ನಲ್ಲೇ. ಆದುದರಿಂದ ಹೆಚ್ಚೆಚ್ಚು ಘಟನಾವಳಿಗಳಿಗೆ ಅವಕಾಶ ಸಿಗದೇ ಪ್ರದರ್ಶನದ ಯಶಸ್ಸಿಗೆ ಹೆಚ್ಚು ಶ್ರಮಪಡ ಬೇಕಾಗಬಹುದು. ಈಗಾಗಲೇ ಇದೂ ಕೂಡ ಬೆಂಗಳೂರಿನ ಜನಪದ ರೆಪರ್ಟರಿ ಕಲಾವಿದರಿಂದ ಪ್ರಯೋಗ ಕಂಡಿದೆ.

೨. ಅನುವಾದಗಳು :

ಕಳೆದ ವರ್ಷದ (೧೯೮೩) ಅನುವಾದಿತ ನಾಟಕಗಳಲ್ಲಿ ನಾಲ್ಕು ಕೃತಿಗಳು ಮುಖ್ಯವೆನಿಸುತ್ತವೆ. ೧) ಅಂಜಿ ೨) ಮಾಡು ಸಿಕ್ಕದಲ್ಲಾ ೩) ಕನ್ನಡ ಉತ್ತರ ರಾಮಚರಿತೆ ೪) ನಿಜದ ನೆಲೆ ನಿಜಕ್ಕಿಲ್ಲ.

೧. **ಅಂಜಿ :** (ಮೂಲ-ಮರಾಠಿ: ವಿಜಯ ತೆಂಡುಲಕರ; ಅನು-ಶ್ರೀ ಸಿದ್ಧಲಿಂಗ ಪಟ್ಟಣಶೆಟ್ಟಿ; ಅನನ್ಯ ಪ್ರಕಾಶನ, ಬೆಂಗಳೂರು)

ಹೆಸರೇ ಸೂಚಿಸುವಂತೆ ಅಂಜಿಯೇ ಈ ನಾಟಕದ ಕಥಾನಾಯಕಿ. ತನ್ನ ಸರೀಕ ರೆಲ್ಲರ ಮದುವೆಯಾಗಿ ಹೋಗಿದ್ದರೂ ಇನ್ನೂ ಮದುವೆಯ ಕನಸುಣಿಯಾಗಿ ವರಾನ್ವೇಷಣೆಯ ಗುಂಗಿನಲ್ಲಿಯೇ ಗಸ್ತು ಹೊಡೆಯುವ ಸ್ಥಿತಿ ಇವಳದಾಗಿದೆ. ಮದುವೆಗಾಗಿ ಅವಳು ಪಡುವ ಪರಿಶ್ರಮ: ತೋರುವ ಆಸಕ್ತಿ ಅಪಾರ. ಅದರೇನು? ತಮ್ಮ ತಮ್ಮ ತೆವಲುಗಳಿಗಾಗಿಯೇ ಹಾತೊರೆಯುವ ತಂದೆ, ಆಯಿ, ಸಹೋದ್ಯೋಗಿ ಪ್ರಭುಣೆ ಹೀಗೆ ಎಲ್ಲರೂ ಅವಳ ಬಗ್ಗೆ ಅಸಡ್ಡೆ ತಾಳಿದವರೇ.

ಒಟ್ಟಾರೆ ನಾಟಕದಲ್ಲಿ ಅಂಜಿಯ 'ಅಸಾಯ'ಕತೆಯನ್ನು ಚಿತ್ರಿಸುವುದರ ಜೊತೆಗೆ ಅವಳ ಭಾವನೆಯ ವಳದಳಗಳನ್ನು ಬಿಡಿಸಿಡಲಾಗಿದೆ. ಆದರೆ ಕನ್ನಡಸಾಹಿತ್ಯ

ವಲ್ಲಿ ಇಂಥ ವಸ್ತು ಈಗಾಗಲೇ ಪಳಸಲಾದ್ದರಿಂದ ಶ್ರೀ ಪಟ್ಟಣಶೆಟ್ಟಿಯವರು ಈ ನಾಟಕವನ್ನು ಅನುವಾದಿಸುವುದರ ಔಚಿತ್ಯ ಗೊತ್ತಾಗುವುದಿಲ್ಲ. 'ಅಲೆಗಳಲ್ಲಿ ರಾಜ ಹಂಸಗಳು,' 'ಸೂರ್ಯಾಸ್ತದಿಂದ ಸೂರ್ಯೋದಯುವವರೆಗೆ,' 'ಅಂಧಯುಗ,' 'ಆಧೇ ಅಧೂರೆ' 'ಆಷಾಢದ ಒಂದು ದಿನ,' 'ಬೇರಿಲ್ಲದವರು', 'ಹಾಸಿಗೆ' ಮುಂತಾದ ಹಿಂದೀ, ಉರ್ದು, ಮರಾಠಿ ಮೂಲ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ; ಅನುವಾದ ಕಲೆಯಲ್ಲಿ ಸಿದ್ಧಹಸ್ತರಾದ ಇವರ 'ಅಂಜಿ' ಯಿಂದ ಹೊಸದೇನನ್ನೂ ಅಪೇಕ್ಷಿಸುವಂತಿಲ್ಲ. ಸ್ವತಂತ್ರ ಕೃತಿಗಳನ್ನು ನೀಡಬಲ್ಲ ಎಲ್ಲ ಸಾಮರ್ಥ್ಯ ಇವರಲ್ಲಿದ್ದೂ ಬರೀ ಅನುವಾದವಲ್ಲೇ ತೃಪ್ತಗೊಳ್ಳುತ್ತಿರುವುದರ ಕಾರಣ ತಿಳಿಯದಾಗಿದೆ. ಇನ್ನೊಂದು ಅಂಶವೆಂದರೆ : ಮೂಲ ನಾಟಕದಲ್ಲಿ ಇಡೀ ನಾಟಕವನ್ನು ಸೂತ್ರಧಾರನೇ ಆಕ್ರಮಿಸಿ ತಲೆ ಚಿಟ್ಟೆಬ್ಬಿಸುವವನ್ನು ಅನುವಾದದಲ್ಲಿ ಸಿ.ಪ. ಅವರು ಸ್ವಲ್ಪ ಕಲಾತ್ಮಕತೆ ತೋರಿದ್ದರೆ ತಪ್ಪಿಸಬಹುದಾಗಿತ್ತು. ಈಗಾಗಲೇ ಇದು 'ಕಲಾ ದೇಗುಲ'ದವರಿಂದ ಪ್ರಯೋಗಗೊಂಡಿದ್ದರೂ ನಾಟಕದ ವಸ್ತುವಿನಲ್ಲಿ ಅಂಥ ವಿಶಿಷ್ಟತೆ ಇಲ್ಲದೇ ಇರುವುದರಿಂದ ಪ್ರಯೋಗದ ಯಶಸ್ಸಿಗೆ ನಿರ್ದೇಶಕ ಬಹಳ ಪ್ರಯಾಸಪಡಬೇಕಾಗಬಹುದು.

೨. **ಮೂಡು ಸಿಕ್ಕದಲ್ಲ** : (ಮೂಲ–ಮರಾಠಿ–ವಿಜಯ ತೆಂಡಲ್ಕರ
ಅನು–ಹೇಮಾ, ಅನನ್ಯ ಪ್ರಕಾಶನ, ಧಾರವಾಡ)

ಅನುವಾದಕರಾಗಿ ಈ ನಾಟಕಕ್ಕೆ ಹೇಮಾ ಅವರಿಟ್ಟ ಹೆಸರು 'ಜಾತಿಯೇ ಸರ್ವಸ್ವ'. ಅದರೆ ನಿರ್ದೇಶಕ ಆರ್. ನಾಗೇಶ ಅವರು 'ಮೂಡು ಸಿಕ್ಕದಲ್ಲಾ' ಎಂದು ಬದಲಿಸಿಕೊಂಡು ಪ್ರಯೋಗಿಸಿದರು. ನಾಟಕದ ವಸ್ತುವಿನ ದೃಷ್ಟಿಯಿಂದ ಇದೇ ಹೆಸರು ಸಮಂಜಸವೆನಿಸುತ್ತದೆ.

ಈ ನಾಟಕದ ನಾಯಕ ಮಹಾಪತಿ ಬಭ್ರುವಾಹನ ಪ್ರೆಸ್ಸೊಂದರಲ್ಲಿ ದುಡಿಯುತ್ತಲೇ ಎಂ. ಎ. ಪಾಸು ಮಾಡಿ ಇದೇ ಕಾರಣಕ್ಕೆ ಇದ್ದ ಆ ಸಣ್ಣ ನೌಕರಿಯನ್ನು ಕಳೆದುಕೊಂಡು ತಿರುಗುವುದು ಇಂದಿನ ದಿನಗಳ ಒಂದು ವಿಚಿತ್ರ ಸತ್ಯ. ಆದರೂ ಮುಂದೆ ಏನೆಲ್ಲ ಪ್ರಯಾಸಪಟ್ಟು ಹಳ್ಳಿಯ ಕಾಲೇಜೊಂದರಲ್ಲಿ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸುವ ಆಸೆಹೊತ್ತು ಹೋದರೆ ಅಲ್ಲಿಯ ಆಡಳಿತಮಂಡಳಿಯ ಕ್ರೂರ ವ್ಯವಸ್ಥೆಯ ಅಡಿಯಲ್ಲಿ ಸಿಕ್ಕು ನರಳುವ ಶೋಚನೀಯ ಸ್ಥಿತಿ. ಕೊನೆಗೊಮ್ಮೆ ಈ ಬಡಪಾಯಿ ತಾನೂ ಆ ವ್ಯವಸ್ಥೆಯ ಒಂದು ಭಾಗವಾಗಲು ಶತಪ್ರಯತ್ನ ಮಾಡಿ ಸಾಧ್ಯವಾಗದೇ ಎಲ್ಲಿಯೂ ಮೂಡು ಸಿಗದೇ ಸೋತು ಸುಣ್ಣವಾಗಿ ಹೋಗುವ ಸಂಗತಿ ಒಂದು ಕಡೆ ಚಿತ್ರಿತವಾಗಿದ್ದರೆ; ಇನ್ನೊಂದು ನಿಟ್ಟಿನಲ್ಲಿ ಇಂದಿನ ನಮ್ಮ

ಕಾಲೇಜುಗಳ ದುಸ್ಥಿತಿ; ಅಜ್ಞ ಆಡಳಿತ ಮಂಡಳಿಗಳ ಆಕ್ಟೋಪಸ್ ಹಿಡಿತ, ಪ್ರಿನ್ಸಿಪಾಲರುಗಳ ನಿರ್ವೀರ್ಯತೆ; ಅಸಂಗತ. ಇಂಟರವ್ಹ್ಯೂ ವಿಧಾನ ವಿದ್ಯಾರ್ಥಿಗಳ ವಿಕೃತ ಬದುಕು. ಶಿಕ್ಷಣದ ನಿರರ್ಥಕತೆ ಇತ್ಯಾದಿಗಳ ಮೇಲೆಲ್ಲ ನಾಟಕ ಕ್ಷ-ಕಿರಣ ಹಾಯಿಸುತ್ತದೆ.

ನಮ್ಮ ಇಂದಿನ ಶಿಕ್ಷಣ ಎಷ್ಟು ಅರ್ಥಹೀನವಾದದ್ದೆಂದರೆ : ⁶"ಎಂ. ಎ.ದ ಪುಸ್ತಕ ಮತ್ತು ನೋಟ್ಸಿನ ಪ್ರತಿಗಳನ್ನು ಮಾರಿ ಸ್ಟ್ಯಾಂಪಿನ ಖರ್ಚು ನೀಗಿಸಿದೆ. ಅಂತೂ ಇವತ್ತಿನ ಶಿಕ್ಷಣ ಸಂಪೂರ್ಣ ನಿರರ್ಥಕ ಅಂತಾಗಲಿಲ್ಲ" ಎಂಬ ಮಹಾಪತಿಯ ಮಾತಿನ ವ್ಯಂಗ್ಯ ಯಾರನ್ನೂ ಹೊಕ್ಕಿರಿಯುತ್ತದೆ. ಆದರೆ ಮಹಾಪತಿಯ ಪಾತ್ರ (ಪ್ರಾಧ್ಯಾಪಕನಾದ ಮೇಲೆ) ಒಮ್ಮೊಮ್ಮೆ ಹದ್ದುಮೀರಿ ವರ್ತಿಸುವುದರಿಂದ ನಾಟಕ ಕುಂಟುತ್ತದೆ. ಇದು ಮೂಲ ನಾಟಕದ ದೋಷವೆಂದು ಕೈಬಿಟ್ಟರೂ ಇಂಥ ವಸ್ತುವೂ ಕನ್ನಡಕ್ಕೆ ಹೊಸದಲ್ಲವಾದುದರಿಂದ ಶ್ರೀ ಪಟ್ಟಣಶೆಟ್ಟಿಯವರ ಬಗ್ಗೆ ಹೇಳಿದ ಮಾತನ್ನೇ ಇವರ ಬಗ್ಗೆಯೂ ಹೇಳಬೇಕಾಗುತ್ತದೆ. ಇದು ಕೂಡಾ ಈಗಾ ಗಲೇ ಬೆಂಗಳೂರಿನ ಗ್ಲೋಬ್ ಥಿಯೇಟರ್ಸ ಅವರಿಂದ ರಂಗ ನಿಕಷಕ್ಕೆ ಒಳಗಾದ ಕೃತಿ. ಯಶಸ್ವಿಯಾಗಿ ಪ್ರಯೋಗಿಸಬಹುದಾದ ಘಟನಾವಳಿಗಳಿವೆ.

೩. **ಕನ್ನಡ ಉತ್ತರರಾಮಚರಿತೆ :** (ಮೂಲ-ಸಂಸ್ಕೃತ ಭವಭೂತಿ.
ಕನ್ನಡಕ್ಕೆ-ಸಿ.ಪಿ.ಕೆ: ಪ್ರಕಾಶನ-ವಾಗ್ದೇವಿ ಪುಸ್ತಕಗಳು-ಮೈಸೂರು)

ಸಂಸ್ಕೃತಮಯ ನಾಟಕವಿದು. ರಾಮಾಯಣದ ಉತ್ತರಾರ್ಧವೇ ಇದರ ಕಥಾ ವಸ್ತು. ದೊರೆ ದಶರಥ ಶಾಂತೆಯೆಂಬ ಮಗಳನ್ನು ರೋಮಪಾದಮುನಿಗೆ ಸಾಕು ಮಗಳಾಗಿ ಕೊಟ್ಟಿದ್ದಾನೆ. ಅವಳನ್ನು ವಿಭಾಂಡಕನ ಮಗ ಋಷ್ಯಶೃಂಗ ಮದುವೆ ಯಾಗಿದ್ದಾನೆ. ಆ ಋಷ್ಯಶೃಂಗ ಹನ್ನೆರಡು ವರ್ಷಗಳ ಯಾಗವೊಂದನ್ನು ಆರಂಭಿಸಿದ ಪ್ರಯುಕ್ತ ವಶಿಷ್ಟ, ಅರುಂಧತಿ ಇವರ ನೇತೃತ್ವದಲ್ಲಿ ರಾಮನ ತಾಯಂದಿರು ಬೇರೆ ರಾಣಿಯರು ತುಂಬು ಗರ್ಭಿಣಿಯಾದ ವೈದೇಹಿಯನ್ನು ಬಿಟ್ಟು ಹೋಗಿದ್ದಾರೆ. ಇದರಿಂದ ಸೀತೆ ಚಿಂತಿತಳಾಗಿದ್ದಾಳೆ. ಇದೇ ಅವಧಿಯಲ್ಲಿ ಅವಳ 'ಅಗ್ನಿಶುದ್ಧಿ'ಯ ಬಗ್ಗೆ ಜನರಲ್ಲಿ ಅಪನಂಬಿಕೆ ಹುಟ್ಟುವುದರೊಂದಿಗೆ ಆರಂಭಗೊಳ್ಳುವ ಈ ನಾಟಕ ಲಕ್ಷ್ಮಣ ಚಿತ್ರಪಟದಲ್ಲಿ ರಾಮಾಯಣದ ಪ್ರಮುಖ ಘಟನೆಗಳನ್ನು ತೋರಿಸುವದು. ಸೀತೆಯ ಬಯಕೆಯ ನೆಪ ಮುಂದೆ ಮಾಡಿ ಅವಳನ್ನು ಅಡವಿಗಟ್ಟುವುದು. ಅಲ್ಲಿಯೇ ಆಕೆ ಲವ-ಕುಶರನ್ನು ಹಡೆಯುವದು. ರಾಮ ಅಶ್ವಮೇಧಯಜ್ಞ ಮಾಡುವದು. ಲವ-ಕುಶರಿಂದ ಸೋಲನ್ನನುಭವಿಸುವದು ಮತ್ತೆ ರಾಮ-ಸೀತೆಯರ ಸಮಾಗಮ

೬. ಮಾಡು ಸಿಕ್ಕದಲ್ಲಾ : ಅನು—ಹೇಮಾ. ಪುಟ ೨೮

ವಾಗುವವು. ಹೀಗೆ ಬೆಳೆಯುತ್ತ ಬಂದು ವೈದೇಹಿ ವಸುಂಧರೆಯಲ್ಲಿ ಒಂದಾಗುವುದರೊಂದಿಗೆ ಕೊನೆಗೊಳ್ಳುತ್ತದೆ.

ಇವರ ಈ ಪ್ರಯತ್ನವನ್ನು ನಾಟಕವೆಂಬ ಆಸಕ್ತಿಯನ್ನಿಟ್ಟುಕೊಂಡು ನೋಡಿದಾಗ out dated ಎನಿಸುತ್ತದೆ. ಅರಿಕೆಯಲ್ಲಿ ಅವರೇ ಹೇಳಿದಂತೆ ಈಗಾಗಲೇ ಕನ್ನಡದಲ್ಲಿ ಈ ಕೃತಿಯ ಅನುವಾದಗಳು ಎರಡು ಮೂರಿವೆ. ಹೀಗಿದ್ದೂ ಮತ್ತೆ ಇವನ್ನು ನಾಟ್ಯರೂಪಕ್ಕೆ ಅಳವಡಿಸುವ ಇವರ ಶ್ರಮ ಸಾರ್ಥಕವೆನಿಸುವುದಿಲ್ಲ. ಈ ಕೃತಿ ಒಂದು ಒಳ್ಳೆಯ ಪಠ್ಯವಾಗುವ ಗುಣವನ್ನು ಹೊಂದಿವೆಯೇ ಹೊರತು ಏಳಂಕಿನ ಈ ನಾಟಕವನ್ನು ಪ್ರಯೋಗ ದೃಷ್ಟಿಯಿಂದ ಯೋಚಿಸದಿರುವುದೇ ಒಳ್ಳೆಯದು.

೪. **ನಿಜದ ನೆಲೆ ನಿಜಕ್ಕಿಲ್ಲ :** (ಮೂಲ-ಜರ್ಮನ್ ಲೇ. ಡ್ಯುರೆನ್‌ಮಟ್, ಅನು-ವಿನಾಯಕ ನಾಯಕ. ಪ್ರಕಾಶನ–ಮನೋಹರ ಗ್ರಂಥಮಾಲಾ, ಧಾರವಾಡ)

ತೀರ ಸಂಕೀರ್ಣವಾದ ವಸ್ತುವೊಂದನ್ನು ಒಳಗೊಂಡ ನಾಟಕವನ್ನು ಯಥಾರ್ಥವಾಗಿ ಕನ್ನಡಿಸಲು ಶ್ರೀನಾಯಕ ಅವರು ಬಹಳಷ್ಟು ಶ್ರಮಪಟ್ಟಿದ್ದಾರೆ. ಇಲ್ಲಿ ಸರ್ ಐಜ್ಯಾಕ್ ನ್ಯೂಟನ್, ಆಲ್ಬರ್ಟ ಐನ್‌ಸ್ಟೀನ್ ಮತ್ತು ಮೊಬಿಯಸ್ ಎಂಬ ಮೂವರು ಭೌತವಿಜ್ಞಾನಿಗಳ ಸುತ್ತ ಹೆಣೆದ ಕತೆಯಿದೆ. [೧೦]"ನಮ್ಮ ಜ್ಞಾನವೇ ನಮಗೆ ಬಂಧನವಾಗಿ ನಮಗೆ ಭೀತಿಯನ್ನು ಹುಟ್ಟಿಸುವಷ್ಟು ವಿಕಾರವಾಗಿದೆ. ನಮ್ಮ ಸಂಶೋಧನೆಗಳು ಜೀವನಕ್ಕೆ ಅಪಾಯಕಾರಿಯಾದವೆ.......ಅದು ನಮ್ಮ ಕೂಡ ಸಹಕರಿಸಲಿಲ್ಲ ಮುಟ್ಟಿದರೆ ಮುರಿದು ಬೀಳುತ್ತದೆ. ನಾವು ನಮ್ಮ ಜ್ಞಾನವನ್ನು ತಿರುಗಿ ತೆಗೆದುಕೊಳ್ಳಬೇಕಾಗಿದೆ" ಎಂಬ ನಿರ್ದಿಷ್ಟ ಹಾಗೂ ಸಮಾನ ಉದ್ದೇಶವೊಂದನ್ನಿಟ್ಟುಕೊಂಡು ಈ ಮೂವರು ಹುಚ್ಚರಂತೆ ನಟಿಸುತ್ತ ಹುಚ್ಚರಾಸ್ಪತ್ರೆಯೆಂದು ಭ್ರಮಿಷ್ಟರಾಗಿ ತಪ್ಪಿ ವಿಚಕ್ಷಣಾವಳದ ಮುಖ್ಯ ಕಚೇರಿಯಲ್ಲಿ ಗುಪ್ತವಾಗಿ ತಮ್ಮ ತಮ್ಮ ಸಿದ್ಧಾಂತಗಳನ್ನು ಕುರಿತು ಚರ್ಚಿಸುತ್ತ ಕಾಲ ಕಳೆಯುತ್ತಾರೆ. ತಾವು ಹುಚ್ಚರೆಂದು ಖಾತ್ರೀಮಾಡಿಕೊಡಲು ಮತ್ತು ಅದರಿಂದ ತಮ್ಮ ರಹಸ್ಯ ಬಹಿರಂಗವಾಗಬಹುದೆಂದು ಸಂಶಯ ಬಂದು ಈ ಮೂವರೂ ಭೌತವಿಜ್ಞಾನಿಗಳು ತಲಾ ಒಬ್ಬೊಬ್ಬ ದಾದಿಯರನ್ನು ಕೊಲೆಗೈಯುತ್ತಾರೆ.

ಉದಾಹರಣೆಗೆ ಮೋಬಿಯಸ್‌ನ [೧೧]"ಅಬ್ಬಾ! ಕೊಲ್ಲೋದು ಭಯಂಕರವಾ

೧೦. ನಿಜದ ನೆಲೆ ನಿಜಕ್ಕಿಲ್ಲ : ಅನು—ವಿನಾಯಕ ನಾಯಕ, ಪುಟ ೧೦೧.

೧೧. ಅದೇ ,, ,, ಪುಟ ೧೦೨.

ದದ್ದು ಆದರೆ ಅದಕ್ಕೂ ಭಯಂಕರವಾದ ಕೊಲೆಯನ್ನು ತಪ್ಪಿಸಲೆಂದೇ ನಾನವಳನ್ನು ಕೊಂದದ್ದು ……ರಹಸ್ಯಪ್ರೀತ್ಯರ್ಥವಾಗಿ ಮಾಡಿದ ಬಲಿದಾನಗಳು ನಾವು ಮಾಡಿದ ಜೀವಹತ್ಯೆಗಳು; ಅವೇನು ಕೊಲೆಗಳಲ್ಲ. ಅದಕ್ಕಾಗಿ ನಾವು ಹುಚ್ಚರಾಸ್ಪತ್ರೆಯಲ್ಲೇ ಉಳಿಯಬೇಕು." ಈ ಮಾತುಗಳು ಅಪರ ಕೊಲೆಯ ಹಾಗೂ ನಟನೆಯ ಹಿಂದಿನ ಸತ್ಯವನ್ನು ಬಿಚ್ಚಿ ತೋರಿಸುತ್ತವಲ್ಲದೆ ಮಾನವನ ಅಪರಂಪಾರ ಶಕ್ತಿಯ ಬೆನ್ನಿಗಿರುವ ಅನಾಹುತದ ಕಡೆಗೆ ಬೆರಳು ಮಾಡಿ ತೋರಿಸುತ್ತವೆ.

ನಾಟಕದಲ್ಲಿ; ಕೊನೆಯಲ್ಲಿ ಬರುವ ಪಾತ್ರ (ಡಾಕ್ಟರ) ವೊಂದರ ಬಾಯಿಂದ [೧೨] "ನೀನು ಸುತ್ತಲು ನೋಡುತ್ತಿರೋದು ಹುಚ್ಚರಾಸ್ಪತ್ರೆಯ ಗೋಡೆಗಳಲ್ಲ ನನ್ನ ನಂಬಿಕೆಯ ಭದ್ರಕೋಟೆಯ ಗೋಡೆಗಳು……ನೀವಾಗಿಯೇ ನಿರ್ಮಿಸಿಕೊಂಡಂಥ ಕಾರಾಗ್ರಹದಲ್ಲಿ ನೀವೀಗ ಆಶ್ರಯ ಪಡೆದಿದ್ದೀರಿ ಸೋಲೊಮನ್ ನಿಮ್ಮ ಮುಖಾಂತರವೇ ಯೋಚಿಸಿದನು; ನಿಮ್ಮ ಮುಖಾಂತರವೇ ಕೆಲಸಮಾಡಿದನು ಅವನೇ ಈಗ ನನ್ನ ಮುಖಾಂತರ ಕೆಲಸ ಮಾಡುತ್ತಾನೆ" ಈ ಮಾತುಗಳು ನಾಟಕದ ಉದ್ದೇಶಕ್ಕೆ ಹೊಸ ಆಯಾಮ ನೀಡುತ್ತವೆ. ಈ ನಾಟಕದಲ್ಲಿ ಬರುವ ಹುಚ್ಚರಾಸ್ಪತ್ರೆ: ಸೊಲೋಮನ್ ಇತ್ಯಾದಿಗಳು ಬಹಳ ಅರ್ಥಗರ್ಭಿತವಾದ ಸಂಕೇತಗಳು.

ಇದನ್ನೆಲ್ಲ ಹಿನ್ನೆಲೆಯಾಗಿಟ್ಟುಕೊಂಡು ನೋಡಿದರೆ ೮೩ ನೇ ಸಾಲಿನ ಅನುವಾದಿತ ನಾಟಕಗಳಲ್ಲಿ ಇದು ಒಂದು ವಿಶಿಷ್ಟ ಕೃತಿ ಎಂದೇ ಹೇಳಬೇಕು. ಇಷ್ಟೆಲ್ಲ ಗುಣಾತ್ಮಕ ಅಂಶಗಳಿದ್ದರೂ ವೈಚಾರಿಕ ಮಟ್ಟದಲ್ಲೇ ಸುತ್ತುತ್ತ ತೀರ ಗ್ರಂಥಸ್ಥವಾಗಿ ಬಿಡುವುದರಿಂದ ಮತ್ತು ವಸ್ತು: ತಂತ್ರಗಳ ಭಾರದಿಂದ ನಾಟಕ ಪ್ರದರ್ಶನದಲ್ಲಿ ಸೋಲುತ್ತದೆ.

೩. ರೇಡಿಯೋ ನಾಟಕಗಳು :

೧. ಮುಗಿಲ ಮಾತು : (ಲೇ–ಬನ್ನಂಜೆ ಗೋವಿಂದಾಚಾರ್ಯ: ಜ್ಯೋತಿಷ್ಮತಿ ಪ್ರಕಾಶನ–ಅಜ್ಜರ ಕಾಡು-ಉಡುಪಿ)

ಇದು ೧) 'ಕಾಳಿದಾಸನ ಆತ್ಮಕಥೆ' ೨) 'ಜಡೆ ಹೆಣೆದಳು ಪಾಂಚಾಲಿ' ೩) 'ನಡುವಿನವನ-ಬಿಡುಗಡೆ' ೪) 'ಅಗ್ನಿಮಿತ್ರನಿಗೊಲಿದ ಮಾಲವಿಕೆ.' ಹೀಗೆ ನಾಲ್ಕು ಆಕಾಶ ನಾಟಕಗಳ ಸಂಕಲನ. ಈ ನಾಲ್ಕೂ ನಾಟಕಗಳು ಸಂಸ್ಕೃತ ಕವಿ-ಕಾವ್ಯಗಳನ್ನು ಆಧರಿಸಿ ಬರೆದವುಗಳು. ಇವುಗಳಲ್ಲಿ ಕಾಳಿದಾಸನ ಆತ್ಮಕತೆಯೊಂದನ್ನು ಬಿಟ್ಟರೆ

---

೧೨. ನಿಜವ ನೆಲೆ ನಿಜಕ್ಕಿಲ್ಲ : ಅನು—ವಿನಾಯಕ ನಾಯಕ, ಪುಟ ೧೧೪.

ಉಳಿದ ಮೂರೂ ನಾಟಕಗಳ ವಸ್ತು old wine in the new bottle. 'ಕಾಳಿದಾಸನ ಆತ್ಮಕತೆ' ಮಾತ್ರ ಗಮನಿಸಲೇಬೇಕಾದ ನಾಟಕ. ಕಾಳಿದಾಸನ ಬಗ್ಗೆ ಸಿಗುವ ಕತೆಗಳನ್ನೊಳಗೊಂಡು ಅವನ ಕೃತಿಗಳನ್ನು ಆಧರಿಸಿ ಹೆಣೆದ ಕತೆ ಇದು. ಕಾಳಿದಾಸನು ಬರೀ ಉಜ್ಜಯಿನೀ ಕವಿಯಾಗಿ ಉಳಿಯದೇ ವಿಶ್ವಕವಿಯಾಗಲು ಹಿಮಾಲಯಕ್ಕೆ ಹೊರಟ ಸನ್ನಿವೇಶ; ಅದೇ ಭಾವೋನ್ನತಿಯನ್ನು ಹೊಂದಿ ನಿಂತ ಪ್ರಿಯಂವದೆ ಮತ್ತು ಮಾಲವಿರ ಪ್ರೇರಣೆ ಸ್ಫೂರ್ತಿ; ಅದರ ಪ್ರತಿಫಲವಾಗಿ ರಚನೆಗೊಂಡ ಕಾವ್ಯ-ನಾಟಕಗಳ ವಿಚಾರವನ್ನು ಲೇಖಕರು ಅತ್ಯಂತ ಸೊಗಸಾಗಿ ನಿರೂಪಿಸಿದ್ದಾರೆ. ನಡು ನಡುವೆ ನಿರೂಪಕನ ಸಂಭಾಷಣೆ ಬರುವುದರಿಂದ, ಭಾಷೆ ಅತ್ಯಂತ ತಿಳಿಯಾಗಿರುವುದರಿಂದ ಸಮೂಹ ಮಾಧ್ಯಮಕ್ಕೆ ಅನುಕೂಲವಾಗಿದೆ. ಆದರೆ ಪ್ರಿಯವಂದೆ, ಮಾಲವಿಯರೇ ನಾಟಕವಲ್ಲಿ ಹೆಚ್ಚು ವಿಜೃಂಭಿಸುವುದರಿಂದ ಕಾಳಿದಾಸ ಮತ್ತು ಅವನ ಬದುಕಿನ ಬೇರೆ ಮಗ್ಗುಲುಗಳು ಗೌಣವಾಗಿ ಬಿಡುತ್ತವೆ.

ವಾಸವದತ್ತೆ : (ಲೇ-ಕೃಷ್ಣಮೂರ್ತಿ ಪುರಾಣಿಕ—'ಗಂಗಾತರಂಗ ಪ್ರಕಾಶನ, ಗೋಕಾಕ)

'ರಾಧಾಮಾಧವ', 'ಅಲಖ ನಿರಂಜನ್', 'ಹರ ಓಂ ಶಂಕರ', 'ಊರ್ಮಿಳಾ' ಹೀಗೆ ಇನ್ನೂ ನಾಲ್ಕು ನಾಟಕಗಳನ್ನೂ ಒಳಗೊಂಡ ಸಂಕಲನ ಪುರಾಣಿಕರ ಐದು ನಾಟಕಗಳಲ್ಲಿ ಅಲಖ ನಿರಂಜನ್—ಒಂದನ್ನು ಬಿಟ್ಟು ಉಳಿದವುಗಳೆಲ್ಲಾ ಸಿದ್ಧವಸ್ತುವಿನ ಉತ್ಪಾದನೆಗಳೇ. ಅಲಖ ನಿರಂಜನ ಮಾತ್ರ ಒಬ್ಬ ಅಚ್ಚ ಬೈರಾಗಿಯ ಸುತ್ತ ಬೆಳೆದು ಬಂದ ಪರಿಣಾಮಕಾರೀ ಕತೆ. ಸುಭಗಾ ಎಂಬ ಗರತಿಯೊಬ್ಬಳು ಬೈರಾಗಿಯ ತೇಜಸ್ಸಿಗೆ ಮಾರುಹೋಗಿ ತನ್ನ ಸತೀತ್ವವನ್ನು ಬಲಿಗೊಡಲು ಮುಂದಾದಾಗ ಜೋಗಿ ಅವಳ ಮನಕದಿಯುವವಕ್ಕೆ ಕಾರಣವಾದ ತನ್ನ ಕಣ್ಣುಗಳನ್ನೇ ಕಿತ್ತು ತಂದು ಆ ತೊಗಲಿನ ಕಣ್ಣಿನಿಂದ ಸುಭಗಾಳ (ಜ್ಞಾನದ) ಒಳಗಣ್ಣನ್ನು ತೆರೆಸಿದ ಪ್ರಸಂಗವೇ ಇದರ ಕಥಾವಸ್ತು.

ನೀತಿ-ಬೋಧಕವಾದ ಇಲ್ಲಿಯ ಕಥೆಗಳೆಲ್ಲ ಸಮೂಹ ಮಾಧ್ಯಮಕ್ಕೆ ಹೇಳಿ ಮಾಡಿಸಿದಂತಿವೆ. ಆದರೆ ವಾಸ್ತವದಲ್ಲಿ ಅಲಖ ನಿರಂಜನನಂತಹ ಅಪ್ಪಟ ಬೈರಾಗಿಗಳು ಸಿಗಬಹುದೇ ಎಂಬುದು ಸಂದೇಹ.

ಈ ಸಂಕಲನದ ಒಂದು ವೈಶಿಷ್ಟ್ಯವೆಂದರೆ : ಇಲ್ಲಿಯ ಎಲ್ಲ ನಾಟಕಗಳ ನಾಯಕಿಯರು ಸ್ತ್ರೀಯರೇ. ವೇಶ್ಯೆ ವಾಸವದತ್ತೆ ಬೌದ್ಧ ಭಿಕ್ಷು ಉಪಗುಪ್ತನಿಂದ ಪಾವನವಾದದ್ದು; ಊರ್ಮಿಳೆ ಲಕ್ಷ್ಮಣನಿಂದ ಅಜರಾಮರವಾದದ್ದು—ಹೀಗೆ ಪ್ರಕೃತಿ ಪುರುಷರ ಒಡನಾಟದಿಂದಲೇ ಜೀವನ ಪರಿಪೂರ್ಣವಾಗುತ್ತದೇನೋ ಎಂಬ ಸಂದೇಶ; ಈ

ನಾಟಕಗಳ ಒಟ್ಟು ಧ್ಯೇಯಾದರ್ಶಕದಂತಿದೆ. ಸ್ತ್ರೀಯರೇ ಕಥಾನಾಯಕಿಯರಾಗಿರುವ ವಸ್ತುಗಳನ್ನೇ ಆಯ್ದು ಒಂದೇ ಕಡೆ ಕಟ್ಟಿಕೊಟ್ಟ ಇವರ ಪ್ರಯತ್ನ ಸ್ತುತ್ಯವಾದುದು. ಈಗಾಗಲೇ ಈ ಎಲ್ಲ ನಾಟಕಗಳು ಧಾರವಾಡ ಆಕಾಶವಾಣಿಯಿಂದ ಚಿತ್ರರಗೊಂಡಿವೆ. ಆದರೆ ಇಲ್ಲಿಯ ಭಾಷೆ ಸರ್ವೇಸಾಮಾನ್ಯರನ್ನೂ ಮುಟ್ಟುವುದರ ಬಗ್ಗೆ ಅನುಮಾನ.

೪. ಬೀದಿ ನಾಟಕಗಳು :

ಮಾವೋ, ಮಾರ್ಕ್ಸ ಲೆನಿನ್ ಮುಂತಾದವರ ತತ್ವ ಪ್ರಣಾಲಿಕೆಯನ್ನು ಪ್ರಚುರ ಪಡಿಸುವದಕ್ಕಾಗಿ ಅಂದರೆ ಒಂದು ಸೀಮಿತ ಉದ್ದೇಶಕ್ಕಾಗಿ ಹುಟ್ಟಿಕೊಂಡ ಪ್ರಕಾರ ಈ ಬೀದಿ ನಾಟಕಗಳು. ಒಮ್ಮೆ ಸಾಕಷ್ಟು ಮಿಂಚಿದ ಈ ಪ್ರಕಾರ ಇಂದು ನವ್ಯದ ಹಾಗೆ ಸೋತಂತೆ ತೋರುತ್ತದೆ. ಇಂಥ ಸಂದರ್ಭದಲ್ಲಿ ತರುಣರಾದ ಬಿ ಸುರೇಶ ಅವರು ಬೀದಿ ನಾಟಕಗಳ ರಚನೆಗೆ ಮನಸ್ಸು ಮಾಡಿದ್ದು ಮೆಚ್ಚಬೇಕಾದ ಸಂಗತಿ.

ಕೋತಿಕತೆ/ಅಪ್ಪಾಲೆ ತಿಪ್ಪಾಲೆ : (ಲೇ– ಬಿ. ಸುರೇಶ, ಇಳಾ ಪ್ರಕಾಶನ, ಬೆಂಗಳೂರು)

ಎರಡು ನಾಟಕಗಳನ್ನು ಒಳಗೊಂಡ ಕೃತಿ ಬೀದಿನಾಟಕಗಳ ಪರಿಮಿತಿಯನ್ನು ಲಕ್ಷದಲ್ಲಿರಿಸಿಕೊಂಡೇ ಇವು ಮೂಡಿ ಬಂದಿವೆ.

೧. **ಕೋತಿಕತೆ** : ಇದು ಬೆಸಗರಹಳ್ಳಿ ರಾಮಣ್ಣನವರು ಬರೆದ 'ಪ್ರಜಾ ಪ್ರಭುತ್ವ' ಮತ್ತು 'ಮೂರು ಮಂಗಗಳು' ಎಂಬ ಕತೆಯನ್ನು ಆಧರಿಸಿ ಬರೆದ ನಾಟಕ. ಇಲ್ಲಿ ಹಲಾಲಖೋರ ಪೋಲೀಸ್ ಅಧಿಕಾರಿಗಳು ತಮ್ಮ ಕೆಳ ಅಧಿಕಾರಿಗಳ ಕೂಡ ಹೇಗೆ ಚೆಲ್ಲಾಟವಾಡುತ್ತಾರೆ. ಯಃಕಶ್ಚಿತ ಕೋತಿ ಆಡಿಸುವ ಮಂಚನನ್ನೂ ಹೇಗೆ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ; ಪತ್ರಿಕಾಕರ್ತರು. ಆಕಾಶವಾಣಿಯವರು ಒಂದು ಗುಟುಕು ಮಧ್ಯಪಾನಕ್ಕಾಗಿ ಹೇಗೆ ತಮ್ಮ ವ್ಯಕ್ತಿತ್ವವನ್ನು ಮಾರಿಕೊಳ್ಳು ತ್ತಿದ್ದಾರೆ; ಗಾಂಧೀ ತತ್ವಗಳು ಹೇಗೆ ಬರೀ ಭೂಟಾಟಿಕೆಗಾಗಿ ಬಳಕೆಯಾಗುತ್ತಿವೆ ಎಂಬ ಸಂಗತಿಗಳ ಬಗ್ಗೆ ಈ ಕಿರುನಾಟಕ ಚೆನ್ನಾಗಿ ಭೂತಗನ್ನಡಿ ಹಿಡಿಯುತ್ತದೆ.

೨. **ಅಪ್ಪಾಲೆ-ತಿಪ್ಪಾಲೆ:** ಇಂದಿನ ಯುವ ಮನಸ್ಸಿನ ಸ್ಥಿತಿ ಚಕ್ರವನ್ನು ಕನಸಿನ ರೂಪದಲ್ಲಿ ತಿರುಗಿಸಿ ತೋರಿಸುತ್ತದೆ. ಕಣಸುಣಿಯಾದ ಹೆಣದ ಯುವಕ ಇಂದಿನ ಜೀವಂತ ಯುವ ಪೀಳಿಗೆಯ ಪ್ರತೀಕ. ದುಡೀಬೇಕು, ತನ್ನತನವನ್ನು ತೋರಬೇಕು ಅನ್ನುವವರಿಗೆ ಈ ದೇಶದಲ್ಲಿ ಅವಕಾಶವಿದೆಯೇ ? ಎಂಬುದು ಇಲ್ಲಿನ ಪ್ರಶ್ನೆ. ಅದ ಕ್ಕಾಗಿಯೇ ಇಲ್ಲಿಯ ಪ್ರತಿಭೆ, ಉತ್ಸಾಹಗಳು ದಿವಾಳಿಯಾಗಿ ದೇಶಾಂತರಗೊಳ್ಳುತ್ತಿರು

ವುದು. ದುಡಿಯುವ, ಮಿಡಿಯುವ ಕೈಗಳಿಗೆ ಒಪ್ಪೊತ್ತಿನ ಗಂಜಿಗೂ ಸಾಕಾಗದ ಸ್ಟೈಪೆಂಡರೀ ಹಣದ ಕೋಳ ತೊಡಿಸಿ ಬಡಿಹೋರಿಗಳನ್ನಾಗಿ ಮಾಡುತ್ತಿರುವ ಇಂದಿನ ಸಂದರ್ಭದಲ್ಲಂತೂ ಈ ನಾಟಕ ಹೆಚ್ಚು ಸಂಗತವಾದುದು. ಕನಸಿನಲ್ಲಿ ಕಂಡದ್ದು ಹೇಗೆ ಸತ್ಯವಲ್ಲವೋ ಹಾಗೆ ನಾವಿಂದು ಕಂಡದ್ದೂ, ಕೇಳಿದ್ದೂ ಬಿಸಿಲು ಗುದುರೆಯಾಗಿ, 'ಅಪ್ಪಾಲೆ-ತಿಪ್ಪಾಲೆಯಾಗಿ' ಹೋಗುತ್ತಿದೆ ಎಂಬುದು ಈ ನಾಟಕದ ಆಶಯ. ಆದರೆ ಇದು ತನ್ನ ಪ್ರಾಸದ ಅತಿ ಗೀಳಿನಿಂದಾಗಿ ಕೋತಿಕತೆಯುಪ್ಪು ಜನರ ಹತ್ತಿರ ಹೋಗಲಾರದು ಎನಿಸುತ್ತದೆ

೫. **ಇತರೇ ನಾಟಕಗಳು :**

ಈ ಗುಂಪಿನಲ್ಲಿ ೧) '**ಇಲ್ಲದಿದ್ದವರು**'—(ಅನು–ವಿದ್ಯಾ ಆರ್ಯ, ಪ್ರಕಾಶನ, ಸಾಹಿತ್ಯ ಭಾಂಡಾರ, ಹುಬ್ಬಳ್ಳಿ)

೨. '**ಮಿಸ್ ಫಾರ್ಚ್ಯೂನ್**'—(ಲೇ–ಪ್ರೊ. ಕೆ. ಎಸ್. ಶರ್ಮಾ, ಪುರೋಗಾಮಿ ಸಾಹಿತ್ಯ ಪ್ರಕಾಶನ, ಧಾರವಾಡ)

೩. '**ಕುರಿದೊಡ್ಡಿ ಕುರುಕ್ಷೇತ್ರ**'

೪. **ಹೆರಬ್ಯಾಡ್ಲೆ ಹೊರನಾರೆ**; (ಲೇ:–ಡಾ॥ ಆರ್. ಡಿ. ಈಶ್ವರಾಚಾರ್ಯ, ಬೆಸಗರಹಳ್ಳಿ, ವಿಶ್ವಕರ್ಮ ಪ್ರಕಾಶನ, ಬೆಸಗರಹಳ್ಳಿ)

೫. '**ಯಡವಟ್ಟಿನ ಈರಣ್ಣ ಮತ್ತು ನಾಳೆ ಮತ್ತು ನಾನು**' (ಲೇ—ಎ. ಎಸ್. ಮೂರ್ತಿ; ಡಿ. ವಿ. ಕೆ. ಪ್ರಕಾಶನ, ಮೈಸೂರು)

೬. '**ಮದುವೆ–ಮದುವೆ–ಮದುವೆ !!!**' (ಲೇ—ಎ. ಎಸ್. ಮೂರ್ತಿ, ಡಿ. ವಿ. ಕೆ. ಪ್ರಕಾಶನ, ಮೈಸೂರು)

೭. '**ಕಂಕಣ**' ೮. '**ಗ್ರಹಗತಿ**' ೯. '**ತಾಳಿಕಟ್ಟೋಕ್ಕೆತ್ತಯಾರೆ**' ೧೦. '**ಧೂಮಕೇತು**' ೧೧. '**ಬಕಪಕ್ಷಿ**' ೧೨. '**ಯಾರಿಗುಂಟು**' '**ಯಾರಿಗಿಲ್ಲ**' ೧೩. '**ಲಕ್ಷ್ಮಂಭಕ್ಷ್ಯಯಾಮಿ**' ೧೪. '**ಲಾಟರಿ ಟಿಕೇಟ್**' ೧೫. '**ಶಂಖವಾದ್ಯ**'. ೧೬. '**ಹೆಣ್ಣಿಗೊಂದ್ಗಂಡು**'; (ಲೇ—ಕೆ. ಗುಂಡಣ್ಣ, ಪ್ರಕಾಶನ ಡಿ. ವಿ. ಕೆ. ಮೂರ್ತಿ, ಮೈಸೂರು)

೧೭. '**ಅಳಿಯನ ಮುನಿಸು**' (ಲೇ—ಎಚ್. ಆರ್. ಕೃಷ್ಣಾಚಾರ್ಯ, ಶ್ರೀ ಕೃಷ್ಣ ಪ್ರಕಾಶನ, ಮೈಸೂರು)

೧೮. **ಅನ್ನೃತಿ** (ಅಮೃತಶಿಮ) : (ಲೇ–ಎ. ಎಸ್. ಮಹೇಶ, ಪ್ರತಿಕಾರ ಶಿವಪ್ರಕಾಶನ, ಮೈಸೂರು)

೧೯. **'ಸಂಗೊಳ್ಳಿ ರಾಯಣ್ಣ'** (ಲೇ. ಕವಿತಾ ಕೃಷ್ಣ, ಕವಿತಾ ಪ್ರಕಾಶನ, ಕ್ಯಾತಸಂದ್ರ)

೨೦. **'ಮಹಾತ್ಮಮಾದೇಶ್ವರ'** (ಲೇ–ಹ.ಜ. ಶಿವಶಂಕರಪ್ಪ, ಪ್ರಕಾಶನ ಮಾದೇಶ್ವರ ಸ್ವಾಮಿ, ಇತಿಹಾಸ ಸಂಶೋಧನ ಸಂಸ್ಥೆ, ಮಧುವನಹಳ್ಳಿ)

ಮುಂತಾದವುಗಳನ್ನು ಬರೀ ಹೆಸರಿಸಬಹುದಷ್ಟೇ. ಇವುಗಳನ್ನೆಲ್ಲ ಇತರೇ ನಾಟಕಗಳೆಂದು ಕರೆದಿರುವುದರ ಮೂಲ ಉದ್ದೇಶ ಲೇಖನದಲ್ಲಿ ಅನವಶ್ಯಕ ಭಾಗ ಗಳನ್ನು ತಪ್ಪಿಸುವುದು. ಯಾಕೆಂದರೆ ಒಂದೆರಡನ್ನು ಬಿಟ್ಟರೆ ಯಾವೂ ಅಂಥ ಗಂಭೀರ ಪ್ರಯತ್ನಗಳಲ್ಲ. ಇವುಗಳಲ್ಲಿ ಕೆಲವು ನಗೆನಾಟಕಗಳು, ಕೆಲವು ಲಘು ಪ್ರಹಸನಗಳು, ಕೆಲವು ಸಾಮಾಜಿಕ-ಐತಿಹಾಸಿಕ ನಾಟಕಗಳು. ಮತ್ತೆ ಕೆಲವು ಶಾಲಾಸ್ನೇಹಸಮ್ಮೇಲನ ಕ್ಕಾಗಿ ಬರೆದವುಗಳು. ಆವರೆ ಇದೇ ಗುಂಪಿನ 'ಲಕ್ಷ್ಮಣ ರೇಖೆ,' 'ಜಿಪ್ಸಿಗಳು' ಮತ್ತು 'ಕಠಾರಿ ಬೈರವ' ಎಂಬ ನಾಟಕಗಳು ಮಾತ್ರ ಸ್ವಲ್ಪಮಟ್ಟಿನ ಗಮನ ಸೆಳೆ ಯುತ್ತವೆ.

ಲಕ್ಷ್ಮಣ ರೇಖೆ : (ಲೇ-ರಾಘವೇಂದ್ರ ಜೋಶಿ–ಶರತ್ ಪ್ರಕಾಶನ ಮಂದಿರ, ಬೆಳಗಾಂವಿ)

ಈ ನಾಟಕ ಗೃಹಸ್ಥನೊಬ್ಬ ತನ್ನ ಬಾಳಸಂಗಾತಿಯ ಭಾವನೆಗಳನ್ನು ಅರ್ಥ ಮಾಡಿಕೊಳ್ಳದೇ ಹೋದಾಗ ದಾಂಪತ್ಯದಲ್ಲಿ ಅನಿವಾರ್ಯವಾಗಿ ಹೇಗೆ ಬಿರುಕು ಕಾಣಿಸಿ ಕೊಳ್ಳುತ್ತದೆ; ಇಂಥ ಸನ್ನಿವೇಶವಲ್ಲಿ ಪ್ರಸಾದನಂತಹ ಸಮಯಸಾಧಕರು ಪರಿಸ್ಥಿತಿಯ ದುರ್ಲಾಭವನ್ನು ಪಡೆಯಲು ಹೇಗೆ ಹವಣಿಸುತ್ತಾರೆ; ಕೆಂಪಿಯಂತಹ ಹಾಲು ಮಾರುವ ಬಡಹೆಣ್ಣೂ ನೀತಿಯಿಂದ ಬಾಳಿ ಸಂಸಾರಸುಖವನ್ನು ಹೇಗೆ ಸವಿಯ ಬಲ್ಲಳು; ಗಂಡು ಬಯಸಬಹುದಾದುದನ್ನು ಹೆಣ್ಣು ಬಯಸಿದಾಗ ನಾವು ಹೇಗೆ 'ಲಕ್ಷ್ಮಣರೇಖೆ'ಯನ್ನು ಎಳೆಯುತ್ತೇವೆ. ಮುಂತಾದ ಕೆಲವು ಸಂಗತಿಗಳನ್ನು ಮಾರ್ಮಿಕವಾಗಿ; ಅತ್ಯಂತ ಸಹಜವಾಗಿ ನಿರೂಪಿಸುತ್ತದೆ. ಸಮಸ್ಯೆಯನ್ನು ಯಥಾರ್ಥವಾಗಿ ನೋಡಲಾಗಿದೆ.

'ಜಿಪ್ಸಿಗಳು' : (ಅನು–ಡಾ॥ ಬುದ್ದಣ್ಣ ಹಿಂಗಮಿರೆ-ಯುಗಧ್ವನಿ ಪ್ರಕಾಶನ, ಧಾರವಾಡ)

ಅಲೆಮಾರಿ ಜನಾಂಗದ ಹೆಸರನ್ನು ಹೊತ್ತ ಈ ನಾಟಕ ರಶ್ಯನ್ ಭಾಷೆಯ ಪುಶ್ಕಿನ್ ಮಹಾಕವಿಯ ನೀಳ್ಗವನವನ್ನು ಆಧರಿಸಿ ಬರೆದದ್ದು. ಇಲ್ಲಿಯ ನಾಯಕ 'ಅಲೆಕೊ' ಜಿಪ್ಸೀ ಜನಾಂಗದ ಜೀವನಕ್ರಮಕ್ಕೆ ಮಾರುಹೋಗಿ ನಗರ

ಜೀವನವನ್ನು ತ್ಯಜಿಸಿ ಬಂದು ಜಿಪ್ಸೀ ಕ್ಯಾಂಪಿನಲ್ಲಿ ಆಶ್ರಯ ಪಡೆಯುತ್ತಾನೆ. ಬರ ಬರುತ್ತಾ ಅವನಲ್ಲಿ ಹೊಸ ಆಶೆ, ಶಕ್ತಿ ಮೂಡಿ ಆ ಜನಾಂಗದ ಹಿರಿಯನ (ಮುದು ಕನ) ಏಕಮಾತ್ರ ಪುತ್ರಿ ಜೆಂಫಿರಾಳಲ್ಲಿ ಮೋಹಗೊಳ್ಳುತ್ತಾನೆ. ಜೆಂಫಿರಾ ಸಹ ಇವನನ್ನು ಪ್ರೀತಿಸತೊಡಗುತ್ತಾಳೆ. ಆದರೆ ನಗರ ಜೀವನದ ಪ್ರಭಾವದಿಂದ ಮುಕ್ತವಾಗದ ಯುವಕನ ಸುಪ್ತ ಮನಸ್ಸು ನಿದ್ರೆಯಲ್ಲಿ ಏನೇನೋ ಬಡಬಡಿಸುತ್ತಿರು ವುದನ್ನು ಜೆಂಫಿರಾ ಕೇಳುತ್ತಾಳೆ. ಇದರಿಂದ 'ಅಲೆಕೊ'ನ ಬಗೆಗೆ ಅವಳ ನಂಬಿಕೆ ಹಾರಿ ಬೇರೊಬ್ಬ ತನ್ನ ಜನಾಂಗದ ಯುವಕನನ್ನು ಪ್ರೀತಿಸತೊಡಗುತ್ತಾಳೆ. ಇವನ್ನು ಸಹಿಸಲಾರದ 'ಅಲೆಕೊ' ಮುದುಕನಿಗೆ ದೂರು ಸಲ್ಲಿಸುತ್ತಾನೆ. ಆದರೆ ಸ್ವಾತಂತ್ರ್ಯ ಪ್ರಿಯನಾದ ಮುದುಕ [೧೩]"ನನ್ನ ಮಗಳು ಹಕ್ಕಿಯಿದ್ದಂತೆ ಅವಳ ಸ್ವಾತಂತ್ರ್ಯವನ್ನು ಮೊಟಕು ಮಾಡುವ ಇಚ್ಛೆ ತನಗಿಲ್ಲವೆಂದು" ತಿಳಿಸುತ್ತಾನೆ. ಇದ್ದರಿಂದ ರೊಚ್ಚಿಗೆದ್ದ ಭಗ್ನ ಹೃದಯಿ ಆ ಪ್ರಣಯಿಗಳಿಬ್ಬರನ್ನೂ ಕೊಲೆಗೈಯುತ್ತಾನೆ. ಈ ಕೃತ್ಯದಿಂದ ರೊಚ್ಚಿಗೆದ್ದ ಜಿಪ್ಸಿಗಳು 'ಅಲೆಕೊ'ವನ್ನು ಮುಗಿಸಿ ಬಿಡುವ ಉದ್ದೇಶದಿಂದ ಮುದುಕನ ಆಜ್ಞೆಗಾಗಿ ಕಾಯ್ದು ನಿಲ್ಲುತ್ತಾರೆ. ಆದರೆ ಮುದುಕ ಇದರಿಂದೇನು ಸಾಧಿಸಿದಂತಾಯಿತೆಂದು ಯೋಚಿಸಿ ತನ್ನ ಜನಕ್ಕೆ ಅಲ್ಲಿಂದ ಹೊರಟುಹೋಗುವಂತೆ ಸೂಚಿಸಿ, ತನ್ನ ಕೋಪವನ್ನೂ ನಿಯಂತ್ರಿಸಿಕೊಂಡು 'ಅಲೆಕೊ'ನಿಗೆ ಜೀವದಾನ ಮಾಡುತ್ತಾನೆ. ಇದಿಷ್ಟು ನಾಟಕದ ಕಥಾವಸ್ತು.

ಇಲ್ಲಿ ನಾವು ಜಿಪ್ಸೀ (ಅಲೆಮಾರಿ) ಜನಾಂಗದ ಬದುಕಿನ ರೀತಿ. ಸಂಸ್ಕೃತಿಯ ನಿಷ್ಠೆ, ಸ್ವಾತಂತ್ರ್ಯಪ್ರಿಯತೆ, ರೀತಿ-ರಿವಾಜು, ಸ್ವಂತಿಕೆ-ಸಂಯಮಗಳನ್ನು ಕಾಣುತ್ತೇವೆ. ನಾಟಕಕಾರರು ನಮ್ಮ ದೇಶದ ಅಲೆಮಾರಿ ಜನಾಂಗದ ಬದುಕಿನೊಂದಿಗೆ ಅವುಗಳನ್ನು ಹೊಂದಿಸಿಕೊಳ್ಳಲು ಪ್ರಯತ್ನಿಸಿದ್ದು ಸ್ವಾಗತಾರ್ಹವೆನಿಸುತ್ತದೆ. ಆದರೆ ಕಥೆ ಮತ್ತು ಪಾತ್ರಗಳು ಪರಕೀಯವಾಗಿವುಳಿಯುವದರಿಂದ ನಾಟಕ ನಮ್ಮದೆನಿಸುವುದಿಲ್ಲ

೩. **ಕಠಾರಿ ಭೈರವ** : (ಡಾ॥ ಶಿವರಾಮ ಕಾರಂತ ಪ್ರಕಾಶನ; ಸಾಹಿತ್ಯ ಭಂಡಾರ ಹುಬ್ಬಳ್ಳಿ)

ಪ್ರಸ್ತಾವನೆಯಲ್ಲಿ–ಲೇಖಕರು 'ಸಾಳುವ ತಿಮ್ಮ'– ವಿಜಯನಗರ ಇತಿಹಾಸಕ್ಕೆ ಸಂಬಂಧಪಟ್ಟ ನಾಟಕ ಕಾರಣಾಂತರದಿಂದ 'ಕಠಾರಿ ಭೈರವ'ವಾಗಿ ಮಾರ್ಪಟ್ಟ ಸಂಗತಿಯನ್ನು ಹೇಳಿದ್ದಾರೆ. ಆಗ 'ಸಾಳುವ ತಿಮ್ಮ'ನ ವಿಜಯನಗರದ ಅರಮನೆ ಅನಿವಾರ್ಯವಾಗಿ 'ಶೂರಕನ್ಯಾಪುರ'ವೆಂಬ ಕಾಲ್ಪನಿಕ ರಾಜ್ಯವಾಗಬೇಕಾಯಿತು.

---

೧೩. ಜಿಪ್ಸಿಗಳು : ಅನು—ಡಾ. ಬುದ್ಧಣ್ಣ ಹಿಂಗಮಿರೆ; ಪುಟ ೪

ಶೂರಕನ್ಯಾಪುರದ ಅರಸ ದೇವರಾಯ ತನ್ನ ಮೊದಲ ಹೆಂಡತಿ. ಶ್ಯಾಮಲೆಗೆ ಸಂತಾನವಿಲ್ಲವೆಂಬ ನೆಪ ಮುಂದೆ ಮಾಡಿ ಕುಲಹೀನೆಯಾದ ದೇವಲೆಯನ್ನು ಕಿರಿಯ ರಾಣಿಯಾಗಿ ಸ್ವೀಕರಿಸಿ ಅವಳಿಂದ ಜಯದೇವ ಎಂಬ ಮಗುವನ್ನು ಪಡೆಯುತ್ತಾನೆ. ಅಂದಿನಿಂದ ಶೂರಕನ್ಯಾಪುರ ಸವತಿ-ಮಾತ್ಸರ್ಯದ ದಳ್ಳುರಿಯಲ್ಲಿ ಬೇಯತೊಡಗುತ್ತದೆ. ಇತ್ತಕಡೆ ಹಿರಿಯರಾಣಿಯೂ ಒಂದು ಮಗುವಿನ ತಾಯಿಯಾಗುತ್ತಾಳೆ. ಇದರಿಂದ ಹುಚ್ಚೆದ್ದ ದೇವಲೆ ತನ್ನ ಮಗ ಜಯದೇವನಿಗೆ ಪಟ್ಟ ತಪ್ಪುವದೆಂಬ ದುರಾಶೆಯಿಂದ ಚೆಲುವೆಯೆಂಬ ದಾಸಿಯನ್ನು ಒಳಗು ಮಾಡಿಕೊಂಡು ಹಲವು ಆಮಿಷಗಳನ್ನೊಡ್ಡಿ ಶ್ಯಾಮಲೆಯ ಮಗುವನ್ನು ವಿಷಪ್ರಾಶನ ಮಾಡಿಸಿ ಕೊಲ್ಲಿಸುತ್ತಾಳೆ. ಇದನ್ನೆಲ್ಲ ವಿರೋಧಿಸುತ್ತ; ಬಂದ ತತ್ವನಿಷ್ಠನಾದ 'ಕಠಾರಿ ಭೈರವ'; ಶ್ಯಾಮಲೆಯ ಹೊಟ್ಟೆ ಯುರಿಯನ್ನು ನೋಡಲಾರದೆ ದೇವಲೆಯ ಮಗ ಜಯದೇವನನ್ನು ಕೊಲೆಗೈಯಲು ಹವಣಿಸಿ ವಿಫಲನಾಗಿ ದೇವಲೆಯ ದುಷ್ಟ ಆಕ್ರೋಶಕ್ಕೆ, ರಾಜದರ್ಪಕ್ಕೆ ತಾನು ಬಲಿ ಯಾಗುವದಲ್ಲದೆ ಮಗ ಧನಂಜಯನನ್ನೂ ಬಲಿಕೊಡಬೇಕಾಗುತ್ತದೆ. ಇಷ್ಟರೊಳಗಾಗಿ 'ಕಠಾರಿ–ಭೈರವ'ನ ಅಣ್ಣ ದೇವಲೆಯ ಮಗನಿಗೂ ಮುಯ್ಯಕ್ಕೆ ಮುಯ್ಯ ಎನ್ನುವ ಹಾಗೆ ವಿಷವುಣಿಸಿ ಕತೆ ಮುಗಿಸುತ್ತಾನೆ. ನಾಟಕ ದುರಂತ ನಾಟಕಗಳಂತೆ ಕೊನೆ ಗೊಳ್ಳುತ್ತದೆ.

ಇಲ್ಲಿ ದೇವಲೆಯ ಅಹಂಕಾರ-ದರ್ಪ-ಸವತಿ-ಮಾತ್ಸರ್ಯ: ದೇವರಾಯನ ಅಸಾಯಕತೆ: ಬಾಲಕರಾದ ಜಯದೇವ–ಧನಂಜಯರ ಪ್ರೀತಿ-ಮುಗ್ಧ ಆದರ್ಶಗಳು: ಶ್ಯಾಮಲೆಯ ತಾಯ್ತನದ ತಳಮಳ: ಕಠಾರಿಭೈರವನ ತತ್ವನಿಷ್ಠೆ ಇವೆಲ್ಲ ಚೆನ್ನಾಗಿ ನಿರೂಪಿತವಾಗಿವೆ. ಆದರೇನು ? ಇದು ಕಂಪನೀ ನಾಟಕದಂತೆ ಬರೀ ಭಾವನೆಗಳನ್ನು ಕೆರಳಿಸಬಹುದೇ ಹೊರತು: ಏನನ್ನೂ ಸಾಧಿಸಲು ಅಸಮರ್ಥವಾಗಿ out dated ಎನಿಸುತ್ತದೆ. ಇದಿಷ್ಟು ೮೩ ರ ನಾಟಕಗಳ ಸಮೀಕ್ಷೆ.

ಕಾಲದ ಗಡುವಿನೊಳಗೆ ನಾಟಕಗಳನ್ನು ಸಮೀಕ್ಷಿಸುವುದರಿಂದ ತಲೆದೋರುವ ತೊಂದರೆ ಏನೆಂಬುದು ನನಗೆ ಗೊತ್ತಿದೆ. ಅನೇಕ ಸಲ ಕೆಲವು ನಾಟಕಗಳು ಎಷ್ಟೋದಿನ ಹಸ್ತಪ್ರತಿಯ ರೂಪದಲ್ಲೇ ಉಳಿದು ಮುಂದೆ ಅನುಕೂಲವಾದಾಗ ಪ್ರಕಟಗೊಳ್ಳುತ್ತವೆ. ಹೀಗಾದಾಗ ಹಸ್ತಪ್ರತಿಯ ಕಾಲಮುಖ್ಯೋ ಅಥವಾ ಪ್ರಕಟನೆಯ ಕಾಲ ಮುಖ್ಯೋ ಎಂಬುದು ಒಂದು ಸಮಸ್ಯೆ. ಇನ್ನೊಂದು ಸಮಸ್ಯೆ ಎಂದರೆ ಕೆಲವು ನಾಟಕಗಳು ಸ್ವತಂತ್ರವಾಗಿ ರಚಿಸಲ್ಪಟ್ಟಿರುತ್ತವೆ: ಇನ್ನು ಕೆಲವು ಕಾದಂಬರಿಯನ್ನೋ: ಕಥೆಯನ್ನೋ ಆಧರಿಸಿ ಬರೆದವುಗಳಾಗಿರುತ್ತವೆ. ಇಂಥ ಸಂದರ್ಭದಲ್ಲಿ ಸ್ವತಂತ್ರ ರಚನೆಗಳನ್ನು ಮತ್ತು ಸಿದ್ಧ ವಸ್ತುವೊಂದನ್ನು ಬಳಸಿಕೊಂಡು ರಚನೆಯಾದವಗಳನ್ನು ಒಂದೇ ಮಾನದಂಡದಿಂದ ಅಳೆಯುವದು ಸರಿಯೇ ?

ಎಂಬುದು. ಇವಲ್ಲದೆ ಬಹುತೇಕ ನಾಟಕಕಾರರು ತಮ್ಮ ನಾಟಕಗಳನ್ನು ಮುನ್ನುಡಿಯಲ್ಲಿಯೋ ನಿವೇದನೆಯಲ್ಲಿಯೋ ತಾವಾಗಲೀ ಬೇರೆಯವರಿಂದಾಗಲೀ ವಿಮರ್ಶೆಗೊಳಪಡಿಸುವುದು ಕಂಡುಬರುತ್ತದೆ. ಹೀಗೆ ಮಾಡುವುದರಿಂದ ವಾಚಕರು ಇದನ್ನೋದಿ ಪೂರ್ವಗ್ರಹ ಪೀಡಿತರಾಗುವದಿಲ್ಲವೇ ? ಎಂಬುದು. ಆದ್ದರಿಂದ ಲೇಖಕರು ತಮ್ಮ ಕೃತಿಗಳನ್ನು ಓದುಗರ ವಿಮರ್ಶೆಗೆ ಬಿಟ್ಟುಕೊಡುವುದು ಒಳ್ಳೆಯದು.

ಒಟ್ಟು ೮೩ ರ ನಾಟಕಗಳ ಕಡೆಗೆ ಒಂದು ಹಕ್ಕಿನೋಟವನ್ನು ಬೀರಿದಾಗ ಇತರೇ ನಾಟಕಗಳ ಸಂಖ್ಯೆಯೇ ದೊಡ್ಡದು. ಎರಡನೆಯ ಸ್ಥಾನ ರೇಡಿಯೋ ನಾಟಕಗಳಿಗೆ, ಮೂರನೆಯ ಸ್ಥಾನ ಹೊಸ ಅಲೆ ಮತ್ತು ಅನುವಾದಿತ ನಾಟಕಗಳಿಗೆ, ಅತ್ಯಂತ ಕನಿಷ್ಠಸ್ಥಾನ ಬೀದಿನಾಟಕಗಳದ್ದು.

ಇಂದು ಅನೇಕ ಹವ್ಯಾಸಿ ತಂಡಗಳು, ಹೊಸ ಹೊಸ ದೃಷ್ಟಿಯ ನಿರ್ದೇಶಕರು, ಹೊಸ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿದ್ದು (ರೈತ ಹೋರಾಟ, ಪಂಜಾಬ ಸಮಸ್ಯೆ, ಆಸಾಮ ಸಮಸ್ಯೆ) ಇವೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ರಚನೆಗೊಂಡ ನಾಟಕಗಳ ಕೊರತೆ ಈ ಸಮೀಕ್ಷೆಯಲ್ಲಿ ಎದ್ದು ಕಾಣುವುದನ್ನು ಗಮನಿಸಬಹುದು ಈ ನಿಟ್ಟಿನಲ್ಲಿ ವಿಶೇಷ ಪ್ರಯತ್ನಮಾಡುವುದು ಇಂದಿನ ನಾಟಕಕಾರರ ಜವಾಬ್ದಾರಿಯಾಗಿದೆ. ಅಂದರೆ ಇತರೇ ನಾಟಕಗಳ ಪ್ರಮಾಣ ಕಡಿಮೆಯಾಗಿ ಗಂಭೀರ ಪ್ರಯತ್ನದ ನಾಟಕಗಳು ಹೆಚ್ಚೆಚ್ಚು ಪ್ರಕಟಗೊಳ್ಳುವುದು ಮಾತ್ರ ಆರೋಗ್ಯಕರ ಬೆಳವಣಿಗೆಯಾಗಬಲ್ಲದು.

●

೧೯೮೩ರ ಪ್ರಬಂಧ ಸಾಹಿತ್ಯ—ಒಂದು ಸಮೀಕ್ಷೆ

● ಶ್ರೀನಿವಾಸ ಕುಲಕರ್ಣಿ

ಒಂದು ಕಾಲಕ್ಕೆ 'ಪ್ರಬಂಧ' ಈ ಸಾಹಿತ್ಯ ಪ್ರಕಾರ ಸಾಕಷ್ಟು ಸಮೃದ್ಧವಾಗಿ. ಶಕ್ತಿಯುತವಾಗಿ ಬೆಳೆದು ಮೈ-ಕೈ ತುಂಬಿಕೊಂಡರೂ ಈಚೆಗೆ ಅದೇಕೋ ಮೊದಲಿನ ಶ್ರೀಮಂತಿಕೆಯನ್ನಾಗಲೀ, ವೈವಿಧ್ಯವನ್ನಾಗಲೀ ಉಳಿಸಿಕೊಳ್ಳುತ್ತಿಲ್ಲ. ಪ್ರಬಂಧ ಸಾಹಿತ್ಯ ಮುಖ್ಯವಾಗಿ ಪತ್ರಿಕೆಗಳಿಗಾಗಿ ಸೃಷ್ಟಿಯಾಗುವ ಬರವಣಿಗೆಯಾದುದರಿಂದ ಲೇಖಕರು ಸಾಹಿತ್ಯಿಕ ಚಿಂತನ-ಮಂಥನಕ್ಕಿಂತ ಪತ್ರಿಕೆಗಳ ಬಹುಸಂಖ್ಯಾತ ಓದುಗ ವರ್ಗವನ್ನು ಹಾಗೂ ಅವರನ್ನು ರಂಜಿಸುವುದನ್ನು ಮುಖ್ಯವಾಗಿ ಗಮನಿಸುವರು. ಇವರಿಂದ ಸಹಜವಾಗಿಯೇ ಈ ಬರವಣಿಗೆ ಸೀಮಿತವೂ, ಸಂಕುಚಿತವೂ ಆಗಿ ಕೇವಲ ಪತ್ರಿಕೆ ಬರೆಹಗಳಾಗಿ ಉಳಿದು ಬಿಡುವ ಸಂಭವ ಇದೆ. (ಇಂದಿನ ನಮ್ಮ ಅನೇಕ ಲೇಖಕರ ಸಣ್ಣ ಕಥೆಗಳು ಇದೇ ಪಾಡನ್ನು ಅನುಭವಿಸುತ್ತವೆ!) ಜೀವನವನ್ನು. ಹಾಗೂ ಜೀವನದ ಸಂದರ್ಭ ಸನ್ನಿವೇಶಗಳನ್ನು ವ್ಯಂಗ್ಯವಾಗಿಯೋ, ನಗೆ ಬರುವ ರೀತಿಯಲ್ಲಿಯೋ ಬರೆದು ಬಿಟ್ಟರೆ ಪ್ರಬಂಧವಾಗುವುದಿಲ್ಲ. ವ್ಯಂಗ್ಯ, ವಿಡಂಬನೆ, ಚಾಟು—ಇವು ಜೀವನದ ಆಳಕ್ಕೆ ಇಳಿಯುವುದಕ್ಕೆ ಸಹೃದಯನಿಗೆ ಸಹಾಯ ಮಾಡಬೇಕೇ ವಿನಾ ಜೀವನವನ್ನೇ ಹಗುರಗೊಳಿಸುವಂತಾಗಬಾರದು. ಇಲ್ಲವೇ ಜೀವನವನ್ನೇ ಹಾಸ್ಯಾಸ್ಪದವನ್ನಾಗಿ ಚಿತ್ರಿಸಬಾರದು. ಬಹುಶಃ ಇಂದು ಬರುತ್ತಿರುವ ಪ್ರಬಂಧ ಸಾಹಿತ್ಯವನ್ನು ಗಮನಿಸಿದರೆ ಮೇಲಿನ ಎಚ್ಚರಿಕೆಯ ಮಾತುಗಳನ್ನು ಹೇಳುವುದು ಅನಿವಾರ್ಯವೆನ್ನಿಸುತ್ತಿದೆ.

ಇಂಥ ಸಂದರ್ಭದಲ್ಲಿಯೂ ತುಂಬ ಶುಚಿ ರುಚಿ ಹಾಗೂ ಆರೋಗ್ಯಪೂರ್ಣ ವಿವೇಚನೆಯ ಪ್ರಬಂಧಕಾರರು ಇರುವುದನ್ನು ಗಮನಿಸಬೇಕು. ಇವರ ಸಂಖ್ಯೆ ಅಲ್ಪವಾದರೂ ಈ ಪ್ರಕಾರಕ್ಕೆ ಜೀವವನ್ನೂ, ವೈವಿಧ್ಯವನ್ನೂ ತಮ್ಮ ಪ್ರಬಂಧಗಳ ಮೂಲಕ ನೀಡಿರುವುದು ಗಮನಾರ್ಹ. ಈ ವರ್ಷದ ಪ್ರಬಂಧ ಸಾಹಿತ್ಯದಲ್ಲಿ ಈ ಮಾದರಿಯ ಒಂದೆರಡು ಕೃತಿಗಳಿರುವುದು ಸಂತಸದ ಸಂಗತಿ.

ನಾನಿಲ್ಲಿ ಪ್ರಬಂಧ ಸಾಹಿತ್ಯ ಎಂದರೆ 'ಲಲಿತ ಪ್ರಬಂಧಗಳು, ವೈಚಾರಿಕ ಪ್ರಬಂಧಗಳು, ನಗೆ ಲೇಖನಗಳು ಮುಂತಾದ ಸಾಹಿತ್ಯ ಸಮೂಹವನ್ನು ಗಮನಿಸಿದ್ದೇನೆ. ವಿಮರ್ಶಾತ್ಮಕ ಪ್ರಬಂಧಗಳು, ಸಂಶೋಧನಾತ್ಮಕ ಪ್ರಬಂಧಗಳನ್ನು ಸಕಾರಣವಾಗಿಯೇ ಗಮನಿಸಿಲ್ಲ.

ಈ ವರ್ಷ ಪ್ರಕಟಗೊಂಡ ಪ್ರಬಂಧ ಗ್ರಂಥಗಳು ಒಟ್ಟು ಇಪ್ಪತ್ನಾಲ್ಕು. ಇವುಗಳಲ್ಲಿ ಹದಿನಾಲ್ಕು ಪುಸ್ತಕಗಳು ಮರು ಮುದ್ರಣಗಳು. ವಿಶ್ವ ಕನ್ನಡ ಮೇಳದ ಅಂಗವಾಗಿ ಪ್ರಕಟಗೊಂಡ ೧೧೭ ಪುಸ್ತಕಗಳಲ್ಲಿ ಒಂಬತ್ತು ಪ್ರಬಂಧ ಸಂಕಲನಗಳಿವೆ. ಹಾ. ಮಾ. ನಾಯಕ ಅವರ 'ಬಾಳ್ನೋಟಗಳು', ಬಿ. ಆರ್. ವಾಡಪ್ಪಿ ಅವರ 'ಗಾಳಿಗುವರಿ'–ಮರು–ಮುದ್ರಣಗಳಾಗಿದ್ದರೂ, ಹಾಮಾನಾ ಒಂದು ಪ್ರಬಂಧವನ್ನು, ವಾಡಪ್ಪಿ ಅವರು ಮೂರು ಪ್ರಬಂಧಗಳನ್ನು ಹೊಸದಾಗಿ ಪ್ರಕಟಿಸಿದ್ದಾರೆ.

'ತೆನೆ' ಶ್ರೀ ದೇಜಗೌ ಅವರ ಪ್ರಬಂಧ ಸಂಕಲನ. ಇದರಲ್ಲಿ ಒಟ್ಟು ೩೫ ಪ್ರಬಂಧಗಳಿವೆ. ಹಿಂದೆ ಪ್ರಕಟವಾದ 'ಕೆನೆ'ಯಂತೆಯೇ ಈ ತೆನೆ ಸಹ ಆಕಾಶ ವಾಣಿಯ ಚಿಂತನದ ಮೂಲಕ ಹೊರಹೊಮ್ಮಿದ್ದು ಎಂದು ಲೇಖಕರೇ ಕೃತಜ್ಞತೆಯ ತಮ್ಮ ಮಾತಿನಲ್ಲಿ ಹೇಳಿದ್ದಾರೆ. ಈ ಪ್ರಬಂಧ ಸಂಕಲನದಲ್ಲಿ ಇಂದಿನ ಶಿಕ್ಷಣ ಪದ್ಧತಿ, ಜಾನಪದ ಪ್ರಾರ್ಥನೆಗಳು, ಧರ್ಮ, ಅಸ್ಪೃಶ್ಯತೆ, ಕೃಷಿಕ, ಕನ್ನಡಿಗರ ಹಿರಿಮೆ–ಮುಂತಾದ ವೈವಿಧ್ಯಪೂರ್ಣ ಪ್ರಬಂಧಗಳಿವೆ. ವಿಷಯವನ್ನು ಕುರಿತ ವಿವರಣೆ, ಚಿಂತನೆಗಳಿಗೇ ಇಲ್ಲಿ ಪ್ರಾಧಾನ್ಯ. ಹಲವು ಸಲ ಲೇಖಕರ ನಿರೂಪಣಾವಿಧಾನದ ಮೂಲಕ ಇವು ಬೋಧಪ್ರದ ಅಥವಾ ಉಪದೇಶಾತ್ಮಕ ಪ್ರಬಂಧಗಳೆಂದು ಎನಿಸುವುದೂ ಉಂಟು. 'ಅಹಂಕಾರ' ಕನ್‌ಫ್ಯೂಷಿಯಸ್‌ನ 'ತತ್ವಗಳು' 'ಕರ್ತವ್ಯ ಪ್ರಜ್ಞೆ', ಮಹಾಪುರುಷ ಯಾರು ? ಮುಂತಾದ ಪ್ರಬಂಧಗಳನ್ನು ಓದಿದರೆ ಈ ಮಾತು ಸ್ಪಷ್ಟವಾಗುತ್ತದೆ. ಲೇಖಕರ ಬಹುಶ್ರುತತ್ವ ಲೋಕಾನುಭವ, ಸುಸಂಸ್ಕೃತ ದೃಷ್ಟಿ-ಇವು ಇಲ್ಲಿಯ ಪ್ರಬಂಧಗಳಿಗೆ ಶಕ್ತಿಯನ್ನು, ಸತ್ವವನ್ನು ತಂದುಕೊಟ್ಟಿವೆ ಒಂದು ವಿಷಯವನ್ನು ನಿರೂಪಿಸಿ, ಅದಕ್ಕೆ ಪೋಷಕವಾಗುವ ಎಲ್ಲ ವಿವರಗಳನ್ನು ಲೇಖಕರು ಸಹಜವೆಂಬಂತೆ ಸಂಗ್ರಹಿಸಿದ್ದಾರೆ. ಒಮ್ಮೊಮ್ಮೆ ನಿರೂಪಣೆ ತೀರ ಕೃತಕವಾಗಿ ಪ್ರಬಂಧದ ಮೂಲ ದ್ರವ್ಯವಾದ ಆತ್ಮೀಯತೆಯನ್ನು ಕಳೆದುಕೊಳ್ಳುವುದುಂಟು. ಆದರೂ 'ಜಾನಪದ ಪ್ರತಿಭೆ' 'ಪುಸ್ತಕಗಳು', 'ವ್ಯಕ್ತಿಪೂಜೆ', 'ನನ್ನ ನಾಡಿನ ಹೊರಗೆ' ಮುಂತಾದ ಯಶಸ್ವೀ ಚಿಂತನಪರ ಪ್ರಬಂಧಗಳು ಇಲ್ಲಿ ಮೂಡಿ ಬಂದಿರುವವನ್ನು ಗಮನಿಸಬೇಕು.

'ಸ್ವರ್ಗಕ್ಕೆ ಭೂ ಬಾಣ', ಶ್ರೀ ಎಂ. ಪಿ. ಮನೋಹರ ಚಂದ್ರನ್ ಅವರ ಮೂರನೆಯ ಪ್ರಬಂಧ ಸಂಕಲನ. ಅವರ ಈ ಹಿಂದಿನ 'ಗಣಪತಿ ಮೋರಿಯಾ'. 'ಹೆಂಡತಿ ಬೇಕು. ಬೇಡ', ಎಂಬ ಪ್ರಬಂಧ ಸಂಗ್ರಹಗಳಂತೆ ಇದೂ ಕೂಡ ನಗಿಸುವುದನ್ನೇ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡು ರಚಿಸಿದ ಬರಹಗಳ ಸಂಗ್ರಹ. 'ಈ ಪುಸ್ತಕದಲ್ಲಿನ ನಗೆಬರಹಗಳಲ್ಲಿ ತೀಕ್ಷ್ಣವಾದ ಕಟು ಟೀಕೆಯಾಗಲಿ. ಕೀಳು ಮಟ್ಟದ ತಮಾಷೆಯಾಗಲಿ ಇಲ್ಲವೆಂದು ನನ್ನ ಭಾವನೆ' ಎಂಬ ಲೇಖಕರ ಸದಭಿರುಚಿಯ ಮಾತುಗಳು ಪ್ರಶಂಸನಾರ್ಹ. ಈಗಾಗಲೇ ಅನೇಕ ವಾರ-ಮಾಸ ಪತ್ರಿಕೆಗಳಲ್ಲಿ ಬೆಳಕು ಕಂಡ ನಲವತ್ತು ಪ್ರಬಂಧಗಳು ಇಲ್ಲಿವೆ.

ಮೊದಲ ಐದು ಪ್ರಬಂಧಗಳು ಪತ್ರೋತ್ತರ ರೂಪದಲ್ಲಿವೆ. ದೀಪಾವಳಿ ಬಂತೆಂದರೆ ಅಳಿಯನಿಗೆ ನೆನಪಾಗುವ ಮಾವನ ಮನೆ, ಉತ್ಸಾಹೀ ಲೇಖಕ ಸಂಪಾದಕರಿಗೆ ಪ್ರಕಟನೆಗೆಂದು ಕೋರುವ ದೀನಭಾವ, ಆಕಸ್ಮಿಕ ಪ್ರಮಾದಗಳು ಉಂಟು ಮಾಡುವ ಕಿರಿಕಿರಿ, ಸಂತೋಷ ಮುಂತಾದ ಪ್ರಸಂಗಗಳನ್ನು ತೆಳು ಹಾಸ್ಯದ ಲೇಪನದೊಂದಿಗೆ ಸುಂದರವಾಗಿ ಚಿತ್ರಿಸಿದ್ದಾರೆ. ಮಧ್ಯಮ ವರ್ಗದ ಜನರ ರೀತಿ-ನೀತಿಗಳು ಅವರ ವ್ಯಂಗ್ಯ, ವಿಡಂಬನೆ, ಇವರ ಪ್ರಬಂಧದ ಮೂಲ ದ್ರವ್ಯ. 'ಸ್ವರ್ಗಕ್ಕೆ ಭೂ ಬಾಣ' ಎಂಬ ಕೊನೆಯ ಪ್ರಬಂಧ ಪ್ರಜಾವಾಣಿಯ ಟಿ. ಎಸ್. ರಾಮಚಂದ್ರರಾಯರ 'ಭೂ ಬಾಣ' ಕುರಿತು ಬರೆದ ಪ್ರಬಂಧ. ಟಿ. ಎಸ್. ಆರ್. ವ್ಯಕ್ತಿತ್ವದ ಹರಿತ ವ್ಯಂಗ್ಯಕ್ಕೆ, ವಿಡಂಬನೆಗೆ ಈ ಲೋಕ ಮತ್ತು 'ಆಲೋಕ'ದ ಜನ ಹೇಗೆ ಬೆಚ್ಚಿ ಬೀಳುತ್ತಾರೆ ಎಂಬುದನ್ನು ಸುಂದರವಾಗಿ ಚಿತ್ರಿಸಿದ್ದಾರೆ. "ಸ್ವರ್ಗದ ಗೇಟ ಹತ್ರ ಗೇಟ ಕೀಪರ ಟಿಎಸ್ಸಾರ್ನ ತಡೆದು ಬಿಟ್ನಂತೆ. ಹೆಸರೇನ್ರೀ ಅಂದ್ನಂತೆ. ರಾಮಚಂದ್ರರಾವ್ ಅಂತ ಟಿಎಸ್ಸಾರ್ ಹೇಳಿ ಇವನ್ಯಾಕ ಗೇಟ ಹಾಕ್ದ ? ಯಾರಾದರೂ ಪುಢಾರಿಗಳು ವಿಟಮಿನ್ ಐ ಉಪಯೋಗ್ಸಿ ಸ್ವರ್ಗದ ಸೀಟು ಸಿಗದ ಹಾಗೆ ಮಾಡಿದಾರೊ ಅಂತಾ ಅನುಮಾನ ಪಡುತ್ತಿದ್ದ ಹಾಗೆ, ಗೇಟ ಕೀಪರ, ನಿಮ್ಮ ಹೆಸರಿಲ್ರೀ ಅಂದದ್ದು ಕೇಳಿ, ಗೇಟ್ನಲ್ಲಿ ತಡೆಯೋಕ್ಕೆ ಏನೋ ಹಕ್ಕು ನಿಂಗೆ ? ಈ ದರಿದ್ರ ಸ್ವರ್ಗ ಯಾವ್ನಗೆ ಬೇಕು ಎಂದು ಭೂ ಬಾಣ ಬಿಟ್ಟು ಹಿಂತಿರುಗುತ್ತಿದ್ದಂತೆಯೇ 'ಅಯ್ಯೋ ಸ್ವಾಮಿ! ಭೂ ಬಾಣದ ಟಿಎಸ್ಸಾರ ಅಂತ ಮುಂಚೇನೇ ಹೇಳಬಾರದಿತ್ತೇ? ಎಂಥ ಪ್ರಮಾದ! ಕ್ಷಮಿಸಿ ಬುದ್ಧಿ ಅಂತ ಗೇಟಕೀಪರ ಕಾಲಿಗೆ ಬಿದ್ನಂತೆ". ಇದು ಎಂ. ಪಿ. ಮನೋಹರಚಂದ್ರನ್ ಚಿತ್ರವತ್ತಾಗಿ ವ್ಯಕ್ತಿತ್ವವನ್ನು ಬರೆಹಕ್ಕಿಳಿಸುವ ರೀತಿ. ನಗು ಈ ಪ್ರಬಂಧಗಳ ಮೂಲವಾದುದರಿಂದ ನಗೆಯಾಚೆಗಿನ ಜೀವನವನ್ನು ತೋರಿಸುವಲ್ಲಿ ಅಂಥ ಯಶಸ್ಸು ಲೇಖಕರಿಗೆ ಸಿದ್ಧಿಸಿಲ್ಲ.

ಲಘು ಹಾಸ್ಯ ಬರೆಹಗಳು ನಮ್ಮ ಸುಪ್ರಸಿದ್ಧ ನಗೆಬರೆಹಗಾರ ಪ್ರೊ. ವ್ಹಿ. ಎ. ಜೋಶಿ ಅವರ ಪ್ರಬಂಧ ಸಂಗ್ರಹ. ಪ್ರಾಯಶಃ ಇಲ್ಲಿರುವ ಇಪ್ಪತ್ತು ಪ್ರಬಂಧಗಳೂ 'ಹರಟೆ' ವರ್ಗಕ್ಕೆ ಸೇರಲು ತಕ್ಕುವು. ಈಗಾಗಲೇ ಇಲ್ಲಿಯ ಎಲ್ಲ ಬರೆಹಗಳೂ ಪತ್ರಿಕೆಗಳಲ್ಲಿ ಪ್ರಕಟಗೊಂಡೂವೇ. ಪ್ರಬಂಧದ ಕೊನೆಗೆ ಪ್ರಕಟವಾದ ಪತ್ರಿಕೆ ಹಾಗೂ ತಾರೀಖನ್ನು ಸಮೂದಿಸಿದ್ದಾರೆ. 'ಅರ್ಧಾಂಗಿ ಕೃಶಾಂಗಿಯಾದವಳು' ಎಂಬಲ್ಲಿ ಸ್ಥೂಲಕಾಯದ ಹೆಂಡತಿ ಸೂಕ್ಷ್ಮಕಾಯಳಾಗಲು ನಡೆಸಿದ ಹೋರಾಟ ಚಿತ್ರಿಸಿ, ಅವೆಲ್ಲವುಗಳಿಗೆ ಸಾಧ್ಯವಾಗದುದು ಸುಲಭವಾಗಿ ಪರಿಹಾರವಾದ ಬಗೆಯನ್ನು ಹಾಸ್ಯಮಯವಾಗಿ ಚಿತ್ರಿಸಿದ್ದಾರೆ. 'ರಾಜಕೀಯ ಪುಢಾರಿಗಳು,' 'ವಿದ್ಯಾರ್ಥಿಗಳಲ್ಲದ ವಿದ್ಯಾರ್ಥಿಗಳು', 'ಕಲಾವಿದನಲ್ಲದ ಬರೆಹಗಾರ' ಮುಂತಾದ ಪ್ರಬಂಧಗಳಲ್ಲಿ ಮಧ್ಯಮವರ್ಗದ ಜೀವನದ ವಿವಿಧ ಅನುಭವಗಳನ್ನು ಕಲೆಹಾಕಿದ್ದಾರೆ. ಈ ಎಲ್ಲ ಪ್ರಬಂಧಗಳು ಬಹುಮಟ್ಟಿಗೆ ಒಂದೇ ರೀತಿಯವು: ಸಿದ್ಧವಾದ ಮಾದರಿಯಲ್ಲಿಯೇ

ತಯಾರಾದುವು. ನಗೆ ಬರಿಸುವುದನ್ನೇ ಮುಖ್ಯ ಉದ್ದೇಶವನ್ನಾಗಿರಿಸಿಕೊಂಡ ಈ ಲೇಖನಗಳು ಓದಿಸಿಕೊಂಡು, ನಗೆ ಬರಿಸಿ, ಹಾಗೆ ಮಾಯವಾಗುತ್ತವೆ. ಅನಂತರವೂ ಕೆಲಕಾಲವಾದರೂ ಮನಸ್ಸಿನಲ್ಲಿ ನಿಂತುಕೊಳ್ಳುವ ಶಕ್ತಿಯಿಲ್ಲ ಅಥವಾ ಈ ಅನುಭವಗಳನ್ನು ಮೆಲುಕು ಹಾಕಬೇಕು ಎಂಬ ಆಕಾಂಕ್ಷೆ ಓದುಗನಿಗೆ ಉಂಟಾಗುವುದೂ ಸಾಧ್ಯವಿಲ್ಲ. ಓದಿಸಿಕೊಂಡು ಹೋಗುತ್ತವೆಯೆನ್ನುವುದು, ತತ್‌ಕ್ಷಣದಲ್ಲಾದರೂ ರಂಜಿಸುತ್ತವೆಯೆನ್ನುವುದು ಈ ಪ್ರಬಂಧಗಳ ದೊಡ್ಡ ಗುಣ. ಮುದ್ರಣದೋಷಗಳು ಕಿಕ್ಕಿರಿದು ತುಂಬಿ ಹಲವು ಸಲ ನಗೆಗೆ ಅಡ್ಡಗೋಡೆ ಕಟ್ಟುತ್ತವೆ.

ಮಾರ್ಜಾಲ ಪ್ರೇಮಿಗಳು ಶ್ರೀ. ಬೆ.ಗೋ. ರಮೇಶ ಅವರ ನಗೆ ಲೇಖನಗಳ ಸಂಗ್ರಹ. ಇಲ್ಲಿ ೨೦ ಬರೆಹಗಳಿವೆ. ಬೆಕ್ಕನ್ನು ಪ್ರೀತಿಸುವವರು ಅದನ್ನು ಕಳೆದುಕೊಂಡಾಗ ಪಡುವ ಪಾಡು, ಜಗಳ ಪ್ರಾರಂಭವಾಗುವ ಬಗೆ, ಬಸ್ ಪ್ರಯಾಣದ ವಿವಿಧ ಅನುಭವಗಳು, ನ್ಯಾಯಾಲಯಗಳಲ್ಲಿ ಹೊರಹೊಮ್ಮುವ ನಗೆ ಪ್ರಸಂಗಗಳು–ಮುಂ. ಇವರ ಪ್ರಬಂಧಗಳ ವಸ್ತು. ತುಂಬ ಜಾಳು-ಜಾಳಾದ ಈ ಪ್ರಬಂಧಗಳಲ್ಲಿ ನಗೆ ಕೂಡ ಮಿಂಚುವುದಿಲ್ಲ. ಇನ್ನು ಕೆಲವು ಸಲ ನಗೆ ಬರಿಸುವುದಕ್ಕೆ ಯದ್ವಾ–ತದ್ವಾ ಬರವಣಿಗೆ ಇಲ್ಲಿಯ ಬಹುತೇಕ ಲೇಖನಗಳು ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾದವುಗಳು.

ನವಿಲುಗರಿ ಡಾ. ರಾ. ಯ. ಧಾರವಾಡಕರ ಅವರ ಐದನೆಯ ಪ್ರಬಂಧ ಸಂಕಲನ. ಇವರ ಧೂಮ್ರ ವಲಯಗಳು. ತೂರಿದ ಚಿಂತನಗಳು, ಕನ್ನಡ ಪ್ರಬಂಧ ಸಾಹಿತ್ಯದ ಮಹತ್ವದ ದಾಖಲೆಗಳು. ಈ ಸಾಲಿಗೆ ಸೇರುವ ಪ್ರಸ್ತುತ ಕೃತಿ ಎಂಟು ಪ್ರಬಂಧಗಳನ್ನೊಳಗೊಂಡಿದೆ.

ಡಾ. ಧಾರವಾಡಕರ ಅವರ ಬರೆವಣಿಗೆಯ ರೀತಿಯೇ ವಿಶಿಷ್ಟವಾದುದು. ತುಂಟ ಕುದುರೆ ಲಂಗು ಲಗಾಮಿಲ್ಲದೆ ತನ್ನ ಮನ ಬಂದತ್ತ ಓಡಾಡುವ ರೀತಿ ಅವರದು. ಒಮ್ಮೆ ಒಂದು ವಿಷಯವನ್ನಾರಿಸಿಕೊಂಡರೆ ಸಾಕು. ಆ ವಿಷಯದ ಹಿಂದು-ಮುಂದು, ಸುತ್ತು-ಮುತ್ತು, ನೆನಹು-ಕನಸುಗಳಲ್ಲೆಲ್ಲ ಸಂಚರಿಸಿ ಭಾವಗೀತೆಯ ಆತ್ಮೀಯ ಅನುಭವವನ್ನು ಇವರ ಪ್ರಬಂಧಗಳು ಉಂಟುಮಾಡುತ್ತವೆ. ಹಿತ-ಮಿತವಾದ ಹಾಸ್ಯ, ತರ್ಕಬದ್ಧವಾದ ಆಲೋಚನಾ ಸರಣಿ, ವೈಚಾರಿಕ ಗಮ್ಮತ್ತು ಇವೆಲ್ಲ ಇವರ ಪ್ರಬಂಧಗಳಲ್ಲಿ ಸೇರಿ ಪ್ರಬಂಧಗಳಿಗೊಂದು ವಿಶಿಷ್ಟ ಚೌಕಟ್ಟು ನಿರ್ಮಾಣಗೊಳ್ಳುತ್ತದೆ. It is a loose sally of mind, an irregular. un digisted Rice, not regular and orderly performance ಎಂಬ ಜಾನ್ಸನ್ನನ ಪ್ರಬಂಧದ ವ್ಯಾಖ್ಯೆಗೆ ಇವರ ಈ ಪ್ರಬಂಧಗಳು ನಿದರ್ಶನವಾಗುತ್ತವೆ.

ಹೆಸರಿಡುವ ರೀತಿ, ಅದರಲ್ಲಿರುವ ಅವಾಂತರ, ಹೆಣ್ಣೆಂಬ ಸೃಷ್ಟಿಯ ಮಹತಿ, ಪಿಂಚಣಿಯ ಲಾಭ ಮುಂತಾದ ಲೇಖನಗಳು ತರ್ಕಬದ್ಧ ಲೇಖನಗಳಂತೆ ಕಂಡರೂ ಅವುಗಳ ಆಳಗಲ್ಲಿ ವಿಡಂಬನೆ, ಹರಿತ ವ್ಯಂಗ್ಯ ಮಡುಗಟ್ಟಿರುವುದನ್ನು ಕಾಣುತ್ತೇವೆ. 'ನನ್ನ ಪೂರ್ವಗ್ರಹಗಳು', 'ಮಿ. ಮುಖರ್ಜಿ'– ಮನುಷ್ಯನ ದೌರ್ಬಲ್ಯಗಳನ್ನು ಲೇವಡಿ ಮಾಡಿದ ಪ್ರಬಂಧಗಳು. ಒಮ್ಮೊಮ್ಮೆ ಇವರ ಪ್ರಬಂಧಗಳ ಧಾಟಿ ಹರಟೆಯ ಮಟ್ಟಕ್ಕೆ ಇಳಿಯುವುದೂ ಉಂಟು. ಆದರೆ ಕೊನೆ ಹರಟೆಯಲ್ಲಿಯೇ ನಿಲ್ಲದೇ ಜೀವನ ವನ್ನು ಗಂಭೀರವಾಗಿ ಚಿಂತಿಸುವ ತತ್ವಗಳತ್ತ ಕೊಂಡೊಯ್ಯುತ್ತವೆ. ಉದಾಹರಣೆಗೆ ಸಂಭಾವಿತರು ಪ್ರಬಂಧದ ಈ ಮಾತುಗಳನ್ನು ಗಮನಿಸಿ. "ನಿಜವಾಗಿ ಸಂಭಾವಿತ ಒಳ್ಳೆಯವನೇ ? ಒಳ್ಳೆಯವರೆಲ್ಲ ಸಂಭಾವಿತರೇ ?........ ನನ್ನ ಮಟ್ಟಿಗೆ ಒಳ್ಳೆಯವ ರೆಲ್ಲ ಸಂಭಾವಿತರಲ್ಲ, ಒಳ್ಳೆಯವರಿಗೆಲ್ಲ ಸಂಭಾವಿತರೆಂಬ ಮನ್ನಣೆ ಇರುವುದಿಲ್ಲ...... ಸಂಭಾವಿತತನ ಸಮಾಜ ನಮ್ಮಲ್ಲಿ ಕಂಡ ಮುಖ; ಒಳ್ಳೆಯತನ, ನಾವು ನಮ್ಮಲ್ಲಿಯೇ ಕಂಡುಕೊಳ್ಳಬೇಕಾದ ಮುಖ ಜನಮೆಚ್ಚಿ ನಡೆದರೇನುಂಟು ? ಮನ ಮೆಚ್ಚಿ ನಡೆಯಬೇಕು.........." ಹೀಗೆ ಇವರ ಪ್ರಬಂಧಗಳು ಕೇವಲ ನಗಿಸದೇ ಚಿಂತಿಸುವು ದಕ್ಕೂ ಹಚ್ಚುತ್ತವೆ; ತನ್ಮೂಲಕ ನಾಲ್ಕು ಕಾಲ ಮನಸ್ಸಿನಲ್ಲಿ ನಿಲ್ಲುತ್ತವೆ. 'ಪ್ರಬಂಧ ಸಾಹಿತ್ಯಕ್ಕೆ ನವಿಲುಗರಿ ಒಂದು ಒಳ್ಳೆಯ ಸೇರ್ಪಡೆ' ಎಂಬ ಗ್ರಂಥಲೋಕದ ಮಾತು ಬರೀ ಪ್ರಶಂಸೆಯಲ್ಲ.

ಟೋಪಿ ಪ್ರಿಯತಮರ ವ್ಯಂಗ್ಯ ಬರೆಹಗಳ ಸಂಕಲನ. ಇದರಲ್ಲಿ ಏಳು ಹರಟೆ ಗಳಿವೆ. ಟೋಪಿ ಯಾವುದಾದರೇನು ಸ್ವಾಮಿ ? ಅದನ್ನು ತೊಟ್ಟುಕೊಳ್ಳುವ ತಲೆ ಬೇಕೆಂಬುದು ಮುಖ್ಯವಲ್ಲವೆ ? ಇಂತಹ ಟೋಪಿಗೆ ಇಂತಹ ತಲೆ ಎಂದು ಯಾರೂ ನಿರ್ಧರಿಸುವಂತಿಲ್ಲ. ಅವರವರ ತಲೆಯ ಉದ್ದಗಲ ಅವರವರಿಗೇ ತಿಳಿದಿರಬೇಕು. ಇಲ್ಲವಾದರೆ ತಲೆಯ ಮೇಲೆ ಕುಳಿತ ಟೋಪಿ ಕಣ್ಣನ್ನೂ ಮುಚ್ಚಿ ಬಿಡಬಹುದು. ಹೀಗೆ ಟೋಪಿ ಹಾಕುವವರನ್ನು ಪ್ರಿಯತಮ ಎಚ್ಚರಿಸುತ್ತಾರೆ. ಈ ಟೋಪಿ ಪ್ರಬಂಧವೊಂದನ್ನು ಬಿಟ್ಟರೆ ಉಳಿದ ಆರು ಪ್ರಬಂಧಗಳು ತೀರ ಸಾಮಾನ್ಯ ರೀತಿಯವು ನಗಿಸುವುದಕ್ಕೆ ಪ್ರಯತ್ನ ಪಡುತ್ತವೆ. ಹೇಳಬಹುದಾದ ವಿಶೇಷ ಗುಣವೇನೂ ಇಲ್ಲ.

'**ನಂದನವನ**' ಶ್ರೀ ಡಿ. ವ್ಹಿ. ಪುರಾಣಿಕರು ಸಂಪಾದಿಸಿದ ಪ್ರಬಂಧ ಸಂಗ್ರಹ. ಇದರಲ್ಲಿ ೧೩ ಪ್ರಬಂಧಗಳಿವೆ. ಈ ಪ್ರಬಂಧ ಸಂಗ್ರಹಕ್ಕೆ, ಅಥವಾ ಸಂಪಾದಕರಿಗೆ ಯಾವುದೇ ನಿರ್ದಿಷ್ಟ ಚೌಕಟ್ಟಾಗಲೀ, ತಾತ್ವಿಕ ಹಿನ್ನೆಲೆಯಾಗಲೀ ಇಲ್ಲ. ಏನನ್ನಾದರೂ ಬರೆಯುತ್ತಿರಬೇಕು, ಮಾಡುತ್ತಿರಬೇಕು ಎಂಬ ಹಟದಿಂದಾಗಿ ಈ ಪ್ರಬಂಧಗಳನ್ನು ಸಂಗ್ರಹಿಸಿದ್ದಾರಂತೆ'!

'ವಚನಕಾರ ಸೊಡ್ಡಳ ಬಾಚರಸ' ಪ್ರೊ. ಎಸ್. ಎಸ್. ಭೂಸರಡ್ಡಿಯವರ ಪರಿಚಯಾತ್ಮಕ ಪ್ರಬಂಧ, 'ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ' ಶ್ರೀ ಬಾಳೇಶ ಲಕ್ಷೆಟ್ಟಿಯವರ ಸಮೀಕ್ಷಾತ್ಮಕ ಪ್ರಬಂಧ, 'ಹೊಗೆಯಲ್ಲಿ ನಗೆ' ಡಾ. ಎಂ.ಎಸ್. ಸುಂಕಾಪೂರ ಅವರ ಹರಟೆ....... ಈ ರೀತಿಯಲ್ಲಿ ಇಲ್ಲಿಯ ಪ್ರಬಂಧಗಳಿವೆ. ಹೋಗಲಿ ಅವು ನಿಜವಾಗಿ ತಮ್ಮ ತಮ್ಮ ಪರಿಮಿತ ಚೌಕಟ್ಟಿನಲ್ಲಿ ಅರ್ಥಪೂರ್ಣವಾಗಿದ್ದರೆ ಬೇರೆ ಮಾತು. ಇಲ್ಲಿಯ ಎಲ್ಲ ಬರಹಗಳೂ ಸಂತೆಯ ಹೊತ್ತಿಗೆ ಮೂರು ಮೊಳ ನೆಯ್ದು ಅರಿವೆ ತುಂಡಿನಂತಾಗಿವೆ. ಬಹುಶಃ ಒಂದು ಪ್ರಬಂಧ ಸಂಗ್ರಹವನ್ನು ಹೇಗೆ ಸಂಪಾದಿಸಬಾರದು ಎಂಬುವಕ್ಕೆ ಇದು ಒಂದು ಉದಾಹರಣೆಯಾಗಬಹುದೇನೋ ?

'ಪರದೇಶಿಯಾದಾಗ' ಡಾ. ಎಚ್. ಕೆ. ರಂಗನಾಥ ಅವರ ಪ್ರವಾಸದ ಅನುಭವಗಳಿಂದ ಕೂಡಿದ ಪ್ರಬಂಧ ಸಂಕಲನ, ಈ ವರ್ಷದ ಅಪರೂಪದ ವಿಶಿಷ್ಟಕೃತಿ. ಅವರ ವೈದ್ಯನಲ್ಲದ ಡಾಕ್ಟರ, ಕ್ಯಾಪಿಟಲ್ ಪನಿಷ್‌ಮೆಂಟಗಳಲ್ಲಿ ಹಾಸ್ಯವನ್ನೇ ಸೂರೆಗೈದಿದ್ದರೆ, ಇಲ್ಲಿ ಅವುಗಳಿಗಿಂತ ತುಂಬ ಭಿನ್ನವಾದ ಬರೆವಣಿಗೆಯ ಈ ಕೃತಿ ಕನ್ನಡ ಪ್ರಬಂಧ ಸಾಹಿತ್ಯಕ್ಕೊಂದು ವಿಶಿಷ್ಟ ಕೊಡುಗೆ.

ಪಾಶ್ಚಾತ್ಯ–ಪೌರ್ವಾತ್ಯ ಪ್ರವಾಸಗಳಲ್ಲಿನ ಹಲವು ಅನುಭವಗಳ ಕಥಾಮಾಲಿಕೆ ಈ ಸಂಕಲನ. ವಿದೇಶದ ವಿಶಿಷ್ಟ ಅನುಭವಗಳು ಅಲ್ಲಿಯ ಸೌಲಭ್ಯಗಳು, ತಾಪತ್ರಯಗಳು, ಅವರ ಜೀವನದಲ್ಲಿನ ಸರಸ ವಿರಸ, ಜಿಪುಣತನ, ಔದಾರ್ಯ, ಮೋಸ, ಸಜ್ಜನಿಕೆ ಹೀಗೆ ವಿದೇಶದ ಸಾಂಸ್ಕೃತಿಕ ಬದುಕಿನ ಹಲವು ಪ್ರಸಂಗಗಳನ್ನು ಹೃದಯಂಗಮವಾಗಿ ಆತ್ಮೀಯವಾಗಿ, ಸರಸವಾಗಿ ಚಿತ್ರಿಸಿದ್ದಾರೆ. ಇಜಿಪ್ತ, ಇರಾನ್, ನೈಜೀರಿಯಾ, ಘಾನಾ, ರುಮೇನಿಯಾ, ಫಿಲಿಫೈನ್ಸ, ಇಂಡೋನೇಷಿಯಾ, ಈ ದೇಶಗಳ ಪ್ರವಾಸಗಳ* ಈ ಅನುಭವಗಳು ಕನ್ನಡಿಗರಿಗೆ ರಸದೌತಣ. ಮೂವತ್ತು ಪ್ರಬಂಧಗಳ ಈ ಸಂಕಲನದಲ್ಲಿ ನಗೆಯಿದೆ. ಸರಸವಿದೆ, ಸುಸಂಸ್ಕೃತತನವಿದೆ ಹೆಚ್ಚಾಗಿ ಜೀವನದ ಸೂಕ್ಷ್ಮ ನಿರೀಕ್ಷೆ ಇದೆ. ಹತ್ತು ಹಲವಾರು ವ್ಯಕ್ತಿಗಳಸ್ವಭಾವ ಚಿತ್ರಣ ಹಲವು ಪ್ರಬಂಧಗಳಲ್ಲಿದ್ದರೆ, ಇನ್ನು ಕೆಲವು ಪ್ರಬಂಧಗಳಲ್ಲಿ ಅಲ್ಲಿಯ ಸಿಹಿ-ಕಹಿ ಪ್ರಸಂಗಗಳ ನಿರ್ಲಿಪ್ತ ವಿವರಣೆಗಳಿವೆ. ಇವರ ಪ್ರಬಂಧಗಳನ್ನು ಓದುವಾಗ "It is the peculiar form in which the mind independently yoams, sinks and soars, and persues its delightful purpoise way through territorial waters" ಎಂದು ಫ್ರೀಮನ್ (Freeman) ಪ್ರಬಂಧವನ್ನು ಕುರಿತು ಹೇಳಿದಮಾತು ನೆನಪಾಗುತ್ತದೆ. ಇಲ್ಲಿಯ ಒಂದೊಂದು ಪ್ರಬಂಧವೂ ಒಂದೊಂದು ವಿಶೇಷ ಅನುಭವ

---

* ಇದನ್ನು ಪ್ರವಾಸ ಕೃತಿ ಎನ್ನುವರು. ಆದರೆ ಇಲ್ಲಿಯ ಬರೆಹವನ್ನು ಕಂಡ ತಕ್ಷಣ ಇದೊಂದು ಪ್ರಬಂಧ ಕೃತಿ ಎಂದು ಯಾರಿಗಾದರೂ ಅನುಭವವಾಗುತ್ತದೆ.

ವ್ಯಾಪಕವಾದ ಅಧ್ಯಯನ, ದಟ್ಟವಾದ ಅನುಭವ, ಸೂಕ್ಷ್ಮ ಆಲೋಚನಾ ಸಾಮರ್ಥ್ಯ ಒಳ್ಳೆಯ ವಿಶ್ಲೇಷಣಾಶಕ್ತಿ, ಅನನ್ಯವಾದ ಮಾನವೀಯತೆ, ಉತ್ತಮ ವರ್ಣನ ಕೌಶಲ್ಯ, ಮತ್ತು ಮೋಹಕ ಕಲ್ಪನೆಯಿಂದ ಕೂಡಿರುವ ಇಲ್ಲಿಯ ಪ್ರಬಂಧಗಳು ಕನ್ನಡ ಸಾಹಿತ್ಯದಲ್ಲಿ ಬಹುಕಾಲ ಬದುಕಬಲ್ಲ ಸಾಮರ್ಥ್ಯ ಹೊಂದಿವೆ.

ತುಂಬ ಅಚ್ಚುಕಟ್ಟಾಗಿ, ಸುಂದರವಾಗಿ, ಸಚಿತ್ರವಾಗಿ ಮುದ್ರಣಗೊಂಡ ಈ ಕೃತಿಗೆ ಅನುಕ್ರಮಣಿಕೆ ಇಲ್ಲ.

ಒಟ್ಟಾರೆ ಈ ವರ್ಷದ ಪ್ರಬಂಧ ಸಾಹಿತ್ಯವನ್ನು ಸಮೀಕ್ಷಿಸಿದಾಗ ಅಂಥ ಸಂತೋಷ ತರುವ ಕೃತಿಗಳು ತೀರ ಕಡಿಮೆ ಎಂದೇ ಹೇಳಬೇಕು. ಇಂಥ ನಿರಾಶೆಯ ಮಬ್ಬಿನಲ್ಲೂ ದೇಜಗೌ, ಡಾ. ರಾ. ಯ. ಧಾರವಾಡಕರ ಹಾಗೂ ಡಾ. ಎಚ್. ಕೆ. ರಂಗನಾಥ ಅವರ ಕೃತಿಗಳು ಮಿಂಚಿನ ಬೆಳಕನ್ನು ಚೆಲ್ಲುತ್ತವೆ.

●

೧೯೮೩-ಸಾಹಿತ್ಯ ವಿಮರ್ಶೆಯ ಕೆಲವು ಮುಖ್ಯ ಸಂಗತಿಗಳು

● ಜಿ. ಎಸ್. ಅವಧಾನಿ

ಕನ್ನಡದ ಮಟ್ಟಿಗೆ ನವ್ಯೋತ್ತರದ ವಿಮರ್ಶೆ ತನ್ನೆಲ್ಲ ಗಟ್ಟಿ ಸಿದ್ಧಾಂತಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ತೆರೆದುಕೊಳ್ಳುತ್ತಿರುವುದು ತೀರಾ ಇತ್ತೀಚೆಗೆ. ಸಾಹಿತ್ಯ ವಿಮರ್ಶೆಯ ಪರಿಕಲ್ಪನೆಗಳಲ್ಲಿನ ವ್ಯತ್ಯಾಸವನ್ನು ಗುರುತಿಸಿಕೊಳ್ಳದಿದ್ದರೆ ವಿಮರ್ಶೆಯ ವೈಶಿಷ್ಟತೆಯನ್ನು ಕಾದಿರಿಸುವುದಕ್ಕಾಗುವುದಿಲ್ಲ. ಅಂದರೆ ಸೃಜನಶೀಲ ಸಾಹಿತ್ಯಕ್ಕೆ ಸಂವಾದಿಯಾಗಿ ವಿಮರ್ಶೆ ಕೂಡ ಕಾಲದಿಂದ ಕಾಲಕ್ಕೆ ತನ್ನ ಧೋರಣೆ, ಧಾಟಿ. ನಿಲುವುಗಳ ನೆಲೆಯಲ್ಲಿಯೇ ಹೊಸ ಅರಿವನ್ನು ವಿಸ್ತರಿಸುತ್ತದೆ; ವಿಸ್ತರಿಸ ಬೇಕು.

ನವೋದಯದವರು ರಸನಿಷ್ಠೆಯನ್ನು, ನವ್ಯರು ರೂಪನಿಷ್ಠೆಯನ್ನು ಮತ್ತು ದಲಿತ–ಬಂಡಾಯದವರು ವಸ್ತುನಿಷ್ಠೆಯನ್ನು ಹೊಂದಿದವರು ಎನ್ನುವ ಮಾತನ್ನು ನಮ್ಮ ವಿಮರ್ಶೆಯ ಸಂದರ್ಭದಲ್ಲಿಯೇ ಹೆಚ್ಚಾಗಿ ಬಳಸಲೂಬಹುದು. ವಿಮರ್ಶಕನ ಮನೋಧರ್ಮ ತನ್ನ ವೈಯಕ್ತಿಕತೆಯನ್ನು ಮೀರಿ ಹೀಗೆ ಸಾಮುದಾಯಿಕ ಆಯಾಮಗಳತ್ತ ಹೊರಳದ ಹೊರತು ಈ ಇಂತ ಸಾಧ್ಯತೆ ಮೂರ್ತಗೊಳ್ಳು ವುದಿಲ್ಲ. ಮೊದಲಿನೆರಡು ಗುಂಪುಗಳಲ್ಲಿ ವೈಯಕ್ತಿಕತೆಯ ಛಾಪೇ ಮೊಡೆದುಹಾಕುವ ಅಂಶವಾಗಿತ್ತು. ಇನ್ನು ಕೆಲವರು ತಾವು 'ಉದಾರವಾದಿಗಳು' ಎಂದು ತೋರಿಸಿ ಕೊಳ್ಳುತ್ತ ಎಲ್ಲ ಕಡೆಗೂ ಸರಿದಾಡುವ ಸ್ವಭಾವ ಪ್ರಕಟಿಸುತ್ತಿರುವುದೂ ಸುಳ್ಳಲ್ಲ.

ವಿಮರ್ಶೆಯೆಂದರೆ ಕೃತಿಯೊಂದನ್ನು ಕೇವಲ Interprit ಮಾಡುವುದಷ್ಟೇ ಆಗಿರದೆ; ವಸ್ತು ಹಾಗೂ ತಾತ್ವಿಕತೆಯ ನಡುವಿನ ಸಂಬಂಧ, ಸಂಘರ್ಷಗಳ ಸೂಕ್ಷ್ಮ ವನ್ನು ಸಹ–ಚಾರಿತ್ರಿಕ ಗತಿಯಲ್ಲಿ ಕಟ್ಟಿಕೊಡುವಲ್ಲಿಯೂ ತೊಡಗಿಕೊಂಡಿರಬೇಕಾಗು ತ್ತದೆ. ಆಗ ಸಹಜವಾಗಿಯೇ ವಿಮರ್ಶೆಯ ಜವಾಬ್ದಾರಿ, ಹರಹು, ಮಗ್ಗಲುಗಳು ವಿಸ್ತರಿಸುತ್ತವೆ. ಕಲೆಗಾಗಿ ಕಲೆ ಎಂಬಂತೆ 'ವಿಮರ್ಶೆಗಾಗಿ ವಿಮರ್ಶೆ' ಸೃಷ್ಟಿಸುವ ಹಾಗಿಲ್ಲ. ವಿಮರ್ಶೆಯ ಸಿದ್ಧಾಂತಗಳು, ಮಾನದಂಡಗಳು ಸಮಾಜಶಾಸ್ತ್ರ. ಮಾನವ ಶಾಸ್ತ್ರ, ಚರಿತ್ರೆ, ವಿಜ್ಞಾನ, ರಾಜಕೀಯ ಮೊದಲಾದ ಸಾಹಿತ್ಯೇತರ ವಿಷಯಗಳ

ಮೂಲಕ ಹಾದುಬರಬೇಕಾಗುತ್ತದೆ. ಕಲೆ, ಸೌಂದರ್ಯಗಳ ಪ್ರಜ್ಞಾಪೂರ್ವಕ ಅರಿ
ವಿದ್ದೂ; ಬದುಕಿನಲ್ಲಿ ಬೇರುಬಿಡುವ, ಎರೆಮಣ್ಣಿನೊಡನೆ ಬೆರೆಯುವ ಗುಣ ಪಡೆಪ್ಪು
ಕೊಳ್ಳಬೇಕಾಗುತ್ತದೆ. ಈ ಎಲ್ಲವುಗಳನ್ನು ಇಡಿಯಾಗಿಸಿಕೊಳ್ಳುವ ಹಾಗೂ ಇಡಿ
ಯಾಗೇ ಗ್ರಹಿಸುವ ಶಕ್ತಿ ವಿಮರ್ಶೆಯು ಶಿಸ್ತಾಗಬೇಕು. ಆವಾಗ ಸಾಹಿತ್ಯ ಮತ್ತು
ವಿಮರ್ಶೆಯ ಅಂತಿಮಗಳು ಒಂದೇ ಆಗಿ ಸಲ್ಲುವುದು. ಎಂಭತ್ತರ ದಶಕದಲ್ಲೂ
ಸಹ ನಮ್ಮ ವಿಮರ್ಶೆ ಮೇಲೆ ಪ್ರಸ್ತಾಪಿಸಿದ ವಿಭಿನ್ನ ಲೋಕಗಳ ಸಂಪರ್ಕದಿಂದ
ದೂರ ಸರಿದಿರುವುದು ಎದ್ದು ಕಾಣುತ್ತದೆ. ನವ್ಯ ವಿಮರ್ಶೆ, ಕೃತಿನಿಷ್ಠ ವಿಮರ್ಶೆ,
ಪ್ರಾಯೋಗಿಕ ವಿಮರ್ಶೆಗಳೆಲ್ಲ ಹೆಚ್ಚು ಕಡಿಮೆ ಅಭಿವ್ಯಕ್ತಿ, ಭಾಷೆ, ಸಂಕೇತ, ಪ್ರತಿಮೆ
ಇತ್ಯಾದಿಗಳಲ್ಲೆ ಕಾವ್ಯಾರ್ಥ ಸಂಶೋಧನೆ ನಡೆಸಿದವು. ಕೆಲವು ಸಿದ್ಧ ಸೂತ್ರಗಳ
ಸರಹದ್ದಿನಲ್ಲಿ ಚಟುವಟಿಕೆ ನಡೆದವು. ಕೃತಿಯೊಂದರ ಸೌಂದರ್ಯವನ್ನು, ಕಲಾತ್ಮಕತೆ
ಯನ್ನು ವಿವೇಚಿಸುವಷ್ಟರ ಮಟ್ಟಿಗೆ 'ಸಾಹಿತ್ಯವಿಮರ್ಶೆ' ಧನ್ಯತೆ ಪಡೆಯಿತು. ಆದರೆ
ಸಾಹಿತ್ಯದ ಸತ್ವ ಹಾಗೂ ಅದು ಕಟ್ಟಿಕೊಡುವ ಮೌಲ್ಯಗಳನ್ನು-ಆಧ್ಯಾತ್ಮಿಕ, ಅಲೌಕಿಕ
ಅರ್ಥದಲ್ಲಿ ಅಲ್ಲ–ಹೆಕ್ಕಿಡುವಲ್ಲಿ ವಿಶೇಷ ಆಸಕ್ತಿ ವಹಿಸಿದಂತೆ ಕಂಡುಬರುವುದಿಲ್ಲ.
ಹೀಗೆನ್ನುವಾಗ ನವ್ಯರಲ್ಲಿ ಇಂತ ಕಾಳಜಿ ಅಥವಾ ಆಲೋಚನೆ ಇರಲಿಲ್ಲ ಅಂತಲ್ಲ.
ಆಲೋಚಿಸುವ ಕ್ರಮದಲ್ಲಿ ಇಂತ ಎಚ್ಚರವನ್ನು ತೋರಿಸಿದರೂ: ಅದನ್ನು ಆಗ ಗೋಳಿ
ಸುವಲ್ಲಿ–ಯಾಕೋ ವಿಫಲರಾದರು. "ಸಾಹಿತ್ಯದಲ್ಲಿ ಆಸಕ್ತಿಯೆಂದರೆ ಸುಂದರವಾಗಿ
ಬರೆಯುವುದರಲ್ಲಿ ಆಸಕ್ತಿಯಾಗಿಬಿಟ್ಟರೆ ಆಗ ಸುಂದರವಾಗಿ ಬರೆದದ್ದು ಚಿಲ್ಲರೆ ವಿಷಯ
ವಾಗುತ್ತದೆ. ಆದ್ದರಿಂದ ನಮ್ಮ ಸಾಹಿತ್ಯ ಪರಂಪರೆ ನಮ್ಮ ಅರಿವಿಗೆ ಯಾವ ಸೂಕ್ಷ್ಮ
ವನ್ನು ಸೇರಿಸಲಾರದೇ ಹೋಗುತ್ತದೆ. ನಮ್ಮ ಸಾಹಿತ್ಯ ಪರಂಪರೆ ಬಹುತೇಕ ಈ
ರೀತಿಯದಾದ್ದರಿಂದಲೇ ನಮ್ಮಲ್ಲಿ ಜೀವಂತ ಸಾಹಿತ್ಯವನ್ನು ಸೃಷ್ಟಿಸಿದವರೆಲ್ಲ ಸಾಹಿತ್ಯ
ವನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಳ್ಳದೇ ಇದ್ದವರು ಎಂಬುದು ಗಮನಾರ್ಹ.
ಸಾಹಿತ್ಯ ಎಲ್ಲೆಲ್ಲಿ 'ಬೈ ಪ್ರಡಕ್ಟ್' ಆಗಿ ಹುಟ್ಟಿದೆಯೋ ಅಲ್ಲೆಲ್ಲ ಗಂಭೀರವಾಗಿದೆ.
ಅರ್ಥಪೂರ್ಣವಾಗಿದೆ ಎನ್ನುವುದು ವೀರಶೈವವಚನಗಳನ್ನೋದುವಾಗ. ಕಾರಂತರ
ಕಾದಂಬರಿಗಳನ್ನೋದುವಾಗ ಮನದಟ್ಟಾಗುತ್ತದೆ" ಎಂದು ಅನಂತಮೂರ್ತಿ ಹೇಳು
ತ್ತಾರೆ. ಆದರೆ ಅಂತ ಸಾಮಾಜಿಕ ತರ್ಕದ ವಿಮರ್ಶೆಯನ್ನು ನವ್ಯ ವಿಮರ್ಶಕರ
ನೇಕರು-ಪ್ರಾಯೋಗಿಕ ನೆಲೆಯಲ್ಲಿ-ಕಂಡರಿಸಲಿಲ್ಲ. ಅನುಭವದ ಉದಾತ್ತೀಕರಣವನ್ನು
ವೈಭವೀಕರಿಸುವಲ್ಲಿ ತೋರಿದ ಜಾಣತನವನ್ನು ಅನುಭವದ ಹಿಂದಿರುವ ತಾತ್ವಿಕ
ಧೋರಣೆಯನ್ನು ಬಯಲಿಗಿಡಲು ಮುಂದಾಗಲಿಲ್ಲ. ಹಾಗಾಗಿ 'ಸಮಷ್ಟಿ'ಯ ಕಲ್ಪನೆ
ಆ ಮಟ್ಟಿಗೆ ಹಾಗೇ ಉಳಿದುಕೊಂಡು ಬಿಟ್ಟಿತು. ಬಹುಶಃ ಈ ಇದಕ್ಕೆಲ್ಲ ಮುಖ್ಯ
ಕಾರಣ ನಮ್ಮ ಹೆಚ್ಚಿನ ವಿಮರ್ಶಕರೆಲ್ಲ ಮಧ್ಯಮ ವರ್ಗದ ಇಬ್ಬಂದಿತನಕ್ಕೆ ಒಳಗಾ
ಗಿರುವುದೇ ಆಗಿದೆ. ಸಿ. ವೀರಣ್ಣ ಹೇಳುವ ಹಾಗೆ—

"ಸಾಹಿತ್ಯ ವಸ್ತುವಿನ ವಿಸ್ತಾರವನ್ನು ಕುರಿತು ಮಾತನಾಡುವಾಗ ನಮ್ಮ ಸಾಹಿತಿ ಇರುವ ಪರಿಸ್ಥಿತಿ ಅರ್ಥಾತ್ ನಾವಿರುವ ಪರಿಸ್ಥಿತಿಯೂ ನಮ್ಮ ಗಮನಕ್ಕೆ ಬಾರದೇ ಹೋಗಬಹುದು. ಶೇಕಡಾ ೩೦ ರಷ್ಟು ಅಕ್ಷರಸ್ಥರಿರುವ ನಾಡಿನಲ್ಲಿ ಅಕ್ಷರದ ಮೂಲಕ ಪ್ರಕಟವಾಗುವ ಸಾಹಿತ್ಯದ ಸಾಹಚರ್ಯ ಅದರ ಮೂರನೇ ಒಂದು ಭಾಗಕ್ಕೂ ಸೀಮಿತವಾದದ್ದೆಂದು ತಿಳಿದರೆ ಹೆಚ್ಚಾಯಿತೇನೊ ? ಈ ಮೂರನೇ ಒಂದು ಭಾಗದ ಬಹುಪಾಲು ಓದುಗರೂ ನಗರವನ್ನವಲಂಬಿಸಿದ ಮಧ್ಯಮವರ್ಗದವರು. ಈ ವರ್ಗದ ಆಶಯಗಳನ್ನು ಹೊತ್ತುಕೊಂಡೇ ಬರುತ ಮತ್ತು ಇದೇ ವರ್ಗದವರಾಗಿಯೇ ಇರುವ ಲೇಖಕರಿಗೆ ಈ ವಲಯದಾಚೆಗಿನ ಸಂವೇದನೆಗಳು ಮುಟ್ಟುವುದಾದರೂ ಹೇಗೆ ? ಈ ವರ್ಗದ ಲೇಖಕರು, ತಮ್ಮ ತೆಕ್ಕೆಗೆ ಒಗ್ಗಿದ ಅನುಭವಗಳಿಗೆ ಅಭಿವ್ಯಕ್ತಿಯನ್ನು ರೂಪಿಸಿಕೊಳ್ಳುವುದರಲ್ಲಿ ಸಫಲರಾದರೆ ತಮ್ಮ ಉದ್ದೇಶ ಈಡೇರಿತೆಂದು ಭಾವಿಸುತ್ತಾರೆ. ಅದೇ ವರ್ಗದ ಓದುಗರಿಂದ ಒಪ್ಪಿಗೆ ಪಡೆದುಕೊಂಡ ಕೂಡಲೇ ಅವರು ಜನತೆಯ ಬರಹಗಾರರಾದಂತೆ ಭಾವಿಸಲಾಗುತ್ತದೆ. ಆದರೆ ವಾಸ್ತವವಾಗಿ ನೂರಕ್ಕೆ ತೊಂಭತ್ತು ಭಾಗ ಈ ಮಧ್ಯಮ ವರ್ಗದ ಕಕ್ಷೆಗೇ ಬರದ ರೈತ-ಕಾರ್ಮಿಕರೇ ಮೊದಲಾದ ಇತರ ಗ್ರಾಮಜೀವಿಗಳನ್ನು ಅವರು ಗಮನಿಸುತ್ತಲೇ ಇಲ್ಲವೆಂಬ ಅಂಶ ಬೆಳಕಿಗೇ ಬರುವುದಿಲ್ಲ.

ಈ ಇಂತಹ ಸಾಹಿತ್ಯವನ್ನು ವಿಮರ್ಶಿಸುವ ವಿಮರ್ಶಕರೂ ಸಹ ಇದೇ ದ್ವಂದ್ವವನ್ನು ಉಳಿಸಿಕೊಂಡವರು ಎಂಬುದನ್ನು ಒತ್ತಿ ಹೇಳುವುದಕ್ಕಾಗಿಯೇ ಈ 'ಉದ್ಧರಣೆ'ಯನ್ನು ಇಷ್ಟು ದೀರ್ಘವಾಗಿ ಕೊಡಬೇಕಾಯಿತು.

ಇಷ್ಟೆಲ್ಲ ಹೇಳುವಾಗ ನಾನು ಕೇವಲ ಏಕಪಕ್ಷೀಯವಾದ ಮಾತುಗಳನ್ನು ಹೇಳುತ್ತಿದ್ದೇನೆಂದು ಭಾವಿಸಲಾಗದು. ಅಂದರೆ ನವೋದಯ ಹಾಗೂ ನವ್ಯ ವಿಮರ್ಶೆಯ ಪರಿಮಿತಿಗಳನ್ನು ಗುರುತಿಸಿದೆನೇ ಹೊರತು: ಆ ವಿಮರ್ಶೆಯ ಅಸ್ತಿತ್ವವನ್ನಾಗಲಿ, ಪರಿಣಾಮವನ್ನಾಗಲಿ ನಿರಾಕರಿಸುವುದಕ್ಕಾಗಿ ಅಲ್ಲ. ಯಾಕೆಂದರೆ ಇಂತ ವಿಮರ್ಶೆ ಹುಟ್ಟುವುದಕ್ಕೆ ಕಾರಣ ಈ ಇಂತ ಸಾಹಿತ್ಯ ಸೃಷ್ಟಿ ಹಾಗೂ ಇಂತ ಸಾಹಿತ್ಯ ಸೃಷ್ಟಿಗೆ ಕಾರಣ ನಮ್ಮ ಸಮಾಜ ಹಾಗೂ ವ್ಯವಸ್ಥೆ ಪರಿಸರಗಳೇ ಕಾರಣ ಎಂಬುದನ್ನೆ ನಾನು ಅಲ್ಲಗಳೆಯುವುದಿಲ್ಲ. ಜತೆಗೆ ಸಾಹಿತ್ಯ ಮತ್ತು ವಿಮರ್ಶೆಯ ಬಗೆಗೆ ರೂಢಿಸಿಕೊಂಡು ಬಂದ ಇತ್ಯಾತ್ಮಕ ನಿಲುವೂ ಸಹ ಕೆಲಸ ಮಾಡುತ್ತಿದೆ. ಆದರೆ ಈ ಒಂದು ಅಂಶವೇ 'ರಿಯಾಯತಿ' ಆಗಬೇಕು ಎಂದೂ ಸಹ ನಾನು ಭಾವಿಸುವುದಿಲ್ಲ. ವಿಮರ್ಶಾ ಪರಂಪರೆಯ ಚಾರಿತ್ರಿಕ ಗತಿಯನ್ನು ಅವಲೋಕಿಸುತ್ತ-ಲೌಕಿಕವಾಗಿ ಒಟ್ಟು ಮಾನವ ಪ್ರಪಂಚದ ಕಡೆಗೆ ವಿಮರ್ಶೆ ಎಷ್ಟರ ಮಟ್ಟಿಗೆ ಹಬ್ಬಿಕೊಂಡಿದೆ ಎನ್ನುವುದನ್ನು ಯಾವ ಮುಲಾಜೂ ಇಲ್ಲದೆ ದಾಖಲಿಸಿದಾಗ ಮಾತ್ರ ಸತ್ಯದ 'ನಿಜತ್ವ'ಕ್ಕೆ ಪ್ರಾಮಾಣಿಕ

ನ್ಯಾಯವನ್ನು ಒಪ್ಪಿಸಿದಂತಾಗುತ್ತದೆ. ವಿಮರ್ಶೆ ಆಯಾ ಕಾಲದ, ಅಪಕ್ಕಿಂತ ಮುಖ್ಯವಾಗಿ ಒಟ್ಟೂ ಮಾನವೀಯವಾದ, ಎಲ್ಲ ಸಂಕುಚಿತ–ಕೃತ್ರಿಮಗಳನ್ನು ಮೀರಿದ ಸಹಜ ವಾಸ್ತವಕ್ಕೆ ಮುಖಾಮುಖಿಯಾಗಬೇಕು. ಮತ್ತು ಆ ಸಂದರ್ಭದಲ್ಲಿ ಯಾವುದೇ ವಿಧವಾದ 'ಅಹಂ'ಗಳಿಗೆ ಒಳಗಾಗಿ 'ಪ್ರದರ್ಶನ ಪ್ರಿಯ'ವಾಗಬಾರದು ಎಂಬ ವಿಚಾರದಲ್ಲಿ ಗಾಢವಾದ ವಿಶ್ವಾಸ ಇದ್ದುದರಿಂದಲೇ; ಈ ಇಂತಹ ಧೋರಣೆಗಳನ್ನು ಹೊತ್ತ ವಿಮರ್ಶಾ ರೀತಿಯನ್ನು ಗುರುತಿಸುವುದೇ ಅಗದಿ ಮುಖ್ಯ ಅಂತ ನಾನು ನಂಬಿಕೊಂಡಿದ್ದೇನೆ.

ವಿಮರ್ಶೆಗೂ ಸಹ ಒಂದುರೀತಿಯ ಬದ್ಧತೆಯ ಅನಿವಾರ್ಯ ಉಂಟೇ ? ಎಂದು ಕೆಲವರು ಭಾವಿಸಬಹುದು. ಹಲವರು "ವಿಮರ್ಶೆಗೆ, ಕೃತಿ ತನ್ನ ಇರವಿನಲ್ಲಿ ಏನು ಹೇಳುತ್ತದೆ ಎಂಬುದು ಮುಖ್ಯವೇ ವಿನಾ; ಅದು ಹೇಗೆ ಇರಬೇಕಾಗಿತ್ತು ಎಂಬುದಲ್ಲ" ಎಂದು ಹೇಳುತ್ತಾರೆ. ಅಂದರೆ ಕೃತಿಯೊಂದು ತನ್ನ ಒಟ್ಟೂ ರಚನೆಯಲ್ಲಿ ಹೇಗೆ 'ಆಕೃತಿ' ಗೊಂಡಿದೆ ಎಂಬುದನ್ನಷ್ಟೇ ಹೇಳಬೇಕಾದದ್ದು ವಿಮರ್ಶೆಯ ಕೆಲಸ ಎಂಬ ವಾದವೂ ಇದೆ. ಹಾಗಲ್ಲದೆ 'ಹಾಗೆ ಇರಬೇಕಾಗಿತ್ತು' ಎಂದು ನಿರ್ದೇಶಿಸುವುದು ವಿಮರ್ಶೆಯ ಕೆಲಸವಲ್ಲ ಅಂತಲೂ ನಂಬಲಾಗಿತ್ತು. ಪ್ರಾಯಶಃ ಈ ವಿಚಾರದಲ್ಲಿ ಇನ್ನೂ ಭಿನ್ನಾಭಿಪ್ರಾಯಗಳು ಉಳಿದುಕೊಂಡಿವೆ. ಬದ್ಧತೆ ಬಗ್ಗೆ ಒಂದು ಮಾತನ್ನು ಹೇಳಬಹುದು. ಪ್ರಜ್ಞಾ ಪೂರ್ವಕವಾಗಿ ನಿರ್ಲಿಪ್ತವಾಗಿ ಕೃತಿಗಷ್ಟೇ ನಿಷ್ಠವಾಗಿ ಬರೆಯಬೇಕೆಂದುಕೊಂಡರೂ; ಅವನ ಅನುಭವ–ವ್ಯಕ್ತಿತ್ವ ಅಂತರ್‌ವಾಹಿನಿಯಾಗಿ ಹರಿಯುತ್ತದೆ. ಇದನ್ನು ಹೀಗೂ ಸಹ ಸರಳೀಕರಿಸಬಹುದು. ವೈಯಕ್ತಿಕತೆಯ ಛಾಪು ವಸ್ತುನಿಷ್ಠ ವಿಮರ್ಶೆಯಲ್ಲೂ ಸಹ ಅಂಶಿಕವಾಗಿಯಾದರೂ ಇದ್ದೇ ಇರುತ್ತದೆ. ಆದರೆ ನವೋದಯ–ನವ್ಯನಲ್ಲಿನಂತೆ ಅದು ತಾನೇ ತಾನಾಗಿ ವಿಜೃಂಭಿಸುವುದಿಲ್ಲ.

ಇತ್ತೀಚಿಗಿನ ದಲಿತ–ಬಂಡಾಯ ವಿಮರ್ಶೆಯಲ್ಲಿ ಮುಖ್ಯವಾಗಿ ಎದ್ದುಕಾಣುವುದು ಎಡಪಂಥೀಯ ದೃಷ್ಟಿಧೋರಣೆ. ಈ ಇಲ್ಲೂಸಹ ಮಾರ್ಕ್ಸ್‌ವಾದಿಗಳು. ಲೋಹಿಯಾವಾದಿಗಳು, ಅಂಬೇಡ್ಕರ ವಾದಿಗಳು–ಇಡಿಯಾಗಿ ಇವರೆಲ್ಲ ಎಡಪಂಥೀಯ ನಿಲುವಿನವರೇ ಆಗಿದ್ದರೂ ಸಹ ಬೇರೆ ಬೇರೆ ಲೆವಲ್ಲಿನಲ್ಲಿ ಕೃತಿಯೊಂದರ ವಿಮರ್ಶೆ ಮಾಡುವುದನ್ನು ನೋಡಬಹುದು. ಉದಾಹರಣೆಗೆ ಚಿತ್ತಾಲರ 'ಶಿಕಾರಿ' ಕಾದಂಬರಿಯಲ್ಲಿ ಕೆಲವರು ಬಂಡವಳಶಾಹಿಯ ಕ್ರೂರ ಶೋಷಣೆಯನ್ನು ಗುರುತಿಸಿದರೆ: ಮತ್ತೆ ಕೆಲವರು ಅದರಲ್ಲಿನ ಜೀವವಿರೋಧೀ ಸಂಗತಿಗಳನ್ನು ಕಂಡರಿಸುತ್ತಾರೆ. ಒಟ್ಟಿನಲ್ಲಿ ಒಂದಂತೂ ಸತ್ಯ–ಇವತ್ತಿನ ವಿಮರ್ಶಾ ಪ್ರಕ್ರಿಯೆಯಲ್ಲಿ 'ಜನತೆಗಾಗಿ ಕಲೆ' ಎಂಬ ಪ್ರಧಾನ ಅಂಶ ವ್ಯಾಪಕವಾಗಿ ಆವರಿಸಿಕೊಂಡಿದೆ. ಕನ್ನಡ ವಿಮರ್ಶೆಯ ಬೆಳವಣಿಗೆಗೆ ಈ ಇಂತ ನೋಟದ, ವಿಧಾನದ ಅಗತ್ಯ ಖಂಡಿತವಾಗೂ ಬೇಕು.

೨

೧೯೮೩ರಲ್ಲಿ ಪ್ರಕಟವಾದ ಕೆಲವು ವಿಮರ್ಶಾಕೃತಿಗಳಲ್ಲಿ ಈ ಮೇಲೆ ಪ್ರಸ್ತಾಪಿಸಿದ, ಎಡಪಂಥೀಯ ಆಲೋಚನೆಗಳು ನಿಚ್ಚಳವಾಗಿ ಮೂರ್ತಗೊಂಡಿರುವುದನ್ನು ಗುರುತಿಸಬಹುದು. ಅಂದರೆ ಬದಲಾಗುತ್ತಿರುವ ಸೃಜನಶೀಲತೆಯ ದೃಷ್ಟಿಗೆ ಸಮಾಂತರವಾಗಿ ವಿಮರ್ಶೆಯಲ್ಲೂ ಅಂತ ಪರಿಕಲ್ಪನೆಗಳು ಒಡಮೂಡತೊಡಗಿರುವುದು ನಮ್ಮ ಅರಿವಿನ ವಿಸ್ತಾರದ ಸಂದರ್ಭದಲ್ಲಿ ಮಹತ್ವದ್ದಾಗಿದೆ. ಬೆಳೆಯುತ್ತಿರುವ ವಿಮರ್ಶೆ ಬೇರೆ ಬೇರೆ ನೆಲೆಗಳಿಂದ ರೂಪುಗೊಂಡು ಸತ್ವಶಾಲೀ, ಸೈದ್ಧಾಂತಿಕ ಗಟ್ಟಿತನದೊಂದಿಗೆ ವಿಸ್ತೃತ ಗೊಳ್ಳುವುದು ಅನಿವಾರ್ಯವಾಗಿದೆ.

ವಿಮರ್ಶೆಯ ದೃಷ್ಟಿಯಿಂದ ಈ ವರ್ಷ ಬರಡು ನೆಲವೇನೂ ಆಗಿಲ್ಲ. ಸ್ವತಂತ್ರ ಕೃತಿಗಳ ಜತೆ ಹಿರಿಯ ಬರಹಗಾರರ ಹಳೆ ಕೃತಿಗಳೂ ಪುನರ್ ಮುದ್ರಣ ಗೊಂಡಿವೆ. ಸಾಹಿತ್ಯ ಅಕಾಡಮಿ, ವಿಶ್ವ ಕನ್ನಡ ಸಮ್ಮೇಳನ ಮಾಲಿಕೆಗಳ ಆಶ್ರಯದಲ್ಲಿ ಮೌಲಿಕ ಗ್ರಂಥಗಳು ಹೊರಬಂದಿವೆ. ೧೯೮೩ರಲ್ಲಿ ಪ್ರಕಟವಾದ ವೈಚಾರಿಕ ಕೃತಿಗಳೆಲ್ಲವನ್ನು ನಾನಿಲ್ಲಿ ಸಮೀಕ್ಷೆಗೆ ಬಳಸಿಕೊಂಡಿಲ್ಲ. ಕೇವಲ 'ವಿಮರ್ಶೆ' ಗಷ್ಟೇ ಆದ್ಯತೆ ಇಟ್ಟುಕೊಂಡಿದ್ದೇನೆ ಅವು ಸಂಖ್ಯಾದೃಷ್ಟಿಯಲ್ಲಿ ಸಣ್ಣವಾಗಿದ್ದರೂ; ಬೆಲೆಯುಳ್ಳವು ಎಂಬುದರಲ್ಲಿ ಸಂದೇಹವಿಲ್ಲ.

ಡಿ. ಆರ್. ನಾಗರಾಜರ 'ಅಮೃತ ಮತ್ತು ಗರುಡ', ಎಸ್. ವೆಂಕಟರಾಂ ಅವರ 'ದುಡಿಯುವವರ ದನಿ ಮತ್ತು ಇತರ ಲೇಖನಗಳು', ಸಿ. ವೀರಣ್ಣನವರ 'ಮಾರ್ಕ್ಸ್‌ವಾದ: ತತ್ವ ಶಾಸ್ತ್ರ ಮತ್ತು ಸಾಹಿತ್ಯ'. 'ಸಾಹಿತ್ಯ ಮತ್ತು ಸಮುದಾಯ', ಮನುಜ ಅವರ 'ಪ್ರತಿಪಾದನೆ' ಮತ್ತು ಚೆನ್ನಯ್ಯನವರ 'ಪ್ರಾಸಂಗಿಕ' ಕೃತಿಗಳು ಈ ವರ್ಷದ ಕೆಲವು ಗಮನಾರ್ಹ ವಿಮರ್ಶೆಯ ಸಂಕಲನಗಳು. ತಾತ್ವಿಕ ಹಾಗೂ ಸೈದ್ಧಾಂತಿಕ ಆಶಯಗಳನ್ನು ಹೊಂದಿ ಬರೆದವುಗಳು. ಈಗಾಗಲೇ ಪ್ರಸ್ತಾಪಿಸಿದ ಬಗೆಯ ಬರಹಗಳೂ ಹೌದು. ವಿಮರ್ಶೆಯ ಮೈಲುಗಲ್ಲುಗಳನ್ನು ಹೊಳಪುಗೊಳಿಸುವಲ್ಲಿ ಇವುಗಳ ಸಾಧನೆಯನ್ನು ತಪಕ್ಕನೆ ನಿರಾಕರಿಸುವ ಹಾಗಿಲ್ಲ.

'ಅಮೃತ ಮತ್ತು ಗರುಡ' ಕನ್ನಡದ ಮುಖ್ಯ ವಿಮರ್ಶಾ ಕೃತಿಗಳಲ್ಲೊಂದು ಎಂಬುದು ನಿರ್ವಿವಾದ. ವಿಮರ್ಶೆಯ ಆಕೃತಿ ಮತ್ತು ಆಶಯಗಳ ಬಗ್ಗೆ ಭಿನ್ನವಾದ ಆದರೆ ಖಚಿತವಾದ ತಿಳುವಳಿಕೆಗಳನ್ನು ಮೈಗೂಡಿಸಿಕೊಂಡ ನಾಗರಾಜರ ಉತ್ತಮ ವಿಮರ್ಶೆಗೆ ಈ ಸಂಕಲನವು ಸಾಕ್ಷಿಯಾಗಿದೆ. ಇಲ್ಲಿ ನಾಲ್ಕು ವಿಭಾಗಗಳಿದ್ದು. ಒಟ್ಟು ಹದಿನಾರು ಬಿಡಿ ಬರಹಗಳಿವೆ. ನಾಗರಾಜ ಕೃತಿಯೊಂದರ ಕಲಾತ್ಮಕತೆಯ ವೈಭವ ದಲ್ಲೇ ಮತ್ತು ಅದನ್ನು ಚಪ್ಪರಿಸುವುದರಲ್ಲೇ ಧನ್ಯತೆ ಪಡೆಯದೆ; ಅದರೊಂದಿಗೆ,

ಅಥವಾ ಅದಕ್ಕಿಂತ ಮುಖ್ಯವಾದ ಕೃತಿಯ ಸಾಂಸ್ಕೃತಿಕ ಸನ್ನಿವೇಶದ ನೆಲೆಬೆಲೆಗಳ ಮೌಲ್ಯವನ್ನು ಕಂಡಿರಿಸುತ್ತಾರೆ. ಹಾಗೆ ಹೇಳುವಲ್ಲೂ ಸಹ ಅಗದಿ ಗಟ್ಟಿ ಮುಟ್ಟಾಗಿ, ಕನ್ವಿನ್ಸಿಂಗ್ ಆಗಿ ಹೇಳುವ ಶಕ್ತಿ ಅವರದ್ದು. ಮಾರ್ಕ್ಸ್‌ವಾದೀ ವಿಮರ್ಶೆಗೆ ಒಂದು ಗಟ್ಟಿಮುಟ್ಟಾದ ಅಭಿಪ್ರಾಯ ನಿರ್ಮಿಸುವಲ್ಲಿ ಇವರ ಬರಹಗಳಿಗೆ ಸಿಂಹಪಾಲು ಸಲ್ಲು ತ್ತದೆ. ವಿಮರ್ಶೆಯ ಸ್ವರೂಪ ಮತ್ತು ಉದ್ದೇಶಗಳನ್ನು ನಾಗರಾಜ ಸ್ಪಷ್ಟಗೊಳಿಸು ವುದು ಹೀಗೆ.

'ಅಂತಿಮವಾಗಿ ವಿಮರ್ಶೆ ತೊಡಗಿಕೊಳ್ಳಬೇಕಾದದ್ದು ಆಕೃತಿಯ ಜೊತೆಗೇ ಎಂಬ ನಿಲುವನ್ನು ತಳೆದ ಮಾರ್ಕ್ಸ್‌ವಾದೀ ವಿಮರ್ಶಕ ಫ್ರೆಡರಿಕ್ ಜೇಮ್ಸ್‌ಸನ್‌ನ ಮಾತಿಗೆ ಈ ಲೇಖಕನ ಸಂಪೂರ್ಣ ಒಪ್ಪಿಗೆ ಇದೆ ..ಆದರೆ ಈ ನಿಲುವಿಗೂ ರೂಪ ನಿಷ್ಠುರ ನಿಲುವಿಗೂ ತುಂಬಾ ವ್ಯತ್ಯಾಸವಿದೆ. ರೂಪ ನಿಷ್ಠರಿಗೆ ಆಕೃತಿಯೇ ವಿಶ್ಲೇಷಣೆಯ ಪ್ರಾರಂಭ ಮತ್ತು ಕೊನೆ. ಆದರೆ ಡೈಲೆಕ್ಟಿ ಕಲ್ ವಿಮರ್ಶಾವಿಧಾನ ಹಾಗಲ್ಲ. ಇಲ್ಲಿ ಆಕೃತಿ ಅಂತಿಮ ಮುಖಾಮುಖಿ...... ಆದ್ದರಿಂದ ವಸ್ತುವಿನ ತರ್ಕ ಮತ್ತು ಆಕೃತಿಯ ನಿರ್ಮಾಣ ಇವೆರಡರ ನಡುವೆ ಅತ್ಯಂತ ಸೂಕ್ಷ್ಮವಾದ ಸಂಬಂಧವಿದ್ದು, ಲೇಖಕನ ಸಾಂದ್ರತೆ, ಶಕ್ತಿಗೆ ತಕ್ಕಂತೆ ಆಕೃತಿ ರೂಪು ತಳೆಯುತ್ತಾ ಹೋಗುತ್ತದೆ. ಆದ್ದರಿಂದ, ಅಂತಿಮವಾಗಿ ಸಾಹಿತ್ಯ ಕೃತಿಯೊಂದರ ಆಕೃತಿಯೇ ಎಲ್ಲ ಚಾರಿತ್ರಿಕ, ರಾಜಕೀಯ ಸ್ಥಿತಿಗಳ ಘನೀಕೃತ ರೂಪ ವಾಗಿರುತ್ತದೆ. ಆದ್ದರಿಂದ, ಆಕೃತಿಯಲ್ಲಿ ತನ್ನೆಲ್ಲ ಗಾಢಸಿದ್ಧತೆಯೊಂದಿಗೆ ತೊಡಗಿ ಕೊಳ್ಳುವ ವಿಮರ್ಶಕ ಆಳದಲ್ಲಿ ಸಾಮಾಜಿಕ, ರಾಜಕೀಯ ವಿಮರ್ಶಕನೂ ಆಗಿರು ತ್ತಾನೆ." ಈ ಮಾತುಗಳು ನಾಗರಾಜರ ವಿಮರ್ಶಾ ವಿಧಾನಕ್ಕೆ ಪಕ್ಕಾ ಪುರಾವೆ ಯಾಗಿವೆ. ಮಾಸ್ತಿ, ಕುವೆಂಪು, ಕಾರಂತ ಮೊದಲಾದ ಹಿರಿಯ ಹಾಗೂ ಕಂಬಾರ, ಶಿವಪ್ರಕಾಶ್ ಮೊದಲಾದ ಸಮಕಾಲೀನ ಬರಹಗಾರರ ಕುರಿತು ಬೆಲೆಯುಳ್ಳ ವಿಮರ್ಶೆ ಈ ಸಂಗ್ರಹದಲ್ಲಿವೆ. ೧೯೮೪ರ ಇನ್ನೊಂದು ಗಮನಾರ್ಹ ವಿಮರ್ಶಾ ಕೃತಿ ವಿ. ಎಸ್. ವೆಂಕಟರಾಮ್ ಅವರ 'ದುಡಿಯುವವರ ದನಿ ಮತ್ತು ಇತರ ಲೇಖನಗಳು'. ವೆಂಕಟರಾಮ್ ಸಕ್ರಿಯ ರಾಜಕಾರಣಿ. ಹಾಗಂತ ಅವರು ಹತ್ತರ ಕೂಡ ಹನ್ನೊಂದು ಆಗಿರಲಿಲ್ಲ. ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂದರ್ಭಗಳ ಜತೆ ನೇರವಾದ, ಗಾಢ ವಾದ ಸಂಬಂಧ ಹೊಂದಿದವರು. ಅಂತೆಯೇ ಇವುಗಳನ್ನು ವಿಭಿನ್ನ ಸ್ತರದಲ್ಲಿ ನಿಂತು, ಸೂಕ್ಷ್ಮವಾಗಿ ನೋಡಬಲ್ಲವರಾಗಿದ್ದರು. ತಮ್ಮ ಕೆಲವು ಬರಹಗಳಿಂದ ವಿವಾದಕ್ಕೂ ಒಳಗಾದವರು. ತಮ್ಮ ಬೌದ್ಧಿಕತೆ ಮತ್ತು ಅನುಭವಗಳೆರಡನ್ನೂ ಬರಹದಲ್ಲಿ ಹಾಡಿಸಿ ಕೊಳ್ಳುವ ಹಾಗೂ ಆ ಮೂಲಕವಾಗಿ ಹೇಳಬೇಕಾದ್ದನ್ನು ಮುಚ್ಚಿಡದೇ ಬಿಚ್ಚಿಡುವ ರೀತಿ ಇವರ ವಿಶ್ಲೇಷಣೆಗಳಲ್ಲಿ ಎದ್ದು ಕಾಣುತ್ತದೆ.

'ಸಾಹಿತ್ಯದಲ್ಲಿ ದುಡಿಯುವವರ ದನಿ ಎಂಬ ಥೀಮೇ ಸಾಹಿತ್ಯದ ಮೂಲ ನೆಲೆಗೆ ವಿಪರೀತವಾದ ಅಪಸ್ವರ. ಸಾಹಿತ್ಯದಲ್ಲಿ ಮಾನವೀಯತೆಯ ದನಿ ಇರ

ಬಹುದೇ ವಿನಾ ದುಡಿಯುವವರ ದನಿ ಎಂಬ ವಿಭಜನೆಯೇ ಸಾಹಿತ್ಯೇತರ ಕ್ಷೇತ್ರದ ಒಂದು ಪಿಡುಗಿನ ಒತ್ತುವರಿ ಎಂಬ ಪ್ರಬಲ ಆಕ್ಷೇಪಣೆಯಿದೆ. ಮೇಲುನೋಟಕ್ಕೆ ಸೀಧು ಎನಿಸುವ ಒಂದು ವಿಚಾರಧಾರೆಯ ಸಮರ್ಥನೆಯೂ ಈ ಆಕ್ಷೇಪಣೆಗೆ ಇದೆ. ತರ್ಕಬದ್ಧವಾದ ವಿಶ್ಲೇಷಣೆ ಹಾಗೂ ಕೆಲವು ಮೌಲ್ಯಗಳ ಪ್ರಜ್ಞಾಪೂರ್ಣ ಆಯ್ಕೆಯ ನೆಲೆ ತಪ್ಪಿದರೆ, ಅಮೂರ್ತವಾದ ಮಾನವೀಯತೆಯ ಸೋಗೂ, ಸೊಲ್ಲೂ ಬಲು ಅಪ್ಪಾಯುಮಾನವಾಗಿರುತ್ತದೆ. ಆದುದರಿಂದ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ, ಹಾಗೂ ಮಾನವೀಯ ಮೌಲ್ಯಗಳನ್ನು ಕುರಿತು ಒಂದಿಷ್ಟು ನೆಲಗಟ್ಟಿನ ಚರ್ಚೆ ಅಗತ್ಯವೆನಿಸುತ್ತದೆ" ಎಂದು ಹೇಳುವ ವೆಂಕಟರಾಮ್ ಎಲ್ಲೂ ಹಗುರವಾಗಿ. ಹಾರಿಕೆಯ ಮಾತುಗಳನ್ನುದುರಿಸುವುದಿಲ್ಲ. ಆದ್ದರಿಂದ 'ಭಗವದ್ಗೀತೆ ಹಾಗೂ ಅಪರಾಧ ಮತ್ತು ಶಿಕ್ಷೆ'ಯ ಕುರಿತೇ ಬರೆಯಲಿ ಅಥವಾ 'ಯುಗೊಸ್ಲಾವಿಯಾ ಪ್ರವಾಸ'ವೇ ಆಗಿರಲಿ ತುಂಬ ಗಂಭೀರವಾಗಿ ಆಲೋಚಿಸುತ್ತಾರಷ್ಟೇ ಅಲ್ಲ, ವಿಶ್ಲೇಷಣೆಗೂ ಒಳಪಡಿಸುತ್ತಾರೆ. ಮಾನವಿಕತೆಯ ಮುಖವಾಡವಡಿಯಲ್ಲಿ ಬದುಕುವ ಯುಕ್ತಿವಾದವನ್ನು ಕಡಾಖಂಡಿತವಾಗಿ ಅಲ್ಲಗಳೆವ ಅವರು "ಸಮಾಜದ ಗತಿ ಸ್ಥಿತಿಯನ್ನು ನಿರುಪಿಸುವಾಗ, ಸಾಹಿತ್ಯದಲ್ಲಿ ಅದನ್ನು ಒಡಮೂಡಿಸುವಾಗ ಮೌಲ್ಯಗಳ ರೂಪ ಪರಿವರ್ತನಶೀಲ ದುಡಿಮೆ ಮಾನವ ಜಗತ್ತಿನ ಜೀವಾಳ, ದುಡಿಯುವವರ, ದುಡಿಸುವವರ ದಾವಾಗಳು ಬೇರೆ ಬೇರೆ ಎಂಬ ಸಮಗ್ರ ಪ್ರಜ್ಞೆ ಅಗತ್ಯ. ಆದುದರಿಂದ ಒಂದು ಸಾಹಿತ್ಯದ ಕೃತಿಯನ್ನು ಸತ್ಯನಿಷ್ಠವಾಗಿ ಬೆಲೆಕಟ್ಟುವಾಗ ಅವರಲ್ಲಿ ಗಾಳಿಯಂತೆ ಅಗೋಚರವಾಗಿಯೋ ಅಥವಾ ಆಲದ ಮರದಂತೆ ಅಡರಿಯೋ ಇರುವ ದುಡಿಮೆಯ ಅಸ್ತಿತ್ವ ಹಾಗೂ ಅದರಲ್ಲಿ ದುಡಿಮೆಗಾರನ ದನಿಯನ್ನು ಗುರುತಿಸಬೇಕಾಗುತ್ತದೆ" ಎಂದು ಹೇಳಿ 'ಮೂಕಜ್ಜಿಯ ಕನಸುಗಳು', ಕಂಕಣ, ಚಿರಸ್ಮರಣೆ, ಸಂಸ್ಕಾರ, ವಂಶವೃಕ್ಷ, ಭಾರತೀಪುರ ಮೊದಲಾದ ಕೃತಿಗಳನ್ನು ಇಲ್ಲಿ ಬಿಚ್ಚು ಮನಸ್ಸಿನಿಂದ ವಿವೇಚಿಸಿದ್ದಾರೆ.

ಸಿ. ವೀರಣ್ಣ 'ಮಾರ್ಕ್ಸವಾದ: ತತ್ವಶಾಸ್ತ್ರ ಮತ್ತು ಸಾಹಿತ್ಯ' ಹಾಗೂ 'ಸಾಹಿತ್ಯ ಮತ್ತು ಸಮುದಾಯ' ಎಂಬ ಎರಡು ಸಂಕಲನಗಳನ್ನು ಈ ವರ್ಷ ಪ್ರಕಟಿಸಿದ್ದಾರೆ. ಸಾಹಿತ್ಯವನ್ನು ಚರಿತ್ರೆಯಿಂದ ಬೇರ್ಪಡಿಸಿ ಇಡುವ ಗುಂಪಿಗೆ ಸೇರಿದವರಲ್ಲವಾದ್ದರಿಂದಲೇ "ಮಾರ್ಕ್ಸವಾದಿ ವಿಮರ್ಶೆ ಬೇರೆಲ್ಲಾ ವಿಮರ್ಶಾ ಧೋರಣೆಗಳಿಗಿಂತ ಬೇರೆಯದಾಗಿರುತ್ತದೆ. ಏಕೆಂದರೆ ಅದು ತನ್ನ ಅಂತಸ್ಸತ್ವದಲ್ಲಿ ಸಮಾಜಿಕವಾಗಿರುವುದಲ್ಲದೆ ವೈಜ್ಞಾನಿಕವಾಗಿಯೂ ಇರುತ್ತದೆ....ವಿಮರ್ಶಕ ಮೂಲಭೂತವಾಗಿ ಸಾಹಿತ್ಯ ಚರಿತ್ರಕಾರನಾದಾಗ ಮಾತ್ರ ಕೃತಿಯ ಸಾಮಾಜಿಕ ವಿಶ್ಲೇಷಣೆ ಸಾಧ್ಯವಾಗುತ್ತದೆ ಎನ್ನುವ ಅಂಶ ಇದರಲ್ಲಿ ಮುಖ್ಯ. ಸಾಮಾಜಿಕ ವಿಶ್ಲೇಷಣೆಯೇ ಸಾಹಿತ್ಯ ವಿಮರ್ಶೆಯ ಪ್ರಮುಖ ,ಮತ್ತು ಅತ್ಯಗತ್ಯವಾದ ಕೆಲಸವಾಗೂ ಇರುತ್ತದೆ" ಎನ್ನುವ

ತಾತ್ತ್ವಿಕ ತಳಹದಿಯಲ್ಲೇ ಅವರು ತಮ್ಮ ವಿಮರ್ಶೆಯನ್ನು ಮಂಡಿಸುತ್ತಾರೆ. ಅವರ ಕೆಲವು ವಿಚಾರಗಳು ಚರ್ಚಾಸ್ಪದವಾಗಬಹುದಾದರೂ; ವಿಮರ್ಶೆಯ ಒಳನೋಟ ಗಳನ್ನು ಹಿಗ್ಗಿಸುವಲ್ಲಿ ಸಹಕಾರಿಯಾಗಿರುವುದೂ ನಿಜ. ಕೆಲವೊಮ್ಮೆ ಹೇಳಿಕೆಗಳ ಹಾಗೆ ತೋರಿದರೂ: 'ಮೂಕಜ್ಜಿಯ ಆಮ್ಮ-ವಸ್ತು ಪ್ರತಿನಿಧಿಯಾದ ಪ್ರಕೃತಿ' ಮತ್ತು 'ಬಂಡವಳಶಾಹಿ ಕ್ರೌರ್ಯದ ವಸ್ತುನಿಷ್ಠ ಶೋಧನೆ–'ಶಿಕಾರಿ' ಮೊದಲಾದ ಲೇಖನ ಗಳಲ್ಲಿ ಹೆಚ್ಚು ಜೈವಿಕವಾದ, ಪ್ರಬುದ್ಧವಾದ ವಿಶ್ಲೇಷಣೆಯಿರುವುದನ್ನು ಗುರುತಿಸ ಬಹದು.

'ಯುಗಧರ್ಮ ಹಾಗೂ ಸಾಹಿತ್ಯದರ್ಶನ', 'ಭಾರತೀಯ ಕಾವ್ಯಮೀಮಾಂಸೆ'. 'ಶೂನ್ಯ ಸಂಪಾದನೆಯ ಪರಾಮರ್ಶೆ' ಈ ವರ್ಷ ಮರುಮುದ್ರಣ ಗೊಂಡರೆ: ಕನ್ನಡ ವಿಮರ್ಶೆ. ಸಾಹಿತ್ಯವಿಮರ್ಶೆ ೮೦, ಸಾಹಿತ್ಯ ವಿಮರ್ಶೆ ೮೧, ಕುವೆಂಪು ಅವರ 'ದಾರ್ಶನಿಕ ಕಾವ್ಯ ಮೀಮಾಂಸೆ' ಡಿ. ಎಲ್. ಎನ್. ಅವರ ಆಯ್ದ ಲೇಖನಗಳು. ಅಡಿಗರ ಲೇಖನಗಳು ಮತ್ತು ಮುನ್ನುಡಿಗಳು, ಗೋವಿಂದ ಪೈ : ಸ್ಮೃತಿ.ಕೃತಿ, ಗೋವಿಂದ ಪೈ, ಗಿಳಿವಿಂಡು ಸಮೀಕ್ಷೆ, ಗೋವಿಂದ ಪೈ ನೋಟ, ಗೋವಿಂದ ಪೈ ಸಮಗ್ರ ವಾಙ್ಮಯ ಸಮೀಕ್ಷೆ. ವಚನ ವಾಙ್ಮಯ ದರ್ಶನ, ಬಸವಣ್ಣನವರ ವಚನ ಗಳಲ್ಲಿ ವನ ಸಂಪತ್ತು, ಶರಣರ ಆರ್ಥಿಕ ಚಿಂತನೆ, ಸರ್ವಜ್ಞ–ಜೀವನ. ಕೃತಿಗಳು ಮತ್ತು ಸಂದೇಶ, ಬಸವನಾಳರ ಬರಹಗಳು, ಹಳಕಟ್ಟಿ ನುಡಿಪುರುಷ, ಚಾಮರಸ ವಿಚಾರ ಸಂಕಿರಣ, ಕುಮಾರ ವಾಲ್ಮೀಕಿ, ಬಂಧುವರ್ಮ, ದುರ್ಗಸಿಂಹ. ದಾಸ ಸಾಹಿತ್ಯದ ಕೆಲವು ನೋಟಗಳು, ಕನ್ನಡ ಸಾಹಿತ್ಯದ ಭಾಗವತ ಕವಿಗಳು—ಮೊದಲಾದ ಕೃತಿಗಳು ಈ ವರ್ಷ ಪ್ರಕಟವಾಗಿದ್ದು; ಆಯಾ ವ್ಯಕ್ತಿ. ವಿಷಯದ ಬಗೆಗೆ ಉಪ ಯುಕ್ತ ಮಾಹಿತಿಗಳನ್ನು ಒದಗಿಸುತ್ತವೆ. ಕೆಲವು ಪರಿಚಯಾತ್ಮಕವಾಗಿದ್ದರೆ: ಮತ್ತೆ ಹಲವು ವರ್ಣನಾತ್ಮಕ ವಿವರಗಳನ್ನು ಪೂರೈಸುತ್ತವೆ. ಸರಕಾರ ಹಾಗೂ ಅಕಾಡಮಿ ಗಳು ವಿಮರ್ಶಾತ್ಮಕವಾದ, ವೈಚಾರಿಕವಾದ ಗ್ರಂಥಗಳನ್ನು ಪ್ರಕಟಿಸುವಲ್ಲೂ ಸಹ ಹಿಂದೆ ಬಿದ್ದಿಲ್ಲ ಎಂಬುದು ಈ ಸಾಲಿನ ಗಮನಾರ್ಹ ಸಂಗತಿಯಾಗಿದೆ. ಶಿವರುದ್ರಪ್ಪ ನವರ 'ಕಾವ್ಯಾರ್ಥ ಚಿಂತನ'ವೊಂದು ಅಮೂಲ ಆಕರ ಗ್ರಂಥವಾಗಿದೆ. ಸಮಕಾಲೀನ ಕವಿ–ಕೃತಿಗಳವಿಮರ್ಶೆಯೂ ೮೩ರಲ್ಲಿ ನಡೆದಿದೆ. ಕೇವಲ ಪ್ರಾಚೀನ ಕವಿ ಕೃತಿಗಳ ವಿವೇಚನೆಯಷ್ಟೇ ಕನ್ನಡದ ಪರಿಪಾಠವಾಗಿ ಹೋಗಿದ್ದ ಸಂದರ್ಭದಲ್ಲಿ ಈ ಇಂತ ಕೆಲಸ ಗಮನ ಸೆಳೆಯುವುದಷ್ಟೇ ಅಲ್ಲ: ಈ ಕಾರ್ಯ ಇನ್ನೂ ಹೆಚ್ಚಿನ ಪ್ರಮಾಣ ದಲ್ಲಿ ಆಗಬೇಕು ಎಂಬುದನ್ನು ಸೂಚಿಸುತ್ತದೆ. ವೆಂಕಟೇಶ ಮೂರ್ತಿ ಮತ್ತು ರಾಘವೇಂದ್ರ ಪಾಟೀಲ ಸಂಪಾದಿಸಿದ 'ಹೊಸ ಕಾವ್ಯದ ಮುನ್ನೆಲೆ', ವೆಂಕಟೇಶ ಮೂರ್ತಿಯವರ 'ನೂರು ಮಾತ ನೂರು ಸ್ವರ', ವಿಜಯಾ ಸಂಪಾದಿಸಿದ 'ಪವನ : ಒಂದು ಸಮೀಕ್ಷೆ' ಈ ಬಗೆಯ ಕೃತಿಗಳು. ಹಾ. ಮಾ. ನಾಯಕರ ಅಂಕಣ ಬರಹ

ಗಳನ್ನೊಳಗೊಂಡ 'ಸಂವಹನ', 'ಸಾಂಪ್ರತ', 'ವರ್ತಮಾನ' ಸಂಗ್ರಹಗಳು ಪ್ರಕಟವಾಗಿದ್ದು, ಶಿಕ್ಷಣ, ಸಂಸ್ಕೃತಿ, ಸಾಹಿತ್ಯಗಳ ಕುರಿತು ಮನನೀಯ ವಿಚಾರಗಳನ್ನು ಎತ್ತಿ ಇಡಲಾಗಿದೆ.

ಇದೇ ವರ್ಷ ಪ್ರಕಟವಾದ ಅಡಿಗರ 'ಲೇಖನಗಳು ಮತ್ತು ಮುನ್ನುಡಿಗಳು' ಕೃತಿಯಲ್ಲಿ ಬರುವ ಮಾತುಗಳು ಹೀಗಿವೆ—

'ಸಾಹಿತ್ಯದಿಂದ ಜನಕ್ಕೆ ಅಗತ್ಯವಾದ ಸಂಸ್ಕಾರ ಆಗುವುದು ಸಾಧ್ಯ....ತಾವು ಓದಿದ್ದನ್ನು ಅರಗಿಸಿಕೊಂಡು ಅದನ್ನು ಬೆಲೆ ಕಟ್ಟಲು ತಕ್ಕ ಸಂಸ್ಕಾರವನ್ನು ಪಡೆಯುತ್ತ ಹೋಗಬೇಕು...ಸಾಹಿತ್ಯ ಒಂದು ಕಲೆ, ಚಿತ್ರಕಲೆ, ಸಂಗೀತ, ನೃತ್ಯ ಮುಂತಾದ ಕಲೆಗಳಂತೆ ಪ್ರತಿಯೊಂದು ಕಲೆಗೂ ಅವರದೇ ಆದ ಒಂದು ಭಾಷೆಯಿದೆ. ಆ ಭಾಷೆಯನ್ನು ನಾವು ಕಲಿತಾಗಲೇ ಅದರ ಅರ್ಥಾನುಭವ ನಮಗೆ ದಕ್ಕುತ್ತದೆ. ಸಾಹಿತ್ಯದ ಭಾಷೆ ನಾವು ದಿನ ನಿತ್ಯವೂ ಬಳಸುತ್ತಿರುವ ಭಾಷೆಯೂ ಆಗಿರುವುದು ಒಂದು ರೀತಿಯಿಂದ ಸುಗಮ ಎನ್ನಿಸಿದರೂ ಇನ್ನೊಂದು ದೃಷ್ಟಿಯಿಂದ ಅಪಾಯಕಾರಿಯೂ ಹೌದು. ಬರೆದದ್ದೆಲ್ಲವೂ ಸಾಹಿತ್ಯ ಎಂದು ಭ್ರಮೆ ಹುಟ್ಟಿಸುವ ಸಾಹಿತ್ಯ ಅದು...ಒಂದು ಮಾತು ಹತ್ತು ಮಾತುಗಳನ್ನು ಧ್ವನಿಸುತ್ತದೆ. ಮಾತಿನಲ್ಲಿ ಬಿಗಿಯೂ, ಬಿಗಿಯ ಜತೆಗೇ ನಾಟ್ಯಗತಿಯೂ ಸಿದ್ಧಿಸಿ ಆ ಮಾತನ್ನು ಕೇಳಿದಾಗ ಹೃದಯ ಪುಳಕಗೊಳ್ಳುತ್ತದೆ...ಹಾಗೆ ಸಾರ್ಥಕವಾಗಿ ಭಾಷೆಯನ್ನು ಬಳಸುವ ಶಕ್ತಿ ಎಲ್ಲಿ ವ್ಯಕ್ತವಾಗುತ್ತದೋ ಅಲ್ಲಿ ಸಾಹಿತ್ಯವಿದೆ. ಉಳಿದದ್ದೆಲ್ಲ 'ಬೆಳ್ನುಡಿ' ಜಳ್ಳು ಮಾತು."

ಬಹುಶಃ ಈ 'ಉದ್ಧರಣೆ'ಗೆ ವ್ಯಾಖ್ಯಾನದ ಅಗತ್ಯವಿಲ್ಲ. ಈ ವರ್ಷದ ವಿಮರ್ಶೆಯಲ್ಲಿ ಬಳಕೆಯಾದ ಭಾಷೆಯ ಕುರಿತೂ ಒಂದು ಮಾತು ಹೇಳಬಹುದು. ನವ್ಯರಲ್ಲಿ ಕೆಲವರ ವಿಮರ್ಶೆಗೆ ಭಾಷ್ಯವೋ, ಅನುವಾದವೋ ಬೇಕಾಗುತ್ತಿತ್ತು ಎಂಬುದನ್ನು ಸ್ಮರಿಸಿಕೊಂಡರೆ, ಈಗಿನ ವಿಮರ್ಶೆ ಹೆಚ್ಚು ಸರಳವಾಗಿ, ಸ್ಪಷ್ಟವಾಗಿ ಸಂವಹನಗೊಳ್ಳುವ ಗುಣವನ್ನು ತೋರಿಸಿಕೊಟ್ಟಿದೆ. ಒಟ್ಟಾರೆ ಒಂದು ಮಾತಿನಲ್ಲಿ ಹೇಳುವುದಾದರೆ ೧೯೮೬ರ ವಿಮರ್ಶೆ ಸಾಹಿತ್ಯ ವಿಮರ್ಶೆಯ ಬೇಲಿಯನ್ನು ಹಿಗ್ಗಿಸಿದೆ. ಇದು ನಾಳಿನ ವಿಮರ್ಶೆಯ ಚಿತ್ರಕ್ಕೆ ಪ್ರಾಥಮಿಕ ಕ್ಯಾನವಾಸೂ ಆಗಿದೆ ಎನ್ನುವುದನ್ನು ಒಪ್ಪಿಕೊಂಡರೆ ನಮಗೇನೂ ಹಾನಿ ಇಲ್ಲ.

೧೯೮೩ ಸಂಶೋಧನೆ

● ಎಂ.ಬಿ. ನೇಗಿನಹಾಳ

೮೩ನೆಯ ವರ್ಷ ಸುಮಾರು ಇಪ್ಪತ್ತೈದರಷ್ಟು ಸಂಶೋಧನಕೃತಿಗಳು ಪ್ರಕಟಗೊಂಡಿರುವುದು ಕಂಡುಬರುತ್ತದೆ. ಇದರಿಂದ ಈ ಕ್ಷೇತ್ರದಲ್ಲಿ ಈ ವರ್ಷ ಪೂರ್ಣ ತೃಪ್ತಿಕರವಲ್ಲದಿದ್ದರೂ ಗಮನಾರ್ಹ ಪ್ರಗತಿ ತೋರಿದಂತಾಗಿದೆ. ಆದರೆ ಕೆಲವೊಂದು ಶಾಖೆಗಳಲ್ಲಿ ಒಂದೊಂದರಂತೆ ಕೂಡ ಕೃತಿ ಪ್ರಕಟಗೊಂಡಿಲ್ಲ. ನಮ್ಮ ಕೈಗೆ ಎಟುಕಿದ ಕೃತಿಗಳಲ್ಲಿ ಆಯ್ದ ಕೆಲವನ್ನು ಇಲ್ಲಿ ವಿಮರ್ಶೆಗೆ ಎತ್ತಿಕೊಂಡಿದೆ.

ಈ ವರ್ಷದ ಸಂಶೋಧನಾ ಕೃತಿಗಳಲ್ಲಿ ವೀರಶೈವ ಸಂಬಂಧಿಯಾದ ಕೃತಿಗಳ ಸಂಖ್ಯೆ ಹೆಚ್ಚಾಗಿದೆ. ಒಟ್ಟು ಆರು ಕೃತಿಗಳು ನಮ್ಮ ಕೈಗೆ ಬಂದಿವೆ. ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ. (ಡಾ.ಪಿ.ವ್ಹಿ. ನಾರಾಯಣ), ವೀರಶೈವ ಪುರಾಣಗಳು (ಡಾ. ಎಸ್. ವಿದ್ಯಾಶಂಕರ), ಶ್ರೀ ಚನ್ನಮಲ್ಲಿಕಾರ್ಜುನರು (ಶ್ರೀ ಎಚ್. ದೇವೀರಪ್ಪ ಮತ್ತು ಪಂಡಿತ ಚೆನ್ನಪ್ಪ ಎರೆಸೀಮೆ), ಸರ್ವಜ್ಞ' (ಡಾ.ಬಿ.ಕೆ. ಹೊಸಮಠ). ಆದಿರೇಣುಕರು (ಡಾ.'ಜಚನಿ') ಮತ್ತು ಚಾಮರಸ ವಿಚಾರ ಸಂಕಿರಣ (ವಿವಿಧ ಲೇಖಕರು) ಇವುಗಳಲ್ಲಿ ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ ತುಂಬ ಮಹತ್ವದ ಕೃತಿ. ಸಾಹಿತ್ಯ ಕುರಿತಾದ ಅಧ್ಯಯನಗಳಲ್ಲಿ ಅವರ ಸಂಸ್ಕೃತಿಯ ಅಧ್ಯಯನವೂ ಒಂದು ಪ್ರಧಾನ ಮುಖ. ವಚನ ಸಾಹಿತ್ಯದ ಈ ಮುಖ ಮತ್ತೂ ಗಮನಾರ್ಹವಾದುದು. ಈ ದಿಶೆಯಲ್ಲಿ ವಚನ ಸಾಹಿತ್ಯವನ್ನು ಕುರಿತಂತೆ ಹೇಳಿಕೊಳ್ಳುವಂಥ ಅಧ್ಯಯನ ನಮ್ಮಲ್ಲಿ ನಡೆದಿರಲಿಲ್ಲ. ಡಾ.ಪಿ.ವಿ. ನಾರಾಯಣರ ಪ್ರಸ್ತುತ ಕೃತಿ ಆ ಕೊರತೆಯನ್ನು ಸಂಪೂರ್ಣವಲ್ಲದಿದ್ದರೂ ಬಹುಪಾಲು ಹೋಗಲಾಡಿಸಿದೆ. ವಚನ ಸಾಹಿತ್ಯದಲ್ಲಿನ ಸಾಂಸ್ಕೃತಿಕ ಅಂಶಗಳ ಚರ್ಚೆ ಆಗಾಗ ಕೆಲವರಿಂದ ನಡೆದಿರಬಹುದಾದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಒಂದೆಡೆಯಲ್ಲಿ ನಡೆದಿರುವುದು ಇದೇ ಮೊದಲು. "ವಚನ ಸಾಹಿತ್ಯ ತನ್ನ ಕಾಲದ ಜೀವನದ ವಿವಿಧ ಮುಖಗಳನ್ನು ಕಲ್ಪಿಸಿಕೊಳ್ಳಲು ಸಹಾಯಕವಾಗುವ ಎಷ್ಟೋ ವಿವರಗಳನ್ನು ತನ್ನಲ್ಲಿ ಒಡಿದಿಟ್ಟುಕೊಂಡಿದೆ" ಡಾ. ನಾರಾಯಣ ಅವರು ಅಂಥ ವಿವರಗಳನ್ನೆಲ್ಲ ಕಲೆಹಾಕಿ, ಅದಕ್ಕೆ ಸಮಾಂತರವಾಗಿ ಪ್ರಾಚೀನಕಾಲದ ಸಂಸ್ಕೃತ. ಕನ್ನಡ ಮತ್ತು ಇತರಭಾಷೆಯಲ್ಲಿನ ಗ್ರಂಥಗಳು. ಶಾಸನಗಳು. ವಚನಕಾರರನ್ನು ಕುರಿತು ತರುವಾಯದಲ್ಲಿ ರಚಿತವಾದ ಕೃತಿಗಳು–ಈ

ಮೊದಲಾದ ಆಕರಗಳಲ್ಲಿ ದೊರೆಯುವ ಅಂಶಗಳ ಜೊತೆಗೆ ಸಾಧ್ಯವಾದ ಮಟ್ಟಿಗೂ ತಾಳೆನೋಡಿ, ಅವನ್ನೆಲ್ಲ ಸಮಗ್ರವಾಗಿ ಜೋಡಿಸಿಕೊಂಡಿದ್ದಾರೆ. ಹೀಗೆ ಬೇರೆ ಆಕರಗಳನ್ನು ಬಳಸಿಕೊಳ್ಳುವಾಗ ತಾವೇ ಒಂದು ಮಿತಿಯನ್ನು ಹಾಕಿಕೊಂಡಿರುವುದಾಗಿ ಹೇಳಿದ್ದಾರೆ. (ಪು ೧೧). ಪ್ರಸ್ತುತ ಪ್ರಬಂಧದ ಮಾರ್ಗದರ್ಶಕರಾದ ಡಾ. ಎಂ. ಚಿದಾನಂದಮೂರ್ತಿಯವರ ಪ್ರಸಿದ್ಧಕೃತಿ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ವನ್ನೇ ಇಲ್ಲಿ ಮಾದರಿಯಾಗಿಟ್ಟುಕೊಂಡಿರುವುದು ಕಂಡುಬರುತ್ತದೆ. ಇದರಲ್ಲಿ ವಿವರಿಸಿದ ಬಹಳಷ್ಟು ಅಂಶಗಳು ವಿದ್ವಾಂಸರಿಗೆ ತೀರ ಅಪರಿಚಿತವಾದವುಗಳೆಂದು ಹೇಳಲಾಗದಿದ್ದರೂ ಅವನ್ನೆಲ್ಲ ನಾನಾ ಆಕರಗಳಿಂದ ಸಂಗ್ರಹಿಸಿ ಜೋಡಿಸಿರುವ ಕಾರ್ಯವಾತ್ರ ಅಸಾಧಾರಣವಾದುದು; ಅಪಾರ ಪರಿಶ್ರಮ ಮತ್ತು ವಿಶ್ಲೇಷಣಾ ಸಾಮರ್ಥ್ಯಗಳನ್ನಪೇಕ್ಷಿಸುವಂಥದು. ಡಾ. ನಾರಾಯಣ ಅವರ ಆ ಪರಿಶ್ರಮ ಮತ್ತು ಸಾಮರ್ಥ್ಯಗಳನ್ನು ಮೇಲುನೋಟ ಮಾತ್ರದಿಂದಲೇ ಗುರುತಿಸಬಹುದು. ಊಹೆಯನ್ನು ಅವಲಂಬಿಸಿ ಎಲ್ಲೆಲ್ಲೋ ಸುತ್ತುವ ಬದಲು ಕೈಯಲ್ಲಿ ಗಟ್ಟಿಮುಟ್ಟಾದ ಆಧಾರಗಳನ್ನು ಹಿಡಿದುಕೊಂಡೆ ಪ್ರತಿಅಂಶವನ್ನು ಹೇಳಬೇಕೆಂಬ ಧೋರಣೆ ಕೊನೆತನಕ ಮುಂದುವರಿದಿದೆ. ಖಚಿತತೆಯ ಹಂತಕ್ಕೆ ಮುಟ್ಟಲಾಗದ ವಿಷಯಗಳ ಬಗೆಗೆ ವಹಿಸಿರುವ ತಾಟಸ್ಥ್ಯ ಮತ್ತು ವಿದ್ವಾಂಸರ ಅಭಿಪ್ರಾಯಗಳನ್ನು ವಿಮರ್ಶಿಸುವಲ್ಲಿ ತೋರ್ಪಡಿಸಿರುವ ಸಂಯಮಗಳು ಮೆಚ್ಚುವಂತಿವೆ. ಪ್ರಬಂಧವನ್ನು ಓದಿಮುಗಿಸಿದ ಮೇಲೆ, ಆ ಕಾಲದ ಕರ್ನಾಟಕ ಜನಜೀವನವನ್ನು ಕುರಿತಾದ ಒಂದು ವಿಶ್ವಾಸಾರ್ಹ ಮತ್ತು ಸ್ಪಷ್ಟ ಚಿತ್ರ ನಮ್ಮ ಮುಂದೆ ಮೂಡಿನಿಲ್ಲುತ್ತದೆ. ಜೊತೆಗೆ ಕೆಲವೊಂದು ಪ್ರಶ್ನೆಗಳೂ ಎದ್ದು ನಿಲ್ಲುತ್ತವೆ. ವರ್ಣ–ಜಾತಿ ವ್ಯವಸ್ಥೆಯಲ್ಲಿ ಬಿಗಿಯಲ್ಪಟ್ಟಿದ್ದು ವಿದ್ಯೆ–ಜ್ಞಾನಾರ್ಜನೆಯ ಸಾಧನಗಳಿಂದ ಪೂರ್ಣವಂಚಿತರಾದ ಸಮುದಾಯದಿಂದಲೇ ನೂರಾರು ಸಂಖ್ಯೆಯ ವಚನಕಾರರು ಉದಿಸಿಬಂದದ್ದು ಹೇಗೆ ? ಅವರೆಲ್ಲ ಉಚ್ಚ–ನೀಚರೆಂಬ ಭೇದವಿಲ್ಲದೆ ಸಮಾನ ಭೂಮಿಕೆಯ ಮೇಲೇರಿ ನಿಂತ ಸನ್ನಿವೇಶ ಪವಾಡಸದೃಶವಲ್ಲವೆ ? ಇದು ಘಟಿಸಿದ್ದು ಎಂತು ? ಇತ್ಯಾದಿ ಪ್ರಶ್ನೆಗಳಿಗೆ ತಕ್ಕ ಉತ್ತರ ನಮಗಿನ್ನೂ ದೊರೆಯಬೇಕಾಗಿದೆ. ಪ್ರಸ್ತುತ ಪ್ರಬಂಧಕಾರರೇ ಇವಕ್ಕೆಲ್ಲ ಉತ್ತರಿಸಬೇಕಾಗಿತ್ತೆಂಬುದು ನಮ್ಮ ಅಭಿಪ್ರಾಯವಲ್ಲ. ಅವರು ತಮ್ಮ ಮುಂದೆ ಇಂಥ ಪ್ರಶ್ನೆಗಳನ್ನು ಇಟ್ಟುಕೊಂಡಿಲ್ಲವೆಂಬುದು ಸ್ಪಷ್ಟವೇ ಇದೆ. ಪ್ರಬಂಧದ ಮೈಯಲ್ಲಿ ಅಲ್ಲಲ್ಲಿ ಕೆಲವು ಅರೆಕೊರೆಗಳು ಉಳಿದಿರುವ ಅನುಭವ ಓದುಗರಿಗೆ ಆಗುತ್ತದೆ. "ಅಯ್ಯತನ ಅಥವಾ ಅಯ್ಯಾಚಾರವನ್ನು ಮಾಡಿಸುವುದೆಂದರೆ ವೀರಶೈವ ದೀಕ್ಷೆಯನ್ನು ಕೊಡುವುದು ಎಂದರೆ ವೀರಶೈವಕ್ಕೆ ಮತಾಂತರಿಸುವುದು ಎಂದರ್ಥ" (ಪು. ೧೪೦). ಇದು ಸರಿಯಾದ ಅಭಿಪ್ರಾಯವಲ್ಲ. ಅಯ್ಯತನ ಅಥವಾ ಅಯ್ಯಾಚಾರವೆಂದರೆ (ಜಂಗಮ) ಬಾಲಕರಿಗೆ ಜಂಗಮದೀಕ್ಷೆ ಕೊಡುವುದು ಎಂದು

ಮಾತ್ರ ಅರ್ಥ. ಈಗೀನ ವೀರಶೈವ ಜನಾಂಗದ ಬಣಜಿಗರಲ್ಲಿನ ಒಂದು ಒಳ ಪಂಗಡಕ್ಕೆ 'ಶೀಲವಂತ'ರೆಂದು ಹೆಸರಿದೆ. ವಚನಗಳಲ್ಲಿ ಉಲ್ಲೇಖಗೊಂಡಿರುವ 'ಶೀಲವಂತ' ಎಂಬುದರ ವಿವೇಚನೆಯಲ್ಲಿ ಪ್ರಸ್ತುತ ಸಂಗತಿಯನ್ನು ಗಮನಿಸುವುದು ಅವಶ್ಯವಾಗಿತ್ತು. ಮಾಳಚಿಗೆ 'ಮಾಯಾದೇವಿ'ಯೆಂಬ ಹೆಸರಿತ್ತೆಂದು ಊಹಿಸಲು ಇಟ್ಟುಕೊಂಡಿರುವ ಆಧಾರ ದುರ್ಬಲವಾಗಿದೆ. ಇವರಿಬ್ಬರು ದೇವತೆಯರನ್ನು ಸಮೀಕರಿಸಲು ಹೆಚ್ಚಿನ ಪುರಾವೆಗಳು ಬೇಕು. ಸಂಸ್ಕೃತ ರೂಪಕ ಪ್ರಕಾರ ವಾದ ಪ್ರಕರಣಕ್ಕೂ ಜಾನಪದ ವೇಷಗಳ ಸರಣಿಯಾದ 'ಪಗರಣ'ಕ್ಕೂ ಯಾವುದೇ ಸಂಬಂಧವಿಲ್ಲ. ಈ ವಿಷಯಕ್ಕೆ ಡಾ. ಚಿದಾನಂದ ಮೂರ್ತಿಯವರು ಬರೆದಿರುವ ಲೇಖನಗಳಿಂದ ಇದು ಸ್ಪಷ್ಟವಾಗಿದೆ. ಅದೇ ರೀತಿ ಭಂಗಿ ಎಂದರೆ ಅದೊಂದು ಸೊಪ್ಪು ಎಂದಾಗಬೇಕಿಲ್ಲ. ಅಫು (opium)ವಿನೊಡನೆ ಕಸಕಸೆ, ಬೆಲ್ಲ ಅಥವಾ ಸಕ್ಕರೆ ಮುಂತಾದ ವಸ್ತುಗಳನ್ನು ಸೇರಿಸಿ ತಯಾರಿಸಿದ, ಅಗಿಯುವ ಮಾದಕ ದ್ರವ್ಯಕ್ಕೆ ಆ ಹೆಸರಿದೆ. ಪರಡಿ, ಬೆಳಸೆ (ಉತ್ತರ ಕರ್ನಾಟಕ ದಲ್ಲಿ 'ಬೆಳಸಿ'), ಸೂಸ್ಲು, ಹುಲಿಯುಗುರು ಮುಂತಾದವುಗಳ ಬಗ್ಗೆ ಹೇಳಿರುವ ವಿವರಗಳಲ್ಲಿ ಪರಿಷ್ಕಾರಗೊಳ್ಳಬೇಕಾದ ಅಂಶಗಳು ಹಲವಿವೆ. ಕೊನೆಯಲ್ಲಿನ ವಿಶಿಷ್ಟ ಪದ ಸೂಚಿಯಲ್ಲಿ ಇನ್ನೂ ಹಲವು ಶಬ್ದಗಳು ಸೇರಬೇಕು. ಇಷ್ಟು ಗಾತ್ರದ ಪ್ರಬಂಧ ದಲ್ಲಿ ಇಂಥವು ಉಳಿದುಕೊಂಡಿರುವುದೊಂದು ಮಹಾದೋಷವೇನೂ ಅಲ್ಲ. ಗ್ರಂಥ ತುಂಬಾ ಪ್ರಯೋಜನಕಾರಿಯಾಗಿದೆ. ಮುದ್ರಣವೂ ಚೊಕ್ಕಟವಾಗಿದೆ.

ಶ್ರೀಮಾನ್ ಎಚ್. ದೇವೀರಪ್ಪ ಮತ್ತು ಪಂಡಿತ ಚನ್ನಪ್ಪ ಎರೆಸೀಮೆ ಯವರು ಜತೆಗೂಡಿ ಸಂಪಾದಿಸಿದ ಕೃತಿ 'ಮಹಾನುಭಾವಿ ಶ್ರೀಚನ್ನಮಲ್ಲಿಕಾರ್ಜು ನರು'. ಶ್ರೀ ಕೋರಿ ಚನ್ನಮಲ್ಲಪ್ಪನವರು ಚನ್ನಮಲ್ಲಿಕಾರ್ಜುನ ಎಂಬ ನಾಮದಿಂದ ಹಲವಾರು ವರ್ಷಗಳಕಾಲ ಗ್ರಂಥಲೇಖನಗಳನ್ನು ಬರೆದು, ಹಳೆಯ ಕೃತಿಗಳನ್ನು ಸಂಪಾದಿಸಿ, ಪತ್ರಿಕೆಗಳನ್ನು ಪ್ರಕಟಿಸಿ ಹೆಸರು ವಾಸಿಯಾಗಿದ್ದವರು. ತಮ್ಮ ಕಾಲದಲ್ಲಿ ವೀರಶೈವದ ಚಲಿಸುವ ವಿಶ್ವಕೋಶವಂತಿದ್ದವರು. ತಮ್ಮ 'ಸದ್ಧರ್ಮ ದೀಪಿಕೆ'ಯ ಮುಖಾಂತರ ಕನ್ನಡ ಸಾಹಿತ್ಯ ಸಂಸ್ಕೃತಿಯ ಕ್ಷೇತ್ರದಲ್ಲಿ ಅವರು ಮೂಡಿಸಿದ ಜಾಗ್ರತಿ ಚಿರಸ್ಮರಣೀಯ. ಹಳೆಯ ತಲೆಮಾರಿನ ವೈಶಿಷ್ಟ್ಯಗಳೆನಿಸಿದ ಮಿತಿಯರಿಯದ ದುಡಿಮೆ, ಸತ್ಯಪಕ್ಷಪಾತ, ನಿಷ್ಕಾಮಕರ್ಮ ಮುಂತಾದ ಗುಣಗಳು ಅವರ ಬಾಳಿನ ಉಸಿರಾ ಗಿದ್ದವು. ಅಂಗವೈಕಲ್ಯ ಹೊಂದಿದ್ದರೂ ಅದರಿಂದ ವಿಚಲಿತರಾಗದೆ ಲಭ್ಯವಾದ ಅವಕಾಶಗಳನ್ನೆಲ್ಲ ಬಳಸಿಕೊಂಡು ಸಾಹಿತ್ಯ ಮತ್ತು ಧರ್ಮಗಳ ಅಧ್ಯಯನವನ್ನು ಅವ್ಯಾಹತವಾಗಿ ನಡೆಸಿದರು. ಇಂಥ ಮಹನೀಯರ ಜೀವನ ಕಾರ್ಯ ಮತ್ತು ಕೃತಿ ಗಳ ಸಮಗ್ರ ಪರಿಚಯ ಪ್ರಸ್ತುತ ಕೃತಿಯಿಂದ ಇಂದಿನ ಕನ್ನಡಿಗರಿಗೆ ಲಭ್ಯವಾಗಿದೆ. ಇದರಲ್ಲಿ ಒಟ್ಟು ಒಂಬತ್ತು ಪ್ರಕರಣಗಳಿದ್ದು ಮೊದಲ ಪ್ರಕರಣ 'ಜೀವನ. ಚಾರಿತ್ರ್ಯ

ಹಾಗೂ ಆರಂಭದ ಬರವಣಿಗೆಗಳು' ಎಂಬುದರಲ್ಲಿ ಮಲ್ಲಿಕಾರ್ಜುನರ ಜೀವನ ಮತ್ತು ವ್ಯಕ್ತಿ ಚಿತ್ರಣ ಬಂದಿದೆ. ಮುಂದಿನ ಏಳು ಪ್ರಕರಣಗಳಲ್ಲಿ ಪ್ರಮುಖವಾದ ಎಲ್ಲ ಕೃತಿಗಳು, ಲೇಖನಗಳು, ಭಾಷಣಗಳು ಮುಂತಾದುವು ಸಂಕಲಿತಗೊಂಡಿದೆ. ಸಂಪಾದಕರು ಅಲ್ಲಲ್ಲಿಯೇ ಆಯಾ ಕೃತಿಗಳನ್ನು ಕುರಿತು ಸಂಕ್ಷಿಪ್ತವಾಗಿ ಮೌಲ್ಯಮಾಪನ ಮಾಡಿದ್ದಾರೆ. ಇದರಿಂದ ಓದುಗರಿಗೆ ಮೂಲದ ಪೂರ್ಣ ಪರಿಚಯ ಲಭ್ಯವಾಗಿದೆ. ಗ್ರಂಥದಲ್ಲಿ ಮಲ್ಲಿಕಾರ್ಜುನರ ಹಸ್ತಾಕ್ಷರಗಳ ಮಾದರಿಗಳನ್ನೂ ಕೊಡಲಾಗಿದೆ. ಇದನ್ನೆಲ್ಲ ನಿಯೋಜಿಸುವಲ್ಲಿ ಸಂಪಾದಕರು ವಹಿಸಿರುವ ಶ್ರಮ ಮತ್ತು ತೂಕಬದ್ಧತೆಗಳು ಮೆಚ್ಚುವಂತಿವೆ. ಪ್ರಶಂಸೆಯ ಭರದಲ್ಲಿ ಸತ್ಯಕ್ಕೆ ಅಪಚಾರವಾಗದಂತೆ ನೋಡಿಕೊಳ್ಳಲಾಗಿದೆ. ಈಗ ಸೇರಿಸಿರುವ ಅಷ್ಟು ಮುಖ್ಯವಲ್ಲದ ಲೇಖನಗಳು ಮತ್ತು ಭಾಷಣಗಳನ್ನು ವರ್ಜಿಸಿದ್ದರೆ, ಸು. ೯೫೦ ಪುಟಗಳಷ್ಟಿರುವ ಗ್ರಂಥಭಾರ ಕೆಲಮಟ್ಟಿಗೆ ಇಳಿಯಬಹುದಾಗಿತ್ತು. ಕೃತಿಯ ಪ್ರಕಟನೆಯಿಂದ ಶ್ರೀ ಚನ್ನಮಲ್ಲಿಕಾರ್ಜುನರ ವ್ಯಕ್ತಿತ್ವದ ಪರಿಚಯ ಸಮಸ್ತ ಕನ್ನಡಿಗರಿಗೆ ದೊರೆತಿರುವುದಲ್ಲದೆ ಈ ಶತಮಾನದ ಪ್ರಥಮಾರ್ಧದಲ್ಲಿ ವೀರಶೈವ ಸಾಹಿತ್ಯ ಮತ್ತು ಧರ್ಮಗಳನ್ನು ಕುರಿತಂತೆ ನಡೆದ ಚರ್ಚೆ–ಜಿಜ್ಞಾಸೆಗಳ ದಾಖಲೆಯೊಂದನ್ನು ರಚಿಸಿದಂತಾಗಿದೆ. ಸಂಶೋಧಕರಿಗೆ ಇದರಿಂದ ಹಲವು ಪ್ರಯೋಜನಗಳು ದೊರಕಲಿವೆ.

'ಸರ್ವಜ್ಞ' ಇದು ಡಾ. ಬಿ. ಕೆ. ಹೊಸಮಠ ಅವರಿಂದ ರಚನೆಗೊಂಡ ಪಿಎಚ್. ಡಿ. ಪ್ರಬಂಧ. ಸರ್ವಜ್ಞ ಕವಿಯ ವಚನಗಳು ನಮ್ಮ ನಾಡಿನ ಅಪೂರ್ವ ಸಾಂಸ್ಕೃತಿಕ ಸಂಪದದ ಒಂದು ಭಾಗ. ಕಾಲ-ಜಾತಿ. ಮತಾತೀತನಾಗಿ ನಿಂತು ಜನಮನವನ್ನು ತಟ್ಟಿ ಅದು ಯಾವಾಗಲೂ ಸಂದಿಸುವಂತೆ ಮಾಡಿದ ಹೆಮ್ಮೆಯ ಕವಿ ಆತ. ಅಂಥ ಕವಿಯೊಬ್ಬನ ಜೀವನ, ಕಾಲ ಕೃತಿಗಳು ಮತ್ತು ಸಂದೇಶಗಳನ್ನು ಕುರಿತಂತೆ ರಚನೆಗೊಂಡುದು ಪ್ರಸ್ತುತ ಕೃತಿ. ಇದರಲ್ಲಿ ಎರಡು ವಿಭಾಗಗಳನ್ನು ಮಾಡಿಕೊಳ್ಳಲಾಗಿದ್ದು ಮೊದಲನೆಯದರಲ್ಲಿ ಸರ್ವಜ್ಞನ ಜೀವನವನ್ನು ಮತ್ತು ಎರಡನೆಯದರಲ್ಲಿ ಅವನ ಕೃತಿಗಳನ್ನು ಕುರಿತ ಚರ್ಚೆ ಬಂದಿದೆ. ಸರ್ವಜ್ಞನ ತ್ರಿಪದಿಗಳಲ್ಲಿ ಪ್ರಕ್ಷಿಪ್ತಗಳ ಹಾವಳಿ ವಿಪರೀತವಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಜನಪ್ರಿಯನಾದ ಕವಿಯೊಬ್ಬನ ವಿಷಯದಲ್ಲಿ ಹೀಗಾಗುವುದು ಸ್ವಾಭಾವಿಕ. ಆದರೆ ವಚನಗಳ ಮೂಲ ಸಂಖ್ಯೆ ಮತ್ತು ಅವುಗಳ ಪಾಠಗಳನ್ನು ನಿರ್ಧರಿಸಿಕೊಳ್ಳದೆ ಮುಂದುವರಿಯುವ ಸಂಶೋಧನೆಯಾಗಲಿ,ವಿಮರ್ಶೆಯಾಗಲಿ ಅಪ್ರಯೋಜಕವೆನಿಸುವುದು ಅಷ್ಟೇ ಸ್ವಾಭಾವಿಕ. ಈ ಕಾರ್ಯ ಭಾಗಶಃ ಆದರೂ ಆಗಲೇಬೇಕಾದುದು ಅಪೇಕ್ಷಣೀಯ. ಅದರಲ್ಲಿ ನೂರಕ್ಕೆ ನೂರರಷ್ಟು ಯಶ ಸಿಗಲಾರದೆಂದು ಮೊದಲೇ ನಿಶ್ಚಿತವಾಗಿದ್ದರೂ ಮಾಡುವ ಕಾರ್ಯವನ್ನಾದರೂ ಮಾಡಬೇಕು. ಅಂಥ ಯಾವ ಪ್ರಯತ್ನವೂ ಪ್ರಸ್ತುತ ಪ್ರಬಂಧಕಾರರಿಂದ ನಡೆದಿಲ್ಲ. ರೆ. ಉತ್ತಂಗಿ ಚೆನ್ನಪ್ಪನವರಂಥವರು ಈ ದಿಶೆಯಲ್ಲಿ

ಸಾಕಷ್ಟು ಶ್ರಮವಹಿಸಿದ್ದಾರೆ. (೧೯೭೨ರಲ್ಲಿ ಡಾ. ಎಲ್. ಬಸವರಾಜು ಅವರು ಹೊರತಂದಿರುವ ಸಂಸ್ಕರಣ ಈ ಗ್ರಂಥ ಮುದ್ರಣ (೧೯೮೩) ಕಾಲದಲ್ಲಿ ಲಭ್ಯವಾಗಿದ್ದರೂ ಇವರು ಅದನ್ನು ಉಪಯೋಗಿಸಿಕೊಂಡಿಲ್ಲ.) ಅಂಥ ಮಹನೀಯರ ಒಳ್ಳೆಯ ಆವೃತ್ತಿಯನ್ನಾದರೂ ಮುಖ್ಯವಾಗಿ ಇಟ್ಟುಕೊಳ್ಳಬಹುದಾಗಿತ್ತು; ಹಾಗೂ ಮಾಡಿಲ್ಲ. ಪ್ರಬಂಧದುದ್ದಕ್ಕೂ ಬೇರೆಬೇರೆ ಮೂಲಗಳಿಂದ ತ್ರಿಪದಿಗಳನ್ನು ಎತ್ತಿಕೊಂಡಿರುವುದು ಕಂಡು ಬಂದರೂ ಆ ಮೂಲಗಳು ಯಾವವು ಎಂಬುದರ ಖಚಿತ ನಿರ್ದೇಶನಮಾಡಿಲ್ಲ. ಕೊನೆಯಲ್ಲಿನ 'ಗ್ರಂಥಋಣ'ದಿಂದಲೂ ಈ ತೊಡಕಿಗೆ ಪರಿಹಾರ ದೊರೆಯುವುದಿಲ್ಲ. ಹೀಗಾಗಿ ಇಲ್ಲಿನ ಸಂಶೋಧನೆ ಆಧಾರವಿಲ್ಲದ ಕಟ್ಟಡವಾಗಿ ಪರಿಣಮಿಸಿದೆ. ಸರ್ವಜ್ಞ ಕವಿ, ಕವಿಸರ್ವಜ್ಞ, ಸರ್ವಜ್ಞಮುನಿ, ಸರ್ವಜ್ಞ, ಪರಮಾರ್ಥ ಇತ್ಯಾದಿಯಾಗಿ ದೊರೆಯುವ ಕವಿಯ ಹೆಸರು ಅಥವಾ ಅಂಕಿತಗಳೆಲ್ಲವೂ ಒಬ್ಬನೇ ಕವಿಯನ್ನೂ ಕುರಿತಿರುವವೆಂದು ಪ್ರಬಂಧಕಾರರು ಭಾವಿಸಿರುವರಾದರೂ ಆ ವ್ಯಾಪ್ತಿಯಲ್ಲಿ ಒಳಗೊಳ್ಳುವ ಸರ್ವಜ್ಞನ ಪದ (ಚೌಪದ)ಗಳು. ಸರ್ವಜ್ಞನ ಹಾಡುಗಳು. ಸರ್ವಜ್ಞನ ಕಾಲಜ್ಞಾನ ಮತ್ತು ತ್ರಿಪದಿ (ವಚನ)ಗಳು ಇಷ್ಟರಲ್ಲಿ ಉಳಿದೆಲ್ಲವನ್ನು ವರ್ಜಿಸಿ ವಚನಗಳನ್ನು ಮಾತ್ರವೇ ಉಪಯೋಗಿಸಿಕೊಂಡಿದ್ದಾರೆ. ಇವೆಲ್ಲ ಏಕಕವಿಕೃತವೆಂದಾದರೆ ಪ್ರಬಂಧವಲ್ಲಿ ಅವನ್ನು ಪರಿಶೀಲಿಸುವುದು ಅನಿವಾರ್ಯವಲ್ಲವೆ ? ಇನ್ನು ಪ್ರಬಂಧದ ಸಂಯೋಜನೆಯಲ್ಲಿಯೂ ಹಲವು ದೋಷಗಳಿರುವುದು ಕಂಡು ಬರುತ್ತದೆ. ಎರಡು-ಮೂರು ಪುಟಗಳಿಗೆ ಮಿತಗೊಂಡ ಭಾಗಗಳೂ ಇಲ್ಲಿ ಸ್ವತಂತ್ರ ಪ್ರಕರಣದ ಸ್ಥಾನ ಗಳಿಸಿವೆ. 'ಸರ್ವಜ್ಞನನ್ನು ಉಳಿದ ಕವಿಗಳು ಏಕೆ ಉದಾಹರಿಸಲಿಲ್ಲ' ಎಂಬುದು ಅಂಥವುಗಳಲ್ಲೊಂದು! ಪ್ರಾರಂಭದಲ್ಲಿ ಕೊಟ್ಟಿರುವ 'ಕರ್ನಾಟಕದ ಪ್ರಾಚೀನತೆ' ಎಂದು ಇರುವ ಇತಿಹಾಸ ಕುರಿತಾದ ಭಾಗ ಪ್ರಬಂಧಕ್ಕೆ ವ್ಯರ್ಥ ಹೊರೆಯಾಗಿ ಪರಿಣಮಿಸಿದೆ. ಅಂತೆಯೆ ಬಳ್ಳಿಗಾವಿಯ ಕೋಡಿಮಠದ ವಾಮಶಕ್ತಿದೇವರಿಂದ ಸರ್ವಜ್ಞ ದೀಕ್ಷೆ ಪಡೆದಿರಬೇಕು ಎಂದಿರುವ ಊಹೆ (ಪುಟ ೫೦)ಗೆ ಯಾವ ಪ್ರಮಾಣವನ್ನೂ ತೋರಿಸಿಲ್ಲ. ಕ್ರಿ. ಶ. ೧೬೦೦ ಶತಮಾನ ಅಥವಾ ಅದಕ್ಕೂ ಸ್ವಲ್ಪ ಹಿಂದೆ ಇದ್ದ ಸರ್ವಜ್ಞನ ವಚನಗಳಲ್ಲಿ ಶ್ರೀರಂಗಪಟ್ಟಣ ಹೋದುದು (ಕ್ರಿ. ಶ. ೧೭೯೯), ಉಗಿಬಂಡಿ, ರೈಲು, ತಂತಿ ಮುಂತಾದ ಸಂಗತಿಗಳು ಕಂಡು ಬರುವುದು ಹೇಗೆ ಎಂಬ ಸಮಸ್ಯೆಗೆ ಲೇಖಕರು 'ಅವನ ದರ್ಶನದಲ್ಲಿ ಇಂದಿನ ಟೆಲಿವಿಜನ್ನಿನ ಪರದೆಯ ಮೇಲೆ ಎಲ್ಲೆಲ್ಲಿಯವೊ ಸಂಗತಿಗಳು, ಘಟನೆಗಳು ಮೂಡುವಂತೆ ಮೂಡುತ್ತವೆ! (ಪು. ೨೭)ಎಂದು ಪರಿಹಾರ ಹೇಳಿರುವುದಂತೂ ಸಂಶೋಧನೆಯ ಸೂತ್ರಗಳನ್ನೆ ತಲೆಕೆಳಗು ಮಾಡಿದಂತಾಗಿದೆ. ಒಟ್ಟಿನಲ್ಲಿ ಇದು ಸರ್ವಜ್ಞನಂಥ ಅಮರಕವಿಗೆ ಸಲ್ಲುವ ಕೃತಿಯಂತೂ ಆಗಿಲ್ಲ. ಅಚ್ಚಿನ ದೋಷಗಳಿಲ್ಲದೆ ಒಳ್ಳೆಯ ಕಾಗದದ ಮೇಲೆ ಮುದ್ರಣಗೊಂಡಿರುವುದೊಂದು ಮಾತ್ರ ಈ ಗ್ರಂಥದ ತೃಪ್ತಿಕರವಾದ ಅಂಶವಾಗಿದೆ.

'ಶ್ರೀ ಜಗದ್ಗುರು ಆದಿ ರೇಣುಕರು' ಇದು ಪಂಚಾಚಾರ್ಯರಲ್ಲಿ ಒಬ್ಬರಾದ ರೇಣುಕಾಚಾರ್ಯರ ಚರಿತ್ರೆ. ಲೇಖಕರು ಡಾ. ಜ. ಚ. ನಿ. ಈ ಚರಿತ್ರೆ ವೀರಾಗಮದಿಂದ ಸಂಶೋಧಿತವಾದುದೆಂದು ಹೇಳಿದೆ. ಇಲ್ಲಿ ವೀರಾಗಮವೆಂದರೆ ಇತ್ತೀಚೆಗೆ ಲೇಖಕರಿಗೆ ದೊರೆತ ವೀರಾಗಮದ ಉತ್ತರಭಾಗ ಮಾತ್ರ. ಈ ಭಾಗದಲ್ಲಿ ೧೨೦೦೦ ಪಟಲ ಅಥವಾ ಶ್ಲೋಕಗಳಿರಬೇಕೆಂಬ ವಿಷಯ ತಿಳಿದು ಬಂದಿರುವುದಾದರೂ ವಸ್ತುತಃ ಅವರಲ್ಲಿರುವುದು ೧೭೬೨ ಶ್ಲೋಕಗಳು ಮಾತ್ರ. ಅದೂ ಒಂದೇ ಹಸ್ತಪ್ರತಿ; ತೀರ ಅಶುದ್ಧವಾದುದು. ಈ ಸಂಗತಿಗಳನ್ನೆಲ್ಲ ಪ್ರಸ್ತುತ ಗ್ರಂಥದಲ್ಲಿ ಲೇಖಕರೇ ತಿಳಿಯಪಡಿಸಿದ್ದಾರೆ. ಕುಂಟೀಪುರದ ಕಾಶೀಖಂಡದ ಚನ್ನವೀರದೇವ ಮತ್ತು ಬಿದಿರೆಯ ವೀರಗುರುಲಿಂಗಾರಾಧ್ಯರೆಂಬವರು ಇದಕ್ಕೆ ಟೀಕೆ ಬರೆದಿದ್ದಾರಂತೆ. ವೀರಾಗಮದ ಉತ್ತರ ಭಾಗವೆಂದು ಗ್ರಹಿಸಲಾದ ಪ್ರಸ್ತುತ ಕೃತಿಯಲ್ಲಿ ವೀರಶೈವದ ಷಟ್‌ಸ್ಥಲ/ಏಕೋತ್ತರ ಶತಸ್ಥಲದ, ಪ್ರಸಾದಪಾದೋದಕಾದಿ ಅಷ್ಟಾವರಣಗಳು ಮುಂತಾದ ವಿಷಯಗಳೆಲ್ಲ ಬಂದಿವೆಯಂತೆ. 'ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಮಾಡಿದ ಅಥವಾ ಅವರಿಗಿಂತ ಮಿಗಿಲಾದ ಪ್ರಮಾಣದ ಕ್ರಾಂತಿಯನ್ನು ಆದಿರೇಣುಕರು ಮೂರೂವರೆ–ನಾಲ್ಕು ಸಾವಿರ ವರ್ಷಗಳ ಪೂರ್ವದಲ್ಲಿಯೇ ಮಾಡಿದ್ದರು. ವಿಭೀಷಣನಿಂದ ಅವರು ಮೂರು ಕೋಟಿ ಲಿಂಗ ಸ್ಥಾಪನೆ ಮಾಡಿಸಿದರು, ಅಗಸ್ತ್ಯನೊಬ್ಬನಿಗೇ ಅಲ್ಲದೆ ಅಂದು ಆಗಿಹೋದ ಶಿಂಶುಮಾರ, ಡಿಂಡಿಮಾರ, ಶತಾನಂದ, ಸತ್ಯೇಂದ್ರ, ಮಣಿಭದ್ರ, ಮೇಘನಾದ, ಓಹಿಲ ಮುಂತಾದ ಅನೇಕರು ರೇಣುಕರ ಶಿಷ್ಯರು, ಮಾದಿಗನಾಗಿದ್ದ ಮಾತಂಗನಿಗೆ ರೇಣುಕರೇ ಲಿಂಗದೀಕ್ಷೆಯಿತ್ತು ಉದ್ಧರಿಸಿದರು; ಅಷ್ಟೇ ಅಲ್ಲ ಸ್ವತಃ ಶಿವನೇ ರೇಣುಕರಿಂದ ವೀರಶೈವ ದೀಕ್ಷೆ ವಹಿಸಿದ! ಕಾಯಕ, ಸ್ತ್ರೀ ಸ್ವಾತಂತ್ರ್ಯ, ದಾಸೋಹ ಮುಂತಾದ ಪರಿಕಲ್ಪನೆಗಳೆಲ್ಲ ಅಂದಿನ ಆದಿರೇಣುಕರಿಂದಲೇ ಬಂದುವು. ಗ್ರಂಥದುದ್ದಕ್ಕೂ ಇಂಥ ಕಲ್ಪನೆಗಳು ಮತ್ತು ಪ್ರತಿಪಾದನೆಗಳು ಇಡಿಕಿರಿದಿವೆ. ಲೇಖಕರ ಪ್ರಾಸ್ತಾವಿಕ ಮಾತುಗಳು ಸೇರಿದಂತೆ ಒಟ್ಟು ಹದಿನೆಂಟು ಪ್ರಕರಣಗಳು ಪ್ರಸ್ತುತ ಗ್ರಂಥದಲ್ಲಿವೆ. ಒಟ್ಟಿನಲ್ಲಿ ಇವರಿಂದ 'ಶ್ರೀಮತ್ ರಂಭಾಪುರಿ ಪೀಠದ ಪುರಾತನೇತಿಹಾಸ ಭವನಕ್ಕೆ ಹೊಂಗಳಸನ್ನಿತ್ತಂತಾಗಿದೆ' ಎಂಬ ಸಂತೃಪ್ತಿ ಲೇಖಕರಿಗೆ ಲಭಿಸಿದೆ. ವೀರಾಗಮದ ಭಾಗವೆಂದು ತಿಳಿಯಲಾಗುವ ಪ್ರಸ್ತುತ ೧೭೬೨ ಶ್ಲೋಕ ಪ್ರಮಾಣದ ಗ್ರಂಥದ ಪಾಠ ಗ್ರಂಥ ಸಂಪಾದನಾ ಶಾಸ್ತ್ರದ ತತ್ವಗಳಿಗನುಸಾರವಾಗಿ ಸಂಶೋಧಿಸಲ್ಪಟ್ಟಿದಲ್ಲ ಎಂಬುದು ಸ್ಪಷ್ಟ. ಮೇಲಾಗಿ ಅದರಲ್ಲಿ ಬಂದಿರುವ ವಿಷಯವೆಲ್ಲ ಪುರಾಣ ರೀತಿಯದೆಂಬಲ್ಲಿ ಅನುಮಾನ ಉಳಿಯದು. ಇಂಥ ಸಾಮಗ್ರಿಯನ್ನೆ ಏಕೈಕವಾಗಿ ಆಧರಿಸಿ ಆದಿರೇಣುಕರು ಬೇರೆ, ರೇವಣಸಿದ್ಧ ಬೇರೆ, ಹರಿಹರನಂಥ ಕವಿಗಳು ಬರೆದಿರುವುದು ತಪ್ಪು ಕಲ್ಪನೆಯಿಂದ, ಬಸವಾದಿಗಳು ನಡೆಸಿದ ಮಾನವ

ಯಲ್ಲೇ ಅಷ್ಟು ಪೂರ್ವದಲ್ಲೊಂದು ಕ್ರಾಂತಿ ನಡೆದಿತ್ತು. ರೇಣುಕರ ಶಿಷ್ಯರು, ಅವರ ಮಠಗಳು, ಅವರ ರಾಜ್ಯಗಳು, ಅವರ ಮಾಮನೆ ಮುಂತಾದುವೆಲ್ಲ ವಾಸ್ತವ ಸಂಗತಿಗಳಾಗಿದ್ದು, ಇತ್ಯಾದಿಯಾಗಿ ನಿರ್ಣಯಿಸುವುದು ಸಂಶೋಧನೆ ಅಥವಾ ಚರಿತ್ರೆ ಆಗಲಾರದು. ದೊರೆಯಬಹುದಾಗಿದ್ದ ಅಷ್ಟಿಷ್ಟು ಚಾರಿತ್ರಿಕ ಅಂಶಗಳು ಕೂಡ ಇಂಥ ಬರವಣಿಗೆಯಿಂದ ಮರೆಯಾಗಿ ಹೋಗಬಹುದು, ಅಷ್ಟೆ.

ಗದುಗಿನಲ್ಲಿ ಕನ್ನಡ ಸಾಹಿತ್ಯಪರಿಷತ್ತು ನಡೆಸಿದ ಚಾಮರಸ ವಿಚಾರ ಸಂಕಿರಣ ದಲ್ಲಿ ಮಂಡಿಸಲಾದ ಲೇಖನಗಳ ಸಂಗ್ರಹ ಈ 'ಚಾಮರಸ ವಿಚಾರ ಸಂಕಿರಣ' ವೆಂಬ ಕೃತಿ. ಇದರಲ್ಲಿ ಒಟ್ಟು ಒಂಬತ್ತು ಲೇಖನಗಳಿದ್ದು ಹೆಚ್ಚಿನವು ವಿಮರ್ಶೆಗೆ ಸಂಬಂಧ ಪಟ್ಟವುಗಳಾಗಿವೆ. 'ಚಾಮರಸನ ಪರಿಸರ ಪರಂಪರೆ' (ಡಾ.ಎಂ.ಎಂ.ಕಲಬುರ್ಗಿ) ಪ್ರಭುಲಿಂಗ ಲೀಲೆಯ ಛಂದೋವೈಶಿಷ್ಟ್ಯ (ಡಾ.ಜಿ.ವ್ಹಿ. ಶಿರೂರ). 'ಪ್ರಭುದೇವರ ರಗಳೆ ಮತ್ತು ಪ್ರಭುಲಿಂಗಲೀಲೆ ಚಾರಿತ್ರಿಕ ವೈಶಿಷ್ಟ್ಯ (ಡಾ. ವಾಮನ ಬೇಂದ್ರೆ) ಈ ಮೂರು ಲೇಖನಗಳು ಮಾತ್ರ ಸಂಶೋಧನೆಗೆ ನೇರಸಂಬಂಧಿಸಿದವುಗಳಾಗಿವೆ. ಇತರ ಲೇಖನಗಳಲ್ಲಿ ಸಂಶೋಧನೆಯ ಅಂಶಗಳು ಚದುರಿದಂತೆ ಕಂಡು ಬರುವವಾದರೂ ಗಮನಿಸಬೇಕಾದವು ಕಡಿಮೆಯೆಂದೇ ಹೇಳಬೇಕು. ಡಾ. ಕಲಬುರ್ಗಿಯವರು ತಮ್ಮ ಲೇಖನದಲ್ಲಿ ಪರಿಸರ–ಚರಿತ್ರೆಗಳನ್ನು ಕುರಿತಂತೆ ಹಲವು ಸಂಗತಿಗಳ ಮೇಲೆ ಬೆಳಕು ಬೀರಿದ್ದಾರೆ. ಇತರ ಶೈವ–ವೀರಶೈವಗಳು. ಗುರು–ವಿರಕ್ತವರ್ಗಗಳ ಮೂಲ, ಆಗ ನಡೆದಿರಬಹುದಾದ ಮತೀಯ ಘರ್ಷಣೆಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿ ಕೆಲವು ಹೊಸ ಊಹೆಗಳನ್ನು ಮಂಡಿಸಿದ್ದಾರೆ. ಮತ್ತು ಅವುಗಳಿಗೆ ಪೋಷಕವಾಗ ಬಲ್ಲ ಹಲವಾರು ಪ್ರಾಚೀನ ಉಲ್ಲೇಖಗಳತ್ತ ಬೆರಳು ಮಾಡಿ ತೋರಿಸಿದ್ದಾರೆ. ಪ್ರಭುಲಿಂಗಲೀಲೆಯ ಛಂದಸ್ಸನ್ನು ಕುರಿತಂತೆ ಹೇಳಿಕೊಳ್ಳಬಹುದಾದ ಹೊಸ ವಿವರ ಗಳಾವವೂ ಡಾ. ಶಿರೂರ ಅವರ ಲೇಖನದಿಂದ ತಿಳಿದು ಬರುವುದಿಲ್ಲ. ಇದೇ ಮಾತು ಡಾ.ವಾಮನ ಬೇಂದ್ರೆಯವರ ಲೇಖನಕ್ಕೂ ಅನ್ವಯಿಸುತ್ತದೆ. ಈಗಾಗಲೇ ಇತರರು ಹೇಳಿರುವುದಕ್ಕಿಂತ ಹೆಚ್ಚಿನದೇನನ್ನೂ ಅವರು ಹೇಳಿಲ್ಲ. ಒಟ್ಟು ಈ ಕೃತಿಯ ಉಪಯುಕ್ತತೆ ಅಷ್ಟಕ್ಕಷ್ಟೆ ಎಂದು ಹೇಳಬಹುದು.

ಜೈನ ಸಾಹಿತ್ಯ ಸಂಶೋಧನೆ ಕುರಿತಾದ ಕೃತಿಗಳ ಸಂಖ್ಯೆ ಈ ವರ್ಷ ಕಡಿಮೆ ಯಾಗಿದೆ. ಡಾ. ವಿಜಯಾ ದಬ್ಬೆ ಅವರ ಪ್ರಬಂಧ 'ನಾಗಚಂದ್ರ ಒಂದು ಅಧ್ಯಯನ' ಈ ವರ್ಷ ಈ ವಿಭಾಗದಲ್ಲಿ ರಚಿತವಾದ ಕೃತಿಗಳಲ್ಲಿ ಬಹು ಮುಖ್ಯವಾದುದು. ಕವಿ ಕೃತಿ ಹಿನ್ನೆಲೆ, ಮಲ್ಲಿನಾಥ ಪುರಾಣ ವಿಶ್ಲೇಷಣೆ, ಪಂಪರಾಮಾಯಣ ವಿಶ್ಲೇಷಣೆ ಮತ್ತು ಸಮಾರೋಪ ಎಂಬ ಮುಖ್ಯವಾದ ನಾಲ್ಕು ಭಾಗಗಳನ್ನು ಮಾಡಿಕೊಂಡು ಇಲ್ಲಿನ ಪರಾಮರ್ಶೆ ನಡೆದಿದೆ. ವಿದ್ವಾಂಸರು ಈ ವರೆಗೆ ನಡೆಸಿರುವ ಚರ್ಚೆಗಳನ್ನೆಲ್ಲ

ತೂಗಿ ನೋಡಿ. ಉತ್ತರ ಕರ್ನಾಟಕದ ಇಂದಿನ ವಿಜಾಪುರವೇ ನಾಗಚಂದ್ರನ ಊರು ಎಂದೂ ಅವನು ತನ್ನ ಕಾವ್ಯಗಳನ್ನು ರಚಿಸಿದ್ದು ಕ್ರಿ.ಶ. ೧೦೫೦ರಿಂದ ೧೧೦೦ರ ಮಧ್ಯಂತರ ಗಡುವಿನಲ್ಲಿ ಎಂದೂ ನಿರ್ಧರಿಸಲಾಗಿದೆ. ಇಂದು ವಿಜಾಪುರದಲ್ಲಿ ಕಂಡು ಬರುವ ಕರೀಮುದ್ದೀನ ಮಸೀದೆಯೇ ಅವನು ಕಟ್ಟಿಸಿದ ಮಲ್ಲಿನಾಥ ಬಸದಿಯಾಗಿರ ಬಹುದೆಂದು ಮಾಡಿರುವ ಊಹೆ ಮಾತ್ರ ಇನ್ನೂ ಆಧಾರವನ್ನು ಬಯಸುತ್ತದೆ. ನಾಗಚಂದ್ರನ ಎರಡೂ ಕಾವ್ಯಗಳ ವಸ್ತು, ಅವುಗಳ ಆಕರ, ಸಂವಿಧಾನ ಮುಖ್ಯ ಪಾತ್ರಗಳು, ಆಖ್ಯಾನಗಳು. ಈ ಮೊದಲಾದ ವಿಷಯಗಳ ಸಮಗ್ರ ಚರ್ಚೆ ಮಾಡ ಲಾಗಿದೆ. ಮಲ್ಲಿನಾಥ ತೀರ್ಥಂಕರ ಮತ್ತು ಜೈನ ರಾಮಾಯಣ ಕಥಾ ಪರಂಪರೆಗಳ ಸಮಗ್ರ ನೋಟ ಕೂಡ ಇಲ್ಲಿ ಲಭ್ಯವಾಗಿದೆ. ಅಂತೆಯೇ ಕಾವ್ಯದ ದೋಷಗಳನ್ನೆಲ್ಲ ವಿವರವಾಗಿ ಪರಿಶೀಲಿಸಿದೆ. ಭಾಷಾಶೈಲಿ, ಕಥಾಸಂವಿಧಾನ, ಪಾತ್ರ ಪೋಷಣೆ ಮೊದಲಾದೆಡೆಗಳಲ್ಲಿ ಕಂಡುಬರುವ ನ್ಯೂನತೆಗಳನ್ನೆಲ್ಲ ಆಯಾ ಸಂದರ್ಭದಲ್ಲಿ ಖಚಿತ ವಾಗಿ ನಿರ್ದೇಶಿಸಲಾಗಿದೆ. ಆದರೆ ಅಂಥ ಪ್ರಸಂಗದಲ್ಲಿ ತೋರುವ ಸಮತೋಲನ ಮೆಚ್ಚುವಂತಿದೆ. ದೋಷಗಳನ್ನು ಎತ್ತಿ ಹೇಳುವ ಭರದಲ್ಲಿ ಕವಿಗೆ ಎಲ್ಲಿಯೂ ಅನ್ಯಾಯವೆಸಗಿಲ್ಲ. ಪ್ರಬಂಧದ ಕೊನೆಯಲ್ಲಿ ಮಲ್ಲಿನಾಥ ಪುರಾಣಕ್ಕೆ ಸಂಬಂಧ ಪಟ್ಟಂತೆ ಏಳು ವೈಶಿಷ್ಟ್ಯಗಳನ್ನು ಮತ್ತು ರಾಮಚಂದ್ರ ಚರಿತ ಪುರಾಣಕ್ಕೆ ಸಂಬಂಧ ಪಟ್ಟಂತೆ ಹನ್ನೊಂದು ವೈಶಿಷ್ಟ್ಯಗಳನ್ನು ಪಟ್ಟಿ ಮಾಡಲಾಗಿದೆ. ಈ ವೈಶಿಷ್ಟ್ಯಗಳು ಬಹುಮಟ್ಟಿಗೆ ನಿರ್ದುಷ್ಟವಾಗಿವೆ. ಸಂಶೋಧನ ಭಾಷೆ ಮತ್ತು ವಿಮರ್ಶನ ಭಾಷೆ ಗಳಲ್ಲಿ ಹಲವಂದದ ವ್ಯತ್ಯಾಸಗಳು ಉಂಟಾಗುವುದು ಸ್ವಾಭಾವಿಕ, ಒಂದರಲ್ಲಿ ಪಳಗಿದ ಕೈ ಮತ್ತೊಂದರಲ್ಲಿ ಅದೇ ಬಗೆಯ ಪಟುತ್ವವನ್ನು ತೋರ್ಪಡಿಸುವುದು ಬಹು ಅಪರೂಪ. ಆದರೆ ಡಾ. ದಬ್ಬೆಯವರು ಎರಡೂ ರೀತಿಯ ಬರವಣಿಗೆಯಲ್ಲಿ ಅದೇ ಬಗೆಯ ಸಿದ್ಧಿ ಪಡೆದಿರುವುದು ಶ್ಲಾಘ್ಯವಾಗಿದೆ. 'ಅವನ (ನಾಗಚಂದ್ರನ) ಕಾವ್ಯ ಪ್ರತಿಬಿಂಬಿಸಿರುವ ಸ್ವಭಾವದ ಋಜುತ್ವ. ಪ್ರಾಂಜಲತೆ ನಿಷ್ಠೆ, ವಿಶಿಷ್ಟತೆ. ಕೋಮಲತೆ, ಚಿತ್ತಾಪಹಾರಿಯಾದ ಸರಳದೇಶ್ಯ ಗುಣ, ಸಂಗ್ರಾಹಕ ನೈಪುಣ್ಯ ಮೊದಲಾದವು ಕನ್ನಡ ಕಾವ್ಯಲೋಕದ ಚಿರಸಂಪತ್ತಿನ ಅವಿಭಾಜ್ಯ ಅಂಗಗಳಾಗಿವೆ' ಎಂದು ಲೇಖಕಿಯರು ಹೇಳುವ ಅಭಿಪ್ರಾಯವನ್ನು ವಿಮರ್ಶಕರೆಲ್ಲ ಅನುಮೋದಿಸ ಬಹುದಾಗಿದೆ. ಒಟ್ಟಿನಲ್ಲಿ ಪ್ರಬಂಧ ಕವಿ ನಾಗಚಂದ್ರನಿಗೆ ಸಲ್ಲಿಸಿದ ಯೋಗ್ಯ ಗೌರವ ವೆಂದು ಧಾರಾಳವಾಗಿ ಹೇಳಬಹುದು.

ಕನಕದಾಸರ ಬದುಕು ಮತ್ತು ಬರಹಗಳನ್ನು ಕುರಿತು ಪ್ರಾ. ಜ್ಯೋತಿ ಹೊಸೂರ ಅವರು ರಚಿಸಿದ ಕೃತಿ 'ಕನಕದಾಸ ಜೀವನ ವಿಚಾರ' ಎಂಬುದು. ಕನಕ ದಾಸರದು ಹರಿದಾಸ ಪರಂಪರೆಯ ಎರಡನೆಯ ದೊಡ್ಡ ಹೆಸರು. ಅವರು ಕೆಳ ಜಾತಿಯಲ್ಲಿ ಹುಟ್ಟಿದ್ದರೂ ಕೃತಿಸಂಖ್ಯೆ, ಸಾಹಿತ್ಯ ಪರಮಾತ್ಮನಲ್ಲಿನ ಅನನ್ಯ ಶರಣಾಗತಿ

ಮುಂತಾದ ವಿಚಾರಗಳಲ್ಲಿ ಪುರಂದರದಾಸರಿಗೆ ಹೆಗಲೆಣೆಯಾದವರು. ಕನ್ನಡದಲ್ಲಿ ಅವರನ್ನು ಕುರಿತಂತೆ ಕೆಲವು ಗ್ರಂಥಗಳು ರಚನೆಗೊಂಡಿದ್ದರೂ ಇನ್ನೂ ಸಮಗ್ರವಾದ ಅಧ್ಯಯನದ ಕೊರತೆ ಇದ್ದೇ ಇದೆ. ಪ್ರಸ್ತುತ ಕೃತಿ ದಾಸರ ಬದುಕು ಬರಹಗಳನ್ನು ಕುರಿತು ಒಂದು ಮಿತಿಯಲ್ಲಿ ರಚಿತವಾದುದು. ಮಿತಿಯಲ್ಲಿ ರಚಿತವಾಗಿದೆಯೆಂದರೂ ಒಂದು ಒಳ್ಳೆಯ ಕೃತಿಯಾಗಿದೆ. ಇದರ ಪ್ರವೇಶದಲ್ಲಿ ಕನಕದಾಸರ ಕೃತಿಗಳ ವಿಮರ್ಶೆಯಿದ್ದು ಮುಂದಿನ ಬದುಕು ಎಂಬ ದ್ವಿತೀಯ ಭಾಗದಲ್ಲಿ ಕನದಾಸರ ದೇಶ. ಕಾಲ, ಮತ್ತು ಜಾತಿಗಳನ್ನು ಕುರಿತ ಚರ್ಚೆಯಿದೆ. ಕೃತಿಗಳ ಮೇಲಿನ ಚರ್ಚೆ ಅಷ್ಟು ವಿವರವಾಗಿಲ್ಲ. ಆದರೆ ಇರುವಷ್ಟು ಅಡಕವಾಗಿ ಸಮರ್ಥವಾಗಿ ಬಂದಿದೆ. ದೇಶಕಾಲಗಳ ಚರ್ಚೆ ಹೆಚ್ಚು ವಿವರವಾಗಿದ್ದು ಹಲವು ಹೊಸ ಅಂಶಗಳನ್ನೊಳಗೊಂಡಿದೆ. ಹಲವಾರು ಪ್ರಮಾಣಗಳಿಂದ ಕನಕದಾಸರ ಜಾತಿ ಕುರುಬ ಎಂಬುದನ್ನು ಪ್ರಮಾಣಿಸಲಾಗಿದೆ. ಜೊತೆಗೆ ಕನಕದಾಸರ ಕೃತಿಗಳಲ್ಲಿ ಇಂದು ಕೂಡ ಪ್ರಸ್ತುತವಾಗಬಲ್ಲ ಅಂಶಗಳಿವೆಯೆಂಬುದನ್ನು ಎತ್ತಿತೋರಿಸಲಾಗಿದೆ. ಕವಿಯೊಬ್ಬನ ದೇಶಕಾಲಾದಿಗಳ ಚರ್ಚೆ ಆತನ ಕೃತಿಗಳ ತಿಳುವಳಿಕೆಗೆ ತುಂಬ ಸಹಕಾರಿ. ಆದ್ದರಿಂದ ಅದು ಮೊದಲು ಬಂದು ತರುವಾಯ ಕೃತಿಗಳ ವಿಮರ್ಶೆ ನಡೆಯಬೇಕಾದುದು ಸರಿಯಾದ ವಿಧಾನ. ಇಲ್ಲಿ ಆಕ್ರಮ ವಿಲೋಮಗೊಂಡಿಗೆ. ಪ್ರಾರಂಭದಲ್ಲಿ ಪರಿವಿಡಿಯನ್ನೇ ಕೊಟ್ಟಿಲ್ಲ. ಕೊನೆಯಲ್ಲಿ "ಅವನು (ಕನಕದಾಸ) ಮತಧರ್ಮಗಳ ತೆಕ್ಕೆಯಿಂದ ಹೊರಗಿದ್ದು ಬರೆದಿದ್ದರೆ ಅವನ ಕಾವ್ಯಗಳು ಇನ್ನಷ್ಟು ಕ್ರಾಂತಿಕಾರಕವಾಗುತ್ತಿದ್ದವೆಂದು ಊಹಿಸಬಹುದು. ಹೀಗಾಗದಿದ್ದುದು ದೊಡ್ಡ ದುರಂತ" ಎಂದಿರುವ ಮಾತುಗಳು ಕನಕದಾಸರ ಬಗೆಗೆ ಲೇಖಕರು ಇಟ್ಟುಕೊಂಡಿರುವ ವಿಪರೀತ ನಿರೀಕ್ಷೆಯ ದ್ಯೋತಕವಾಗಿವೆ.

'ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು' ಡಾ. ಕೆ. ಶ್ರೀಕಂಠಯ್ಯನವರು ರಚಿಸಿದ ಒಂದು ಕಿರುಕೃತಿ. ಇದರಲ್ಲಿ, ಸೇನಾಬಲ, ಗಜಾಶ್ವದಳಗಳು. ಸೈನಿಕರ ಉಡುಗೆ–ತೊಡಿಗೆಗಳು, ಸೈನಿಕ ಆಯುಧಗಳು, ಸಮರೋಪಕರಣಗಳು. ಸಂರಕ್ಷಕ ಸಾಧನಗಳು, ಸಮರಕಾರ್ಯಾಚರಣೆ, ಸೈನಿಕರನ್ನುದ್ದೇಶಿಸಿ ಭಾಷಣ. ದಂಡಯಾತ್ರೆ– ಸೇನಾಶಿಬಿರ, ಹೋರಾಟದ ಸ್ವರೂಪ, ಕೋಟೆಗಾಳಗ, ರಣವಾದ್ಯ. ಚಿಕಿತ್ಸೆ. ಸಮರ ಸಿಬ್ಬಂದಿ ಎಂದು ಹದಿನಾಲ್ಕು ಚಿಕ್ಕ ಚಿಕ್ಕ ಪ್ರಕರಣಗಳಿವೆ. ಸಮ್ಯಕ್ತ್ವಕೌಮುದಿ, ಚೆನ್ನಬಸವ ಪುರಾಣದಂಥ ಮತೀಯ ಕಾವ್ಯಗಳಲ್ಲಿ ಮತ್ತು ಕುಮಾರರಾಮನ ಸಾಂಗತ್ಯ. ಕಂಠೀರವ ನರಸರಾಜ ವಿಜಯ, ಕೆಳದಿನೃಪ ವಿಜಯಗಳಂಥ ಚಾರಿತ್ರಿಕ ಕೃತಿಗಳಲ್ಲಿ ಬರುವ ಯುದ್ಧದ ವಿವರಗಳನ್ನು ಎಚ್ಚರಿಕೆಯಿಂದ ಆಯ್ದು ರಚಿಸಿದ ಕೃತಿ ಇದಾಗಿದೆ. ಜೊತೆಗೆ ವಿದೇಶಿ ಪ್ರವಾಸಿಗರ ಬರಹಗಳು. ಅನ್ಯಭಾಷೆಯ ಕೃತಿಗಳು ಮತ್ತು ಶಾಸನ ಮುಂತಾದ ಮೂಲಗಳಿಂದಲೂ ವಿವರಗಳನ್ನು ಸಂಗ್ರಹಿಸಿ ಕೊಳ್ಳಲಾಗಿದೆ. ಇಲ್ಲಿನ

ವಿವರಗಳು ಮುಖ್ಯವಾಗಿ ವಿಜಯನಗರ ತರುವಾಯದ ಯುದ್ಧಗಳಿಗೆ ಸಂಬಂಧ ಪಟ್ಟಿರುವುದು ಕಂಡುಬರುತ್ತದೆ. ಪಂಪಭಾರತದಂಥ ಪ್ರಾಚೀನ ಕೃತಿಗಳಲ್ಲಿ ಕಂಡು ಬರುವ ವಿವರಗಳನ್ನು ವಿಶ್ಲೇಷಿಸಿದ್ದರೆ ಯುದ್ಧ ಸಂಬಂಧಿಯಾದ ಇನ್ನೂ ಹೆಚ್ಚಿನ ಸಂಗತಿಗಳು ಬೆಳಕಿಗೆ ಬರಬಹುದಾಗಿತ್ತು. ಆದರೆ ತನ್ನ ಮಿತಿಯಲ್ಲಿ ಮಧ್ಯೋತ್ತರ ಯುಗದ ಕರ್ನಾಟಕದಲ್ಲಿ ನಡೆಯುತ್ತಿದ್ದ ಸಮರ ಚಟುವಟಿಕೆಗಳನ್ನು ಈ ಕೃತಿ ಸಮರ್ಥ ವಾಗಿ ಪರಿಚಯಿಸುತ್ತದೆಂದು ನಿರ್ಧಾರವಾಗಿ ಹೇಳಬಹುದು. ಯಾವ ವಿವರ ಹೇಳಿ ದರೂ ಪೂರ್ಣ ಆಧಾರದೊಂದಿಗೆ ಹೇಳಿರುವುದು ಉದ್ದಕ್ಕೂ ಕಂಡುಬರುತ್ತದೆ. ನಮ್ಮ ಹಿಂದಿನ ಜನಾಂಗದ ಪ್ರಮುಖ ಉದ್ಯೋಗವೊಂದನ್ನು ಕುರಿತಂತೆ ಇಲ್ಲಿ ಇರು ವಷ್ಟು ಮಾಹಿತಿ ಇತರೆಡೆಯಲ್ಲಿ ಕಂಡುಬಂದಿಲ್ಲವೆಂದೇ ಹೇಳಬೇಕು. ದಿ. ಬೆಟಗೇರಿ ಕೃಷ್ಣಶರ್ಮರ 'ಕರ್ನಾಟಕ ಜನಜೀವನ'ವೊಂದು ಮಾತ್ರ ಈ ಮಾತಿಗೆ ಅಪವಾದ ವೆನಿಸಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿ ಬಿಟ್ಟ ಬಳ್ಳಿ ಮಾಲೆಯ ಒಂದು ಪ್ರಕಟಣೆ 'ನಮ್ಮ ಕರ್ನಾಟಕ'. ಡಾ. ಟಿ. ವ್ಹಿ. ವೆಂಕಟಾಚಲಶಾಸ್ತ್ರಿಯವರು ಇದರ ಲೇಖ ಕರು. ಇದರಲ್ಲಿ ಎರಡು ಭಾಗಗಳಿದ್ದು ಮೊದಲಿನ ಭಾಗದಲ್ಲಿ, ಕರ್ನಾಟಕ-ಇಂದು, ಭೌಗೋಳಿಕ ವ್ಯಾಪ್ತಿ ಮೇಲ್ಮೈ ಲಕ್ಷಣ, ಕರ್ನಾಟಕ-ಪರಂಪರೆಯಲ್ಲಿ, ಕನ್ನಡ, ಕರ್ನಾಟಕ ಶಬ್ದಗಳ ಪ್ರಾಚೀನತೆ ಪ್ರಯೋಗಗಳು, ಇವುಗಳ ರೂಪ-ಅರ್ಥ ನಿಷ್ಪತ್ತಿ ಗಳು, ಕುಂತಲ-ಮಹಿಷ ಮಂಡಲ-ಕರ್ನಾಟಕ, ದೊರೆಗಳ ಆಳ್ವಿಕೆಯ ಕರ್ನಾಟಕ- ಹೀಗೆ ಏಳು ಪ್ರಕರಣಗಳಿವೆ. ಎರಡನೆಯ ಭಾಗದಲ್ಲಿ ಅನುಬಂಧಗಳಿವೆ. ಮೇಲಿನ ಪ್ರಕರಣಗಳಲ್ಲಿ ಆಯಾ ವಿಷಯಗಳನ್ನು ಕುರಿತಂತೆ ವಿದ್ವಾಂಸರು ಈ ವರೆಗೆ ನಡೆ ಸಿರುವ ಚರ್ಚೆಯ ಸಾರವನ್ನೆಲ್ಲ ಸಂಗ್ರಹಿಸಿ ಕೊಡಲಾಗಿದೆ. ಡಾ. ಶಾಸ್ತ್ರಿಗಳು ಇಲ್ಲಿ ತಮ್ಮದೆಂಬ ಹೊಸ ಅಂಶಗಳನ್ನು ಹೇಳಿದ್ದು ಕಂಡುಬರುವುದಿಲ್ಲವಾದರೂ ಹಲವೆಡೆ ಗಳಲ್ಲಿ ವಿದ್ವಾಂಸರ ಅಭಿಪ್ರಾಯಗಳಿಗೆ ಪರ-ವಿರೋಧವಾದ ತಮ್ಮ ನಿಲವುಗಳನ್ನು ತಿಳಿಸಿದ್ದಾರೆ. ಎರಡನೆಯ ಭಾಗದ ಅನುಬಂಧಗಳು ಕನ್ನಡ-ಕರ್ನಾಟಕಗಳನ್ನು ಕುರಿ ತಾಗಿ ಇದುವರೆಗೆ ತಿಳಿದಿರುವ ಉಲ್ಲೇಖಗಳ ಸಮಗ್ರ ಸಂಗ್ರಹವಾಗಿವೆ. ಡಾ. ಶಾಸ್ತ್ರಿ ಗಳ ಅಧ್ಯಯನ ವ್ಯಾಪ್ತಿಗೆ ಪ್ರಸ್ತುತ ಕೃತಿಯೂ ಒಂದು ನಿದರ್ಶನವೆಂದು ಹೇಳ ಬಹುದು. ಒಟ್ಟಿನಲ್ಲಿ ಇದೊಂದು ಉತ್ತಮ ಸಂದರ್ಭ ಗ್ರಂಥ. ಸಂಗ್ರಹ ಯೋಗ್ಯ ವಾಗಿದೆ.

'ಉತ್ತರ ಕರ್ನಾಟಕದ ಬಯಲಾಟಗಳು' ಡಾ. ಬಸವರಾಜ ಮಲಶೆಟ್ಟಿಯವರ ಪಿಎಚ್.ಡಿ. ಪ್ರಬಂಧ. ಉತ್ತರ ಕರ್ನಾಟಕದ ಜಾನಪದ ರಂಗಭೂಮಿಯನ್ನು ಕುರಿತಂತೆ ಈ ವರೆಗೆ ನಡೆದಿರುವ ಅಧ್ಯಯನಗಳಲ್ಲಿ ಇದು ಪ್ರಮುಖವಾದುದು. ಉತ್ತರ ಕರ್ನಾಟಕದ ರಂಗಭೂಮಿಯ ಪ್ರಮುಖ ಚಟುವಟಿಕೆಗಳ ಕೇಂದ್ರ ಬೆಳಗಾವಿ

ಜಿಲ್ಲೆಯೆ. ಮಲಶೆಟ್ಟಿಯವರು ಈ ಕೇಂದ್ರ ಪ್ರದೇಶದಿಂದಲೇ ಬಂದವರಾದುದರಿಂದ ಅದರ ಆಗು ಹೋಗುಗಳಲ್ಲಿ ಭಾಗವಹಿಸಿದವರ ನೇರ ಸಂಪರ್ಕ ಅವರಿಗೆ ಲಭ್ಯವಾಯಿತು. ಅದನ್ನವರು ತಕ್ಕಮಟ್ಟಿಗೆ ಚೆನ್ನಾಗಿಯೆ ಬಳಸಿಕೊಂಡಿರುವುದು ಪ್ರಬಂಧದಲ್ಲಿ ಎದ್ದು ತೋರುತ್ತದೆ. ಎಂದರೆ ಈ ಮುಂಚೆ ಡಾ. ಮಲಶೆಟ್ಟಿಯವರಂತೆ ವಿವರವಾದ ಕ್ಷೇತ್ರ ಕಾರ್ಯ ಕೈಕೊಂಡವರು ಇರಲಿಲ್ಲವೆಂದೇ ಹೇಳಬೇಕು. ಹೀಗಾಗಿ ಅವರ ಅಭಿಪ್ರಾಯಗಳಿಗೆ ಹೆಚ್ಚಿನ ಬೆಲೆ ಸಲ್ಲಿಸಬೇಕಾಗುತ್ತದೆ. ಇತರ ವಿದ್ವಾಂಸರ ಬಹಳಷ್ಟು ನಿಲವುಗಳನ್ನು ಅವರು ಕಡ್ಡಿಮುರಿದಂತೆ ನಿರಾಕರಿಸುತ್ತಾರೆ. ಅದು ಅವರಿಗೆ ಸ್ವಾಭಾವಿಕ ಮತ್ತು ಅವಶ್ಯಕವೆಂದೇ ತೋರಿದೆ. ಪ್ರಮುಖವಾಗಿ ಇಲ್ಲಿ ದೊಡ್ಡಾಟ ಅಥವಾ ಮೂಡಲಪಾಯ ದಪ್ಪಿನಾಟ, ಮತ್ತು ಕೃಷ್ಣ ಪಾರಿಜಾತಗಳನ್ನು ಕುರಿತಂತೆ ವಿವರವಾದ ಪರಾಮರ್ಶೆ ನಡೆದಿದೆ, ಒನ್ನೆಲೆಯಾಗಿ ಯಕ್ಷಗಾನ, ದಾಸರಾಟ, ರಾಧಾನಾಟ, ರಾಜಾನಾಟ ಮುಂತಾದವುಗಳ ಚರ್ಚೆಯೂ ಬಂದಿದೆ, ಈ ಬೇರೆ ಬೇರೆ ರಂಗಪ್ರಕಾರಗಳನ್ನು ಕುರಿತಾದ ಹಲವಾರು ಚಾರಿತ್ರಿಕ ಸಂಗತಿಗಳು ಇದರಿಂದ ನಿಚ್ಚಳಗೊಂಡಿವೆ. ಕೊನೆಯಲ್ಲಿ ಬಂದಿರುವ ಎರಡು ಮತ್ತು ಮೂರನೆಯ ಅನುಬಂಧಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಕಾರ್ಯ ಮಾಡಬಯಸುವವರಿಗೆ ತುಂಬ ಉಪಯುಕ್ತವಾಗಬಲ್ಲುವು. ಅನುಬಂಧ ಒಂದರಲ್ಲಿ ಹೇಳಿರುವ ಅಡಸೋಗುಗಳ ವಿವರಣೆ ತೀರ ಚಿಕ್ಕದಾಗಿದೆ. ಅದೇ ರೀತಿ ರಂಗ ಮತ್ತು ಅದರ ಸ್ವರೂಪ, ಸಿದ್ಧತೆಗಳು, ವಾದ್ಯಗಳು, ವೇಷಗಳು, ಸಂಗೀತ, ಹಾಡು, ಕುಣಿತ, ಅಭಿನಯಗಳು ಮತ್ತು ಕಥಾವಸ್ತು ಈ ಮುಂತಾದ ಅಂಗ–ಪ್ರತ್ಯಂಗಗಳು ರಾಧಾನಾಟದಿಂದ ದಪ್ಪಿನಾಟ–ದೊಡ್ಡಾಟಗಳ ವರೆಗೆ ಬೆಳೆದು ಬಂದ ವಿಧಾನವನ್ನು ಮಲಶೆಟ್ಟಿಯವರು ಗುರುತಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಅವುಗಳನ್ನು ವಿಂಗಡಿಸಿರುವ ಅಧ್ಯಾಯಗಳಲ್ಲಿ ಮತ್ತು ವಿವರಣಾ ಕ್ರಮದಲ್ಲಿ ಇನ್ನೂ ಹೆಚ್ಚಿನ ವ್ಯವಸ್ಥೆ ಇರಬೇಕಾಗಿತ್ತೆಂದು ಹೇಳಬಹುದು. ಒಟ್ಟಿನಲ್ಲಿ ಇದೊಂದು ಉತ್ತರ ಕರ್ನಾಟಕದ ಜಾನಪದ ರಂಗಭೂಮಿಯನ್ನು ಕುರಿತ ಗಂಭೀರ ಅಧ್ಯಯನ.

ಡಾ. ಮಲಶೆಟ್ಟಿಯವರದೇ ಇನ್ನೊಂದು ಕೃತಿ 'ಪ್ರಾಚೀನ ಕರ್ನಾಟಕದಲ್ಲಿ ನಾಟಕ ಪರಂಪರೆ' ಎಂಬುದು. ಒಂದು ಲೇಖನದ ವಸ್ತುವಾಗಬಹುದಾದುದು ಇಲ್ಲಿ ಒಂದು ಕಿರುಕೃತಿಯಾಗಿ ಹೊರಬಂದಿದೆ. ಇದರಲ್ಲಿ ಈಗಾಗಲೇ ಬೇರೆ ಬೇರೆ ವಿದ್ವಾಂಸರಿಂದ ಚರ್ಚಿಸಲ್ಪಟ್ಟ ಸಂಗತಿಗಳೇ ಪುನಃ ಚರ್ಚಿಸಲ್ಪಟ್ಟಿವೆ. ಆದರೆ ಹೊಸ ಅಂಶಗಳಾವವೂ ಇದರಿಂದ ಹೊರಪಟ್ಟಿಲ್ಲ. ಪ್ರಾಚೀನ ಉಲ್ಲೇಖಗಳನ್ನು ಕುರಿತಾದ ತಪ್ಪು ಕಲ್ಪನೆಗಳನ್ನು ದೂರಗೊಳಿಸುವ ಆಶಯವೇ ಇಲ್ಲಿ ಪ್ರಧಾನವಾಗಿದೆ. ತಕ್ಕಮಟ್ಟಿಗೆ ಅದು ಫಲಿಸಿದೆಯೆಂದೂ ಹೇಳಬಹುದು.

ಈ ವರ್ಷದ ಉತ್ತಮ ಸಂಶೋಧನ ಗ್ರಂಥಗಳಲ್ಲಿ 'ಹಸ್ತಪ್ರತಿ ಶಾಸ್ತ್ರ'ವೂ

ಒಂದು. ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನದ ಪರವಾಗಿ ಬೆಂಗಳೂರಲ್ಲಿ ೧೯೮೧ ಜನವರಿ ೩೦ ರಿಂದ ಮೂರು ದಿನಗಳ ಕಾಲ 'ಹಸ್ತಪ್ರತಿ ಶಾಸ್ತ್ರ'ದ ಮೇಲೆ ವಿಚಾರ ಗೋಷ್ಠಿಯೊಂದು ಜರುಗಿತು. ಆ ವಿಚಾರ ಗೋಷ್ಠಿಯಲ್ಲಿ ಒಟ್ಟು ಹದಿನಾಲ್ಕು ಜನ ವಿದ್ವಾಂಸರು ಭಾಗವಹಿಸಿ ತಮ್ಮ ವಿಚಾರಗಳನ್ನು ಮಂಡಿಸಿದರು.

ಅವುಗಳ ಲಿಖಿತ ರೂಪವೇ ಈ 'ಹಸ್ತಪ್ರತಿಶಾಸ್ತ್ರ' ಕೃತಿ ಇಲ್ಲಿ ವಿಚಾರ ಮಂಡಿಸಿದ ವಿದ್ವಾಂಸರೆಲ್ಲರೂ ಗ್ರಂಥಸಂಪಾದನೆ, ಸಂಸ್ಕರಣೆ ಮತ್ತು ಪ್ರಕಟಣೆಗಳ ಅಪಾರ ಅನುಭವವುಳ್ಳವರು. ಅವರೆಲ್ಲರ ಅಧ್ಯಯನಾನುಭವಗಳು ಇಲ್ಲಿ ಕೆನೆಗಟ್ಟಿ ನಿಂತಿವೆ. ಈ ಕ್ಷೇತ್ರದಲ್ಲಿ ಒಂದೂವರೆ ಶತಮಾನಗಳ ಕಾಲ, ನಾಡಿನ ಅನೇಕ ವಿದ್ವಾಂಸರು ವಹಿಸಿರುವ ಶ್ರಮದ ಸ್ಥೂಲ ಚಿತ್ರ ಇದರಲ್ಲಿ ದೊರಕುತ್ತದೆ. ಪ್ರಾಚೀನ ಕನ್ನಡದ ಅಪಾರವಾದ ಕೃತಿರಾಶಿ ಬೆಳಕಿಗೆ ಬರಲು ಕಾರಣೀಭೂತವಾದ ಹಿನ್ನೆಲೆಯ ವಿದ್ಯಮಾನಗಳೂ ಇಲ್ಲಿ ದಾಖಲೆಗೊಂಡಿವೆ. ಹಾಗೆ ದಾಖಲೆಗೊಳಿಸುವ ಸಂಗಡವೆ ಹಸ್ತಪ್ರತಿಗಳೊಡನೆ ಅಂಟಿಕೊಂಡಂತೆ ಬೆಳೆದು ಬಂದಿರುವ ವಿಷಯಗಳನ್ನೆಲ್ಲ ಕ್ರೋಢೀಕರಿಸಿ ಅದನ್ನೊಂದು ಶಾಸ್ತ್ರವನ್ನಾಗಿ ಎರಕಹೊಯ್ಯುವ ಪ್ರಯತ್ನವೂ ಇಲ್ಲಿ ಎದ್ದು ಕಾಣುತ್ತದೆ. ಲಭ್ಯವುಳ್ಳ ಸಾಮಗ್ರಿಯನ್ನು ಕಲೆ ಹಾಕಿ ವಿಶ್ಲೇಷಿಸಿ ಮುಂಬರುವ ಪೀಳಿಗೆಗೆ ಮಾರ್ಗದರ್ಶಕವಾಗಬಲ್ಲ ಸೂತ್ರಗಳನ್ನು ಆವಿಷ್ಕಾರಗೊಳಿಸಿದಾಗ ಮಾತ್ರ ಒಂದು ಶಿಸ್ತು ಅಥವಾ ಶಾಸ್ತ್ರ ಮೈದಾಳುತ್ತದೆ. ಎಂ. ವಿ. ಸೀತಾರಾಮಯ್ಯ, ಎಂ. ಚಿದಾನಂದಮೂರ್ತಿ, ಎಂ. ಎಂ ಕಲಬುರ್ಗಿ. ಎಸ್. ಶಿವಣ್ಣ ಮುಂತಾದ ವಿದ್ವಾಂಸರ ಲೇಖನಗಳಲ್ಲಿ ವಿಷಯವನ್ನು ಸೂತ್ರೀಕರಿಸುವ ಅಂಥ ಪ್ರಯತ್ನ ಸ್ಪಷ್ಟವಾಗಿ ಕಂಡುಬರುತ್ತದೆ. ನೋಡುವವರಿಗೆ ಇದೊಂದು ಪ್ರಯತ್ನವೆಂದು ತೋರುವುದೇ ಇಲ್ಲ. ಬದಲು ಸದರೀ ಶಾಸ್ತ್ರಕ್ಕೆ ಉತ್ತಮ ಕಾಣಿಕೆಯೆಂದೆ ಅನುಭವವಾಗುತ್ತದೆ. ಆದರೆ ಇದರಲ್ಲಿನ ಕೆಲವು ಲೇಖನಗಳು ದತ್ತ ಸಂಗ್ರಹ (data collection) ಮಟ್ಟದಲ್ಲಿಯೆ ನಿಂತಿರುವುದು ಒಡೆದು ತೋರುವ ಅಂಶ. ಎಚ್. ದೇವೀರಪ್ಪನವರ 'ಕನ್ನಡ ಹಸ್ತಪ್ರತಿ ಚರಿತ್ರೆ' ಲೇಖನದಲ್ಲಿ ಇದರ ಚಾರಿತ್ರಿಕಾಂಶಗಳು ಹಂತಹಂತವಾಗಿ ಮೂಡಿಬಂದಿಲ್ಲ, ದೇವೀರಪ್ಪನವರು ತಮ್ಮ ಲೇಖನದ ಕೊನೆಯಲ್ಲಿ ಮಾತ್ರ ಕರ್ನಲ್ ಮೆಕೆಂಝಿ ಯುಗ' ಎಂಬ ಹಂತದ ಕೆಲವು ವಿವರಗಳನ್ನು ಹೇಳಿದ್ದಾರೆ. ಹಸ್ತಪ್ರತಿಯ ಓದುವಿಕೆಯನ್ನು ಕುರಿತ ಲೇಖನದಲ್ಲಿ ಮಾರ್ಗದರ್ಶಿಯಾದ ಖಚಿತ ಅಂಶಗಳಾವವೂ ಕಂಡುಬರುವುದಿಲ್ಲ. ಒಬ್ಬ ವಿದ್ವಾಂಸರು ಹೇಳಿರುವ ಅಂಶಗಳೇ ಬೇರೆ ವಿದ್ವಾಂಸರ ಲೇಖನಗಳಲ್ಲಿ ಪುನರಾವರ್ತನಗೊಂಡಿರುವುದೂ ಉಂಟು. ಬಹುಶಃ ಇಂಥ ಸಂಗ್ರಹಗಳಲ್ಲಿ ಇದು ಅನಿವಾರ್ಯವೇನೋ. ಒಟ್ಟಿನಲ್ಲಿ ಗ್ರಂಥ ಸಾರ್ಥಕವೂ ಅತ್ಯಂತ ಉಪಯುಕ್ತವೂ ಆದ ಪ್ರಯೋಗ. 'ಪ್ರತಿಷ್ಠಾನ'ಕ್ಕೆ ಕೀರ್ತಿ ತರುವುದಾಗಿದೆ.

ಹಸ್ತಪ್ರತಿ ಶಾಸ್ತ್ರದ ಒಂದು ಪ್ರಧಾನ ಅಂಗ ಅವುಗಳ ಸೂಚಿ ತಯಾರಿಕೆ. ಈ ದಿಶೆಯಲ್ಲಿ ಆಗ ಬೇಕಾದ ಕಾರ್ಯ ನಮ್ಮಲ್ಲಿ ಬಹಳವಿದೆ. ಕನ್ನಡದಲ್ಲಿ ಸುಮಾರು ಇಪ್ಪತ್ತೈದು ಸಾವಿರ ಹಸ್ತಪ್ರತಿ ಕಟ್ಟುಗಳಿದ್ದು ಅವುಗಳಲ್ಲಿ ಕನಿಷ್ಟ ಒಂದು ಲಕ್ಷ ದಷ್ಟಾದರೂ ಕೃತಿಗಳು ನಿಹಿತವಾಗಿವೆಯೆಂಬುದು ಒಂದು ಅಂದಾಜು. ಕನ್ನಡ ಹಸ್ತಪ್ರತಿಗಳು ಹಲವಾರು ಕಡೆ ಸಾರ್ವಜನಿಕ ಮತ್ತು ಖಾಸಗಿ ಸಂಗ್ರಹಗಳಲ್ಲಿ ಒಟ್ಟಾಗಿವೆ. ಅವನ್ನು ಕುರಿತಂತೆ ಈವರೆಗೆ ಸು. ೩೩ರಷ್ಟು ಸೂಚಿಗಳು ಪ್ರಕಟವಾಗಿವೆ ಯೆಂದು ಶ್ರೀ ಎಸ್. ಶಿವಣ್ಣನವರು ಒಂದೆಡೆ ಹೇಳಿದ್ದಾರೆ. 'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ ೧' ಎಂಬ ಸಂಪುಟದ ಸಂಪಾದಕರು ಪ್ರಸ್ತುತ ಶಿವಣ್ಣನವರೇ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ವಶದಲ್ಲಿರುವ ಸು. ಒಂದೂವರೆ ಸಾವಿರ ಕಟ್ಟುಗಳಲ್ಲಿ ಅಡಕವಾಗಿರುವ ಅಯ್ದು ಸಾವಿರ ಕೃತಿಗಳ ಪೈಕಿ ೪೪೪೩ ಕೃತಿಗಳನ್ನು ಪ್ರಸ್ತುತ ಸಂಪುಟದಲ್ಲಿ ಪರಿಚಯಿಸಲಾಗಿದೆ. ಸೂಚಿತಯಾರಿಕೆಯ ತತ್ವಗಳೆಲ್ಲ ಇಲ್ಲಿನ ಸೂಚಿಯಲ್ಲಿಯೂ ಒಳಗೊಂಡಿವೆ. ಅದರ ಪುಟ ಪುಟವೂ ಅವರ ಪರಿಶ್ರಮಕ್ಕೆ ಹಿಡಿದ ಕನ್ನಡಿಯಾಗಿದೆ. ಮಹತ್ವದ ಕೃತಿ ಗಳನ್ನು ಕುರಿತ ವಿವರಗಳೆಲ್ಲ ಸಂಶೋಧಕರಿಗೆ ಪ್ರಯೋಜನಕಾರಿಯಾಗಿವೆ. ಹಲ ವಾರು ಹೊಸ ಕೃತಿಗಳು ಬೆಳಕಿಗೆ ಬಂದಿವೆ. ಅನುಕ್ರಮ ಸಂಖ್ಯೆ ೭೭ರ ಅಡಿಯಲ್ಲಿನ ಕೃತಿಯ ತಲೆಬರಹ ಬಹುಶಃ ತಪ್ಪಾಗಿರುವಂತೆ ಕಾಣುತ್ತದೆ.

'ಭಾರತೀಯ ಸಂಗೀತ ವಾದ್ಯಗಳು' ಈ ವರ್ಷದ ವಿಶಿಷ್ಟ ಸಂಶೋಧನ ಕೃತಿ. ಅಖಿಲ ಭಾರತೀಯ ಖ್ಯಾತಿಯ ಪ್ರಮುಖ ಸಂಗೀತ ವಾದ್ಯಗಳನ್ನು ಸಚಿತ್ರವಾಗಿ ಶ್ರೀ ಜಿ. ಶ್ಯಾಮಾಚಾರ್ಯರು ಇದರಲ್ಲಿ ಪರಿಚಯಿಸಿಕೊಟ್ಟಿದ್ದಾರೆ. ಪ್ರವೇಶ, ವೇದಗಳಲ್ಲಿ ಸಂಗೀತ ವಾದ್ಯಗಳು, ವಾದ್ಯಗಳ ಮೂಲ ಮತ್ತು ವಿಕಾಸ, ವಾದ್ಯಗಳ ವಿಭಜನೆ, ವಾದ್ಯಗಳ ಚಾರಿತ್ರಿಕ ಹಿನ್ನೆಲೆ, ಹೊರನಾಡುಗಳಲ್ಲಿ ಭಾರತದ ವಾದ್ಯಗಳು, ಶಿಲ್ಪದಲ್ಲಿ ಸಂಗೀತ ವಾದ್ಯಗಳು ಮತ್ತು ಕೆಲವು ಸಂಗೀತ ವಾದ್ಯ ಗಳ ವಿವರಣೆ ಎಂದು ಇದರಲ್ಲಿ ಎಂಟು ಅಧ್ಯಾಯಗಳಿವೆ. ಭಾರತೀಯ ವಾದ್ಯಗಳ ವಿನ್ಯಾಸ ಮತ್ತು ಉಪಯೋಗಗಳ ದೃಷ್ಟಿಯಿಂದ ಈ ಅಧ್ಯಾಯಗಳಲ್ಲಿ ಬಂದಿರುವ ವಿವರಗಳು ವೈವಿಧ್ಯಪೂರ್ಣವಾಗಿದ್ದು ಬೆಲೆಯುಳ್ಳವೆನಿಸುತ್ತವೆ. ಮಾರ್ಗೀಯ ವಾದ್ಯಗಳ ವಿಷಯಕ್ಕೆ ಈ ಮಾತು ಹೆಚ್ಚು ಅನ್ವಯಿಸುತ್ತದೆ. ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲಿನ ಗ್ರಂಥಗಳ ಸಹಾಯದಿಂದ ಇಲ್ಲಿನ ಮಾಹಿತಿಗಳನ್ನೆಲ್ಲ ಸಂಗ್ರಹಿಸಿ ಕೊಟ್ಟಿದ್ದಾರೆ. ಗ್ರಂಥ ಶರೀರದಲ್ಲಿನ ಚಿತ್ರಗಳು ಮತ್ತು ಕೊನೆಯಲ್ಲಿನ ಮೂರು ಪರಿಶಿಷ್ಟಗಳು—ವಿಶೇಷವಾಗಿ ಕರ್ನಾಟಕದ ಜಾನಪದ ವಾದ್ಯಗಳು ಮತ್ತು ವಾದ್ಯ ಸಂಗ್ರಹಾಲಯಗಳು—ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಿವೆ. ಕೆಲವು ಸಂಗತಿಗಳನ್ನು ವಿಶೇಷವಾಗಿ ಎರಡು ಮತ್ತು ಮೂರನೆಯ ಅಧ್ಯಾಯಗಳಲ್ಲಿನ

ವಿಷಯಗಳನ್ನು–ಆಧಾರಗಳೊಂದಿಗೆ ವಿವರಿಸಿದ್ದರೆ ಚೆನ್ನಾಗಿತ್ತು. ಅದೇ ರೀತಿ ಜಾನಪದ ವಾದ್ಯಗಳ ಬಗೆಗೆ ಶ್ರೀ ಶ್ಯಾಮಾಚಾರ್ಯರು ಹೇಳಿರುವ ಹಲವು ವಿವರಗಳು ನಿರ್ದುಷ್ಟವಾಗಿಲ್ಲ. ಉದಾಹರಣೆಗೆ ಅವರು ಡಪ್ಪಿನ ಬಗೆಗೆ ಇತ್ತಿರುವ ವಿವರಗಳನ್ನು ನೋಡಬಹುದು. (ಪು. ೭೭). ಹಲವು ರೀತಿಯ ಹಲಗೆಗಳಿಗೆ ಮತ್ತು ಡಪ್ಪಿಗೆ ಒಟ್ಟಿಗೆ ಅನ್ವಯವಾಗುವಂಥ ವಿವರಣೆ ಇಲ್ಲಿ ಬಂದಿದೆ. ಅದೂ ಸಂಕ್ಷಿಪ್ತವಾಗಿದೆ. ತುಂತುಣಿ–ಚೌಡಿಕೆಗಳು ಒಂದೇ ಎಂದು ತಪ್ಪಾಗಿ ಭಾವಿಸಿರುವುದೂ ಉಂಟು. ಅಚ್ಚಿನ ದೋಷಗಳು ಮಾತ್ರ ಪುಸ್ತಕದ ಬೆಲೆಯನ್ನು ಕುಂದಿಸುವಂತಿವೆ. ಕೆಲವು ಬರಿ ಅಚ್ಚಿನ ತಪ್ಪುಗಳೇ ಆಗಿರದೆ ಲೇಖಕರೇ ಮಾಡಿದವುಗಳಾಗಿವೆ. ಉದಾಹರಣೆಗೆ ಮಹಾವೃತ, ಶಿಲಪ್ಪಾದಿಕರಂ ಮುಂತಾದುವನ್ನು ನೋಡಬಹುದು. ಒಪ್ಪೋಲೆಯಲ್ಲಿ 'ರಡನೆ' ಎಂಬ ತಪ್ಪು ಏಳನೆಯ ಪುಟವಲ್ಲಿದೆಯೆಂದು ತೋರಿಸಲ್ಪಟ್ಟಿರುವುದಾದರೂ ಅದು ವಾಸ್ತವವಾಗಿ ಆರನೆಯ ಪುಟದಲ್ಲಿದೆ. ಇಂಥ ಕೆಲವು ಅರೆಕೊರತೆಗಳಿದ್ದಾಗ್ಯೂ ಗ್ರಂಥ ರಚನೆ ಮತ್ತು ಪ್ರಕಟಣೆಗಳು ಸ್ತುತ್ಯವೆಂದೇ ಹೇಳಬಹುದು.

೧೯೮೩ರ ಸಂಪಾದನ ಕೃತಿಗಳು

● ವೀರಣ್ಣ ರಾಜೂರ

ಇಂದು ಹೊಸ ಹೊಸ ವಸ್ತು ರೂಪ ಭಾಷೆ ಶೈಲಿ ಹಾಗೂ ದೃಷ್ಟಿ ಧೋರಣೆಗಳನ್ನು ಮೈಗೂಡಿಸಿಕೊಳ್ಳುತ್ತ, ಸಿದ್ಧಿ ಪ್ರಸಿದ್ಧಿಗಳನ್ನು ಮೆರೆಯುತ್ತ ಮುನ್ನಡೆದ ಕನ್ನಡ ಸಾಹಿತ್ಯ ಜೊತೆ ಜೊತೆಗೆ ಪ್ರಾಚೀನ ಕಾವ್ಯಗಳ ಪರಿಷ್ಕರಣ, ಮರುಪರಿಷ್ಕರಣ. ಟೀಕೆ ಟಿಪ್ಪಣೆ, ಗದ್ಯಾನುವಾದ ಮತ್ತು ಪ್ರಾಯೋಗಿಕ ವಿಮರ್ಶೆಗಳಿಗೂ ಮಹತ್ವದ ಸ್ಥಾನ ಕೊಡುತ್ತ ಸಾಗಿರುವುದು ಅದರ–ಹಳತು ಹೊಸತುಗಳ–ಸಮನ್ವಯ ದೃಷ್ಟಿಯ ದ್ಯೋತಕವಾಗಿದೆ. ನಮ್ಮ ಸಾಹಿತಿಗಳು ಹೊಸ ಸಾಹಿತ್ಯಪ್ರಕಾರಗಳಿಗೆ ಸ್ಪಂದಿಸಿದಂತೆ ಪ್ರಾಚೀನ ಸಾಹಿತ್ಯಕ್ಕೂ ಹೊಂದಿಕೊಂಡು ಅದನ್ನು ಗೌರವಿಸುತ್ತ. ಅದರ ವಿಮರ್ಶೆ. ವಿಶ್ಲೇಷಣೆ ಮಾಡುತ್ತ ಬಂದಿರುವುದು ಆ ಸಾಹಿತ್ಯದ ಜೀವಂತಿಕೆ ಹಾಗೂ ಸಾರ್ವಕಾಲಿಕತೆಗೆ ಸಾಕ್ಷಿಯಾಗಿದೆ.

ಕಾಲಗರ್ಭದಲ್ಲಿ ಅಡಗಿ ಕುಳಿತ ಮೌಲಿಕ ಕೃತಿಯೊಂದು ಬೆಳಕಿಗೆ ಬಂದಾಗ ಅದನ್ನು ಸಿಕ್ಕಷ್ಟು ಹಸ್ತಪ್ರತಿಗಳಿಂದ ಪರಿಷ್ಕರಿಸಿ ಪ್ರಕಟಿಸುವುದು. ಹೆಚ್ಚಿನ ಹಸ್ತಪ್ರತಿಗಳು ದೊರೆತಂತೆಲ್ಲ ನೂತನ ಅಂಶಗಳು ಲಭ್ಯವಾದಂತೆಲ್ಲ ಒಂದು ಕೃತಿಯನ್ನು ಮತ್ತೆ ಮತ್ತೆ ಪರಿಷ್ಕರಣಕ್ಕೆ ಒಳಪಡಿಸಿ ಶುದ್ಧಪಾಠವನ್ನು ಗೊತ್ತು ಹಚ್ಚಿ ಸಂಪಾದಿಸುವುದು ಕಾಲದಿಂದ ಕಾಲಕ್ಕೆ ನಿರಂತರವಾಗಿ ನಡೆಯುತ್ತ ಬಂದ ಪ್ರಕ್ರಿಯೆ. ಇದು ಪ್ರಸ್ತುತ ೧೯೮೩ನೆಯ ವರ್ಷದಲ್ಲಿಯೂ ನಡೆದಿದೆ.

'ಸಂಪಾದನೆ' ಮತ್ತು 'ಸಂಪಾದಕ' ಎಂಬ ಪದಗಳು ಇಂದು ಒಂದು ನಿಶ್ಚಿತ ಅರ್ಥದಲ್ಲಿ ಬಳಕೆಯಾಗುತ್ತಿಲ್ಲ. ಪ್ರಾಚೀನ ಕಾವ್ಯಗಳನ್ನು ಹಸ್ತಪ್ರತಿಗಳ ಆಧಾರದಿಂದ ಗ್ರಂಥಸಂಪಾದನಶಾಸ್ತ್ರ ನಿಯಮಗಳಿಗನುಸರಿಸಿ ಪರಿಷ್ಕರಿಸಿ ಪ್ರಕಟಿಸಿದ ಕೃತಿಗಳಿಗೂ, ಬೇರೆ ಬೇರೆ ಲೇಖಕರ ಕಥೆ, ಕವನ. ಪ್ರಬಂಧ. ನಾಟಕ. ಇತ್ಯಾದಿಗಳನ್ನಾಯ್ದು ಸೇರಿಸಿ ಪ್ರಕಟಿಸಿದ ಆಧುನಿಕ ಸಂಕಲನಗಳಿಗೂ ಸಂಪಾದನೆಗಳೆಂದು. ಅವುಗಳನ್ನು ಸಿದ್ಧಪಡಿಸಿದವರಿಗೆ ಸಂಪಾದಕರೆಂದು ಕರೆಯುವುದು ಇಂದು ರೂಢಿಗತವಾಗಿದೆ. ಆದರೆ ಇಲ್ಲಿ ನಾನು ಪ್ರಾಚೀನ ಕಾವ್ಯ, ವಚನ. ಕೀರ್ತನ. ಯಕ್ಷಗಾನ ಮತ್ತು ಹಸ್ತಪ್ರತಿಗಳಲ್ಲಿ ದೊರೆಯುವ ಇತರ ಪ್ರಾಚೀನ ದಾಖಲೆಗಳ ಪರಿಷ್ಕರಣ

ಕೃತಿಗಳಿಗೆ ಮಾತ್ರ ಸಂಪಾದನೆಗಳು ಎಂದು ಅದನ್ನು ಸೀಮಿತಗೊಳಿಸಿಕೊಂಡು, ಇವರಡಿಯಲ್ಲಿ ಸೇರುವ ಕೃತಿಗಳನ್ನು ಮಾತ್ರ ಈ ಪ್ರಬಂಧದಲ್ಲಿ ಸಮೀಕ್ಷೆಗೆ ಒಳಪಡಿಸಿದ್ದೇನೆ.

೧೯೮೩ ರಲ್ಲಿ ಪ್ರಕಟವಾದ ಒಟ್ಟು ೩೭ ಸಂಪಾದಿತ ಕೃತಿಗಳು ನನ್ನ ಗಮನಕ್ಕೆ ಬಂದಿವೆ. ಇವುಗಳಲ್ಲಿ ೧೮ ಪ್ರಥಮ ಪರಿಷ್ಕರಣಗಳಾದರೆ, ೯ ಮರುಪರಿಷ್ಕರಣಗಳು, ೬ ಸಂಕಲನಗಳು ಹಾಗೂ ೪ ಮರು ಮುದ್ರಣಗಳಾಗಿವೆ. ಇವುಗಳನ್ನು ರೂಪದ ದೃಷ್ಟಿಯಿಂದ ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

೧. ಕಾವ್ಯ ಸಂಪಾದನೆಗಳು
೨. ವಚನ–ಸ್ವರವಚನ ಸಂಪಾದನೆಗಳು
೩. ಕೀರ್ತನ–ಉಗಾಭೋಗ–ತತ್ವಪದ ಸಂಪಾದನೆಗಳು
೪. ಇತರ ಸಂಪಾದನೆಗಳು.

೧. ಕಾವ್ಯ ಸಂಪಾದನೆಗಳು

೧೯೮೩ರಲ್ಲಿ ೧೧ ಕಾವ್ಯಗಳು ಸಂಪಾದನೆಗೊಂಡು ಬೆಳಕಿಗೆ ಬಂದಿವೆ. ಇವುಗಳಲ್ಲಿ ೫ ಪ್ರಥಮ ಪರಿಷ್ಕರಣಗಳು ೫ ಮರುಪರಿಷ್ಕರಣಗಳು ಹಾಗೂ ಒಂದು ಮರು ಮುದ್ರಣ ಸೇರಿವೆ.

ಕವಿರಾಜ ಮಾರ್ಗ : ಕನ್ನಡದ ಆದಿಗ್ರಂಥ ಹಾಗೂ ಅಲಂಕಾರ ಗ್ರಂಥವೆನಿಸಿದ ಕವಿರಾಜಮಾರ್ಗ ಈ ವರ್ಷದಲ್ಲಿ ಶಾಸ್ತ್ರೀಯವಾದ ಮರುಪರಿಷ್ಕರಣವನ್ನು ಹೊಂದಿ ಹೊರ ಬಂದ ಗಮನಾರ್ಹ ಕೃತಿ. ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಕೆ. ಕೃಷ್ಣಮೂರ್ತಿ ಅವರು ಪ್ರಥಮಬಾರಿಗೆ ಹೊಸಗನ್ನಡ ಅನುವಾದದೊಂದಿಗೆ ವ್ಯವಸ್ಥಿತವಾಗಿ ಸಂಪಾದಿಸಿದ ಇದು ಹಲವು ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡಿದೆ.

ಕವಿರಾಜಮಾರ್ಗ ೧೮೯೮ ರಿಂದ ೧೯೮೩ರ ವರೆಗಿನ ಈ ಅವಧಿಯಲ್ಲಿ ೫ ಬಾರಿ ಬೇರೆ ಬೇರೆ ವಿದ್ವಾಂಸರಿಂದ ಪರಿಷ್ಕರಣಗೊಂಡು ಪ್ರಕಟವಾಗಿದೆ.

೧೮೯೮– ಸಂ. ಕೆ. ಬಿ. ಪಾಠಕ, ಪ್ರ : ಬಿಬ್ಲಿಯೋಥಿಕಾ ಕರ್ನಾಟಕ ಗ್ರಂಥ ಮಾಲೆಯ ೫ನೆಯ ಕೃತಿಯಾಗಿ, ಬಿ. ಲೂಯಿಸ್ ರೈಸ್ ಅವರ ಮೇಲ್ವಿಚಾರಣೆಯಲ್ಲಿ ಬೆಂಗಳೂರಿನಲ್ಲಿ ಪ್ರಕಟ.

೧೯೩೦– ಸಂ. ಎ. ವೆಂಕಟರಾವ ಮತ್ತು ಹ. ಎಚ್. ಶೇಷ ಅಯ್ಯಂಗಾರ್ ಪ್ರ : ಮದ್ರಾಸ್ ಯುನಿವರ್ಸಿಟಿ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟೂಟ.

೧೯೬೮– ಸಂ. ಎಂ. ವ್ಹಿ. ಸೀತಾರಾಮಯ್ಯ, ಪ್ರ : ಕರ್ನಾಟಕ ಸಂಘ. ಸರಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜ, ಬೆಂಗಳೂರು.

೧೯೭೫ ಸಂ. ಎಂ. ವ್ಹಿ. ಸೀತಾರಾಮಯ್ಯ, ಪ್ರ: ಅದೇ. (ವಿದ್ಯಾರ್ಥಿ ಆವೃತ್ತಿ)

೧೯೮೩ ಸಂ. ಡಾ. ಕೆ. ಕೃಷ್ಣಮೂರ್ತಿ, ಪ್ರ : ಐ. ಬಿ. ಎಚ್. ಪ್ರಕಾಶನ ಬೆಂಗಳೂರು.

ಈ ಐದು ಆವೃತ್ತಿಗಳಿಗೂ ಆಧಾರವಾದ ಹಸ್ತಪ್ರತಿಗಳು ಕೇವಲ ಮೂರು ಮಾತ್ರ. ಐದು ಜನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಮರುಪರಿಷ್ಕರಣೆ ಮಾಡುವಾಗ ಅಲ್ಲಿಯ ವರೆಗೆ ಬಂದ ಹೊಸ ಅಂಶಗಳನ್ನು ಸೇರಿಸಿಕೊಳ್ಳುತ್ತ, ತಮಗೆ ಸರಿಕಂಡ ಊಹೆಗಳನ್ನು ಮಾಡುತ್ತ, ಸಾಧ್ಯವಾದ ಮಟ್ಟಿಗೆ ಪಾಠಗಳನ್ನು ಶುದ್ಧಗೊಳಿಸುತ್ತ ಬಂದಿದ್ದಾರೆ. ಆದರೆ ಇನ್ನೂ ಸಂಪೂರ್ಣ ಶುದ್ಧಪಾಠಗಳು ಲಭ್ಯವಾಗದೇ ಇರುವುದು ವಿಷಾದದ ಸಂಗತಿ.

ಮೊದಲೆರಡು ಪರಿಷ್ಕರಣಗಳಲ್ಲಿ ತೋರಿಬರದ ಪ್ರಗತಿ ಮೂರನೆಯ ಪರಿಷ್ಕರಣದಲ್ಲಿ ಗೋಚರಿಸುತ್ತದೆ. ಎಂ. ವ್ಹಿ. ಸೀತಾರಾಮಯ್ಯ ಅವರು "ಪರಿಷ್ಕರಣ ಕಾರ್ಯ ಎಷ್ಟು ಶಾಸ್ತ್ರೀಯವಾಗಿ ಸಾಗಬೇಕೋ ಅಷ್ಟರ ಮಟ್ಟಿಗೆ ಸಾಗಿಲ್ಲ ಎಂಬುವರ ಪೂರ್ಣ ಅರಿವು ನನಗಿದೆ" ಎಂದು ಹೇಳಿದ್ದರೂ ಹೆಚ್ಚು ಪರಿಶ್ರಮವಹಿಸಿ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಅದೇ ಪರಿಷ್ಕರಣ ಇಲ್ಲಿಯುವರೆಗೆ ಉತ್ತಮವಾದುದೆಂದು ಸ್ವೀಕರಿಸುತ್ತ ಬರಲಾಗಿತ್ತು.

ಈಗ ಡಾ. ಕೆ. ಕೃಷ್ಣಮೂರ್ತಿ ಅವರು ತಮಗೆ ದೊರೆತ ಇನ್ನಷ್ಟು ಹೊಸ ಆಧಾರಗಳ ಮೇಲಿಂದ ಅದನ್ನು ಮರುಪರಿಷ್ಕರಣಕ್ಕೆ ಒಳಪಡಿಸಿ ಹೆಚ್ಚು ಶುದ್ಧವಾಗಿ ಹೊರತರಲು ಪ್ರಯತ್ನಿಸಿದ್ದಾರೆ. ಅವರು ತಮ್ಮ ಪರಿಷ್ಕರಣದಲ್ಲಿ ಇಟ್ಟುಕೊಂಡ ದೃಷ್ಟಿಕೋನ ಕುರಿತು "ಕೇವಲ ಗ್ರಂಥದ ಆನುಪೂರ್ವಿಯ ಗ್ರಹಣೆ, ಅರ್ಥದೃಷ್ಟಿ ಮತ್ತು ವ್ಯಾಕರಣ ಶುದ್ಧಿ ಹಾಗೂ ಛಂದೋಬದ್ಧತೆಯ ದೃಷ್ಟಿಗಳಿಂದ ನೋಡಿ. ಯಥಾಶಕ್ತಿ ಗ್ರಂಥದ ಪಾಠವನ್ನು ನಿಶ್ಚಯಿಸುವ ಒಂದು ನೇರವಾದ ಪ್ರಯತ್ನ ಈ ಸಂಪಾದಕನದು" ಎಂದು ಹೇಳಿ. ಅದರಂತೆ ಯಾವ ವಾದವಿವಾದಕ್ಕೆ ಇಳಿಯದೆ. ಖಂಡನ ಮಂಡನಗಳನ್ನು ಮಾಡದೆ ತಮಗೆ ದೊರೆತ ಖಚಿತ ಸಾಕ್ಷಾಧಾರಗಳ ಮೇಲಿಂದ ಶುದ್ಧರೂಪದ ಸಂಪಾದನೆಗೆ ತೊಡಗಿದ್ದಾರೆ.

ಅವರು ತಮ್ಮ ಪರಿಷ್ಕರಣಕ್ಕೆ ಮೂರು ಹಸ್ತಪ್ರತಿ, ನಾಲ್ಕು ಮುದ್ರಿತ ಕೃತಿಗಳ ಜೊತೆಗೆ ಪರ್ಯಾಯವಾಗಿ ಕವಿರಾಜಮಾರ್ಗದ ಪಾಠ ಸಮಸ್ಯೆಗಳನ್ನು ಕುರಿತು ಚರ್ಚೆ

ಸುವ ಐ.ಬಿ.ಎಚ್. ಪ್ರಕಾಶನದ 'ಕವಿರಾಜಮಾರ್ಗ,ಡಾ.ಎಂ.ಎಂ. ಕಲಬುರ್ಗಿ ಅವರ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ', ಭೀಮರಾವ ಚಿಟಗುಪ್ಪಿ ಅವರ 'ಕವಿರಾಜಮಾರ್ಗ ಪ್ರಶಸ್ತಿ', ಮುಳಿಯ ತಿಮ್ಮಪ್ಪಯ್ಯನವರ 'ಕವಿರಾಜಮಾರ್ಗ ವಿವೇಕ' ಕೃತಿಗಳನ್ನೂ ಗಮನಿಸಿ ಇವುಗಳ ಬೆಳಕಿನಲ್ಲಿ ಶುದ್ಧಪಾಠ ನಿರ್ಣಯಕ್ಕೆ ಮುಂದಾಗಿದ್ದಾರೆ.

ಸುದೀರ್ಘವಾದ ಪಸ್ತಾವನೆಯಲ್ಲಿ ಕವಿರಾಜಮಾರ್ಗದ ಹಸ್ತಪ್ರತಿಗಳು, ಮುದ್ರಿತ ಆವೃತ್ತಿಗಳು ಮತ್ತು ಅಧ್ಯಯನ ಗ್ರಂಥಗಳ ವಿವರ, ತಮ್ಮ ಆವೃತ್ತಿಯ ವಿಧಾನ–ವಿಶೇಷತೆ, ಕವಿರಾಜಮಾರ್ಗಕಾರನ ಕರ್ತೃತ್ವವಿಚಾರ, ಅದಕ್ಕೆ ಒದಗಿಸಿದ ಆಂತರಿಕ ಹಾಗೂ ಬಾಹ್ಯ ಪ್ರಮಾಣಗಳು, ಅವನ ಮತವಿಚಾರ, ಕವಿರಾಜಮಾರ್ಗದ ಮಹತ್ವ, ಅದರಲ್ಲಿ ಪ್ರತಿಪಾದಿತವಾದ ವಿಷಯ, ಅನುವಾದದ ಕ್ಲೇಶಗಳು, ಕವಿರಾಜ ಮಾರ್ಗದ ಪ್ರತಿಪ್ರಕರಣದ ವಿಷಯ ವಿವೇಚನೆ. ನೃಪತುಂಗ ಪ್ರಶಸ್ತಿ, ಅವನ ಮತಾ ನುಯಾಯಿತ್ವ—ಇತ್ಯಾದಿ ಅನೇಕ ವಿಷಯಗಳನ್ನು ಹೊಸ ಆಧಾರಾಂಶಗಳ ಹಿನ್ನೆಲೆ ಯಲ್ಲಿ ತಾಳ್ಮೆ ಹಾಗೂ ತರ್ಕಗಳಿಂದ ವಿವೇಚಿಸಿ ಹೊಸಬೆಳಕು ಬೀರಲು ಪ್ರಯತ್ನಿಸಿ ದ್ದಾರೆ. ಪ್ರತಿ ವಿಷಯ ಪ್ರತಿ ಪಾದನೆಯಲ್ಲಿಯೂ ಸಂಪಾದಕರ ಪರಿಪಕ್ವವಾದ ವಸ್ತು ನಿಷ್ಠದೃಷ್ಟಿ ಎದ್ದು ಕಾಣುತ್ತದೆ. ಅನುಬಂಧದಲ್ಲಿ ಪದ್ಯಗಳ ಅಕಾರಾದಿ ಸೂಚಿಯನ್ನು ಹೊಂದಿ. ಹಾಲುಕಾಗದದಲ್ಲಿ ಅಂದವಾಗಿ ಮುದ್ರಣಗೊಂಡು, ಮುದ್ದಾದ ಮುಖ ಪುಟದೊಂದಿಗೆ ಹಿರಿಯ ಪ್ರತಿಷ್ಠಿತ ಪ್ರಕಾಶನ ಸಂಸ್ಥೆ ಐ.ಬಿ.ಎಚ್. ನಿಂದ ಪ್ರಕಟವಾದ ಈ ಪ್ರಥಮವರ್ಜಿಯ ಪರಿಷ್ಕರಣ ಕೃತಿಯಲ್ಲಿ ಕಂದಪದ್ಯಗಳನ್ನು ಎರಡು ಸಾಲಾಗಿ ಮುದ್ರಿಸಿರುವುದು, ನಾಲ್ಕು ಸಾಲು ಸೂಚಿಸಲು ಮಧ್ಯದಂಡ ಹಾಕದಿರುವುದು ಕೃತಿಯ ಅಂದಕ್ಕೆ ಸ್ವಲ್ಪಮಟ್ಟಿನ ಕುಂದನ್ನು, ಓದುಗರಿಗೆ ಅಲ್ಪಮಟ್ಟಿನ ತೊಂದರೆ ಯನ್ನು ಉಂಟು ಮಾಡಬಹುದೆಂಬುದನ್ನು ಬಿಟ್ಟರೆ ಉಳಿದುದೆಲ್ಲ ಉಚಿತಕ್ಕೆ ತಕ್ಕಂತಿದೆ.

ಚಾವುಂಡರಾಯಪುರಾಣ : ಕವಿರಾಜಮಾರ್ಗದಷ್ಟೇ ಉತ್ತಮ ಮರುಪರಿಷ್ಕ ರಣ ಹೊಂದಿ ಈ ವರ್ಷದಲ್ಲಿ ಪ್ರಕಟವಾದ ಇನ್ನೊಂದು ಪ್ರಾಚೀನ ಮಹತ್ವದ ಕೃತಿ ಚಾವುಂಡರಾಯ ಪುರಾಣ. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಾಶಗೊಂಡ ಇದನ್ನು ಶ್ರೀಮತಿ ಕಮಲಾ ಹಂಪನಾ ಮತ್ತು ಕೆ. ಆರ್. ಶೇಷಗಿರಿ ಅವರು ಸೇರಿ ಸಂಪಾದಿಸಿ ದ್ದಾರೆ. ಚಾವುಂಡರಾಯ ಪುರಾಣ 'ತ್ರಿಷಷ್ಟಿ ಲಕ್ಷಣ ಮಹಾಪುರಾಣ' ಎಂದು ಹೆಸರು ಪಡೆದ ಜೈನ ೬೩ ಶಲಾಕಾಪುರುಷರ ಕಥೆಗಳನ್ನು ಹೇಳುವ ಪ್ರಾಚೀನ ಗದ್ಯಗ್ರಂಥ ಇದರ ಕರ್ತೃ ಚಾವುಂಡರಾಯ.

ಈ ಪುರಾಣ ೧೯೧೮ ರಿಂದ ೧೯೮೩ರ ವರೆಗಿನ ಅವಧಿಯಲ್ಲಿ ೬ ಬಾರಿ ಪರಿ ಷ್ಕರಣಗೊಂಡು ಪ್ರಕಟವಾಗಿದೆ. ೧೯೧೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ 'ಆದಿಪುರಾಣ' ಎಂಬ ಇದರ ಮೊದಲ ಭಾಗ ಮಾತ್ರ ಪ್ರಕಟವಾಯಿತು. ಅದು ಅದೇ

ವರ್ಷ ಸ್ವತಂತ್ರ ಕೃತಿಯಾಗಿಯೂ ಹೊರಬಂದಿತು. ೧೯೨೮ ರಲ್ಲಿ ಇದೇ ಕೃತಿ ಮತ್ತೊಮ್ಮೆ ಪರಿಷ್ಕರಣಗೊಂಡು ಪ್ರಕಟವಾಯಿತು. ೧೯೪೪ರಲ್ಲಿ ಅದರೊಳಗಿನ ಎರಡನೆಯ ಭಾಗ 'ಶಾಂತಿಪುರಾಣಂ' ಎಂಬುದು ಪರಿಷತ್ಪತ್ರಿಕೆಯಲ್ಲಿ ಪ್ರಕಟ ವಾಯಿತು. ಹೀಗೆ ಬಿಡಿಯಾಗಿ ಎರಡು ಭಾಗ ಮಾತ್ರ ಪ್ರಕಟವಾದ ಇವನ್ನು ೧೯೭೫ ರಲ್ಲಿ ಡಾ.ಬಿ.ಎಸ್. ಕುಲಕರ್ಣಿ ಅವರು ಸಮಗ್ರವಾಗಿ ಪರಿಷ್ಕರಿಸಿ ಹೊರತಂದರೆ, ೧೯೭೯ರಲ್ಲಿ ಎಂ. ಸಿ. ಪದ್ಮನಾಭಶರ್ಮ ಅವರು ಮತ್ತೊಮ್ಮೆ ಸಮಗ್ರಪರಿಷ್ಕರಣ ಮಾಡಿ ಪ್ರಕಟಿಸಿದರು. ಈಗ ಮೂರನೆಯ ಬಾರಿ ಸಮಗ್ರವಾಗಿ ಪ್ರಕಟವಾದುದೇ ಪ್ರಸ್ತುತ ಕೃತಿ.

ಈ ಪರಿಷ್ಕರಣದ ಉದ್ದೇಶವನ್ನು ಕುರಿತು ಸಂಪಾದಕರು ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ಮೊದಲು ಇದು ಭಾಗ ಭಾಗವಾಗಿ ಬಂದಿತು. ಅಲ್ಲಿ ಸಮಗ್ರವಾದ ಕವಿ ಪರಿಚಯವಾಗಲಿ, ಕಾವ್ಯವಾಗಲಿ ಇಲ್ಲ. ಸಮಗ್ರವಾಗಿ ಮೊದಲಬಾರಿಗೆ ಸಂಪಾದಿಸಿದ ಡಾ. ಬಿ. ಎಸ್. ಕುಲಕರ್ಣಿ ಅವರು ಅತ್ಯಂತ ಅವೈಜ್ಞಾನಿಕ ರೀತಿಯಲ್ಲಿ ಗ್ರಂಥ ಸಂಪಾದನೆ ಮಾಡಿದ್ದಾರೆ. ಪಾಠಾಂತರವನ್ನು ಗುರುತಿಸುವ ಕ್ರಮವೇ ಅವರಿಗೆ ತಿಳಿಯದೆಂಬ ಅನುಮಾನ ಬರುತ್ತದೆ...... ಹಿಂದಿನ ಮುದ್ರಣ ಪ್ರತಿ ಬಳಸಿಕೊಂಡಿರುವುದಾಗಿ ತಿಳಿಸುತ್ತಾರೆ. ಆದರೆ ಅದಕ್ಕೆ ಕುರುಹುಗಳೇ ಕಾಣಿಸುವುದಿಲ್ಲ. ಹಳಗನ್ನಡ ಗ್ರಂಥಗಳ ಉತ್ತಮ ರೀತಿಯ ಗ್ರಂಥ ಸಂಪಾದನೆಯ ಪರಿಚಯ ಇರುವವರಿಗೆ ಇದು ಬಹಳ ನಿರಾಶೆಯನ್ನುಂಟು ಮಾಡುತ್ತದೆ. ಎಂ. ಸಿ. ಪದ್ಮನಾಭಶರ್ಮರು ಸಂಪಾದನೆಗೆ ಬಳಸಿಕೊಂಡ ಹಸ್ತಪ್ರತಿಗಳ ವಿಚಾರವೇ ತಿಳಿಯುವುದಿಲ್ಲ. ಸಂಶೋಧಿಸಿ ಪ್ರಕಟಿಸಲಾಗಿದೆ ಎಂದು ತಿಳಿಸುತ್ತಾರೆ. ಆದರೆ ಅವರಲ್ಲಿ ಅಚ್ಚುಕಟ್ಟುತನ ಇಲ್ಲದೆ ಅತೃಪ್ತಿಯನ್ನುಂಟು ಮಾಡುತ್ತದೆ. ಪುಟಪುಟವಲ್ಲೂ ಪುಟಿದೇಳುವ ಮುದ್ರಣ ಸ್ಖಾಲಿತ್ಯಗಳು ಊಟದ ಪ್ರತಿ ತುತ್ತಿನಲ್ಲೂ ಕಲ್ಲು ಸಿಕ್ಕುವ ಅನುಭವ ಆಗುತ್ತದೆ. ಒಟ್ಟಾರೆ ಇವನ್ನು ನೋಡಿದ ಮೇಲೆ ಹಳಗನ್ನಡ ಕಾವ್ಯಾಭ್ಯಾಸ ಪ್ರಿಯರ ಮನಸ್ಸಿನಲ್ಲಿ ಕೂಡಲೇ ಮೂಡುವ ಪ್ರತಿಕ್ರಿಯೆ 'ಇನ್ನೊಂದು ಉತ್ತಮ ಪ್ರತಿ ಬೇಕೇಬೇಕು' ಎಂಬುದು. ಅಂಥ ಭಾವನೆಯಿಂದ ಪ್ರಚೋದಿತರಾಗಿ ಈ ಆವೃತ್ತಿಯನ್ನು ತ್ವರೆಗೊಳಿಸಲಾಗಿದೆ." ಹೀಗೆ ಹೇಳಿ ಹೆಚ್ಚು ಶುದ್ಧವೂ ಶಾಸ್ತ್ರೀಯವೂ ಆಗಿ ಪರಿಷ್ಕರಿಸಲು ತೊಡಗಿ ಹೆಚ್ಚಿನ ಯಶಸ್ಸನ್ನು ಸಂಪಾದಿಸಿದ್ದಾರೆ. ಅಲ್ಲದೆ 'ಉಳಿದಿರಬಹುದಾದ ದೋಷಗಳನ್ನು ನಿವಾರಿಸಲು ಇನ್ನೂ ಅನೇಕ ಬಾರಿ ಹೊಸ-ಹಸ್ತಪ್ರತಿ ದೊರೆತಂತೆಲ್ಲ—ಪರಿಷ್ಕರಣ ನಡೆಯಬೇಕಾಗಿದೆ' ಎಂದೂ ಸೂಚಿಸಿದ್ದಾರೆ.

ಇವರು ಪರಿಷ್ಕರಣಕ್ಕೆ ಬಳಸಿಕೊಂಡ ಹಸ್ತಪ್ರತಿಗಳು ಮೂರು. ಆರಂಭದ ದೀರ್ಘವಾದ ಪ್ರಸ್ತಾವನೆಯಲ್ಲಿ ಕಮಲಾ ಹಂಪನಾ ಅವರು 'ಚಾವುಂಡರಾಯ; ಸಮಗ್ರ ವ್ಯಕ್ತಿತ್ವ ಸಮೀಕ್ಷೆ' ಎಂಬ ಶೀರ್ಷಿಕೆಯಡಿಯಲ್ಲಿ ಚಾವುಂಡರಾಯನ ಹೆಸರು, ಕಾಲ, ಪ್ರಶಸ್ತಿಗಳು, ವ್ಯಕ್ತಿತ್ವ, ಕೃತಿ, ಅದರ ಆಕರ, ಅದರ ಮೇಲಾದ ಪೂರ್ವ ಕಾವ್ಯಗಳ ಪ್ರಭಾವ, ಅದರಲ್ಲಿ ಬರುವ ಕಥೆಗಳ ರೀತಿ, ತಂತ್ರ, ತೀರ್ಥಂಕರರ ಪುರಾಣಗಳಲ್ಲಿ ಬರುವ ಕಥಾ ರೀತಿಗೂ ಇಲ್ಲಿಯ ಕಥಾ ರೀತಿಗೂ ಇರುವ ಸಾಮ್ಯ, ಚಾವುಂಡರಾಯ ಪುರಾಣ ಪರಿಷ್ಕರಣ ನಡೆದುಬಂದ ದಾರಿ, ಈ ಪರಿಷ್ಕರಣದ ಉದ್ದೇಶ ಹಾಗೂ ಬಳಸಿಕೊಂಡ ಹಸ್ತಪ್ರತಿಗಳ ವಿವರಗಳನ್ನು ನೀಡಿದ್ದಾರೆ. ಆದರೆ ಒಂದೇ ಶೀರ್ಷಿಕೆಯಡಿಯಲ್ಲಿ ಎಲ್ಲವನ್ನೂ ಉದ್ದಕ್ಕೆ ಹೇಳಿಕೊಂಡು ಹೋಗುವುದಕ್ಕಿಂತ ಅಲ್ಲಲ್ಲಿ ಉಪಶೀರ್ಷಿಕೆಗಳನ್ನು ಕೊಡುತ್ತ ಹೋಗಿದ್ದರೆ, ಓದುಗರಿಗೆ ಯಾವ ವಿಷಯ ಎಲ್ಲಿ ಬಂದಿದೆ ಎಂಬುದನ್ನು ಗುರುತಿಸಲು ಅನುಕೂಲವಾಗುತ್ತಿತ್ತು.

ಅನುಬಂಧದಲ್ಲಿ ಜೈನ ಪಾರಿಭಾಷಿಕ ಪದಗಳು, ಕೃತಿಯಲ್ಲಿ ಬಳಕೆಯಾದ ಗಾದೆ, ಸಂಸ್ಕೃತ ಕನ್ನಡ ಪದ್ಯಗಳ ಅಕಾರಾದಿ, ತಿದ್ದುಪಡಿಗಳನ್ನು ಕೊಡಲಾಗಿದೆ. ಕಠಿಣ ಪದಕೋಶ, ನಾಮಸೂಚಿಗಳನ್ನೂ ಕೊಟ್ಟಿದ್ದರೆ ಅನುಬಂಧ ಸಮಗ್ರತೆಯನ್ನು ಪಡೆಯುತ್ತಿತ್ತು. ಮುನ್ನುಡಿಯಲ್ಲಿ ಹಂಪನಾ ಅವರು ವಡ್ಡಾರಾಧನೆ ಹಾಗೂ ಚಾವುಂಡರಾಯ ಪುರಾಣಗಳ ತೌಲನಿಕ ವಿವೇಚನೆಗೆ ತೊಡಗಿ, ಎರಡರ ಕಥಾ ತಂತ್ರ ಶೈಲಿ ಇತ್ಯಾದಿಗಳ ಒಂದುತನವನ್ನು ಹಾಗೂ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ವರ್ಣರಂಜಿತ ಮುಖಪುಟ ಸರ್ವರನ್ನೂ ಆಕರ್ಷಿಸುತ್ತದೆ.

ಗಂಗಾಪುರಾಣ : ೧೬ನೆಯ ಶತಮಾನದ ಮಲ್ಲಿಕಾರ್ಜುನ ಕವಿಯ ಗಂಗಾಪುರಾಣ ಹಾಯ್. ಜಿ. ಸುಣಗಾರ ಅವರಿಂದ ಸಂಪಾದಿತವಾದ ವಾರ್ಧಕ ಷಟ್ಪದಿ ಕಾವ್ಯ. ೧೫ ಸಂಧಿ ೭೨೮ ಪದ್ಯಗಳಲ್ಲಿ ವಿಸ್ತೃತಗೊಂಡ ಇದನ್ನು ಕನ್ನಡ ಅಧ್ಯಯನ ಪೀಠದ ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಲಾಗಿದೆ. ಕಕುದ್ಗಿರಿಯ, ತನ್ಮೂಲಕ ಶಿವಗಂಗೆಯುರ ಮಹಿಮಾತಿಶಯಗಳನ್ನು ವರ್ಣಿಸುವ ಇದರಲ್ಲಿ ಅನೇಕ ಪುರಾಣಗಳಿಂದಾಯ್ದ ಉಪಕಥೆಗಳೂ ಸೇರಿಕೊಂಡಿವೆ. ೧೨ ರಿಂದ ೧೫ರ ವರೆಗಿನ ಸಂಧಿಗಳ ಕೆಲವು ಪದ್ಯಗಳು ಅಪೂರ್ಣವಾಗಿವೆ. ಆದರೂ ಕಥೆಗೆ ಬಾಧೆ ಬಂದಿಲ್ಲ. ಬಿಟ್ಟುಹೋದ ಭಾಗವನ್ನು ಸಾಲು ಚುಕ್ಕೆಗಳಿಂದ ಗುರುತಿಸಲಾಗಿದೆ. ಗ್ರಂಥ ಸಂಪಾದನಶಾಸ್ತ್ರ ಸಂಕೇತಗಳ ಪ್ರಕಾರ ಅಲ್ಲಿ ಗುಂಡ್ಲೆ ಚಿಹ್ನೆ ಬಳಸಬೇಕಿತ್ತು. ಸಾಲು ಚುಕ್ಕೆಗಳನ್ನು ಉದ್ದೇಶಪೂರ್ವಕ ಬಿಟ್ಟ ಭಾಗಗಳಿಗೆ ಗುರುತಿಸುವುದು ರೂಢಿಯಾಗಿರುವುದರಿಂದ ಇದು ದೋಷವೆನಿಸುತ್ತದೆ. ಇದರ ಜೊತೆಗೆ, ಒಂದೆ ಹಸ್ತಪ್ರತಿಯಾದುದರಿಂದ ಹಲವು ಅಪಪಾಠಗಳು ಗ್ರಂಥದ ಮೈಯಲ್ಲಿ ಉಳಿದುಕೊಂಡಿವೆ. ಡಾ. ವೀರಣ್ಣ ರಾಜೂರ

ಅವರು ಬರೆದ ವಿಸ್ತಾರವಾದ ಪ್ರಸ್ತಾವನೆಯಲ್ಲಿ ಕವಿ, ಕಾಲ, ದೇಶ, ಮತ, ವಂಶ ಪರಂಪರೆ, ಗುರುಪರಂಪರೆ ಕೃತಿ ಸ್ವರೂಪ, ಆಕರ. ಕಥಾಸಾರ, ವಿಮರ್ಶೆ, ಗ್ರಂಥ ಸಂಪಾದನೆ ಬಳಸಿಕೊಂಡ ಹಸ್ತಪ್ರತಿ–ಪರಿಚಯವನ್ನು ಮಾಡಲಾಗಿದೆ. ಅನುಬಂಧದಲ್ಲಿ ಪದ್ಯಗಳ ಅಕಾರಾದಿ, ಪದಕೋಶ, ಪುರಾಣಗಳಲ್ಲಿ ಬರುವ ಗಂಗೆಯ ಉಲ್ಲೇಖ ಸಂಗ್ರಹ, ಗಂಗಾ ನೂರೆಂಟು ನಾಮಾವಳಿ, ಗಂಗಾ ಸುಪ್ರಭಾತ ಹಾಗೂ ಶ್ರೀಗಂಗಾಷ್ಟಕಗಳನ್ನು ಸೇರಿಸಲಾಗಿದೆ. ಈ ಎಲ್ಲ ಮಾಹಿತಿಗಳೊಂದಿಗೆ ಗಂಗೆಯ ಅಂದವಾದ ತ್ರಿವರ್ಣ ಚಿತ್ರವನ್ನು ಹೊಂದಿದ ಮುಖಪುಟ ಹೊತ್ತ ಇದು ವೀರಶೈವ ಷಟ್ಪದಿ ಕಾವ್ಯ ರಾಶಿಗೆ ಸೇರಿದ ಒಂದು ನೂತನ ಕೃತಿಯಾಗಿದೆ.

ಕಮಲಭವನ ಕವಿಯ ಶಾಂತೀಶ್ವರ ಪುರಾಣ : ಕನ್ನಡ ಸಾಹಿತ್ಯ ಪರಿಷತ್ತಿನ ಪಂಚವಾರ್ಷಿಕ ಯೋಜನೆ ಪುಸ್ತಕಮಾಲೆಯಲ್ಲಿ ಪ್ರಕಟವಾದ ಇದು ಆರ್.ವಿ. ಕುಲಕರ್ಣಿ ಅವರ ಗದ್ಯಾನುವಾದದೊಂದಿಗೆ ಹೊರಬಂದಿದೆ. ಸಂಪಾದನ ಶಾಸ್ತ್ರದ ಅನೇಕ ಅಂಶಗಳನ್ನು ಅಳವಡಿಸಿಕೊಂಡಿರುವುದರಿಂದ ಇದನ್ನೂ ಇಲ್ಲಿ ವಿಚಾರ ವಿಮರ್ಶೆಗೆ ಒಳಪಡಿಸುವುದು ಉಚಿತವೆನಿಸುತ್ತದೆ.

೧೯೧೨ ರಲ್ಲಿ ಮಂ. ಆ. ರಾಮಾನುಜಯ್ಯಂಗಾರ ಅವರಿಂದ ಸಂಪಾದಿತವಾಗಿ ಕರ್ನಾಟಕ ಕಾವ್ಯಕಲಾನಿಧಿ ಮಾಲೆಯಲ್ಲಿ ಈ ಕೃತಿಯ ಐದು ಆಶ್ವಾಸಗಳು ಪ್ರಥಮ ಬಾರಿಗೆ ಪ್ರಕಟವಾದವು. ಆಮೇಲೆ ೧೯೧೫ರಲ್ಲಿ ಅದೇ ಸಂಪಾದಕರಿಂದ ಅದೇ ಮಾಲೆಯಲ್ಲಿ ಉಳಿದ ೧೧ ಆಶ್ವಾಸಗಳು ಪ್ರಕಟವಾದವು. ಆಗ ಈ ಕೃತಿಗೆ ಕೇವಲ ಒಂದು ಪುಟದ ಮುನ್ನುಡಿ ಬರೆಯಲಾಗಿತ್ತು ಅಲ್ಲಿಂದ ಮುಂದೆ ಇದು ಮತ್ತೆ ಮರುಪರಿಷ್ಕರಣಗೊಂಡು ಒಟ್ಟಾಗಿ ಪ್ರಕಟವಾಗಿರಲಿಲ್ಲ. ಅಲ್ಲದೆ ಎರಡು ಭಾಗಗಳಾಗಿ ಬಂದ ಪ್ರತಿಗಳೂ ಇಂದು ಸಿಕ್ಕುತ್ತಿರಲಿಲ್ಲ. ಇದನ್ನು ಗಮನಿಸಿ ಸಮಗ್ರಕೃತಿಯನ್ನು ಗದ್ಯಾನುವಾದದೊಂದಿಗೆ ಹೊರತರಲಾಗಿದೆ ಎಂದು ಪ್ರಕಾಶಕರು ಇದರ ಪ್ರಕಟನೆಯ ಉದ್ದೇಶವನ್ನು ತಿಳಿಸಿದ್ದಾರೆ. ಗದ್ಯಾನುವಾದಕಾರರು ಈ ಕೃತಿ ಸಿದ್ಧಪಡಿಸುವಲ್ಲಿ ಅನುಸರಿಸಿದ ವಿಧಾನವನ್ನು ಹೀಗೆ ಹೇಳಿದ್ದಾರೆ :

"ಕಾವ್ಯಕಲಾನಿಧಿ ಗ್ರಂಥಮಾಲೆಯಲ್ಲಿ ಅಚ್ಚಾದ ಪ್ರತಿಯ ಪಾಠಗಳನ್ನೇ ಮೂಲವಾಗಿಟ್ಟುಕೊಳ್ಳಲಾಗಿದೆ. ನನ್ನ ಕೆಲಸ ಅನುವಾದಕ್ಕೆ ಸೀಮಿತವಾಗಿದ್ದರಿಂದ ಗ್ರಂಥ ಪಾಠದ ಪರಿಷ್ಕರಣಕ್ಕೆ ಕೈಹಾಕುವಂತಿರಲಿಲ್ಲ. ಆದರೆ ಲಿಪಿಕಾರನ ಸ್ಖಾಲಿತ್ಯಗಳಿಂದಲೂ, ಮಾತೃಕೆಯಲ್ಲಿ ಪತ್ರತ್ರುಟಿತವಾಗಿದ್ದರಿಂದಲೂ. ಅರ್ಥಕ್ಕೆ ಕ್ಲೇಶವಾದಾಗ ಸರಿಯಾದ ಪಾಠಕ್ಕಾಗಿ ಪ್ರಯತ್ನಿಸಬೇಕಾಯಿತು. ಸಮಾನ ಪದಗಳು ಹಲವಾರು ಕುಸುಮನಾಮಾವಳಿಯಲ್ಲಿಯೂ, ಉದ್ಧೃತ ಪದ್ಯಗಳಲ್ಲಿ ಕೆಲವು ಸೂಕ್ತಿಸುಧಾರ್ಣವ

ವಲ್ಲಿಯೂ ದೊರೆತುದರಿಂದ ಶುದ್ಧವೆನಿಸಿದ ಪಾಠವನ್ನು ಸಾಧ್ಯವಾದಲ್ಲಿ ಆಯ್ದು ಇಟ್ಟುಕೊಳ್ಳಲಾಗಿದೆ. ಕೆಲವು ಶಬ್ದ ರೂಪಗಳ ಅಪಲಿಖಿತಗಳನ್ನು ತಿದ್ದಲು ಉತ್ತರ ಪುರಾಣದ ಮೂಲ ಪದ್ಯಗಳಿಂದಲೂ ಸಹಾಯ ಪಡೆಯಲಾಗಿದೆ".

ಶುದ್ಧಪಾಠಕ್ಕಾಗಿ ಅವರು ಮಾಡಿದ ಈ ಪ್ರಯತ್ನ ಗ್ರಂಥ ಸಂಪಾದಕನು ಮಾಡಬೇಕಾದ ಪ್ರಯತ್ನವೇ ಆಗಿರುವುದರಿಂದ ಇದು ಸಂಪಾದಿತ ಅನುವಾದ ಕೃತಿ ಎಂದು ಹೇಳಬೇಕಾಗುತ್ತದೆ. ಪ್ರಾರಂಭದ ಉಪೋದ್ಘಾತದಲ್ಲಿ ಕವಿಪರಿಚಯ, ಕೃತಿಪರಿಚಯ, ಕೃತಿಮಹತ್ವ ವಿವರಿಸಿರುವುದು, ಕುಸುಮಾವಳಿಯ ಕರ್ತೃವೂ ಕಮಲಭವನೇ ಆಗಿದ್ದಾನೆ ಎಂದು ಸಾಧಾರವಾಗಿ ನಿರ್ಧರಿಸಿರುವುದು, ಕೊನೆಯ ಅನುಬಂಧದಲ್ಲಿ ಶಾಂತಿಪುರಾಣ ಹಾಗೂ ಕುಸುಮಾವಳಿ ಕಾವ್ಯಗಳಲ್ಲಿ ಒಂದೇ ಆಗಿರುವ ಸಮಾನ ಪದ್ಯಗಳ ಸೂಚಿ, ಜೈನ ಪಾರಿಭಾಷಿಕ ಪದಕೋಶ, ಕಠಿಣಶಬ್ದಕೋಶ, ಪದ್ಯಗಳ ಅಕಾರಾದಿಯನ್ನು ಒದಗಿಸಿರುವುದು ಮೇಲಿನ ಮಾತಿಗೆ ಸಮರ್ಥನೆ ನೀಡುತ್ತವೆ. ಮುನ್ನುಡಿಯಲ್ಲಿ ಹಂಪನಾ ಅವರು ಕಮಲಭವ ಮತ್ತು ಪೊನ್ನನ ಶಾಂತಿ ಪುರಾಣಗಳನ್ನು ಕುರಿತು ಮಾಡಿದ ತೌಲನಿಕ ವಿವೇಚನೆ, ಕಮಲಭವ ಹಾಗೂ ಕುಸುಮಾವಳಿಯ ದೇವಕವಿ ಇಬ್ಬರೂ ಒಬ್ಬನೇ ಎಂದು ನಿರ್ಧರಿಸುವಲ್ಲಿ ಒದಗಿಸಿದ ಸಾಕ್ಷಾಧಾರಗಳು ಉಪಯುಕ್ತವೆನಿಸಿವೆ.

ಸಿದ್ಧಕವಿಯ ಸಿರುಮಣ ನಾಯಕನ ಸಾಂಗತ್ಯ : ಗದುಗಿನ ಜಗದ್ಗುರು ತೋಂಟದಾರ್ಯ ಮಠದಲ್ಲಿ ಅಸ್ತಿತ್ವಕ್ಕೆ ಬಂದ ವೀರಶೈವ ಅಧ್ಯಯನ ಸಂಸ್ಥೆ ಕೈಕೊಂಡಿರುವ ಹಲವು ಅಪೂರ್ವ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ 'ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನಾ ಯೋಜನೆ'ಯೂ ಒಂದು. ಇದರಡಿಯಲ್ಲಿ ಈ ವರ್ಷ (೧೯೮೩) ಆರು ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ ಮೊದಲಿನದು ಡಾ. ಎಂ. ಎಂ. ಕಲಬುರ್ಗಿ ಅವರು ಸಂಪಾದಿಸಿದ ಸಿದ್ಧಕವಿಯ 'ಸಿರುಮಣ ನಾಯಕನ ಸಾಂಗತ್ಯ'.

ಇದು ಸಿರುಮನೆಂಬ ಐತಿಹಾಸಿಕ ವ್ಯಕ್ತಿಯ ವೀರಜೀವನವನ್ನು ಚಿತ್ರಿಸುವ ಚಾರಿತ್ರಿಕ ಕಾವ್ಯ. ೫ ಸಂಧಿ. ೬೨೭ ಸಾಂಗತ್ಯ ಪದ್ಯಗಳಲ್ಲಿ ಹಬ್ಬಿಕೊಂಡಿದೆ. ಎರಡು ಹಸ್ತಪ್ರತಿಗಳ ಆಧಾರದಿಂದ ಪ್ರಥಮಬಾರಿಗೆ ಪ್ರಕಟವಾಗುತ್ತಿರುವ ಇದರ ಪರಿಷ್ಕರಣವನ್ನು ಕುರಿತು ಸಂಪಾದಕರು ಹೀಗೆ ಹೇಳಿದ್ದಾರೆ :

"ನೋಡಲಿಕ್ಕೆ ಎರಡು ಪ್ರತಿಗಳಾಗಿದ್ದರೂ ಇವು ಮೂಲತಃ ಒಂದೇ ಪ್ರತಿಯಾಗಿರುವುದರಿಂದ ಇದು ಏಕೈಕಪ್ರತಿ ಪರಿಷ್ಕರಣವೆಂದೇ ಹೇಳಬೇಕು. ಏಕೈಕ ಹಸ್ತಪ್ರತಿಯು, ಅದರಲ್ಲಿಯೂ ತ್ರುಟಿತ, ಅಶುದ್ಧಪ್ರತಿಯ ಪರಿಷ್ಕರಣ ಜಟಿಲವಾದುದೆಂದು

ಬೇರೆ ಹೇಳಬೇಕಿಲ್ಲ. ಮೇಲಾಗಿ ಇದು ನಡುಗನ್ನಡ ಭಾಷೆಯ ಹಾಡುಗಬ್ಬ. ಅದರಲ್ಲಿಯೂ ಐತಿಹಾಸಿಕ ಕೃತಿ. ಹೀಗಾಗಿ ಇದರ ಪರಿಷ್ಕರಣ ಪ್ರಸಂಗದಲ್ಲಿ ಹೆಜ್ಜೆ ಹೆಜ್ಜೆಗೂ ಊಹೆಯ ಅಗ್ನಿಪರೀಕ್ಷೆಯನ್ನು ಎದುರಿಸಬೇಕಾಯಿತು. ಇಲ್ಲಿಯ ಕೆಲವು ಊಹೆಗಳು ನನಗೇ ತೃಪ್ತಿಯನ್ನುಂಟು ಮಾಡಿಲ್ಲ. ಮತ್ತೆ ಕೆಲವು ಊಹಾತೀತವಾಗಿ ನಿಂತವು. ಈ ಕೊರತೆಯನ್ನು ವಿದ್ವಾಂಸರು ತುಂಬಿಕೊಡಬೇಕೆಂಬ ಭಾವನೆಯಿಂದ ಎರಡೂ ಹಸ್ತಪ್ರತಿಗಳ ಅನ್ಯಪಾಠಗಳನ್ನು ಒಂದೂ ಬಿಡದಂತೆ ಅಡಿಯಲ್ಲಿ ಕೊಟ್ಟಿದ್ದೇನೆ. ಇವುಗಳ ಸಹಾಯದಿಂದ ಇನ್ನೂ ಶುದ್ಧಪಾಠವನ್ನು ಬಲ್ಲಿದರು ನಿರ್ಣಯಿಸಿದರೆ ನನಗೆ ಅದಕ್ಕಿಂತ ಹೆಚ್ಚಿನ ಸಂತೋಷ ಮತ್ತೊಂದಿಲ್ಲ." ಇದು ಸಂಪಾದಕರು ಮಾಡಿದ ಪ್ರಾಮಾಣಿಕ ಪ್ರಯತ್ನದ ಬಿಚ್ಚು ಮನಸ್ಸಿನ ನಿವೇದನೆಯಾಗಿದೆ.

ವ್ಯವಸ್ಥಿತವಾದ ಪ್ರಸ್ತಾವನೆಯಲ್ಲಿ ಸಿರುಮನನ್ನು ಕುರಿತು ಹುಟ್ಟಿಕೊಂಡ ಕೃತಿಗಳು, ಅವು ದೊರೆಯುವ ಸ್ಥಳ, ಅವುಗಳಿಗಿರುವ ಭಿನ್ನನಾಮಗಳು, ಅವುಗಳ ಕರ್ತೃಗಳು. ಪ್ರಸ್ತುತ ಕೃತಿಯ ಕರ್ತೃವಿನ ಕಾಲದೇಶ ಮತ ಕೃತಿಸ್ವರೂಪ, ವಸ್ತು. ಕಥಾಸಾರ, ಕೃತಿಯ ವೈಶಿಷ್ಟ್ಯ, ಅದು ಒದಗಿಸುವ ಐತಿಹಾಸಿಕ ಸಂಗತಿಗಳು, ಕೃತಿ ನಾಯಕನು ಆಳಿದ ಸ್ಥಳ ಪರಿಶೀಲನೆ, ಹಸ್ತಪ್ರತಿಗಳ ಪರಿಚಯವನ್ನು ಮಾಡಲಾಗಿದೆ. ಅನುಬಂಧದಲ್ಲಿ ನಾಮಸೂಚಿ ಪದ್ಯಗಳ ಅಕಾರಾದಿ ಹಾಗೂ ಕಠಿಣ ಪದಕೋಶವನ್ನು ಕೊಡಲಾಗಿದೆ. ಹೀಗೆ ಸಾದ್ಯಂತವಾದ ವಿವರಗಳನ್ನೊಳಗೊಂಡು ಗ್ರಂಥಸಂಪಾದನ ಶಾಸ್ತ್ರದ ಮೂಲಚೂಲಗಳನ್ನು ಬಲ್ಲ ಡಾ. ಕಲಬುರ್ಗಿ ಅವರಿಂದ ಸಂಪಾದಿತವಾದ ಈ ಕೃತಿ ಹೆಚ್ಚು ಶಾಸ್ತ್ರ ಶುದ್ಧವಾಗಿ ಹೊರಬಂದಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಅಳಿಯ ಲಿಂಗರಾಜನ ಗಿರಿಜಾ ಕಲ್ಯಾಣಗಳು : ಜಿ. ಜಿ. ಮಂಜುನಾಥ ಅವರಿಂದ ಮೊದಲ ಬಾರಿಗೆ ಸಂಪಾದನೆಗೊಂಡು ಮೈಸೂರ ವಿಶ್ವವಿದ್ಯಾನಿಲಯದಿಂದ ಪ್ರಕಟವಾದ ಇದರಲ್ಲಿ ಅಳಿಯಲಿಂಗರಾಜ ರಚಿಸಿದ ಒಂದೇ ಹೆಸರಿನ ಎರಡು ಕೃತಿಗಳು ಅಡಕವಾಗಿವೆ. ಒಂದು ಸಾಂಗತ್ಯ ಛಂದಸ್ಸಿನಲ್ಲಿದ್ದರೆ. ಮತ್ತೊಂದು ಯಕ್ಷಗಾನ ರೂಪದಲ್ಲಿದೆ.

ಸಾಂಗತ್ಯ ೬ ಸಂಧಿ ೪೯೩ ಪದ್ಯಗಳಲ್ಲಿರುವ ಸಾಂಪ್ರದಾಯಿಕ ಕಥೆಯನ್ನೊಳಗೊಂಡ ಸಾಮಾನ್ಯಕೃತಿ. ಇದನ್ನು ಒಂದೇ ಹಸ್ತಪ್ರತಿಯಿಂದ ಪ್ರಥಮ ಬಾರಿಗೆ ಪರಿಷ್ಕರಿಸಿ ಪ್ರಕಟಿಸಲಾಗಿದೆ. ಯಕ್ಷಗಾನದಲ್ಲಿ ಇದೇ ಕಥೆ ವಿವಿಧ ಪದ್ಯ ಜಾತಿಗಳಲ್ಲಿ ನಿರೂಪಿತವಾಗಿದೆ. ಇದನ್ನು ಎರಡು ಹಸ್ತಪ್ರತಿಗಳಿಂದ ಪರಿಷ್ಕರಿಸಲಾಗಿದೆ. ಪ್ರಸ್ತಾವನೆಯಲ್ಲಿ ಗಿರಿಜಾಕಲ್ಯಾಣದ ಕಥೆ ಪುರಾಣಗಳಲ್ಲಿ ಹಾಗೂ ಕಾವ್ಯಗಳಲ್ಲಿ ಸಾಗಿ ಬಂದ ರೀತಿಯನ್ನು ವಿವರಿಸಿ ಎರಡೂ ಕೃತಿಗಳನ್ನು ವಿಮರ್ಶಿಸಲಾಗಿದೆ. ಅನುಬಂಧ ರಹಿತವಾಗಿ ಹೊರಬಂದ ಇದು ಮಧ್ಯಮ ತರಗತಿಯ ಸಂಪಾದನೆಯಾಗಿದೆ.

ರಸಿಕಚಕ್ರಿ 'ಹರಿಹರದೇವನ ಶಿವಶರಣರ ನಾಲ್ಕು ರಗಳೆಗಳು : ಹೊಸಪೇಟೆಯ ಜಗದ್ಗುರು ಕೊಟ್ಟೂರಸ್ವಾಮಿ ಮಠದ ಗ್ರಂಥಮಾಲೆಯ ೧೦ ಮತ್ತು ೧೧ನೆಯ ಪ್ರಕಟನೆಗಳಾಗಿ "ರಸಿಕಚಕ್ರಿ ಹರಿಹರದೇವನ ಶಿವಶರಣರ ನಾಲ್ಕು ರಗಳೆಗಳು" ಎಂಬ ಹೆಸರಿನ ಎರಡು ಕೃತಿಗಳು ಹೊರಬಂದಿವೆ. ಒಂದರ ಸಂಪಾದಕರು ಡಾ. ಎಸ್. ಜಿ. ಛಿವಾರಿ ಮತ್ತು ರಾಮಕೃಷ್ಣ ಮರಾಠೆ; ಮತ್ತೊಂದರ ಸಂಪಾದಕರು ಪಂ. ನಾಗಭೂಷಣ ಶಾಸ್ತ್ರಿ ಮತ್ತು ನೀಲಗಿರಿ ತಳವಾರ. ಒಂದರಲ್ಲಿ ಕೇಶಿರಾಜದಣ್ಣಾಯಕ, ಕೆಂಭಾವಿ ಭೋಗಣ್ಣ, ಏಕಾಂತರಾಮಿತಂದೆ ಮತ್ತು ಹಾವಿನಾಳ ಕಲ್ಲಯ್ಯನ ರಗಳೆಗಳು ಸೇರಿದ್ದರೆ, ಮತ್ತೊಂದರಲ್ಲಿ ಓಹಿಲಯ್ಯ, ಉದ್ಭಟಯ್ಯ, ಹಲಾಯುಧ ಮತ್ತು ಶಂಕರದಾಸಿಮಯ್ಯನ ರಗಳೆಗಳು ಎಡೆ ಪಡೆದಿವೆ. ಎರಡರ ಸಂಪಾದನೆಯ ರೀತಿ, ಮುದ್ರಣ ವಿನ್ಯಾಸ, ಪ್ರಕಟನೆಯ ಉದ್ದೇಶ ಒಂದೇ ಆಗಿದೆ.

ಮೊದಲ ಕೃತಿಯ ರಗಳೆಗಳನ್ನು ಡಾ. ಫ. ಗು. ಹಳಕಟ್ಟಿ ಮತ್ತು ಡಾ. ಎಂ. ಎಸ್. ಸುಂಕಾಪುರ ಅವರ ಮುದ್ರಿತ ಕೃತಿಗಳಿಂದ ಆಯ್ದುಕೊಂಡಿದ್ದರೆ, ಎರಡನೆಯ ಕೃತಿಯ ರಗಳೆಗಳನ್ನು ಮೇಲಿನ ಇಬ್ಬರ ಕೃತಿಗಳ ಜೊತೆಗೆ ಸಾ. ಸಿ. ಮರುಳಯ್ಯನವರ ಕೃತಿಯಿಂದಲೂ ಎತ್ತಿಕೊಂಡುದಾಗಿ ಸಂಪಾದಕರು ತಿಳಿಸುತ್ತಾರೆ. ಆದರೆ ಯಾವುದನ್ನು ಮೂಲವಾಗಿಟ್ಟುಕೊಂಡು ಯಾವುದರಿಂದ ಶುದ್ಧಪಾಠಗಳನ್ನು ಸ್ವೀಕರಿಸಿದವು ಎಂಬುದನ್ನು ತಿಳಿಸಿಲ್ಲ. ಜನಸಾಮಾನ್ಯರಿಗೆ ಕಾವ್ಯವನ್ನು ಮುಟ್ಟಿಸುವ ಉದ್ದೇಶ ಇಟ್ಟುಕೊಂಡುದರಿಂದ ಪಾಠಾಂತರ ಗುರುತಿಸುವ ಗೋಜಿಗೆ ಹೋಗಿಲ್ಲ. ಅಲ್ಲದೆ ಸಮಾಸ ಪದಗಳನ್ನು ಅರ್ಥಕ್ಕೆ ಬಾಧೆ ಬರದಂತೆ ಸಾಮಾನ್ಯ ಓದುಗರಿಗೆ ಸುಲಭವಾಗಲಿ ಎಂದು ಪದಚ್ಛೇದ ಮಾಡಿ ಮುದ್ರಿಸಿದ್ದಾರೆ. ಆದಿಯ ಪ್ರಸ್ತಾವನೆಯಲ್ಲಿ ಕವಿ ಕಾವ್ಯಪರಿಚಯ. ಒಂದೊಂದು ರಗಳೆಗಳ ಕಥಾಸಾರವನ್ನು ಕೊಡಲಾಗಿದೆ. ಇಷ್ಟಲ್ಲದೆ ಪ್ರಕಾಶಕರ ನುಡಿ, ಕೊಟ್ಟೂರಸ್ವಾಮಿ ಮಠದ ಪರಿಚಯ, ದಾನಿಗಳ ಪರಿಚಯ–ಭಾವಚಿತ್ರಗಳನ್ನೂ ಈ ಕೃತಿಗಳು ಒಳಗೊಂಡಿವೆ. ಕೊನೆಯಲ್ಲಿ ಕಠಿಣ ಪದಕೋಶ, ಒಪ್ಪೋಲೆ ಇವೆ. ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಸಂಪಾದನೆಯ ತತ್ವಗಳನ್ನು ಇವುಗಳಲ್ಲಿ ಹುಡುಕದೇ ಇರುವುದು ಒಳಿತೆನಿಸುತ್ತದೆ.

೨. ವಚನ–ಸ್ವರವಚನ ಸಂಪಾದನೆಗಳು

ಈ ವರ್ಷದಲ್ಲಿ ಸು. ೧೦ ವಚನ-ಸ್ವರವಚನ ಕೃತಿಗಳು ಹೊರಬಂದಿವೆ. ಅವುಗಳಲ್ಲಿ ಐದು ಪ್ರಥಮ ಪರಿಷ್ಕರಣಗಳಾದರೆ ಒಂದು ಮರುಮುದ್ರಣ (ಜನಪ್ರಿಯ ಆವೃತ್ತಿ) ಮತ್ತು ನಾಲ್ಕು ಆಯ್ದ ಸಂಕಲನಗಳಾಗಿವೆ.

ಚೆನ್ನಬಸವಣ್ಣನವರ ವಚನೈಕೋತ್ತರ ಶತಸ್ಥಲ : ಇದು ಪ್ರೊ. ಜಿ. ಎ. ಶಿವಲಿಂಗಯ್ಯ ಅವರಿಂದ ಸಂಪಾದನೆಗೊಂಡು ಗದುಗಿನ ತೋಂಟದಾರ್ಯಮಠದ

ವೀರಶೈವ ಅಧ್ಯಯನ ಸಂಸ್ಥೆಯಿಂದ ಮೊದಲಬಾರಿಗೆ ಪ್ರಕಟವಾದ, ಹಲವು ವೈಶಿಷ್ಟ್ಯಗಳನ್ನು ಒಳಗೊಂಡ ಅಪೂರ್ವ ಕೃತಿ. ನೂರೊಂದು ಸ್ಥಲದ ಯೋಜನೆಯನ್ನು ಮಾಡಿದ ಪ್ರಥಮ ವ್ಯಕ್ತಿ ೧೫ನೆಯ ಶತಮಾನದ ಮಹಾಲಿಂಗದೇವನೆಂದು ಇದುವರೆಗೆ ನಂಬಲಾಗಿತ್ತು. ಆದರೆ ಆ ನಂಬಿಕೆಯನ್ನು ಈ ಕೃತಿ ಬೆಳಕಿಗೆ ಬಂದು ಹುಸಿಗೊಳಿಸಿ, ಚೆನ್ನಬಸವಣ್ಣನೇ ನೂರೊಂದು ಸ್ಥಲ ಯೋಜನೆಯ ಮೂಲಪುರುಷ ಎಂಬುದನ್ನು ಖಚಿತಪಡಿಸಿದೆ. ೧೨ನೆಯ ಶತಮಾನದಲ್ಲಿಯೇ ಬೇರೆ ಬೇರೆ ಶರಣರ ವಚನಗಳನ್ನು ಆಯ್ದು ಸ್ಥಲಾನುಗುಣವಾಗಿ ಜೋಡಿಸುವ ಕಾರ್ಯ ನಡೆದಿತ್ತು ಎಂಬುದಕ್ಕೆ ಈ ಕೃತಿ ಸಾಕ್ಷಿ ನುಡಿಯುತ್ತದೆ. ವೀರಶೈವ ತತ್ವ ಸಿದ್ಧಾಂತಗಳಿಗೆ ಅಗ್ರಮಾನ್ಯನೆನಿಸಿದ ಚೆನ್ನಬಸವಣ್ಣ ಮೊದಲು ಪ್ರಾರಂಭಿಸಿದ ಈ ತಾತ್ವಿಕ ಸ್ಥಲಯೋಜನೆಯ ಕ್ರಮ ನೂರೊಂದು ವಿರಕ್ತರ ಕಾಲಕ್ಕೆ ರಚಿತವಾದ ಸ್ಥಲಕಟ್ಟಿನ ಕೃತಿಗಳಿಗೆಲ್ಲ ಪ್ರೇರಕವಾಗಿ, ಮಾದರಿಯಾಗಿ ನಿಂತಿತು.

ಪ್ರಸ್ತುತ ಕೃತಿಯಲ್ಲಿ ೧೧ ಜನ ಶರಣರ (ಬಸವಣ್ಣ, ಚೆನ್ನಬಸವಣ್ಣ. ಪ್ರಭುದೇವ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಉರಿಲಿಂಗಪೆದ್ದಿ, ಘಟ್ಟಿವಾಳಯ್ಯ. ಚಂದಿಮರಸ, ಮಡಿವಳ ಮಾಚಿದೇವ, ಸಕಳೇಶ ಮಾದರಸ ಮತ್ತು ಹಾವಿನಾಳ ಕಲ್ಲಯ್ಯ) ೧೧೦ ವಚನಗಳು ಅಳವಟ್ಟಿವೆ. ಅವುಗಳನ್ನು ಅಂಗಸ್ಥಲ–ಲಿಂಗಸ್ಥಲ ಮತ್ತೆ ಅವುಗಳಲ್ಲಿ ಉಂಟಾದ ಒಳಸ್ಥಲಗಳ ಪರಿವಿಡಿಯಲ್ಲಿ ನೂರೊಂದು ಸ್ಥಲಕ್ಕೂ ಹಂಚಿ ಹಾಕಲಾಗಿದೆ. ಹೆಚ್ಚಾಗಿ ಒಂದೊಂದು ಸ್ಥಲಕ್ಕೆ ಒಂದೊಂದು ವಚನ ಜೋಡಿಸಲಾಗಿದೆ. ಕೃತಿಯ ಆರಂಭದಲ್ಲಿ ನೂರೊಂದು ಸ್ಥಲಗಳ ನಾಮ ನಿರ್ದೇಶನವನ್ನು ಅಂಗಸ್ಥಲ ಮತ್ತು ಲಿಂಗಸ್ಥಲ ಎಂಬ ಎರಡು ಪ್ರಮುಖ ಶೀರ್ಷಿಕೆಯಡಿಯಲ್ಲಿ ಮಾಡಿ ಮುಂದೆ ಒಂದೊಂದು ಸ್ಥಲಕ್ಕೆ ಸಂಬಂಧಿಸಿದ ವಚನಗಳನ್ನು ಸ್ಥಲನಾಮಸಹಿತ ಸಂಗ್ರಹಿಸಲಾಗಿದೆ. ಪ್ರಸಾದಿಸ್ಥಲದ ಏಳು ಉಪಸ್ಥಲಗಳ ಮತ್ತು ಪ್ರಾಣಲಿಂಗಿಸ್ಥಲದ ನಾಲ್ಕು ಉಪಸ್ಥಲಗಳ ಒಟ್ಟು ೧೧ ವಚನಗಳು ಗರಿ ಕಳೆದ ಕಾರಣ ಇಲ್ಲವಾಗಿವೆ. ಕೆಲವು ಸ್ಥಲಗಳಿಗೆ ಶೀರ್ಷಿಕೆಗಳಿಲ್ಲ. ಸಂಪಾದಕರು ಅಂಥಲ್ಲಿ ಚೌಕಕಂಸಿನಲ್ಲಿ ಆ ಸ್ಥಲದ ಹೆಸರನ್ನು ಸೇರಿಸಿದ್ದಾರೆ.

ಆರಂಭದ ನಾಲ್ಕು ಪುಟದ ಪೀಠಿಕೆಯಲ್ಲಿ ಕನ್ನಡದಲ್ಲಿ ಬಂದ ಏಕೋತ್ತರ ಶತಸ್ಥಲ ಕೃತಿಗಳ ಪರಿಚಯದೊಂದಿಗೆ ಈ ಕೃತಿಯ ಮಹತ್ವವನ್ನು ಎತ್ತಿಹೇಳಿದ್ದಾರೆ. ಕೃತಿ ಸಂಪಾದನೆ ಕುರಿತು "ಈ ಕೃತಿಯನ್ನು ಏಕೈಕ ಹಸ್ತ ಪ್ರತಿಯಿಂದ ಸಂಪಾದಿಸಲಾಗಿದೆ...ಅಕ್ಷರ ಸ್ಖಾಲಿತ್ಯಗಳನ್ನು, ಲುಪ್ತವಾದ ವಚನ ಭಾಗಗಳನ್ನು ಸಾಧ್ಯವಿದ್ದಲ್ಲಿ ಸರಿಪಡಿಸಿಕೊಳ್ಳಲಾಗಿದೆ. ಗರಿ ಕಳೆದು ಹೋದ ಕಾರಣ ಈ ಗ್ರಂಥಕ್ಕೆ ೩೧–೪೧ರ ವರೆಗಿನ ವಚನಗಳ ಕೊರತೆ ಉಂಟಾಗಿದೆ. ಹೀಗಿದ್ದೂ ಇದೊಂದು ಪ್ರತಿಯೂ

ಹಾಳಾಗಬಾರದೆಂದು—ಅದೂ "ಚೆನ್ನಬಸವಣ್ಣನವರದು—ಈ ಕೃತಿಯನ್ನು ಪ್ರಕಟಿಸಲಾಗಿದೆ" ಎಂದು ತಿಳಿಸಿದ್ದಾರೆ. ಅನುಬಂಧವಲ್ಲಿ ವಚನಕಾರರು, ವಚನಗಳ ಸಂಖ್ಯೆ ಮತ್ತು ವಚನಗಳ ಅಕಾರಾದಿ ಇವೆ. ೧೨ನೆಯ ಶತಮಾನವಲ್ಲಿ ಸಂಯೋಜಿಸಿದ ಸ್ಥಲಕಟ್ಟಿನ ಕೃತಿ ಎಂಬುದರಿಂದ ಇದಕ್ಕೊಂದು ಮಹತ್ವದ ಸ್ಥಾನವಿದೆ.

ಅದ್ವೈತಾನಂದದ ವಚನಗಳು : ಡಾ. ಬಿ. ಆರ್. ಹಿರೇಮಠ ಅವರು ಸಂಪಾದಿಸಿದ ಅಜ್ಞಾತ ಸಂಕಲನಕಾರನ ಅದ್ವೈತಾನಂದದ ವಚನಗಳು ಲಿಂಗಾಂಗ ಸಾಮರಸ್ಯಾನಂದವನ್ನು ಬೋಧಿಸುವ ನೂತನ ಸ್ಥಲಕಟ್ಟಿನ ಕೃತಿ. ಗದುಗಿನ ತೋಂಟದಾರ್ಯ ಮಠದ ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನಾ ಮಾಲೆಯ ೯ನೆಯ ಕೃತಿಯಾಗಿ ಪ್ರಥಮ ಬಾರಿಗೆ ಪ್ರಕಟವಾದ ಇದನ್ನು ಕನ್ನಡ ಅಧ್ಯಯನ ಪೀಠದ ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಲಾಗಿದೆ. ಇದರಲ್ಲಿ ೫೫ ವಚನಕಾರರ ೭೪೦ ವಚನಗಳಿದ್ದು ಅವು ವಿದ್ಯಾವಾದ ನಿರಸನ ಸ್ಥಲ, ಕರ್ಮಯೋಗ ನಿರಸನ ಸ್ಥಲ. ಕೈಲಾಸಭ್ರಾಂತಿ–ನಿರಸನಸ್ಥಲ. ಬಂಧಮೋಕ್ಷ ನಿರಸನಸ್ಥಲ, ತಾಮಸ ಶೀಲ ನಿರಸನ ಸ್ಥಲ, ಭಿನ್ನಪೂಜಾ ನಿರಸನಸ್ಥಲ, ಇಷ್ಟಲಿಂಗಭ್ರಾಂತಿ ನಿರಸನಸ್ಥಲ. ಇಷ್ಟಲಿಂಗವಿಯೋಗ ಭ್ರಾಂತಿ ನಿರಸನಸ್ಥಲ, ಭಿನ್ನಜ್ಞಾನ ನಿರಸನ ಸ್ಥಲ. ಭಕ್ತಸ್ಥಲ, ಮಾಹೇಶ್ವರ ಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ. ಶರಣಸ್ಥಲ, ಸ್ವಯಾನುಸಿದ್ಧ ಸ್ಥಲ, ಐಕ್ಯಸ್ಥಲ ಮತ್ತು ನಿರವಯಸ್ಥಲ— ಎಂಬ ೧೭ ಸ್ಥಲಗಳಲ್ಲಿ ಹಂಚಿಕೊಂಡಿವೆ. ಸಂಪಾದಕರು ಪ್ರಾರಂಭದ ೯ ಸ್ಥಲಗಳನ್ನು ಸೇರಿಸಿ 'ನಿರಸನಸ್ಥಲ' ಎಂದು ಸಾಮೂಹಿಕ ಶೀರ್ಷಿಕೆ ಕೊಟ್ಟಿದ್ದಾರೆ. ಹೀಗೆ ಮಾಡಿದುದರ ಔಚಿತ್ಯ ತಿಳಿಯುವದಿಲ್ಲ. ವಿವಿಧ ಮಿಶ್ರಸ್ಥಲಕಟ್ಟಿನ ಕೃತಿಗಳಲ್ಲಿನಂತೆ ಇಲ್ಲಿಯೂ ಸಂಕಲನಕಾರ ತನ್ನ ದೃಷ್ಟಿಕೋನ ಹಾಗೂ ಆಶಯಕ್ಕೆ ತಕ್ಕಂತೆ ಷಟ್‌ಸ್ಥಲಗಳ ಮೊದಲು ಮತ್ತು ಕೊನೆ ಹಾಗೂ ಮಧ್ಯದಲ್ಲಿ ಹಲವು ನೂತನ ಸ್ಥಲಗಳನ್ನು ಕಲ್ಪಿಸಿಕೊಂಡಿದ್ದಾನೆ. ಹೀಗಾಗಿ ಇಲ್ಲಿನ ೧೭ ಸ್ಥಲಗಳನ್ನೂ ಬೇರೆ ಬೇರೆಯಾಗಿಯೆ ಗಣಿಸಬೇಕಾಗುತ್ತದೆ.

ಇನ್ನು ಮೂರುವರೆ ಪುಟದ ಸಂಕ್ಷಿಪ್ತವಾದ ಪ್ರಸ್ತಾವನೆಯಲ್ಲಿ ಈ ಕೃತಿ ಹುಟ್ಟಿಕೊಂಡ ಕಾಲ, ಕೃತಿಯಲ್ಲಿ ಅಳವಟ್ಟ ಸ್ಥಲಗಳು. ಕೃತಿ–ಬೋಧಿಸುವ ತತ್ವ. ಪ್ರತಿಯೊಂದು ಸ್ಥಲದಲ್ಲಿ ಸೇರಿದ ವಚನ ಸಂಖ್ಯೆ. ಪ್ರಮುಖ ವಚನಕಾರರ ನಾಮ ನಿರ್ದೇಶನ ಮಾಡಿ, ವಚನಗಳಲ್ಲಿ ಕಂಡುಬರುವ ಅಂಕಿತಪಲ್ಲಟ, ಸಂಕಲನದಲ್ಲಿ ಆಗಿರುವ ವಚನಗಳ ಪುನರುಕ್ತಿ ಸಂಪಾದನೆಗೆ ಬಳಸಿದ ಪ್ರತಿ, ಪರಿಷ್ಕರಣದಲ್ಲಿ ಅನುಸರಿಸಿದ ರೀತಿಗಳನ್ನು ತಿಳಿಸಿದ್ದಾರೆ.

ಸಂಪಾದಕರು ಗುರುತಿಸಿದಂತೆ ಈ ಸಂಕಲನದಲ್ಲಿ ೧೩ ವಚನಗಳು ಪುನರುಕ್ತವಾಗಿವೆ. ಇವುಗಳಲ್ಲಿ ಕೆಲವು ಬೇರೆಬೇರೆ ಸ್ಥಲಗಳಲ್ಲಿ ಬಂದಿದ್ದರೆ, ಮತ್ತೆ ಕೆಲವು

ಒಂದೇ ಸ್ಥಲದಲ್ಲಿ ಎರಡು ಬಾರಿ ಬಂದಿವೆ. ಇವುಗಳನ್ನು ಇಲ್ಲಿ ಹಾಗೇ ಉಳಿಸಿಕೊಂಡು ಬರಲಾಗಿದೆ. ಒಂದೇ ವಚನ ಬೇರೆಬೇರೆ ಸ್ಥಲಗಳಿಗೆ ಹೊಂದಿಕೆಯಾಗಬಹುದು, ಆದರೆ ಒಂದೇ ಸ್ಥಲದಲ್ಲಿ ಎರಡು ಬಾರಿ ಬರುವುದು ಸಂಕಲನಕಾರನ ಕಣ್ತಪ್ಪಿನಿಂದಾದ ದೋಷವಲ್ಲದೆ ಸಹಜವಾದುದಲ್ಲ. ಇಂಥಲ್ಲಿ ಬೇರೆಬೇರೆ ಸ್ಥಲಗಳಲ್ಲಿ ಬಂದ ಒಂದೇ ರೀತಿಯ ವಚನವನ್ನು ಪ್ರಾರಂಭದ ಸ್ಥಲದಲ್ಲಿ ಇಟ್ಟುಕೊಂಡು ಮುಂದಿನ ಸ್ಥಲಗಳಲ್ಲಿ ಹಿಂದಿನ ವಚನಾಂಕದೊಂದಿಗೆ ಇಲ್ಲಿ ಈ ವಚನ ಪುನರುಕ್ತವಾಗಿದೆ ಎಂದು ಸೂಚಿಸಿದ್ದರೆ ಸಾಕಿತ್ತು. ಇನ್ನು ಒಂದೇ ಸ್ಥಲದಲ್ಲಿ ಬಂದ ವಚನದಲ್ಲಿ ಒಂದನ್ನು ತೆಗೆದು ಇದು ಸಂಕಲನಕಾರನ ಕಣ್ತಪ್ಪಿನಿಂದ ಬಂದು ಸೇರಿದ ಹೆಚ್ಚಿನ ವಚನವಾಗಿದೆ ಎಂದು ಅಡಿಯಲ್ಲಿ ಸೂಚಿಸಬೇಕಿತ್ತು. ಹೀಗೆ ಮಾಡಿದರೆ ಈ ಸಂಕಲನದಲ್ಲಿದ್ದ ಒಟ್ಟು ವಚನಗಳ ಸಂಖ್ಯೆ ೭೪೦ ರಿಂದ ೭೨೭ಕ್ಕೆ ಇಳಿಯುತ್ತದೆ.

ಪರಿಷ್ಕರಣವನ್ನು ಕುರಿತು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದ ತಾಳೆಗರಿ ಪ್ರತಿಯ ಸಹಾಯದಿಂದ ಇವನ್ನು ಸಂಪಾದಿಸಲಾಗಿದೆ. ಇದು ಶುದ್ಧ ಸಂತಾನದ ಏಕೈಕ ಪ್ರತಿ. ಅಗತ್ಯವಿದ್ದಲ್ಲಿ ಮಾತ್ರ ಮಾಡಲಾದ ತಿದ್ದುಪಡಿಗಳನ್ನು ಚೌಕ ಕಂಸಿನಲ್ಲಿ ಕೊಡಲಾಗಿದೆ. ತಿದ್ದುಪಡಿಗಳಿಗೆ ಸಂವಾದಿಯಾದ ಮೂಲ ಪಾಠವನ್ನು 'ಮೂ' ಎಂಬ ಸಂಕೇತದಿಂದ ಕೆಳಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

ಆದರೆ ವಚನಗಳ ಒಡಲಲ್ಲಿ ಕಾಣಿಸುವ ಊಹಿತ ಪಾಠಗಳಿಗೆ ಮಾತ್ರ ಚೌಕ ಕಂಸ ಇದ್ದು, ಅಡಿಯಲ್ಲಿ ಕೊಟ್ಟ ಮೂಲದಲ್ಲಿದ್ದ ಅಶುದ್ಧ ಪಾಠಕ್ಕೆ ಪ್ರತಿಯಾಗಿ ಮೇಲೆ ಸ್ವೀಕರಿಸಿದ ಶುದ್ಧಪಾಠಕ್ಕೆ ಕಂಸಗಳಿಲ್ಲ. ಇದು ಊಹಿತ ಪಾಠವೋ ಅಥವಾ ಮುದ್ರಿತ ಕೃತಿಗಳಿಂದ ಎತ್ತಿಕೊಂಡ ಪಾಠವೋ ಎಂಬುದು ಸ್ಪಷ್ಟವಾಗುವುದಿಲ್ಲ. ಮುದ್ರಿತ ಕೃತಿಗಳಿಂದ ತೆಗೆದುಕೊಂಡುದಾಗಿದ್ದರೆ ಅದನ್ನು ಸೂಚಿಸಿ ಆ ಸಹಾಯಕ ಕೃತಿಗಳ ವಿವರ ಕೊಡಬೇಕಾಗಿತ್ತು.

ಈ ಕೃತಿಯ ಪಾಠಾಂತರಗಳಲ್ಲಿ ಒಂದು ಎದ್ದು ಕಾಣುವ ದೋಷವನ್ನು ಇಲ್ಲಿ ಗುರುತಿಸಬಹುದು. ಅದು 'ಮತ್ತೆ' ಎನ್ನುವ ಪದವನ್ನು 'ಮೇಲೆ' ಎಂದು ತಿದ್ದುಪಡಿ ಮಾಡಿದ್ದು. ಅನೇಕ ವಚನಗಳಲ್ಲಿ ನಿಯತವಾಗಿ. ವಚನಕಾರರ ಭಾಷೆಯ ಬಳಕೆಯ ವೈಶಿಷ್ಟ್ಯವಾಗಿ ಕಾಣಿಸಿಕೊಳ್ಳುತ್ತ ಬಂದ, ಈ ಬಂದ ಇಲ್ಲಿನ ೧೭ ವಚನಗಳಲ್ಲಿ ಬಂದಿದೆ. ಅವನ್ನು ಸಂಪಾದಕರು 'ಮೇಲೆ' ಎಂದು ತಿದ್ದಿ 'ಮತ್ತೆ' ಎಂಬುದನ್ನು ಅಡಿಯಲ್ಲಿ ಸೇರಿಸಿದ್ದಾರೆ. ಒಂದೆರಡು ಉದಾಹರಣೆಗಳನ್ನಿಲ್ಲಿ ನೋಡಬಹುದು.

- ಮನಲೀಯವಾಗಿ ಘನಾಘನ ಒಂದಾದ 'ಮತ್ತೆ' ಮನಕ್ಕೆ ವಿಸ್ಮಯವ ಮಾಡಲುಂಟೆ ? (ವ. ೭೯)

- ಅಂಗಗುಣವರತ 'ಮತ್ತೆ' ಲಿಂಗಕ್ಕೆ ಕುಱುಹುಂಟೆ ? (ವ. ೩೧೫)
- ನೋಡುವ ನೋಟ ತಾನೆಯಾದ 'ಮತ್ತೆ' ನೋಡಿಸಿಕೊಂಬುದಿಲ್ಲ. (ವ. ೩೬೪)
- ತಾನು ತಾನಾದ 'ಮತ್ತೆ' ತನಗೇನೂ ಅನ್ಯವಿಲ್ಲ (ವ. ೪೬೩)

ಇಲ್ಲಿ 'ಮತ್ತೆ' ಬಂದಲ್ಲೆಲ್ಲ 'ಮೇಲೆ' ಎಂದು ಹಾಕಲಾಗಿದೆ.

ಕೃತಿಯ ಅನುಬಂಧದಲ್ಲಿ ವಚನಕಾರರು ಅಂಕಿತ ವಚನಗಳ ಸಂಖ್ಯೆ, ವಚನಗಳ ಅಕಾರಾದಿ ಇದೆ. ಪಾರಿಭಾಷಿಕ ಪದಕೋಶ. ಕಠಿಣ ಪದಕೋಶ ಬೇಕಿತ್ತು. ಈ ಕೆಲವು ದೋಷಗಳನ್ನುಳಿದು ಕೃತಿ ಸುಂದರವಾಗಿ ಮುದ್ರಣಗೊಂಡಿದೆ. ಅನೇಕ ಹೊಸ ವಚನ ಹಾಗೂ ಅಂಕಿತಗಳನ್ನು ಪ್ರಥಮ ಬಾರಿಗೆ ಬೆಳಕಿಗೆ ತರುತ್ತ ನೂತನ ಸ್ಥಲಕಟ್ಟಿನ ಕೃತಿಯೊಂದನ್ನು ಸಂಪಾದಿಸಿ ಸಾರಸ್ವತ ಪ್ರಪಂಚಕ್ಕೆ ಅರ್ಪಿಸಿದ ಸಂಪಾದಕರು ಅಭಿನಂದನಾರ್ಹರು.

ಎಳಮುಲೆಯ ಗುರುಶಾಂತದೇವರ ವಚನಸಂಕಲನಗಳು : ಇದು ವಿವಿಧ ವಚನಕಾರರ ವಚನಗಳನ್ನಾಯ್ದು ಒಂದೊಂದು ತತ್ವಕ್ಕನುಸರಿಸಿ ಜೋಡಿಸಿದ ಐದು ಸಂಕಲನಗಳನ್ನೊಳಗೊಂಡ ಕೃತಿ ಷಟ್‌ಸ್ಥಲಸ್ತೋತ್ರದ ವಚನಗಳು, ಅಷ್ಟಾವರಣಸ್ತೋತ್ರದ ವಚನಗಳು, ಶರಣಸ್ತೋತ್ರದ ವಚನಗಳು, ಮಿಶ್ರಸ್ತೋತ್ರದ ವಚನಗಳು, ಲಿಂಗವಿಕಳಾವಸ್ಥೆಯ ವಚನಗಳು–ಇವು ಇದರಲ್ಲಿ ಸೇರಿದ ಐದುಸಂಕಲನಗಳು.

ಷಟ್‌ಸ್ಥಲಸ್ತೋತ್ರದ ವಚನಗಳು ಕೃತಿಯಲ್ಲಿ ಭಕ್ತಸ್ಥಲ. ಮಹೇಶಸ್ಥಲ. ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ. ಐಕ್ಯಸ್ಥಲ ಎಂದು ಆರು ಭಾಗಗಳೂ.ಅಷ್ಟಾವರಣಸ್ತೋತ್ರದ ವಚನಗಳು ಕೃತಿಯಲ್ಲಿ ಗುರುಮಹತ್ವ, ಲಿಂಗಮಹತ್ವ, ಜಂಗಮ ಮಹತ್ವ. ಪಾದೋದಕ ಮಹತ್ವ. ಪ್ರಸಾದ ಮಹತ್ವ. ವಿಭೂತಿ ಮಹತ್ವ, ರುದ್ರಾಕ್ಷಿ ಮಹತ್ವ, ಮಂತ್ರ ಮಹತ್ವ ಎಂದು ಎಂಟು ಭಾಗಗಳೂ ಉಂಟು. ಐದೂ ಸಂಕಲನಗಳು ಕ್ರಮವಾಗಿ ಷಟ್‌ಸ್ಥಲತತ್ವ, ಅಷ್ಟಾವರಣಮಹತ್ವ, ಶರಣಮಹತ್ವ,ಶರಣಸ್ತುತಿ ಮತ್ತು ಶರಣಸತಿ–ಲಿಂಗಪತಿ ತತ್ವವನ್ನು ಪ್ರತಿಪಾದಿಸುತ್ತದೆ. ಒಂದರಲ್ಲಿ ೧೩೦ ಮತ್ತೊಂದರಲ್ಲಿ ೧೬೦, ಮೂರನೆಯದರಲ್ಲಿ ೧೧೦, ನಾಲ್ಕನೆಯದರಲ್ಲಿ ೧೦೮ ಕೊನೆಯದರಲ್ಲಿ ೧೧೦ ವಚನಗಳಿವೆ.

ಈ ಕೃತಿಗಳನ್ನು ಎರಡೆರಡು ಹಸ್ತಪ್ರತಿಗಳಿಂದ ಪರಿಷ್ಕರಿಸಲಾಗಿದೆ. ಇವುಗಳ ಪರಿಷ್ಕರಣ ವಿಧಾನವನ್ನು ಕುರಿತು ಸಂಪಾದಕರು ಕೆಳಗಿನಂತೆ ವಿವರಿಸಿದ್ದಾರೆ :

"ಎಳಮುಲೆಯ ಗುರುಶಾಂತದೇವರ ವಚನಸಂಕಲನಗಳ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಹೀಗಿದ್ದೂ ಇಲ್ಲಿಯ ಪ್ರತಿಯೊಂದು ಕೃತಿಯ ಪರಿಷ್ಕ

ರಣಕ್ಕೆ ಎರಡೆರಡರಂತೆ ಹಸ್ತಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಹೆಚ್ಚು ಸುಲಭವೂ ಜನಪ್ರಿಯವೂ ಆದ ವಚನಗಳನ್ನು ಕಾಲದಿಂದ ಕಾಲಕ್ಕೆ ಅನೇಕ ಲಿಪಿಕಾರರು ನಕಲು.ಪ್ರತಿ ನಕಲು ಮಾಡುತ್ತಬಂದಿದ್ದಾರೆ. ಹಾಗೆ ಮಾಡುವಾಗ ಅವರ ಅನವಧಾನ, ಅಸ್ಥಾಜ್ಞಾನ, ಅಜ್ಞಾನಕಾರಣವಾಗಿ ಹೇರಳ ಪಾಠಾಂತರಗಳು ಉಂಟಾಗಿವೆ. ಹೀಗೆ ಪಾಠಾಂತರಗಳನ್ನೊಳಗೊಂಡು ದೊರೆಯುವ ಎಲ್ಲ ಹಸ್ತಪ್ರತಿಗಳನ್ನು ಮುಂದಿಟ್ಟುಕೊಂಡು ಪರಿಷ್ಕರಿಸ ತೊಡಗಿದರೆ ಮೂಲವಚನಗಳಿಗಿಂತ ಪಾಠಾಂತರಗಳ ಪ್ರಮಾಣವೇ ಹೆಚ್ಚಾಗಿ, ವಚನದ ಮೈಯಲ್ಲಿ ಸಂಕೇತಸೂಚಿ ಅಂಕಿಗಳೇ ತುಂಬಿ ಓದುಗರನ್ನು ದಿಕ್ಕು ತಪ್ಪಿಸುವ ಸಂಭವವಿದೆ. ಹಾಗೆ ಮಾಡುವುದರಿಂದ ಮೂಲಪಾಠವನ್ನು ಹುಡುಕುವುದಕ್ಕಿಂತ ಇದ್ದ ಪಾಠವನ್ನೂ ವಿರೂಪಗೊಳಿಸುವ ಸಾಧ್ಯತೆಯೇ ಹೆಚ್ಚು. ಅದಕ್ಕಾಗಿ ದೊರೆತಷ್ಟೂ ಪ್ರತಿಗಳನ್ನು ಇಟ್ಟುಕೊಳ್ಳದೆ ಒಂದೇ ವಂಶಕ್ಕೆ ಸೇರಿದ, ಹೆಚ್ಚು ಪ್ರಾಚೀನವೂ ಶುದ್ಧವೂ ಆದ ಎರಡೆರಡು ಪ್ರತಿಗಳನ್ನು ಮಾತ್ರ ಆಯ್ದುಕೊಂಡು ಈ ಕೃತಿಗಳನ್ನು ಸಂಪಾದಿಸಲಾಗಿದೆ. ಒಂದು ಮೂಲಪ್ರತಿ; ಮತ್ತೊಂದು ಪಾಠಾಂತರಪ್ರತಿ. ಮೂಲಪ್ರತಿಯಲ್ಲಿ ವಚನ ಸರಿಯಿದ್ದರೆ ಹಾಗೆ ಇಡುವುದು. ಅರ್ಥಕ್ಕೆ ಬಾಧೆ ಬರುವಂತಿದ್ದರೆ ಪಾಠಾಂತರ ಪ್ರತಿಯನ್ನು ನೋಡಿ ಶುದ್ಧಪಾಠವನ್ನು ನಿರ್ಣಯಿಸಿ ಮೇಲಿರಿಸಿ, ಅಶುದ್ಧಪಾಠವನ್ನು ಅಡಿಯಲ್ಲಿ ಸೇರಿಸುವುದು. ಇದು ನಾನು ಅನುಸರಿಸಿದ ಸಂಪಾದನ ವಿಧಾನ. ಈ ವಿಧಾನವೇ ಇಂದು ವಚನ ಸಾಹಿತ್ಯ ಸಂಪಾದನೆಗೆ ಹೆಚ್ಚು ಸಮಂಜಸವೆಂದು ನನ್ನ ಭಾವನೆ."

ಇವರ ಈ ವಿಧಾನವನ್ನು ವಿದ್ವಾಂಸರು ಎಷ್ಟರ ಮಟ್ಟಿಗೆ ಒಪ್ಪುತ್ತಾರೆ ಎಂಬುದನ್ನು ಕಾಯ್ದುನೋಡಬೇಕು.

ದೀರ್ಘವಾದ ಪ್ರಸ್ತಾವನೆಯಲ್ಲಿ ವೀರಶೈವ ಸಂಪಾದನ ಸಾಹಿತ್ಯದ ಇತಿಹಾಸ, ಸ್ಥಲಕಟ್ಟಿನ ಕೃತಿಗಳ ಪ್ರಕಾರಗಳು, ಎಳಮಲೆಯ ಗುರುಶಾಂತದೇವನ ಕಾಲದೇಶ, ಗುರುಪರಂಪರೆ, ಸಂಕಲಿಸಿದ ಕೃತಿಗಳು. ಈ ಸಂಕಲನದಲ್ಲಿ ಸೇರಿದ ಕೃತಿಗಳ ಸ್ಥೂಲ ಪರಿಚಯ, ವಚನಸಂಖ್ಯೆ, ವಚನಕಾರರಸಂಖ್ಯೆ, ಸಂಪಾದನ ವಿಧಾನ ಕುರಿತು ವಿವರಿಸಲಾಗಿದೆ. ಅನುಬಂಧ ವಚನಗಳ ಅಕಾರಾದಿ, 'ವಚನಕಾರರು–ಅಂಕಿತ' ವಚನಸಂಖ್ಯೆ, ಶರಣರ ನಾಮಸೂಚಿ, ಪಾರಿಭಾಷಿಕ ಪದಕೋಶ, ಕಠಿಣ ಪದಕೋಶಗನ್ನೊಳಗೊಂಡಿದೆ. ಇದರ ಸಂಪಾದಕರು ಡಾ. ವೀರಣ್ಣ ರಾಜೂರ.

ಬಸವವಚನ ಪ್ರಭೆ: ಇದು ಬಸವಣ್ಣನವರ ೯೨ ಸಟೀಕ ವಚನಗಳ ಸಂಗ್ರಹ. ಡಾ. ಫ. ಗು. ಹಳಕಟ್ಟಿ ಅವರು ಟೀಕೆ ಬರೆದು ತಮ್ಮ 'ಶಿವಾನುಭವ' ಸಂಚಿಕೆಯಲ್ಲಿ ಆಗಾಗ ಪ್ರಕಟಿಸಿದ ಈ ವಚನಗಳನ್ನು ಹ.ದೇ. ಚಂದನಗೌಡರ ಅವರು ಆಯ್ದು ಒಂದೆಡೆ ಸೇರಿಸಿಕೊಟ್ಟಿದ್ದಾರೆ. ಇವರಲ್ಲಿ ವಚನಶಾಸ್ತ್ರದ ಹಿರಿಮೆ, ಪರಮಾತ್ಮನ ಸ್ವರೂಪ, ಪರಮಾತ್ಮನು ವಿಶ್ವದಲ್ಲಿರುವ ರೀತಿ, ಜಗತ್ತಿನ ಆವಿರ್ಭಾವ,

ಸಂಸಾರವು ದುಃಖಮಯ–ಮೋಕ್ಷವನ್ನು ಬಯಸು, ಪರಮಾತ್ಮನಲ್ಲಿ ಸಾಮರಸ್ಯವು ಭಕ್ತಿಯುಳ್ಳವನಾಗಿರು, ನಿಷ್ಕಪಟ ಭಕ್ತಿಯುಳ್ಳವನಾಗಿರು. ಲಿಂಗವನ್ನು ಪೂಜಿಸು ಎಂಬ ಆರು ವಿಭಾಗಗಳನ್ನು ಮಾಡಿ ಆಯಾವಿಭಾಗಕ್ಕೆ ಹೊಂದುವ ವಚನಗಳನ್ನು ಜೋಡಿಸಲಾಗಿದೆ. ಇದು ಸಂಪಾದಕರು ಮಾಡಿದ ವಿಭಜನೆಯಾಗಿದೆ.

ಮೊದಲು ವಚನ. ಅದರ ಕೆಳಗೇ ಕಠಿಣ ಪದಗಳಿಗೆ ಅರ್ಥಕೊಟ್ಟು ಮುಂದೆ ಜನಸಾಮಾನ್ಯರಿಗೂ ತಿಳಿಯುವ ತಿಳಿಯಾದ ಭಾಷೆಯಲ್ಲಿ ಟೀಕೆಯನ್ನು ಬರೆಯಲಾಗಿದೆ. ಸಂಪಾದಕರು ಇಲ್ಲಿ ಮಾಡಿದ ಇನ್ನೊಂದು ಹೆಚ್ಚಿನ ಕಾರ್ಯವೆಂದರೆ ಆಯಾ ವಚನಕ್ಕೆ ಸಂಬಂಧಿಸಿದ ಭಿನ್ನಪಾಠಗಳನ್ನು ಮುದ್ರಿತ ಕೃತಿಗಳಿಂದಾಯ್ದು ಅಡಿಯಲ್ಲಿ ಕೊಟ್ಟಿದ್ದಾರೆ. ಹಾಗೆ ಕೊಡುವಲ್ಲಿ ಅಂಕಿಗಳನ್ನು ಗುರುತಿಸಿದ ರೀತಿಯಲ್ಲಿ ಒಂದುತನ ವಿಲ್ಲ. ಅಲ್ಲದೆ ಆಯ್ಕೆಮಾಡಿದ ಕೃತಿಗಳ ಸಂಕ್ಷಿಪ್ತವನ್ನು ಸೂಚಿಸದೆ ಸಂಪೂರ್ಣ ಹೆಸರು ಸಂಪಾದಕರ ಹೆಸರನ್ನೂ ಅಲ್ಲಿಯೇ ಸೇರಿಸಿದ್ದಾರೆ. ಕೆಲವು ಭಿನ್ನಪಾಠಗಳನ್ನು ಎಲ್ಲಿಂದ ಎತ್ತಿಕೊಂಡಿದ್ದಾರೆ ಎನ್ನುವುದಕ್ಕೆ ಸಾಕ್ಷಿಯೇ ಇಲ್ಲ. (ವ ೧೧)

ಈ ಕೃತಿಯ ವಿಶೇಷವೆಂದರೆ ಕೊನೆಯಲ್ಲಿ ೭ ಅನುಬಂಧಗಳನ್ನು ಒಳಗೊಂಡುದು. ಅವುಗಳ ಜೋಡಣೆಯ ಆವಶ್ಯಕತೆಯನ್ನು ಕುರಿತು ಸಂಪಾದಕರು ಹೀಗೆ ಹೇಳಿದ್ದಾರೆ :

"ಲಿಂಗವಂತ ಧರ್ಮದ ಪ್ರಕಾರ ದೇವರ ಕಲ್ಪನೆ, ಆ ಧರ್ಮದ ತತ್ವಗಳ, ಆ ಧರ್ಮದ ಆಚಾರ ವಿಚಾರಗಳ. ಆ ಧರ್ಮದ ಸ್ಥಾಪನಾಚಾರ್ಯರ ಬಗೆಗೆ ಸರಿಯಾದ ತಿಳಿವಳಿಕೆಯನ್ನು ಹೊಂದಲು ಅವಶ್ಯವೆಂದು ೭ ಅನುಬಂಧಗಳನ್ನು ಬರೆದು ಜೋಡಿಸಲಾಗಿದೆ."

ಇವುಗಳಲ್ಲಿ ಕ್ರಮವಾಗಿ ಬಸವ ಪೂರ್ವದಲ್ಲಿ ವೀರಶೈವವಿರಲಿಲ್ಲ. ಬಸವಣ್ಣನವರೇ ವೀರಶೈವ ಧರ್ಮದ ಸ್ಥಾಪಕರು; ಲಿಂಗಸ್ಥಲ–ಅಂಗಸ್ಥಲಗಳು; ಲಿಂಗ–ಅಂಗ ಮತ್ತು ಸ್ಥಲಗಳ ಒಂದು ಪರಿಶೀಲನೆ, ಸಾದಾಖ್ಯಗಳು; ಸಂಸಾರಪದ ವಿವರಣೆ: ಈ ಷಟ್‌ಸ್ಥಲದ ನಿರ್ಣಯವ ಬಸವಣ್ಣನೇ ಬಲ್ಲ; ಮಾರ್ಗಕ್ರಿಯೆಗಳು ಮತ್ತು ಮೀರಿದ ಕ್ರಿಯೆಗಳು ಎಂಬ ವಿಷಯಗಳ ವಿಸ್ತಾರವಾದ ವಿವರಣೆಯನ್ನು ಸಾಧಾರವಾಗಿ ಮಾಡಿದ್ದಾರೆ. ಸಂಪಾದನೆಯ ದೃಷ್ಟಿಯಿಂದ ಹೇಳಬೇಕಾದುದು ಇಲ್ಲಿ ಏನೂ ಇಲ್ಲದಿದ್ದರೂ ಬಿಡಿಬಿಡಿಯಾಗಿ ಪತ್ರಿಕೆಯಲ್ಲಿ ಚೆಲ್ಲವರಿದ ವಚನಗಳನ್ನಾಯ್ದು ವಿಷಯಕ್ಕನುಗುಣವಾಗಿ ಜೋಡಿಸಿದ ಕಾರ್ಯ ಸ್ತುತ್ಯವಾಗಿದೆ.

ಶರಣರ ನೂರೊಂದು ವಚನಗಳು : ಕೃತಿಯ ಹೆಸರೇ ಸೂಚಿಸಿರುವಂತೆ ಇದರಲ್ಲಿ ಶರಣರ ನೂರೊಂದು ವಚನಗಳನ್ನು ಆಯ್ದು ಸಂಗ್ರಹಿಸಲಾಗಿದೆ. ಸಂಗ್ರಾಹಕರು

ಡಾ. ಪ್ರಭುಶಂಕರ. ಶರಣರ ಅನುಭಾವದ ಔನ್ನತ್ಯ ಹಾಗೂ ವಿಶಿಷ್ಟ ವಿಚಾರಧಾರೆಯನ್ನು ವಿಶ್ವದ ಇತರ ಭಾಷೆಯವರಿಗೂ ಪರಿಚಯಿಸಬೇಕೆಂಬ ಹಿರಿಯಹಂಬಲದಿಂದ ಸಿದ್ಧಪಡಿಸಿದ ಕೃತಿಯಿದು. ಅಕ್ಕಮಹಾದೇವಿ (೨೭), ಅಲ್ಲಮಪ್ರಭು(೨೭), ಬಸವಣ್ಣ (೨೬), ಅಂಬಿಗರ ಚೌಡಯ್ಯ (೨), ಆಯ್ದಕ್ಕಿ ಮಾರಯ್ಯ (೧), ಉರಿಲಿಂಗಪೆದ್ದಿ (೧), ಚೆನ್ನಬಸವಣ್ಣ (೧), ಹಡಪದಪ್ಪಣ್ಣ (೧), ಹಾವಿನಾಳ ಕಲ್ಲಯ್ಯ (೧). ಮಡಿವಾಳ ಮಾಚಯ್ಯ (೧), ಮುಕ್ತಾಯಕ್ಕ (೩), ಷಣ್ಮುಖಸ್ವಾಮಿ (೪). ಜೇಡರ ದಾಸಿಮಯ್ಯ (೬)—ಈ ೧೩ ಜನ ಶರಣರ ವಚನಗಳು ಇಲ್ಲಿ ಸಮಾವೇಶಗೊಂಡಿವೆ. ಈ ವಚನಗಳನ್ನು ಆಯ್ಕೆ ಮಾಡುವಲ್ಲಿ ಎಲ್ಲ ವಚನಕಾರರ, ವಚನಕಾರ್ತಿಯರ ಪ್ರಾತಿನಿಧ್ಯವನ್ನೂ, ಸರಳತೆ ಹಾಗೂ ಕಾವ್ಯ ಸೌಂದರ್ಯವನ್ನೂ ಗಮನದಲ್ಲಿಟ್ಟುಕೊಳ್ಳಲಾಗಿದೆ. ಹೀಗಾಗಿ ಪಾರಿಭಾಷಿಕ ಶಬ್ದಗಳಿಲ್ಲದ ಅನುಭಾವ ಮತ್ತು ಕಾವ್ಯ ಸೌಂದರ್ಯಗಳಿಂದ ತುಂಬಿರುವ ವಚನಗಳು ಇಲ್ಲಿ ಎಡೆ ಪಡೆದಿವೆ.

ಮೊದಲು ಪ್ರತಿಯೊಬ್ಬ ವಚನಕಾರ ಅಥವಾ ವಚನಕಾರ್ತಿಯ ಸಂಕ್ಷಿಪ್ತ ಪರಿಚಯವನ್ನು ಅವರ ಹೆಸರಿನಡಿಯಲ್ಲಿ ಕೊಟ್ಟು ಮುಂದೆ ವಚನಗಳನ್ನು ಸಂಗ್ರಹಿಸಿದ್ದಾರೆ. ಆ ಪುಟದ ಕೆಳಗೆ ಆ ವಚನಗಳ ಕಠಿಣ ಪದಗಳಿಗೆ ಅರ್ಥವನ್ನು ಕೊಟ್ಟಿದೆ. ಪ್ರಾರಂಭದ ಮುನ್ನುಡಿಯಲ್ಲಿ ವಚನ ಸಾಹಿತ್ಯದ ಸ್ಥೂಲಪರಿಚಯ. ಅದರ ವೈಶಿಷ್ಟ್ಯಗಳನ್ನು, ವಚನಕಾರರ ದೃಷ್ಟಿಧೋರಣೆಗಳನ್ನು ತಿಳಿಸಿ. ಈ ಸಂಕಲನ ಹುಟ್ಟಲು ಕಾರಣ ಹಾಗೂ ನೂರೊಂದೇ ವಚನಗಳನ್ನು ಆಯ್ಕೆ ಮಾಡಿದ್ದೇಕೆ ಬೇರೆ ಭಾಷೆಗಳಿಗೆ ಇವುಗಳನ್ನು ಅನುವಾದ ಮಾಡಿಸುವುದೇಕೆ ಎಂಬುದನ್ನು ವಿವರಿಸಿದ್ದಾರೆ. ಕನ್ನಡದಲ್ಲಿ ಸಿದ್ಧವಾದ ರೀತಿಯಲ್ಲಿಯೇ ಈ ಕೃತಿ ಈಗಾಗಲೇ ಓರಿಯಾ. ಬಂಗಾಳಿ, ಸ್ಪ್ಯಾನಿಷ್, ಇಂಗ್ಲೀಷ ಭಾಷೆಗಳಲ್ಲಿ ಅನುವಾದವಾಗಿದೆ. ಮುಂದೆ ಫ್ರೆಂಚ್, ಜರ್ಮನ್ ಭಾಷೆಗಳಿಗೂ ಭಾರತದ ಇತರ ೧೫ ಭಾಷೆಗಳಿಗೂ ಇವನ್ನು ಅನುವಾದ ಮಾಡಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆಯಂತೆ. ವಚನಗಳನ್ನು ಆಯುವಲ್ಲಿ ಸಂಪಾದಕರು ಪಟ್ಟ ಪರಿಶ್ರಮ. ತಾಳಿದ ನಿಲವು. ವಚನಕಾರರ ಪರಿಚಯ ಕೊಡುವಲ್ಲಿ ತೋರಿದ ಮುತುವರ್ಜಿ ಮೆಚ್ಚುಗೆಗೆ ಪಾತ್ರವಾಗಿವೆ.

ವಚನ ಕಮ್ಮಟ : ಕೆ. ಮರುಳಸಿದ್ಧಪ್ಪ ಹಾಗೂ ಕಿ. ರಂ. ನಾಗರಾಜ ಅವರಿಂದ ಸಂಗ್ರಹಗೊಂಡ ಇದು ಕರ್ನಾಟಕ ಸರಕಾರ ಪ್ರಥಮ ವಿಶ್ವ ಕನ್ನಡ ಸಮ್ಮೇಲನ ಸಾಹಿತ್ಯ ಮಾಲೆಯಲ್ಲಿ ಪ್ರಕಟಿಸಿದ ೭೫ ನೆಯ ಕೃತಿ. ವಿಚಾರ ಸಾಹಿತ್ಯ ವಿಭಾಗದಡಿಯಲ್ಲಿ ಸೇರಿದ ಇದರಲ್ಲಿ ೫೯ ವಚನಕಾರರ ೫೧೬ ವಚನಗಳು ಸಂಗ್ರಹವಾಗಿವೆ. ಇವರಲ್ಲಿ ೪೪ ಜನ ಪುರುಷರು. ೧೫ ಜನ ಸ್ತ್ರೀಯರು ಸೇರಿದ್ದಾರೆ. ಪ್ರಾರಂಭದಲ್ಲಿ 'ಟೀಕಾವಚನಗಳು' ಎಂಬ ಶೀರ್ಷಿಕೆ ಹಾಕಿ ಬಸವಣ್ಣ, ಚೆನ್ನ

ಬಸವಣ್ಣ, ಅಲ್ಲಮ, ಜೇಡರ ದಾಸಿಮಯ್ಯ, ಅಕ್ಕಮಹಾದೇವಿ, ಮುಕ್ತಾಯಕ್ಕ, ಮಡಿವಳ ಮಾಚಯ್ಯ, ಸಿದ್ಧರಾಮರ ೨೯ ವಚನಗಳನ್ನು ಸಂಗ್ರಹಿಸಲಾಗಿದೆ. ಮುಂದೆ ಜೇಡರ ದಾಸಿಮಯ್ಯನಿಂದ ಗುಡ್ಡವ್ವೆಯ ವರೆಗಿನ ೫೯ ಜನ ವಚನಕಾರ (ಕಾರ್ತಿ) ಹೆಸರಿನ ಕೆಳಗೆ ಅವರವರ ವಚನ ಸಂಖ್ಯಾಬಾಹುಲ್ಯಕ್ಕನುಗುಣವಾಗಿ, ಉತ್ತಮವೆನಿಸಿ ದುವುಗಳನ್ನು ಆರಿಸಿ ಜೋಡಿಸಿದ್ದಾರೆ. ಪ್ರಾರಂಭದ ಪೀಠಿಕಾವಚನಗಳು ವಿಭಾಗ ದಲ್ಲಿ ಮುಂದೆ ಬಂದ ವಚನಕಾರರ ಕೆಲವು ವಚನಗಳೇ ಸೇರಿರುವುದರಿಂದ ಈ ಅಧ್ಯಾಯದ ಅಗತ್ಯವಿರಲಿಲ್ಲ.

ಕೊನೆಯಲ್ಲಿ ಶಬ್ದಕೋಶ, ಪಾರಿಭಾಷಿಕ ಶಬ್ದಗಳ ವಿವರಣೆ, ಕೆಲವು ವಚನಗಳ ವಿವರಣೆ ಹಾಗೂ ಸಹಾಯಕ ಗ್ರಂಥ ಸೂಚಿಗಳಿವೆ. ಆದರೆ ಅಗತ್ಯವಾಗಿ ಬೇಕಿದ್ದ ವಚನಗಳ ಅಕಾರಾದಿ, ಆಯ್ಕೆಯಲ್ಲಿ ಅನುಸರಿಸಿದ ರೀತಿ ನೀತಿಗಳನ್ನು ತಿಳಿಸುವ ಸಂಪಾದಕರ ಅರಿಕೆ ಅಥವಾ ಪ್ರಸ್ತಾವನೆ, ಯಾವ ಸಂಕಲನಗಳಿಂದ ಆಯ್ದುಕೊಂಡೆ ವೆಂಬ ಖಚಿತ ಸೂಚನೆಗಳಿಲ್ಲ. ಶಬ್ದಕೋಶ ಹಾಗೂ ಪಾರಿಭಾಷಿಕ ಪದಗಳಿಗೆ ವಚನಾಂಕ ಸೂಚಿಸಿದ್ದರೆ, ಆಯಾ ಸಂದರ್ಭಗಳಲ್ಲಿ ಬಳಸಿದ ಪದಗಳಿಗಿರುವ ನಿಶ್ಚಿತ ಅರ್ಥವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತಿತ್ತು. ಇಷ್ಟೆಲ್ಲ ಆವಶ್ಯಕತೆಗಳನ್ನು ಅಪೇಕ್ಷಿಸುವ ಇದು ಜನಪ್ರಿಯ ಆವೃತ್ತಿಯಾಗಿ, ಸುಂದರ ಮುಖಪುಟದೊಂದಿಗೆ ಅಚ್ಚುಕಟ್ಟಾಗಿ ಅಚ್ಚಾಗಿರುವುದರಿಂದ ತನ್ನ ಉದ್ದೇಶವನ್ನು ಸುಲಭವಾಗಿ ಈಡೇರಿಸಿ ಕೊಳ್ಳುವುದರಲ್ಲಿ ಸಫಲವಾಗಿದೆ.

ಹಾಲತೊರೆಗೆ ಬೆಲ್ಲದ ಕೆಸರು : ಇದು ಬಸವರಾಜ ಕಟ್ಟೀಮನಿ ಅವರು ಸಂಗ್ರಹಿಸಿದ ೧೫೦ ವಚನಗಳ ಸಂಕಲನ. ಇದರಲ್ಲಿ ಬಸವಣ್ಣನವರ ೯೯, ಪ್ರಭು ದೇವರ ೩೧, ಜೇಡರ ದಾಸಿಮಯ್ಯನ ೬, ಅಂಬಿಗರ ಚೌಡಯ್ಯನ ೯ ಮತ್ತು ಅಕ್ಕ ಮಹಾದೇವಿಯ [illegible]ವಚನಗಳು ಕೂಡಿಕೊಂಡಿವೆ. ಇವುಗಳಿಗೆ ಸಂಕಲನಕಾರರು 'ನನ್ನ ಪ್ರೀತಿಯ ವಚನಗಳು' ಎಂದು ಕರೆದಿದ್ದಾರೆ. ಮುನ್ನುಡಿ ರೂಪದ 'ನಾಸ್ತಿಕನನ್ನೂ ಮರುಳು ಗೊಳಿಸಿದ ವಚನಗಳು' ಎಂಬ ಶೀರ್ಷಿಕೆಯಡಿಯಲ್ಲಿ ವಚನಗಳ ಮಹತ್ತ್ವ– ಮೌಲ್ಯಗಳನ್ನು ಮುಕ್ತಕಂಠದಿಂದ ಹೊಗಳುತ್ತ ಕೊನೆಯಲ್ಲಿ "ನನ್ನ ಮನಸ್ಸನ್ನು ಸೆರೆಹಿಡಿದ, ತಲೆಗೆ ಗುಂಗುಹಿಡಿಸಿದ, ಸಮಾಜವನ್ನು ಪ್ರಗತಿಯ ದಾರಿಗೆ ಕೊಂಡೊಯ್ದ ೧೫೦ ವಚನಗಳನ್ನು ಆಯ್ದು ಇಲ್ಲಿ ಸಂಗ್ರಹಿಸಿದ್ದೇನೆ. ನನ್ನ ವ್ಯಕ್ತಿತ್ವದ ಓರೆ–ಕೋರೆಗಳನ್ನು ತಿದ್ದಿದ ವಚನಗಳೂ ಇಲ್ಲಿವೆ. ನನ್ನಂಥ ನಾಸ್ತಿಕರಿಗೂ ಹೊಸ ಬೆಳಕು ತೋರಿಸಬಲ್ಲ ನಂದಾದೀಪಗಳು ಇಲ್ಲಿ ಇವೆ. ಎಂಟು ಒಂಬತ್ತು ನೂರು ವರ್ಷಗಳಿಂದ ನಿರಂತರವಾಗಿ ಬೆಳಗುತ್ತಿರುವ ಈ ಜ್ಯೋತಿಗಳಿಂದ ಎಲ್ಲರೂ ಕಿರುಬೆಳ ಕನ್ನಾದರೂ ಕಾಣಲು ಶಕ್ಯವಿದೆ" ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಕೇವಲ

ತಮ್ಮ ಮನಸ್ಸಿಗೆ ಹಿಡಿದ ವಚನಗಳನ್ನು ಸಂಗ್ರಹಿಸುವುದೇ ಇಲ್ಲಿನ ಉದ್ದೇಶವಾಗಿರುವು ದರಿಂದ ಗ್ರಂಥಸಂಪಾದನೆಯ ಅಂಶಗಳನ್ನು ಹುಡುಕುವುದು ತಪ್ಪೆನಿಸುತ್ತದೆ. ಆದರೂ ಬಸವಣ್ಣನವರ ೭ ವಚನಗಳನ್ನು ಅಪೂರ್ಣವಾಗಿ ಆಯ್ದುಕೊಂಡದ್ದು (ಅವರಿಗೆ ಅಷ್ಟೇ ಸಾಕಿದ್ದಿರಬೇಕು. ಆ ಮಾತು ಬೇರೆ), ಕೊನೆಗೆ ವಚನಗಳ ಅಕಾರಾದಿ ಕೊಡದಿರುವುದು, ಯಾರ್‍ಯಾರ ವಚನಗಳನ್ನು ಎಲ್ಲಿಂದ ಆಯ್ದುಕೊಂಡೆನೆಂಬು ದನ್ನು ತಿಳಿಸದಿರುವುದು ಇಲ್ಲಿನ ಎದ್ದು ಕಾಣುವ ಕೊರತೆಗಳಾಗಿವೆ.

ಜಿಗುನಿ ಮುರುಳದೇವರ ಕೃತಿಗಳು : ಡಾ. ಎಸ್. ವಿದ್ಯಾಶಂಕರ ಅವರಿಂದ ಸಂಪಾದನೆಗೊಂಡ ಈ ಗ್ರಂಥದಲ್ಲಿ ಜಿಗುನಿ ಮುರುಳದೇವರ ಸ್ವರವಚನ, ಮುರುಳ ದೇವರ ಕಂದ ಮತ್ತು ಚಿತ್ಕ್ರಿಯಾ ಸಂಗ್ರಹ ಎಂಬ ಮೂರು ಕೃತಿಗಳು ಅಳವಟ್ಟಿವೆ.

ಜಿಗುನಿ ಮುರುಳದೇವರು ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿ ದವರು. ಸು. ೧೫೮೦ರಲ್ಲಿ ಜೀವಿಸಿದ್ದ ಇವರು ಉನ್ನತ ಮಟ್ಟದ ಅನುಭಾವಿಗಳಾಗಿ ವೀರಶೈವ ಧರ್ಮ ತತ್ವಗಳನ್ನೊಳಗೊಂಡ ಕೃತಿಗಳನ್ನು ರಚಿಸಿದ್ದಾರೆ.

'ಮುರುಳದೇವರ ಸ್ವರವಚನಗಳು' ಕೃತಿಯಲ್ಲಿ ೧೫೬ ಸ್ವರವಚನಗಳಿವೆ. ಅವು ಗಳ ಅಂಕಿತ 'ನಿಜಗುರುಸಿದ್ಧಶಾಂತ' ಶಿವಾನುಭವದ ನಿರೂಪಣೆಯನ್ನೊಳಗೊಂಡ ಇವುಗಳನ್ನು ಮೂಲ ಕೃತಿಕಾರ ಜೋಡಿಸಿದ ರೀತಿಯಲ್ಲಿಯೇ ಇಲ್ಲಿ ಸಂಪಾದಿಸಿ ಕೊಡಲಾಗಿದೆ. ಪ್ರತಿ ಸ್ವರವಚನಕ್ಕೆ ರಾಗ ಸೂಚನೆ ಇದೆ. ೧೫೬ ಸ್ವರ ವಚನ ಗಳಲ್ಲಿ ೨೮ 'ಸ್ವರಬೊಲ್ಲಿ'ಗಳೂ ಸೇರಿವೆ. ಪಲ್ಲವಿ ಹಾಗೂ ಗಣ–ಪಾದ ಮಿತಿ ಯಿಲ್ಲದ ಚಿಕ್ಕರಚನೆ 'ಬೊಲ್ಲಿ'. ಸ್ವರವಚನಗಳ ಮಧ್ಯ ಆಗಮಗಳಿಂದಾಯ್ದ ಸಂಸ್ಕೃತ ಉದ್ಧರಣೆಗಳನ್ನು ಬಳಸಲಾಗಿದೆ. ಈ ಸ್ವರವಚನಗಳನ್ನು ಎರಡು ಹಸ್ತ ಪ್ರತಿಗಳಿಂದ ಪರಿಷ್ಕರಿಸಲಾಗಿದೆ.

'ಮುರುಳದೇವರಕಂದ' ದಲ್ಲಿ ಒಟ್ಟು ೧೩೫ ಕಂದಪದ್ಯಗಳಿವೆ. ಇದಕ್ಕೆ ಲಿಂಗಾಂಗ ಸಮರಸದ ಕಂದ, ಲಿಂಗಸ್ತೋತ್ರದ ಕಂದ ಎಂದೂ ಕರೆಯಲಾಗುತ್ತದೆ. ಅನುಭಾವ ಮತ್ತು ವೀರಶೈವ ತತ್ವಗಳಿಂದ ಕೂಡಿದ ಶಿವಸ್ತುತಿ ರೂಪವಾದ ಈ ಕೃತಿಗೆ ಪರ್ವತ ಶಿವಯೋಗಿಯು (೧೭೦೦) ಪ್ರತಿಪದಾರ್ಥ ಟೀಕೆ ಬರೆದಿದ್ದಾನೆ. ಆ ಟೀಕೆ ಸಹಿತವಾಗಿ ಮೂರು ಹಸ್ತಪ್ರತಿಗಳ ಸಹಾಯದಿಂದ ಇವನ್ನು ಸಂಪಾದಿಸಿ ದ್ದಾರೆ.

'ಚಿತ್ಕ್ರಿಯಾ ಸಂಗ್ರಹ' ವೀರಶೈವ ತತ್ವವನ್ನು ನಿರೂಪಿಸುವ ಕೃತಿ. ಆ ತತ್ವ ನಿರೂಪಣೆಗೆ ವೇದ, ಆಗಮ, ಪುರಾಣಗಳಿಂದ ಸಾಕ್ಷಿಗಳನ್ನು ಮತ್ತು ಬಸವಾದಿ

ಶರಣರ ವಚನಗಳನ್ನು ಆಯ್ದು ಬಳಸಿಕೊಳ್ಳಲಾಗಿದೆ. ಮೊದಲು ಸಂಸ್ಕೃತ ಶ್ಲೋಕಗಳನ್ನು ಕೊಟ್ಟು ನಂತರ ಅವುಗಳಲ್ಲಿ ವ್ಯಕ್ತವಾದ ವಿಷಯವನ್ನು ಹೊಂದಿದ ವಚನಗಳನ್ನು ಜೋಡಿಸಲಾಗಿದೆ. ಒಟ್ಟು ಇಲ್ಲಿ ಅಳವಟ್ಟ ಶ್ಲೋಕಗಳ ಸಂಖ್ಯೆ ೨೧೦. ಆದರೆ, ವಚನಗಳ ಸಂಖ್ಯೆ ೬೪. ಗುರುತತ್ವ, ವಿಶ್ವೋತ್ಪತ್ತಿ, ವರ್ಣೋದಯ. ಪ್ರಣವಗಳು, ಷಡಂಗಲಿಂಗ–ಮಂತ್ರ ಸಂಬಂಧ, ಷಟ್‌ಸ್ಥಲ—ಇತ್ಯಾದಿ ತಾತ್ವಿಕ ವಿಷಯಗಳ ವಿವರ ಇಲ್ಲಿ ಪ್ರಮುಖವಾಗಿದೆ. ಈ ಕೃತಿಯನ್ನು ಎರಡು ಹಸ್ತಪ್ರತಿಗಳಿಂದ ಸಂಪಾದಿಸಿದ್ದಾರೆ. ಆರಂಭದ ಪ್ರಸ್ತಾವನೆಯಲ್ಲಿ ಜಿಗುನಿ ಮರುಳದೇವರ ಕಾಲ ದೇಶ ಮತ ಕೃತಿ ಸಂಖ್ಯೆ. ಒಂದೊಂದು ಕೃತಿಗಳ ವಸ್ತು ವಿವೇಚನೆ. ಸಂಪಾದನೆಗೆ ಬಳಸಿಕೊಂಡ ಹಸ್ತ ಪ್ರತಿಗಳ ವಿವರಗಳನ್ನು ಒದಗಿಸಿದರೆ, ಕೊನೆಯಲ್ಲಿ ಅರ್ಥಕೋಶ, ವಿಶೇಷ ಪದಗಳ. ಹೆಸರುಗಳ ಟಿಪ್ಪಣಿ, ಒಂದೊಂದು ಕೃತಿಗಳ ಪದ್ಯಗಳ ಅಕಾರಾದಿಯನ್ನು ಕೊಡಲಾಗಿದೆ, ಅರ್ಥಕೋಶದಲ್ಲಿ ಕಠಿಣಪದ ಮತ್ತು ಪಾರಿಭಾಷಿಕ ಪದ ಎರಡನ್ನೂ ಬೆರೆಸದೆ ಬೇರೆ ಬೇರೆಯಾಗಿ ಕೊಡಬೇಕಿತ್ತು. ಒಟ್ಟಿನಲ್ಲಿ ಜಿಗುನಿ ಮರುಳದೇವರ ಉಪಲಬ್ಧ ಕೃತಿಗಳನ್ನೆಲ್ಲ ಒಂದೆಡೆ ಪ್ರಥಮಬಾರಿ ಶಾಸ್ತ್ರಶುದ್ಧವಾಗಿ ಪರಿಷ್ಕರಿಸಿ ಕೊಟ್ಟುದು ಸ್ತುತ್ಯಾರ್ಹ.

ಕೂಡಲೂರ ಬಸವಲಿಂಗ ಶರಣರ ಸ್ವರವಚನಗಳು : ಶಾಂತರಸರಿಂದ ಸಂಪಾದಿತವಾದ ಈ ಕೃತಿಯಲ್ಲಿ ೧೨೪ ಸ್ವರವಚನಗಳು ಸಂಗ್ರಹವಾಗಿವೆ. 'ಕೂಡಲೂರೇಶ' ಎಂಬ ಅಂಕಿತದಲ್ಲಿ ಅನುಭಾವಿಗಳಾದ ಬಸವಲಿಂಗ ಶರಣರು ಹಾಡಿದ ಈ ಹಾಡುಗಳನ್ನು ೧೬ ಹಸ್ತಪ್ರತಿಗಳ ಆಧಾರದಿಂದ ಪರಿಷ್ಕರಿಸಿಕೊಟ್ಟಿದ್ದಾರೆ. ತಮಗೆ ದೊರೆತ ಹಸ್ತಪ್ರತಿಗಳಲ್ಲಿ ಒಟ್ಟು ೧೭೦ ಹಾಡುಗಳಿದ್ದರೂ ೪೬ ಹಾಡುಗಳು ವಿಕೃತಗೊಂಡುದರಿಂದ ಕೈಬಿಡಲಾಗಿದೆ ಎಂದು ತಿಳಿಸಿದ್ದಾರೆ. ಈ ಹಿಂದೆ ಬಳ್ಳಾರಿ ಶೆಟ್ಟರ ಮುದ್ರಣಾಲಯದಲ್ಲಿ ಒಮ್ಮೆ. ಶಿವಲೆಂಕ ಎಂಬವರಿಂದ 'ಬ್ರಹ್ಮತತ್ವರತ್ನಾಕರ' ಎಂಬ ಹೆಸರಿನಲ್ಲಿ (೧೨೧ ಹಾಡುಗಳನ್ನೊಳಗೊಂಡು) ಮತ್ತೊಮ್ಮೆ ಈ ಹಾಡುಗಳು ಪ್ರಕಟವಾಗಿದ್ದರೂ, ಶೆಟ್ಟರ ಮುದ್ರಣ ಪ್ರತಿ ದೊರೆಯಲಾರದ ನಿರಾಶೆಯನ್ನೂ ಶಿವಲೆಂಕರು ಮನಬಂದಂತೆ ಹಾಡುಗಳನ್ನು ತಿದ್ದಿ ವಿಕೃತಗೊಳಿಸಿದ ವಿಷಾದವನ್ನೂ ಮನದಲ್ಲಿಟ್ಟುಕೊಂಡು ಹೊಸದಾಗಿ ದೊರೆತ ಹಸ್ತಪ್ರತಿಗಳಿಂದ ಶುದ್ಧವಾಗಿ ಪರಿಷ್ಕರಿಸಿಕೊಡಲು ಇಲ್ಲಿ ಪ್ರಯತ್ನಿಸಿದ್ದಾರೆ; ಪ್ರಯತ್ನದಲ್ಲಿ ಯಶಸ್ಸನ್ನೂ ಪಡೆದಿದ್ದಾರೆ.

ಈ ಕೃತಿ ಸಂಯೋಜನೆ. ಪರಿಷ್ಕರಣ ಕುರಿತು "ಸ್ಖಾಲಿತ್ಯಗೊಂಡ. ಅರ್ಥಕೆಟ್ಟ ಹಾಡುಗಳನ್ನು ಸಂಸ್ಕರಿಸುವಾಗ ಮೂಲದ ಆಶಯಕ್ಕೆ ಭಂಗ ಬರದಂತೆ ಎಚ್ಚರಿಕೆ ವಹಿಸಲಾಗಿದೆ. ಅರ್ಥಭಾವಕ್ಕೆ ತಕ್ಕಂತೆ ಐದು ವಿಭಾಗಗಳನ್ನು ಮಾಡಿ ಅವುಗಳಲ್ಲಿ ೧೨೪ ಪದಗಳನ್ನು ಸಮಾವೇಶಗೊಳಿಸಲಾಗಿದೆ" ಎಂದು ತಿಳಿಸಿದ್ದಾರೆ. ಅವರು ಮಾಡಿ

ಕೊಂಡ ವಿಭಾಗಗಳು ಹೀಗಿವೆ: ೧. ಪ್ರಾರ್ಥನೆ-ಗುರು-ಗುರುಭಕ್ತಿ-ಗುರುಮಹಿಮೆ ೨. ಸತಿಪತಿಭಾವ-ಅನುಭಾವ-ಬೆಡಗು ೩. ಉದ್ಯೋಗ-ಲೋಕನೀತಿ ೪. ವಿಡಂಬನೆ ಸಾಮಾಜಿಕ ಕಳಕಳಿ, ೫. ಸಂಕೀರ್ಣ ಅಲ್ಲದೆ ಒಂದೊಂದು ಹಾಡುಗಳಿಗೂ ಆಯಾ ಹಾಡಿನಿಂದಲೇ ಆಯ್ದು ಉಚಿತ ತಲೆಬರಹವನ್ನು ಕೊಡಲಾಗಿದೆ. ಪ್ರಸ್ತಾವನೆಯಲ್ಲಿ ಸ್ವರವಚನ ಪರಂಪರೆ, ಬಸವಲಿಂಗ ಶರಣರ ಬಾಲ್ಯ, ಕಾಯಕ. ವ್ಯಕ್ತಿತ್ವ, ಅವರ ಹಾಡುಗಳ ವೈಶಿಷ್ಟ್ಯ, ವಿಮರ್ಶೆ. ಅವುಗಳ ಕಾವ್ಯಸತ್ವ. ಕಾವ್ಯಸೌಂದರ್ಯ, ರಾಗ-ಛಂದಸ್ಸು, ಹಾಡುಗಬ್ಬ ಸಂಗ್ರಹಗಳನ್ನು ಮಾಡಬೇಕಾದ ವಿಧಾನ ಕಾರ್ಯ, ಹಾಡು-ಹಸ್ತಪ್ರತಿ ಸಂಗ್ರಹಿಸುವಲ್ಲಿ ಪಟ್ಟಪಾಡು, ಪರಿಷ್ಕರಿಸುವಲ್ಲಿ ವಹಿಸಿದ ಮುತುವರ್ಜಿ ಇತ್ಯಾದಿ ವಿಸ್ತಾರವಾಗಿ ವಿವರಿಸಿದ್ದಾರೆ. ಅನುಬಂಧದಲ್ಲಿ ಹಾಡುಗಳ ಅಕಾರಾದಿ, ಕಠಿಣ ಪದಕೋಶ, ಪಾರಿಭಾಷಿಕ ಪದಕೋಶ ಕೊಡಲಾಗಿವೆ. ಪರಿಷ್ಕರಣದಲ್ಲಿ ಪಾಠಾಂತರ ಗುರುತಿಸಿಲ್ಲ, ರಾಗ ನಿರ್ದೇಶನ ಮಾಡಿಲ್ಲ. ವಿಕೃತಗೊಂಡಿವೆ ಎಂದು ಕೈಬಿಟ್ಟ ೪೬ ಹಾಡುಗಳನ್ನು ಅನುಬಂಧದಲ್ಲಿ ಸೇರಿಸಿದ್ದರೆ ಸರಿಯಿತ್ತು.

೩. ಕೀರ್ತನೆ, ಉಗಾಭೋಗ, ತತ್ವಪದ ಸಂಪಾದನೆಗಳು

ಹರಿಭಕ್ತಿ ವಾಹಿನಿ : ಪ್ರಥಮ ವಿಶ್ವಕನ್ನಡ ಸಮ್ಮೇಲನ ಸಾಹಿತ್ಯ ಮಾಲೆಯ ೯೮ನೆಯ ಕೃತಿಯಾಗಿ ಸಂಕೀರ್ಣ ವಿಭಾಗದಲ್ಲಿ ಪ್ರಕಟವಾದ 'ಹರಿಭಕ್ತಿ ವಾಹಿನಿ' ಡಾ. ಜಿ. ವರದರಾಜರಾವ ಅವರಿಂದ ಸಂಪಾದಿತವಾಗಿದೆ. ಒಟ್ಟು ೨೨೩ + ೨ = ೨೨೫ ಹಾಡುಗಳನ್ನೊಳಗೊಂಡ ಇವರಲ್ಲಿ ಹರಿದಾಸರ ಪ್ರಮುಖ ಸಾಹಿತ್ಯ ಪ್ರಕಾರಗಳಾದ ಕಿರ್ತನೆ, ಉಗಾಭೋಗ, ಸುಳಾದಿ ಮತ್ತು ತತ್ವಸುವ್ವಾಲಿಗಳು ಸಮಾವೇಶ ಗೊಂಡಿವೆ. ಹರಿದಾಸ ಸಾಹಿತ್ಯದ ಆದ್ಯ ಪ್ರವರ್ತಕರಾದ ಶ್ರೀಪಾದರಾಜ ರಿಂದ (೧೪೫೦) ಶ್ರೀದವಿಠಲರ (೧೮೨೦) ರಚನೆಗಳವರೆಗೆ ಇಲ್ಲಿನ ಹರಹು. ಇವು ಗಳನ್ನು ಸಂಕಲಿಸುವಲ್ಲಿ ಸಂಪಾದಕರು ತಾವು ಅನುಸರಿಸಿದ ಮಾರ್ಗವನ್ನು ವಿವರಿಸುತ್ತ "ಕನ್ನಡ ಹರಿದಾಸ ಸಾಹಿತ್ಯವನ್ನು ಸಾಂಪ್ರದಾಯಿಕ ದೃಷ್ಟಿಯಿಂದ ತಾರತಮ್ಯ ತತ್ವಕ್ಕೆ ಅನುಸಾರವಾಗಿ ಸಿದ್ಧಪಡಿಸಿರುವ ಅನೇಕ ಸಂಕಲನಗಳು ಈಗಾಗಲೇ ಪ್ರಕಟವಾಗಿವೆ. ಆದರೆ ಹರಿದಾಸ ಸಾಹಿತ್ಯದಲ್ಲಿ ವಿದಿತವಾಗುವ ಭಾವವೈವಿಧ್ಯವನ್ನು ಮಾತ್ರವೇ ಲಕ್ಷ್ಯ ದಲ್ಲಿಟ್ಟುಕೊಂಡು ದಾಸರ ರಚನೆಗಳನ್ನು ವಿಭಜನೆ ಮಾಡಿರುವ ಸಂಕಲನಗಳಲ್ಲಿ ಶ್ರೀ ರಂಗನಾಥ ದಿವಾಕರರ 'ಹರಿಭಕ್ತಿ ಸುಧೆ' (೧೯೩೮)ಯೇ ಬಹಳ ಹಳೆಯದೂ. ಅಮೂಲ್ಯ ಆದುದೂ ಎಂದು ನನ್ನ ಎಣಿಕೆ. ಪ್ರಕೃತದಲ್ಲಿ ಸಮಗ್ರ ಹರಿದಾಸ ಸಾಹಿತ್ಯ ವನ್ನು ಅಧ್ಯಯನ ದೃಷ್ಟಿಯಿಂದ ಬೇರೆ ಬೇರೆ ದೃಷ್ಟಿಕೋನಗಳಿಂದ ಪರಿಶೀಲಿಸಿ ಇಲ್ಲಿ ವಿಂಗಡಿಸಲಾಗಿದೆ" ಎಂದು ಹೇಳಿ, ಆತ್ಮನಿವೇದನೆ. ಅಪರೋಕ್ಷಾನುಭವ. ಆರಾಧನ ವೈವಿಧ್ಯ. ಪ್ರಮೇಯ ಪ್ರತಿಪಾದನೆ, ಸ್ತುತಿಮಾಲಿಕೆ, ಜೀವನ ಸಮೀಕ್ಷೆ, ಸದಾಚಾರ

ಸಂಹಿತೆ ಮತ್ತು ಸಾರ್ವತ್ರಿಕ ಸಂದೇಶ–ಎಂದು ೮ ವಿಭಾಗಗಳಾಗಿ ವಿಂಗಡಿಸಿ, ಆರಾಧನ ವೈವಿಧ್ಯ, ಪ್ರಮೇಯ ಪ್ರತಿಪಾದನೆ ಹಾಗೂ ಸ್ತುತಿಮಾಲಿಕೆಯಲ್ಲಿ ಮತ್ತೆ ಉಪಶೀರ್ಷಿಕೆಗಳನ್ನು ಕಲ್ಪಿಸಿಕೊಂಡಿದ್ದಾರೆ. ಆರಂಭದ ಅರಿಕೆಯ ನಂತರದ 'ಹರಿದಾಸ ಸಾಹಿತ್ಯ ಪರಿಚಯ' ಎಂಬ ವಿಭಾಗದಲ್ಲಿ ಹರಿದಾಸ ಸಾಹಿತ್ಯದ ಉಗಮ, ವಿಕಾಸ, ಮಹತ್ವ, ಪ್ರಮುಖ ಹರಿದಾಸರ ಸಾಧನೆ ಸಿದ್ಧಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಅಂತ್ಯದ ಅನುಬಂಧದಲ್ಲಿ ಪದ್ಯಗಳ ಅಕಾರಾದಿ, ಹರಿದಾಸರು ಅವರ ಅಂಕಿತಗಳು, ಹಾಡಿನಲ್ಲಿ ಬರುವ ಉಲ್ಲೇಖಗಳ ಪೂರ್ವಕಥೆಯ ಸಂಕ್ಷಿಪ್ತ ಪರಿಚಯ, ಹರಿದಾಸರ ಸಂಕ್ಷಿಪ್ತ ಪರಿಚಯಗಳನ್ನೂ ಆಯಾ ವಿಷಯಕ್ಕೆ ಸಂಬಂಧಿಸಿ ಬಳಸಿಕೊಂಡ ಆಧಾರಗ್ರಂಥಗಳನ್ನೂ ಅವುಗಳಿಗೆ ಕೊಟ್ಟ ಸಂಕೇತಗಳನ್ನೂ ಸೂಚಿಸಿದ್ದಾರೆ. ಕಠಿಣ ಪದಗಳಿಗೆ ಅರ್ಥವನ್ನು ಆಯಾ ಪುಟದ ಅಡಿಯಲ್ಲಿಯೇ ಸೂಚಿಸಿದ್ದಾರೆ. ಇವು ಅನುಬಂಧದಲ್ಲಿ ಸೇರಿದ್ದರೆ ಸರಿಯಿತ್ತು.

ಇದು ಜನಪ್ರಿಯ ಆವೃತ್ತಿಯಾದರೂ ಪಾಠಾಂತರ ಒಂದನ್ನುಳಿದು ಶಾಸ್ತ್ರಶುದ್ಧ ಸಂಪಾದಿತ ಕೃತಿಗಿರಬೇಕಾದ ಎಲ್ಲ ಉಪಯುಕ್ತ ಮಾಹಿತಿಗಳನ್ನೂ ಒದಗಿಸಿ, ಜನಸಾಮಾನ್ಯರಂತೆ ಸಂಶೋಧಕರಿಗೂ ಅಭ್ಯಾಸಯೋಗ್ಯವಾಗುವಂತೆ ಮಾಡಿದ ಸಂಪಾದಕರ ಶ್ರಮ ಸಾರ್ಥಕವಾಗಿದೆ.

ಶ್ರೀ ವಿಜಯದಾಸರ ಉಗಾಭೋಗಗಳು : ಕೆ. ಗೋಕುಲನಾಥ ಅವರಿಂದ ಮರು ಪರಿಷ್ಕರಣಗೊಂಡ ಈ ಕೃತಿಯಲ್ಲಿ ೬೭ ಉಗಾಭೋಗಗಳು ಸಂಗ್ರಹವಾಗಿವೆ. ಬೇರೆ ಬೇರೆ ಸಂಗ್ರಹಗಳಲ್ಲಿ ಬಂದ ವಿಜಯದಾಸರು ರಚಿಸಿದ ಉಗಾಭೋಗಗಳನ್ನು ಇಲ್ಲಿ ಒಂದೆಡೆ ಕಲೆಹಾಕಲು ಪ್ರಯತ್ನಿಸಲಾಗಿದೆ. ಪಾಠಾಂತರಕ್ಕಾಗಿ ಶ್ರೀ ವಿಜಯದಾಸರ ಸ್ತೋತ್ರಭಾಗ ಸುಳಾದಿಗಳು (ಸಂ. ಗೋರಬಾಳ ಹನಮಂತರಾವ್) ಮತ್ತು ಶ್ರೀ ಹರಿದಾಸರ ಉಗಾಭೋಗಗಳು (ಸಂ.ಹರಿದಾಸರತ್ನಂ ಶ್ರೀ ಗೋಪಾಲದಾಸರು) ಎಂಬ ಎರಡು ಮುದ್ರಿತ ಗ್ರಂಥಗಳನ್ನು ಬಳಸಿಕೊಂಡಿದ್ದಾರೆ. ಪ್ರಾರಂಭದ ಪ್ರಸ್ತಾವನೆಯಲ್ಲಿ ಉಗಾಭೋಗಗಳ ಲಕ್ಷಣ, ವಸ್ತು ಪರಿಚಯ ಮಾಡಿದ್ದರೆ. ಕೊನೆಯಲ್ಲಿ ಲಘು ಟಿಪ್ಪಣಿ. ಕಠಿಣ ಶಬ್ದಾರ್ಥ. ಉಗಾಭೋಗಗಳ ಅಕಾರಾದಿಗಳನ್ನು ಕೊಡಲಾಗಿದೆ. ಪರಿಷ್ಕರಣ ತೃಪ್ತಿಕರವಾಗಿದೆ.

ಶಾಂತಕವಿಗಳ ಮೂರು ಕೀರ್ತನೆಗಳು : ಶಾಂತಕವಿ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಸಕ್ಕರಿ ಬಾಳಾಚಾರ್ಯ ಅವರು ರಚಿಸಿದ ಮೂರು ಕೀರ್ತನಗಳ ಸಂಗ್ರಹವಿದು. ಇದರಲ್ಲಿ ಸೇರಿದ ಕೀರ್ತನೆಗಳೆಂದರೆ ಶ್ರೀ ವಿದ್ಯಾರಣ್ಯ ವಿಜಯಂ (೧೯೧೮), ಶ್ರೀರಾವಣ ವೇದವತಿ (೧೯೧೯) ಮತ್ತು ಶ್ರೀಕೃಷ್ಣ ದಾನಾಮೃತಂ

(೧೯೨೬). ಕೊನೆಯದು ವಾರ್ಧಕಷಟ್ಪದಿಯಲ್ಲಿದ್ದರೆ, ಉಳಿದೆರಡು ಬೇರೆ ಬೇರೆ ಛಂದಸ್ಸಿನಲ್ಲಿ ರಚಿತವಾಗಿದೆ. ಪ್ರಾರಂಭದಲ್ಲಿ ಕವಿಪರಿಚಯ, ಕೃತಿಗಳು, ಕೀರ್ತನೆಗಳ ಸಾರ ಕೊಡಲಾಗಿದೆ ಆಧುನಿಕ ಕವಿಯೊಬ್ಬರ ಕೀರ್ತನಗಳನ್ನು ಪರಿಷ್ಕರಿಸಿ ಸಂಪಾದಿಸಿದುದು ಇಲ್ಲಿನ ವೈಶಿಷ್ಟ್ಯವಾಗಿದೆ. ಇದರ ಸಂಪಾದಕರು ಡಾ. ರಾ. ಯ. ಧಾರವಾಡಕರ.

ಶಿಶುನಾಳ ಶರೀಫರ ತತ್ವಪದಗಳು(ಸಂ.೧): ಅನುಭಾವಿ ಶಿಶುನಾಳ ಶರೀಫರು ಬರೆದ ೩೧ ತತ್ವಪದಗಳು ಇಲ್ಲಿ ಸಂಗ್ರಹವಾಗಿವೆ. ಬೇರೆ ಬೇರೆ ಸಂಕಲನಗಳಲ್ಲಿ ಬಂದ ಹಾಡುಗಳ ಸಹಾಯದಿಂದ ಈ ಹಾಡ ಗಳನ್ನು ಶುದ್ಧವಾಗಿ ಪರಿಷ್ಕರಿಸುವಪ್ರಯತ್ನ ಇಲ್ಲಿ ನಡೆದಿದೆ. ಪ್ರತಿಹಾಡಿಗೂ ಅಡಿಯಲ್ಲಿ ಪಾಠಾಂತರ ಗುರುತಿಸಲಾಗಿದೆ. ಜನಸಾಮಾನ್ಯರಿಗೂ ಅವುಗಳ ಅರ್ಥ ವೇದ್ಯವಾಗಬೇಕೆಂಬ ಉದ್ದೇಶದಿಂದ ವ್ಯಾಖ್ಯಾನವನ್ನು ಬರೆಯಲಾಗಿದೆ.

೪. ಇತರ ಸಂಪಾದನೆಗಳು

ಈ ವಿಭಾಗದಲ್ಲಿ ಹಸ್ತಪ್ರತಿ ಸೂಚಿ, ಕೈಫಿಯತ್ತು, ಐತಿಹಾಸಿಕ ದಾಖಲೆಗಳು, ಯಕ್ಷಗಾನ ಟೀಕೆ ಮೊದಲಾದ ಸಂಪಾದಿತ ಕೃತಿಗಳು ಸೇರುತ್ತವೆ.

ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ (ಸಂ. ೧೨) : ಇದು ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿರುವ ೬೫ ಕೃತಿಗಳ ಸಂಕ್ಷಿಪ್ತ ವಿವರಣೆಯನ್ನೊಳಗೊಂಡ ಕೃತಿ. ಇದರ ಸಂಪಾದಕರು ಡಾ. ಬಿ. ಎಸ್. ಕುಲಕರ್ಣಿ. ಇದರಲ್ಲಿ 'ಅ' ದಿಂದ 'ಹ'ದ ವರೆಗಿನ ಕೃತಿಗಳು ಸೇರಿವೆ. ಸೂಚಿ— ೧. ವಸ್ತು, ೨. ಅಂಕ, ೩. ಆಕಾರ, ೪. ವಿವರ. ೫. ದೊರೆತ ಸ್ಥಳ. ೬. ಕಾಲ. ೭. ಕರ್ತೃ, ೮. ಶೈಲಿ, ೯. ವಿಷಯ, ೧೦. ಆರಂಭ. ೧೧. ಮುಕ್ತಾಯ, ೧೨. ಸಂದರ್ಭ ಮತ್ತು ೧೩. ರಿಮಾರ್ಕ್ಸ್ ಎಂಬ ಹದಿಮೂರು ವಿಭಾಗಗಳಲ್ಲಿ ಒಡೆದುಕೊಂಡಿದೆ. ಒಂದೊಂದು ಕೃತಿಯನ್ನೂ ಈ ವಿಭಾಗಗಳಲ್ಲಿ ಪರಿಚಯಿಸಲಾಗಿದೆ. ಪ್ರಾರಂಭದ ಚಿಕ್ಕ ಇಂಗ್ಲೀಷ ಮತ್ತು ಕನ್ನಡ ಎರಡು ಭಾಷೆಯ ಪೀಠಿಕೆಯಲ್ಲಿ ಸೂಚಿಯ ಸ್ವರೂಪದ ವಿವರಣೆ ಇದೆ. ಇಪ್ಪತ್ತು ವರ್ಷಗಳ ಹಿಂದೆ ಹೊರಬಂದ ಮೊದಲ ಸಂಪುಟದಲ್ಲಿನ ಕ್ರಮವನ್ನೇ ಅನುಸರಿಸಿದ ಈ ಹಳೆಯ ಮಾದರಿಯ ಸೂಚಿಯನ್ನು ಕುರಿತು ಎತ್ತಿ ಹೇಳಬೇಕಾದ ವಿಶೇಷ ಅಂಶಗಳೇನೂ ಇಲ್ಲ,

ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು : ಇದು ಕೆ. ಕುಶಾಲಪ್ಪ ಗೌಡ ಮತ್ತು ಕೆ. ಚಿನ್ನಪ್ಪಗೌಡ ಅವರಿಂದ ಸಂಪಾದಿತವಾಗಿ, ಉಜಿರೆಯ ಧರ್ಮಸ್ಥಳ

ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆಯಲ್ಲಿ ಪ್ರಕಟವಾದ ಒಂದು ಅಪೂರ್ವ ಕೃತಿ. ಕಂಪನಿ ಸರಕಾರದ ಸೈನ್ಯಾಧಿಕಾರಿ ಹಾಗೂ ಎಂಜನೀಯರ್ ಆಗಿದ್ದ ಕರ್ನಲ್ ಮೆಕೆನ್ಸಿ ಅವರ ಸಂಗ್ರಹಗಳಿಂದ ಇವುಗಳನ್ನು ಆಯ್ದುಕೊಳ್ಳಲಾಗಿವೆ. ದಕ್ಷಿಣಕನ್ನಡ ಜಿಲ್ಲೆಯ ಐತಿಹಾಸಿಕ, ಸ್ಥಳಪುರಾಣ ಮತ್ತು ಸಾಂಸ್ಕೃತಿಕ ಅಂಶಾದಿಗಳನ್ನೊಳಗೊಂಡ ವಿವಿಧ ಗಾತ್ರದ ಒಟ್ಟು ೪೧ ಕೈಫಿಯತ್ತುಗಳು ಇಲ್ಲಿ ಸಂಗ್ರಹವಾಗಿವೆ. ಇವುಗಳನ್ನು ಚಾರಿತ್ರಿಕ(೬), ಸ್ಥಳಪುರಾಣ(೧೦), ಸಂಕೀರ್ಣ(೧೭), ಮತ್ತು ಮಠಗಳಿಗೆ ಸಂಬಂಧಿಸಿದ ಕೈಫಿಯತ್ತುಗಳು(೮) ಎಂದು ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಪ್ರಾರಂಭದ ಸುದೀರ್ಘವಾದ ಪ್ರಸ್ತಾವನೆಯಲ್ಲಿ ಕೈಫಿಯತ್ತಿನ ಅರ್ಥವ್ಯಾಪ್ತಿ, ಅವುಗಳನ್ನು ಬರೆಯಿಸಿದವರು, ಬರೆದವರು, ಬರೆದ ಕಾಲ, ಒಂದೊಂದು ಕೈಫಿಯತ್ತುಗಳ ಸಾರಸಂಗ್ರಹ, ವೈಶಿಷ್ಟ್ಯ, ಅವುಗಳಲ್ಲಿ ಬರುವ ಪೌರಾಣಿಕ ಕಥೆಗಳು, ಚಾರಿತ್ರಿಕ ಅಂಶಗಳು, ಜನರ ನಂಬಿಕೆಗಳು, ದೈವಭಕ್ತಿ, ಸಮಾಜ ಚಿತ್ರಣ, ಭಾಷೆಯ ಲಕ್ಷಣ ಇತ್ಯಾದಿ ಸಮಗ್ರ ವಿವೇಚನೆಯನ್ನು ಮಾಡಲಾಗಿದೆ.

ಸಂಪಾದಕರು ಈ ಕೃತಿಯ ಉದ್ದೇಶ ಕುರಿತು "ಮುಖ್ಯವಾಗಿ ಅಧ್ಯಯನಶೀಲರ ಗಮನ ಸೆಳೆಯುವುದು ನಮ್ಮ ಗುರಿ. ಅದಕ್ಕಾಗಿಯೇ ಕೈಫಿಯತ್ತಿನ ಪಾಠಗಳನ್ನು ಇದ್ದಂತೆಯೇ ಕೊಡುವ ಪ್ರಯತ್ನ ಮಾಡಿದ್ದೇವೆ.... ರಳ ಮತ್ತು ಶಕಟರೇಫೆಗಳ ಮೊಳೆಗಳು ಮುದ್ರಣಾಲಯದಲ್ಲಿಲ್ಲದ ಕಾರಣ ಅವುಗಳನ್ನು 'ಳ' ಮತ್ತು 'ರ' ಅಕ್ಷರಗಳ ಕೆಳಗೆ ಒಂದು ಚುಕ್ಕೆ ಹಾಕಿ ನಿರ್ದೇಶಿಸಲಾಗಿದೆ" ಎಂದು ತಿಳಿಸಿದ್ದಾರೆ. ಪ್ರತಿ ಕೈಫಿಯತ್ತಿನ ತಲೆಯ ಮೇಲೆ ಬಲಗಡೆ ಮೆಕೆನ್ಸಿ ಸಂಗ್ರಹದ ಕ್ರಮಾಂಕ ಮತ್ತು ಪುಟ ಸಂಖ್ಯೆಯನ್ನು ಚೌಕಮನೆಯಲ್ಲಿ ಕೊಟ್ಟಿದ್ದಾರೆ.

ಅನುಬಂಧದಲ್ಲಿ ಮಾದರಿಗಾಗಿ ಕುಂದಾಪುರ ಕೈಫಿಯತ್ತಿನ ಮೂಲ ಪ್ರತಿಯ ಒಂದು ಫೋಟೊ ಪ್ರತಿಯನ್ನು ಸೇರಿಸಿದ್ದಾರೆ. ನಂತರ 'ಧರ್ಮಸ್ಥಳ ಕೈಫಿಯತ್ತಿನಿಂದ ತಿಳಿದು ಬರುವಂತೆ' ಎಂಬ ಶೀರ್ಷಿಕೆಯಡಿಯಲ್ಲಿ ಕೈಫಿಯತ್ತುಗಳು ಒದಗಿಸುವ ಧರ್ಮಸ್ಥಳದ ಮಾಹಿತಿಯನ್ನೆಲ್ಲ ಒಂದೆಡೆ ಕಲೆ ಹಾಕಿದ್ದಾರೆ. ಕೈಫಿಯತ್ತುಗಳ ಬಗೆಗೆ ವಿಸ್ತೃತ ವಿವರಣೆಯನ್ನೊಳಗೊಂಡು ಶಾಸ್ತ್ರೀಯವಾಗಿ ಪರಿಷ್ಕರಣಗೊಂಡು ಹೊರಬಂದ ಈ ಕೃತಿ ೧೯೮೫ರ ಉತ್ತಮ ಸಂಪಾದನ ಕೃತಿ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಬಹುಮಾನ ಗಳಿಸಿದುದು ಉಚಿತವಾಗಿದೆ.

ಆದಿಪರ್ವ : ಮಹಾಭಾರತದ ಆದಿಪರ್ವವನ್ನು ಆಧರಿಸಿ ರಚಿತವಾದ ಈ ಯಕ್ಷಗಾನವನ್ನು ಎಂ. ಎ. ಹೆಗಡೆ ಅವರು ಸಂಪಾದಿಸಿದ್ದಾರೆ. ಪಾಂಡುರಾಜನ ಒಡ್ಡೋಲಗದಿಂದ ದ್ರೌಪದಿಯ ಸ್ವಯಂವರದವರೆಗಿನ ಕಥೆ ಇಲ್ಲಿ ಬಂದಿದೆ. ಸು. ೬೦೦

ಪದ್ಯಗಳಲ್ಲಿ ಕೃತಿ ಹಬ್ಬಿದೆ. ವಿವಿಧ ಜಾತಿಯ ಪದ್ಯಗಳಿಂದ ಕೂಡಿದ ಇದರಲ್ಲಿ ವಚನ, ದ್ವಿಪದಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಸಂದಿದೆ. 'ಪಂಚಕ' ಎಂಬ ಹೊಸ ಪದ್ಯ ಜಾತಿಯೊಂದು ಇದರಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡಿದೆ. ಸು.೨೦ ರಾಗಗಳು ಇಲ್ಲಿ ಸಮಾವೇಶಗೊಂಡಿವೆ. ಪ್ರಸ್ತಾವನೆಯಲ್ಲಿ ಸಂಪಾದಕರು ಯಕ್ಷಗಾನ ಸಾಹಿತ್ಯದ ಸ್ಥೂಲ ಪರಿಚಯ–ಈ ಕೃತಿಯ ವಸ್ತು ಮಹತ್ವಗಳನ್ನು ವಿವರಿಸಿದ್ದಾರೆ. ಅನೇಕ ಹೊಸ ಅಂಶಗಳನ್ನು ಒಳಗೊಂಡು, ಯಕ್ಷಗಾನದ ಪ್ರಾಚೀನತೆ, ಇತಿಹಾಸವನ್ನು ಕುರಿತು ಮೌಲಿಕವಾದ ಸಂಗತಿಗಳನ್ನು ಒದಗಿಸುವ ಇದು ಯಕ್ಷಗಾನ ಸಾಹಿತ್ಯ ಕ್ಷೇತ್ರಕ್ಕೆ ಒಂದು ನೂತನ ಕೊಡುಗೆಯಾಗಿದೆ.

ಇದು ನನ್ನ ಗಮನಕ್ಕೆ ಬಂದ ೨೪ ಸಂಪಾದಿತ ಕೃತಿಗಳ ಸಮೀಕ್ಷೆ. ಈ ವರ್ಷದಲ್ಲಿ ಬಂದ ಮರು ಮುದ್ರಣಗಳು, ಸಂಗ್ರಹ ಕೃತಿಗಳು ಹಾಗೂ ಒಟ್ಟು ಸಂಪಾದಿತ ಕೃತಿಗಳ ಒಂದು ಪಟ್ಟಿಯನ್ನು ಅನುಬಂಧದಲ್ಲಿ ಸೇರಿಸಿದ್ದೇನೆ.

೧೯೮೩ರಲ್ಲಿ ಬಂದ ೩೭ ಸಂಪಾದನ ಕೃತಿಗಳಲ್ಲಿ ಹತ್ತಾರು ಸಾಧಾರಣವಾಗಿದ್ದರೂ ನಾಲ್ಕಾರು ಕೃತಿಗಳು ನುರಿತ ಸಂಪಾದಕರಿಂದ ಶಾಸ್ತ್ರ ಶುದ್ಧವಾಗಿ ಪರಿಷ್ಕರಣಗೊಂಡು ಹೊರಬಂದಿರುವುದು ಸಂತಸದ ಸಂಗತಿಯಾಗಿದೆ. ಇಂದಿನ ಸಂಪಾದನೆಗಳಲ್ಲಿ ಶಾಸ್ತ್ರಶುದ್ಧತೆ, ಶ್ರದ್ಧೆ, ಸಂಯಮ, ಪರಿಶ್ರಮ, ಜವಾಬ್ದಾರಿ ಹಾಗೂ ಅಚ್ಚುಕಟ್ಟುತನ ಹೆಚ್ಚಾಗಿ ಕಾಣದುದಕ್ಕೆ, ಈ ಶಾಸ್ತ್ರದ ಬಗೆಗೆ ನಮ್ಮ ವಿದ್ವಾಂಸರು ತೋರುತ್ತಿರುವ ಹಗುರಾದ ಭಾವನೆಯೇ ಕಾರಣವಾಗಿದೆ.

ಅನುಬಂಧ

೧೯೮೩ರಲ್ಲಿ ಪ್ರಕಟವಾದ ಸಂಪಾದಿತ ಕೃತಿಗಳ ವಿವರ :

ಕಾವ್ಯಸಂಪಾದನೆಗಳು :

೧. ನೃಪತುಂಗದೇವಾನುಮತಂ ಶ್ರೀ ವಿಜಯ ಪ್ರಭೂತಂ ಕವಿರಾಜ ಮಾರ್ಗಂ : ಸಂ. ಡಾ. ಕೆ. ಕೃಷ್ಣಮೂರ್ತಿ, ಪ್ರ. ಐ. ಬಿ. ಎಚ್. ಪ್ರಕಾಶನ, ಬೆಂಗಳೂರು –೯, (ಮರುಪರಿಷ್ಕರಣ)

೨. ಚಾವುಂಡರಾಯ ಪುರಾಣಂ : ಸಂ. ಕಮಲಾ ಹಂಪನಾ ಮತ್ತು ಕೆ. ಆರ್. ಶೇಷಗಿರಿ, ಪ್ರ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮. (ಮರು ಪರಿಷ್ಕರಣ)

೩. ರಸಿಕಚಕ್ರಿ ಹರಿಹರದೇವನ ಶಿವಶರಣರ ನಾಲ್ಕು ರಗಳೆಗಳು : ಸಂ. ಡಾ. ಎಸ್. ಜಿ. ಛಿವಾರಿ ಮತ್ತು ರಾಮಕೃಷ್ಣ ಮರಾಠೆ. ಪ್ರ. ಕೊಟ್ಟೂರೇಶ್ವರ ಮಠ. ಹೊಸಪೇಟೆ. (ಮರುಪರಿಷ್ಕರಣ, ಜನಪ್ರಿಯ ಆವೃತ್ತಿ)

೪. ರಸಿಕಚಕ್ರಿ ಹರಿಹರದೇವನ ಶಿವಶರಣರ ನಾಲ್ಕು ರಗಳೆಗಳು : ಸಂ. ಪಂ. ನಾಗಭೂಷಣಶಾಸ್ತ್ರಿ ಮತ್ತು ನೀಲಗಿರಿ ತಳವಾರ. ಪ್ರ. ಕೊಟ್ಟೂರೇಶ್ವರ ಮಠ, ಹೊಸಪೇಟೆ, (ಮರುಪರಿಷ್ಕರಣ, ಜನಪ್ರಿಯ ಆವೃತ್ತಿ)

೫. ಕಮಲಭವಕವಿಯ ಶ್ರೀ ಶಾಂತೀಶ್ವರ ಪುರಾಣಂ. ಅನು ಆರ್. ವ್ಹಿ. ಕುಲಕರ್ಣಿ ಪ್ರ. ಕನ್ನಡಸಾಹಿತ್ಯ ಪರಿಷತ್ತು ಬೆಂಗಳೂರು-೧೮. (ಗದ್ಯಾನುವಾದ)

೬. ಮಲ್ಲಿಕಾರ್ಜುನ ಕವಿಯ ಶ್ರೀಗಂಗಾಪುರಾಣ : ಸಂ. ವಾಯ್ ಜಿ. ಸುಣಗಾರ ಪ್ರ ಶ್ರೀ ಗಂಗಾಪರಮೇಶ್ವರ ಪ್ರಕಾಶನ ಸಾಧನಕೇರಿ, ಧಾರವಾಡ. (ಪ್ರಥಮ ಪರಿಷ್ಕರಣ)

೭. ಸಿದ್ಧಕವಿಯ ಸಿರುಮಣನಾಯಕನ ಸಾಂಗತ್ಯ : ಸಂ.ಡಾ.ಎಂ.ಎಂ. ಕಲಬುರ್ಗಿ ಪ್ರ. ವೀರಶೈವ ಅಧ್ಯಯನ ಸಂಸ್ಥೆ ಜಗದ್ಗುರು ತೋಂಟದಾರ್ಯಮಠ ಗದಗ. (ಪ್ರಥಮ ಪರಿಷ್ಕರಣ)

೮. ಕರಿಸಿದ್ಧೇಂದ್ರ ಮತ್ತು ನನ್ನಪ್ಪದೇವ ವಿರಚಿತ ನವಮುಗ್ಧಲೀಲೆ : ಸಂ. ಎನ್. ಬಸವಾರಾಧ್ಯ. ಪ್ರ ಕನ್ನಡ ಅಧ್ಯಯನಸಂಸ್ಥೆ ಮಾನಸಗಂಗೋತ್ರಿ ಮೈಸೂರು. (ಪ್ರಥಮ ಪರಿಷ್ಕರಣ)

೯. ತಿಮ್ಮಪ್ಪದಾಸ ವಿರಚಿತ ಧ್ರುವಚರಿತೆ: ಸಂ. ಲಕ್ಷ್ಮೀನಾರಾಯಣ ಭಟ್ ಪ್ರ. ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು-೧೯. (ಪ್ರಥಮ ಪರಿಷ್ಕರಣ)

೧೦. ಅಳಿಯಲಿಂಗರಾಜ ವಿರಚಿತ ಗಿರಿಜಾ ಕಲ್ಯಾಣಗಳು : ಸಂ.ಜಿ.ಜಿ. ಮಂಜುನಾಥ ಪ್ರ. ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು (ಪ್ರ.ಪರಿಷ್ಕರಣ)

೧೧. ಜನ್ನನ ಯಶೋಧರಚರಿತೆ: ಸಂ. ಕ. ವೆಂ. ರಾಘವಾಚಾರ್ ಪ್ರ. ಉಷಾ ಸಾಹಿತ್ಯಮಾಲೆ ಮೈಸೂರು. (ಮರುಮುದ್ರಣ)

ವಚನ–ಸ್ವರವಚನ ಸಂಪಾದನೆಗಳು :

೧೨. ಚೆನ್ನಬಸವಣ್ಣನ ವಚನೈಕೋತ್ತರಶತಸ್ಥಲ : ಸಂ. ಜಿ. ವಿ. ಶಿವಲಿಂಗಯ್ಯ. ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯಮಠ ಗದಗ. (ಪ್ರಥಮ ಪರಿಷ್ಕರಣ)

೧೩. ಅದ್ವೈತಾನಂದರ ವಚನಗಳನು : ಸಂ. ಡಾ.ಬಿ. ಆರ್. ಹಿರೇಮಠ. ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯಮಠ ಗದಗ. (ಪ್ರಥಮ ಪರಿಷ್ಕರಣ)

೧೪. ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು : ಸಂ. ಡಾ. ವೀರಣ್ಣ ರಾಜೂರ. ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯಮಠ ಗದಗ. (ಪ್ರಥಮ ಪರಿಷ್ಕರಣ)

೧೫. ತೋಂಟದ ಸಿದ್ಧಲಿಂಗೇಶ್ವರರ ಷಟ್‌ಸ್ಥಲ ಜ್ಞಾನಸಾರಾಮೃತ: ಸಂ.ಡಾ.ಆರ್. ಸಿ. ಹಿರೇಮಠ, ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯಮಠ ಗದಗ. (ಮರುಮುದ್ರಣ ಜನಪ್ರಿಯ ಆವೃತ್ತಿ)

೧೬. ವಚನ ಕಮ್ಮಟ : ಸಂ.ಕೆ. ಮರುಳಸಿದ್ದಪ್ಪ ಮತ್ತು ಕಿ.ರಂ. ನಾಗರಾಜ. ಪ್ರ. ವಿಶ್ವಕನ್ನಡ ಸಮ್ಮೇಲನ ಸಾಹಿತ್ಯಮಾಲೆ-೯೮, ಕರ್ನಾಟಕ ಸರಕಾರ ಬೆಂಗಳೂರು. (ಆಯ್ದ ಸಂಕಲನ, ಜನಪ್ರಿಯ ಆವೃತ್ತಿ)

೧೭. ಶರಣರ ನೂರೊಂದು ವಚನಗಳು: ಸಂ. ಡಾ. ಪ್ರಭುಶಂಕರ. ಪ್ರ. ನಿವೇದಿತಾ ಪ್ರಕಾಶನ ಆರ್-೪. ಮಾನಸಗಂಗೋತ್ರಿ ಮೈಸೂರು-೬ (ಆಯ್ದ ಸಂಕಲನ)

೧೮. ಹಾಲತೊರೆಗೆ ಬೆಲ್ಲದ ಕೆಸರು:ಸಂ. ಬಸವರಾಜ ಕಟ್ಟೀಮನಿ. ಪ್ರ. ಸಾಹಿತ್ಯಶ್ರೀ ಧಾರವಾಡ-೩. (ಆಯ್ದ ಸಂಕಲನ, ಜನಪ್ರಿಯ ಆವೃತ್ತಿ)

೧೯. ಬಸವ ವಚನಪ್ರಭೆ : ಸಂ. ಹ. ದೇ. ಚಂದನದೌಡ. ಪ್ರ. ಬಸವತತ್ವ ಪ್ರಚಾರ ಸಂಸ್ಥೆ, ನೆಹರೂ ಮಾರ್ಕೆಟ್ ಧಾರವಾಡ ೫೮೦೦೦೧. (ಸಂಗ್ರಹ)

೨೦. ಕೂಡಲೂರ ಬಸವಲಿಂಗ ಶರಣರ ಸ್ವರವಚನಗಳು: ಸಂ. ಶಾಂತರಸ. ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯಮಠ ಗದಗ. (ಪ್ರಥಮ ಪರಿಷ್ಕರಣ)

೨೧. ಜಿಗುನಿ ಮರುಳದೇವರ ಕೃತಿಗಳು: ಸಂ. ಡಾ. ಎಸ್. ವಿದ್ಯಾಶಂಕರ ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯಮಠ ಗದಗ (ಪ್ರಥಮ ಪರಿಷ್ಕರಣ)

ಕೀರ್ತನೆ, ಉಗಾಭೋಗ, ತತ್ವಪದ ಸಂಪಾದನೆಗಳು :

೨೨. ಹರಿಭಕ್ತಿ ವಾಹಿನಿ: ಸಂ. ಡಾ. ಜಿ. ವರದರಾಜರಾವ ಪ್ರ. ಪ್ರಥಮ ವಿಶ್ವಕನ್ನಡ ಸಮ್ಮೇಲನ ಸಾಹಿತ್ಯ ಮಾಲೆ-೭೫. ಕರ್ನಾಟಕ ಸರಕಾರ ಬೆಂಗಳೂರು. (ಆಯ್ದ ಸಂಕಲನ)

೨೩. ಪುರಂದರದಾಸರ ಪದಗಳು : ಸಂ. ವಸಂತ ಕುಷ್ಟಗಿ ಮತ್ತು ಮಂದಾಕಿನಿ ಬಾಯಿ ಪ್ರ. ಶ್ರೀ ಬತ್ತಲೇಶ್ವರ ಪ್ರಕಾಶನ. ಕಲಬುರಗಿ. (ಮರುಪರಿಷ್ಕರಣ)

೨೪. ಶ್ರೀ ವಿಜಯದಾಸರ ಉಗಾಭೋಗಗಳು : ಸಂ. ಕೆ. ಗೋಕುಲನಾಥ. ಪ್ರ. ಸಿಂಧುಶಯನ ಪ್ರಕಾಶನ. ಬೆಂಗಳೂರು-೧೦. (ಮರುಪರಿಷ್ಕರಣ)

೨೫. ವ್ಯಾಸರಾಯರ ಹಾಡುಗಳು : ಸಂ. ಕಾವ್ಯಪ್ರೇಮಿ: ಪ್ರ. ಸಮಾಜ ಪುಸ್ತಕಾಲಯ ಧಾರವಾಡ. (ದ್ವಿತೀಯ ಮುದ್ರಣ)

೨೬. ವಾದಿರಾಜರ ಹಾಡುಗಳು : ಸಂ. ಕಾವ್ಯಪ್ರೇಮಿ ಪ್ರ. ಸಮಾಜ ಪುಸ್ತಕಾಲಯ ಧಾರವಾಡ (ದ್ವಿತೀಯ ಮುದ್ರಣ)
೨೭. ಶಾಂತಕವಿಗಳ ಮೂರು ಕೀರ್ತನಗಳು : ಸಂ. ಡಾ. ರಾ. ಯ. ಧಾರವಾಡಕರ. ಪ್ರ. ಸತ್ಯದೀಪ ಸಾರಸ್ವತಪುರ ಧಾರವಾಡ. (ಪ್ರಥಮ ಪರಿಷ್ಕರಣ)
೨೮. ಶಿಶುನಾಳ ಶರೀಫರ ತತ್ವಪದಗಳು : ಸಂ. ಡಾ. ಮಲ್ಲಿಕಾರ್ಜುನ ಸಿಂದಗಿ ಪ್ರ. ಶರೀಫ ಶಿವಯೋಗಿ ಪ್ರಕಾಶನ ವಿದ್ಯಾನಗರ, ಹುಬ್ಬಳ್ಳಿ. (ಮರು ಪರಿಷ್ಕರಣ)
೨೯. ನಿತ್ಯಾನಂದರ ತತ್ವಪದಗಳು : ಲಿಂಗಾರೆಡ್ಡಿ ಶೇರಿ.
೩೦. ಸಿರಗಾಪುರ ಬಂಡೆಪ್ಪ ಕವಿಯ ಭಜನೆಯ ಪದಗಳು : ಸಂ. ಡಾ. ಎಂ. ಎಸ್. ಲಠ್ಠೆ.
೩೧. ಸ್ತೋತ್ರ ರತ್ನಮಾಲೆ : ಸಂ. ಸರ್ವಮಂಗಳಾ. ಪ್ರ. ಪ್ರವೀಣ ಪ್ರಕಾಶನ ೮೬, ೧ನೆಯ ಬ್ಲಾಕ್ ಪೂರ್ವ ಜಯನಗರ ಬೆಂಗಳೂರು-೧೧. (ಆಯ್ದ ಸಂಕಲನ)

ಇತರ ಸಂಪಾದನೆಗಳು :

೩೨. ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ : ಸಂ. ಡಾ. ಬಿ. ಎಸ್. ಕುಲಕರ್ಣಿ. ಪ್ರ. ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. (ಪ್ರಥಮ ಪರಿಷ್ಕರಣ)
೩೩. ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಯುತ್ತುಗಳು : ಸಂ. ಡಾ. ಕೆ. ಕುಶಾಲಪ್ಪಗೌಡ ಮತ್ತು ಕೆ. ಚಿನ್ನಪ್ಪಗೌಡ. ಪ್ರ. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ (ದ. ಕ.) (ಪ್ರಥಮ ಪರಿಷ್ಕರಣ)
೩೪. ಶ್ರೀ ಕೃಷ್ಣದೇವರಾಯನ ದಿನ : ಸಂ. ವ್ಹಿ. ಎಸ್. ಎಸ್. ಆಚಾರ್.
೩೫. ಆದಿಪರ್ವ (ಯಕ್ಷಗಾನ) : ಸಂ. ಎಂ. ಎ. ಹೆಗಡೆ.
೩೬. ಬಾರಸ ಅಣುವೆಕ್ಖ (ಅಜ್ಞಾತ ಟೀಕೆ) : ಸಂ. ಎಂ. ಡಿ. ವೇದಾಂತರಾಜಯ್ಯ.
೩೭. ಗುರುಕರುಣ ತ್ರಿವಿಧಿ : ಸಂ. ಡಾ. ಎಂ. ಎಸ್. ಸುಂಕಾಪುರ.

೧೯೮೩ರ ಶಾಸ್ತ್ರಕೃತಿಗಳು

● ಜಿ. ಎಂ. ಹೆಗಡೆ

ಸೃಜನಸಾಹಿತ್ಯ ನಮ್ಮ ಮನಸ್ಸಿಗೆ ರಸಾನಂದವನ್ನು ಒದಗಿಸುವಂತೆ ಶಾಸ್ತ್ರ ಕೃತಿಗಳು ನಮ್ಮ ಬುದ್ಧಿಗೆ ಬೆಳಕನ್ನು ನೀಡುತ್ತವೆ. ಕನ್ನಡದಲ್ಲಿ ಪ್ರತಿವರ್ಷವೂ ಪ್ರಕಟವಾಗುವ ಗ್ರಂಥ ಸಮುದಾಯದಲ್ಲಿ ಶಾಸ್ತ್ರ ಕೃತಿಗಳ ಸಂಖ್ಯೆ ಸಣ್ಣದಾದರೂ ಅಲಕ್ಷಿಸುವಂಥದೇನಲ್ಲ. ವಿಮರ್ಶಾಶಾಸ್ತ್ರ, ಕಾವ್ಯಮೀಮಾಂಸೆ, ಛಂದಸ್ಸು, ಅಲಂಕಾರ ಶಾಸ್ತ್ರ, ವ್ಯಾಕರಣ, ನಿಘಂಟು, ವಿಶ್ವಕೋಶ, ಸೂಚಿಕೋಶ, ಪದ ಪ್ರಯೋಗ ಕೋಶ, ಭಾಷಾಶಾಸ್ತ್ರ ಮೊದಲಾದ ವಿಭಾಗಕ್ಕೆ ಸೇರುವ ಗ್ರಂಥಗಳನ್ನು ಶಾಸ್ತ್ರಕೃತಿಗಳೆಂದು ಕರೆಯಬಹುದಾಗಿದೆ.

ಕನ್ನಡ ಸಾಹಿತ್ಯದಲ್ಲಿ ಸೃಜನಸಾಹಿತ್ಯದ ಪ್ರಮಾಣದಲ್ಲಿ ಶಾಸ್ತ್ರಕೃತಿಗಳು ಪ್ರತಿವರ್ಷ ಪ್ರಕಟವಾಗದಿರುವುದನ್ನು ಒಪ್ಪಿಕೊಳ್ಳಬಹುದಾದರೂ ಇದಕ್ಕೆ ನಮ್ಮ ಲೇಖಕ ಲೋಕ, ವಾಚಕವರ್ಗ ಹಾಗೂ ಪ್ರಕಾಶಕರ ಸಾಹಸ ಪ್ರವೃತ್ತಿಯ ಅಭಾವ—ಹೀಗೆ ಇನ್ನೂ ಅನೇಕ ಕಾರಣಗಳಿವೆ. ನಮ್ಮ ವಾಚಕ ವರ್ಗವನ್ನು ತೃಪ್ತಿಪಡಿಸಬೇಕೆನ್ನುವ ಆಕಾಂಕ್ಷೆಯಿಂದ ಸೃಜನ ಸಾಹಿತ್ಯದ ನಿರ್ಮಿತಿಯಲ್ಲಿ ನಮ್ಮ ಲೇಖಕಲೋಕ ಪ್ರವೃತ್ತವಾಗಿದೆ. ನಮ್ಮ ವಾಚಕ ವರ್ಗದಲ್ಲಿ ತಕ್ಕಮಟ್ಟಿಗೆ ಮಾತ್ರ ವಿದ್ಯಾಭ್ಯಾಸ ಮಾಡಿಕೊಂಡವರು ವಿಪುಲ. ವಿದ್ವತ್‌ಪೂರ್ಣ ಬರಹಗಳನ್ನಾಗಲೀ ಪಂಡಿತಮಾನ್ಯ ಕೃತಿಗಳನ್ನಾಗಲೀ ಅವಲೋಕನ ಮಾಡಿ ಜ್ಞಾನಕ್ಷೇತ್ರದ ವೈಶಾಲ್ಯವನ್ನು ಪರಿಚಯ ಮಾಡಿಕೊಳ್ಳುವದು ವಾಚಕಲೋಕದಲ್ಲಿ ಪ್ರಮುಖ ಪ್ರವೃತ್ತಿಯಾಗಿ ಬೆಳೆದಿಲ್ಲ. ಇಂತಹ ಸನ್ನಿವೇಶದಲ್ಲಿ ಕೆಲವು ವಿದ್ವಾಂಸರು ಶಾಸ್ತ್ರ ಕೃತಿಗಳನ್ನು ಪ್ರಕಟಿಸಿರುವುದು ಮಹತ್ತ್ವದ್ದಾಗಿದೆ. ಇಂಥ ಶಾಸ್ತ್ರ ಕೃತಿಗಳ ಅಚ್ಚು ಹಾಕಿಸುವ ಕಾರ್ಯವನ್ನು ವಿಶ್ವವಿದ್ಯಾಲಯವಾಗಲಿ, ದೊಡ್ಡ ಸಂಸ್ಥೆಯಾಗಲಿ ಮಾಡುತ್ತ ಬಂದಿವೆ. ಖಾಸಗಿ ಪ್ರಕಾಶಕರು ಸೃಜನ ಸಾಹಿತ್ಯದ ಪ್ರಕಟಣೆಗೆ ನೀಡಿದ ಮಹತ್ವವನ್ನು ಶಾಸ್ತ್ರಕೃತಿಗಳಿಗೆ ನೀಡದೆ ಇರುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ.

ಶಾಸ್ತ್ರಕೃತಿಗಳನ್ನು ಹೊರತರುವ ಯೋಜನೆಯನ್ನು ಒಂದು ಸಂಸ್ಥೆ ಹಾಕಿಕೊಂಡಾಗ ಅಲ್ಲಿ ಸಾಮೂಹಿಕ ಪ್ರಯತ್ನವಿರುತ್ತದೆ. ಇದಕ್ಕೆ ವಿರುದ್ಧವಾಗಿ ವೈಯ

ಕ್ತಿಕ ಸಾಧನೆಯು ಶಾಸ್ತ್ರಗ್ರಂಥಗಳೂ ಒಪ್ಪಿಗೆಯಾಗುವುದುಂಟು. ಇವುಗಳಲ್ಲಿ ವೈಯು ಕ್ತಿಕ ಸಾಧನೆಯೇ ಪ್ರಮುಖವಾಗಿ ಕಾಣುತ್ತದೆ—೧೯೮೩ರ ಶಾಸ್ತ್ರಕೃತಿಗಳಲ್ಲಿ.

೧೯೮೩ ರ ಶಾಸ್ತ್ರಕೃತಿಗಳನ್ನು ಈ ಕೆಳಗಿನಂತೆ ವರ್ಗೀಕರಿಸಿ ವಿವೇಚಿಸಬಹು ದಾಗಿದೆ: ೧) ವಿಮರ್ಶಾಶಾಸ್ತ್ರ ೨) ಕಾವ್ಯಮೀಮಾಂಸೆ ೩) ನಿಘಂಟುಗಳು ೪) ವಿಶ್ವಕೋಶ ೫) ಸೂಚಿಕೋಶ ೬) ಪದಪ್ರಯೋಗಕೋಶ ೭) ಭಾಷೆ–ವ್ಯಾಕರಣ ಗ್ರಂಥಗಳು.

ಓ.ಎಲ್. ನಾಗಭೂಷಣಸ್ವಾಮಿ : **ವಿಮರ್ಶೆಯ ಪರಿಭಾಷೆ**, ಪರಿಸರ ಸಾಹಿತ್ಯ ಪ್ರಕಾಶನ. ಶಿವಮೊಗ್ಗ.

ಹೊಸಗನ್ನಡದಲ್ಲಿ ವಿಮರ್ಶೆಯ ಪ್ರಕಾರ ಬೆಳೆಯಬೇಕಾದ ಸಂದರ್ಭದಲ್ಲಿ ಬಳಸಬೇಕಾದ ಪದಗಳ ಅರ್ಥವ್ಯಾಪ್ತಿ, ನಿಶ್ಚಿತಜ್ಞಾನ ವಿಮರ್ಶಕನಿಗಿರಬೇಕಾದುದು ಅತ್ಯಗತ್ಯ. ಕೃತಿಯ ಅಂತಃಸತ್ವವನ್ನು ಸಹೃದಯನಿಗೆ ಒದಗಿಸಬೇಕಾದ ಗುರುತರ ಜವಾಬ್ದಾರಿ ಇರುವ ವಿಮರ್ಶಕನಿಗೆ ವಿಮರ್ಶಾಶಾಸ್ತ್ರದ ಪರಿಜ್ಞಾನ ಮತ್ತು ಪಾರಿ ಭಾಷಿಕ ಪದಗಳ ಐತಿಹಾಸಿಕ ಅರ್ಥಜ್ಞಾನವಿದ್ದರೆ ಅವನ ವಿಮರ್ಶೆ ಸಾಹಿತ್ಯದಲ್ಲಿ ಸಮಪ್ರಮಾಣವನ್ನು ಸಾಧಿಸಬಲ್ಲುದಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ವಿಮರ್ಶಕ ಲೋಕಕ್ಕೆ ಪಾರಿಭಾಷಿಕ ಪದಗಳ ಐತಿಹಾಸಿಕ ಮತ್ತು ಸಾಹಿತ್ಯಿಕ ಅರ್ಥಜ್ಞಾನವನ್ನು ವಿವರಣಾತ್ಮಕವಾಗಿ ಒದಗಿಸುವ ಸದುದ್ದೇಶದಿಂದ ಮೂಡಿಬಂದ ಕೃತಿಯಿದು. ಓ.ಎಲ್. ನಾಗಭೂಷಣಸ್ವಾಮಿಯವರು ಇಂಗ್ಲೀಷ್. ಸಂಸ್ಕೃತ ಮತ್ತು ಕನ್ನಡದ ಅಂದರೆ ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯ ಪರಂಪರೆಯ ಆಳವಾದ ಅಧ್ಯ ಯನ ಮಾಡಿದವರು. ಅವರು ವಿಮರ್ಶಾಶಾಸ್ತ್ರದಲ್ಲಿ ಬಳಸಲ್ಪಡುವ ನೂರಾರು ಪದ ಗಳನ್ನು ಆಯ್ಕೆ ಮಾಡಿಕೊಂಡು ಅವುಗಳ ಅರ್ಥವ್ಯಾಪ್ತಿ, ಐತಿಹಾಸಿಕಹಿನ್ನೆಲೆ. ಸಾಹಿತ್ಯ ಚರಿತ್ರೆಯಲ್ಲಿ ಅದರ ಸ್ಥಾನ, ಬದಲಾವಣೆ, ಅನ್ವಯಿಕ ಸಂದರ್ಭದಲ್ಲಿ ಅದು ನೀಡುವ ನೀಡಬೇಕಾದ ಅರ್ಥರೀತಿಯ ನೆಲೆಗಳನ್ನು ಅತ್ಯಂತ ನಿಖರವಾಗಿ ನಿರ್ದೇಶಿ ಸುವ ಹೊಸಬಗೆಯ ಪ್ರಯತ್ನವಿದು. ಕೆ.ವಿ. ನಾರಾಯಣ ಮತ್ತು ಜಿ.ಎಸ್. ಶಿವ ರುದ್ರಪ್ಪನವರ 'ಕಾವ್ಯಾರ್ಥಪದಕೋಶ'ದ ನಂತರ ಬಂದ ಈ ಕೃತಿಯಲ್ಲಿ ವ್ಯಾಪಕ ಅಧ್ಯಯನ ಮತ್ತು ವಿಚಾರ ವಿಶ್ಲೇಷಣೆ ಇದೆ. ಇವರು ನಾವು ಈಗ ವಿಮರ್ಶಾ ಮೀಮಾಂಸೆಯಲ್ಲಿ ಬಳಸುವ ಇಂಗ್ಲೀಷ್, ಸಂಸ್ಕೃತ ಮತ್ತು ಕನ್ನಡ ವಿಮರ್ಶೆಯಲ್ಲಿ ಬಳಸುವ ಶಬ್ದಗಳನ್ನು ಪ್ರಮುಖವಾಗಿ ಆಯ್ಕೆಮಾಡಿಕೊಂಡಿದ್ದಾರೆ. ಪದಗಳ ಆಯ್ಕೆಗೆ ಇರುವ ಮಾನದಂಡವನ್ನು ನಿಶ್ಚಿತವಾಗಿ ಹೇಳಲಾಗದಷ್ಟು ಸಂಕೀರ್ಣವಾಗಿ ರುವ ಈ ಕ್ಷೇತ್ರದಲ್ಲಿ ಇವರ ಆಯ್ಕೆಯ ವಿಚಾರದಲ್ಲಿ ಎರಡು ಮಾತಿಲ್ಲ. ಭಾರತೀಯ

ಕಾವ್ಯಶಾಸ್ತ್ರದಲ್ಲಿ ಬರುವ ಪದಗಳಿಗೆ ಭಾರತೀಯವಾದ ಅರ್ಥವ್ಯಾಪ್ತಿಯನ್ನು ನೀಡುತ್ತಾರೆ. ಉದಾ: ರಸವದಲಂಕಾರ, ಉತ್ಪ್ರೇಕ್ಷೆ. ಉಪಮೆ ಇತ್ಯಾದಿ. ಪಾಶ್ಚಾತ್ಯ ಸಾಹಿತ್ಯಪರಂಪರೆಯ ಪದಗಳನ್ನು ಐತಿಹಾಸಿಕ ಹಿನ್ನೆಲೆಯಿಂದಲೇ ಪರಿಚಯಿಸುತ್ತಾರೆ. ಉದಾ: ರೊಮ್ಯಾಂಟಿಕ್ ಮತ್ತು ಅನುಕರಣದ ಬಗೆಗೆ ಇವರು ನೀಡುವ ವಿಸ್ತಾರ ವಿವರಣೆ ಆಯಾ ಸಾಹಿತ್ಯಶಾಸ್ತ್ರದ ವ್ಯಾಪಕ ಅಧ್ಯಯನದ ದ್ಯೋತಕ. ಕೆಲವೊಮ್ಮೆ ಲೇಖಕರು ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯಶಾಸ್ತ್ರದಲ್ಲಿ ಆಯಾ ಪದಗಳ ಅರ್ಥಬೆಳವಣಿಗೆ ನಿರ್ದೇಶಿಸುತ್ತ ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಬಂದ ವಿಮರ್ಶನ ವಿಚಾರಗಳ ಕಡೆಗೆ ಗಮನ ಸೆಳೆದು ನಮ್ಮ ಅಧ್ಯಯನ ಕ್ಷೇತ್ರದ ವೈಶಾಲ್ಯವನ್ನೂ ಹೆಚ್ಚಿಸುತ್ತಾರೆ. ಇದಕ್ಕೆ ಅನುಕರಣ ಮತ್ತು ಪ್ರತಿಭೆ ಪದಗಳ ಬಗೆಗಿನ ವಿವೇಚನೆ ನಿದರ್ಶನಗಳಾಗಿವೆ. ಜಾನಪದ ಮತ್ತು ಛಂದಸ್ಸಿಗೆ ಸಂಬಂಧಿಸಿದಂತೆ ವಿವರಗಳು ಇಲ್ಲಿ ಇರುವದಿಲ್ಲವೆಂದು ಲೇಖಕರು ವಿನಯದಿಂದ ಹೇಳಿದ್ದಾರೆ. ಇವರು ಇಂಗ್ಲೀಷಿನ ಪದಗಳ ಕನ್ನಡೀಕರಣ ಮಾಡುವಲ್ಲಿ ಆದಷ್ಟು ಕಾಳಜಿ ವಹಿಸಿದ್ದಾರೆ. ಸಂಭಾವ್ಯ (Probable) ಸಹಜ (Natural)ವೈಯಕ್ತಿಕ ವಾಸ್ತವಿಕತೆ(Individual reality) ಪ್ರತಿಭೆ (Genius) ಎಂಬಂತಹ ಇಂಗ್ಲೀಷಿಗೆ ತಕ್ಕ ಸಮಾನ ಪದಗಳನ್ನು ಬಳಸಿರುವದು ಸಮರ್ಪಕ ಆದರೂ ಸಂದೇಹ ಬರದಿರಲೆಂದು ಇಂಗ್ಲೀಷನಲ್ಲೆ ಪದಗಳನ್ನು ಮುದ್ರಿಸಲಾಗಿದೆ. ಇದು ಉಪಯುಕ್ತಕರವಾಗಿದೆ. ಒಟ್ಟಿನಲ್ಲಿ ವಿಮರ್ಶೆಯ ಪದಗಳ ಪರಿಭಾಷೆಯ ಜೊತೆಗೆ ಆಯಾ ಪದಗಳಿಗೆ ಸಂಬಂಧಿಸಿ ನಾವು ಓದಬೇಕಾದ ಹೆಚ್ಚಿನ ಸಾಹಿತ್ಯಸೂಚಿ ಈ ಗ್ರಂಥದ ಮೂಲಕ ದೊರಕುವದರಿಂದ ಕನ್ನಡದಲ್ಲಿ ಬರಬೇಕಾದ ಅವಶ್ಯಗ್ರಂಥಗಳಲ್ಲಿ ಇದೂ ಒಂದಾಗಿದೆ. ಸುಂದರಮುದ್ರಣ ಕೃತಿಗೆ ಮೆರಗು ತಂದಿದೆ. ಓ. ಎಲ್. ನಾಗಭೂಷಣ ಸ್ವಾಮಿಯವರ ವ್ಯಾಪಕ ಸಾಹಿತ್ಯಾನುಸಂಧಾನ ವಿದ್ವಾಂಸರ ಮನಸೆಳೆಯುತ್ತದೆ. ಇದು ನಿಶ್ಚಿತವಾದ ಶಾಸ್ತ್ರ ಪರಿಜ್ಞಾನ ಮತ್ತು ವ್ಯಾಸಂಗದಿಂದ ಮಾತ್ರ ಮೂಡಿಬರಬಹುದಾದ ಗ್ರಂಥಗಳಿಗೆ ಒಂದು ಮಾದರಿಯಾಗಬಲ್ಲುದು ಎಂದು ಹೇಳಬಹುದು. ಡಾ.ಯು. ಆರ್. ಅನಂತಮೂರ್ತಿ ಇವಕ್ಕೆ ಪ್ರಸ್ತಾವನೆ ಬರೆದಿದ್ದಾರೆ.

ಜಿ. ಎಸ್. ಶಿವರುದ್ರಪ್ಪ : **ಕಾವ್ಯಾರ್ಥ ಚಿಂತನ**, ಶಾರದಾ ಪ್ರಕಾಶನ ಬೆಂಗಳೂರು.

ಜಿ. ಎಸ್. ಶಿವರುದ್ರಪ್ಪನವರು ಸೌಂದರ್ಯ ಸಮೀಕ್ಷೆ, ವಿಮರ್ಶೆಯ ಪೂರ್ವ ಪಶ್ಚಿಮ, ಕಾವ್ಯಾರ್ಥಪದಕೋಶ ಮೊದಲಾದ ಗ್ರಂಥಗಳ ಮೂಲಕ ಹೊಸಗನ್ನಡ ಸಾಹಿತ್ಯದಲ್ಲಿ ವಿಮರ್ಶೆ ಮತ್ತು ಕಾವ್ಯಮೀಮಾಂಸೆಯ ಅಧ್ಯಯನಕ್ಕೆ ವ್ಯಾಪಕ ನೆಲೆಯನ್ನು ಹಾಕಿಕೊಟ್ಟಿರುವಂಥವರು. ಸ್ವತಃ ಕವಿಯಾಗಿ ಕಾವ್ಯಶಾಸ್ತ್ರದ ವಿವಿಧ ಪರಿ

ಕರಗಳನ್ನು ಕುರಿತು ಶಾಸ್ತ್ರಚಿಂತನೆ ನಡೆಸುತ್ತ ಬಂದಿರುವ ಶಿವರುದ್ರಪ್ಪನವರ ಹಲವುವರ್ಷಗಳ ಅಧ್ಯಯನದ ಫಲವೇ ಕಾವ್ಯಾರ್ಥಚಿಂತನ. ಇದು ತೌಲನಿಕ ಕಾವ್ಯ ಮೀಮಾಂಸೆಯ ಕೆಲವು ವಿಚಾರಗಳನ್ನು ಕುರಿತ ೧೩ ಲೇಖನಗಳ ಸಂಗ್ರಹವಾಗಿದೆ. ಕಾವ್ಯಮೀಮಾಂಸೆಯ ಗಾಢವಾದ ತಿಳುವಳಿಕೆಯು ಸಮಕಾಲೀನ ಸಾಹಿತ್ಯವಿಮರ್ಶೆಗೆ ಆವಶ್ಯಕವೆಂದು ಪ್ರತಿಪಾದಿಸುವ ಉದ್ದೇಶ ಪ್ರಸ್ತುತ ಕೃತಿಗಿದೆ. ಪ್ರತಿಭೆ; ಸ್ಫೂರ್ತಿ; ವ್ಯುತ್ಪತ್ತಿ ಒಂದು ಪರಿಕಲ್ಪನೆ; ಉಪಮೆ ರೂಪಕ ಪ್ರತಿಮೆ; ರೀತಿಯ ಸ್ವರೂಪ–ಶೈಲಿಯ ಸಮಸ್ಯೆ; ಕವಿಸಮಯ; ವಾಸ್ತವವಾದ ಮತ್ತು ಸ್ವಭಾವೋಕ್ತಿ; ಭರತನ ರಸಸೂತ್ರದ ವಿವರಣೆ; ರಸಾನುಭವ ಮತ್ತು ನೈತಿಕ ನಿಲವುಗಳು : ಅಸಂಭಾವ್ಯತೆ–ನಿಯತಿಕೃತ ನಿಯಮರಾಹಿತ್ಯ; ಕಾವ್ಯಸ್ವರೂಪ; ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಸಾಹಿತ್ಯ ವಿಮರ್ಶೆ ಮತ್ತು ಪಾಶ್ಚಾತ್ಯ ವಿಚಾರಧಾರೆಯಲ್ಲಿ ಬರುವ ಮಾನಸಿಕ ದೂರ ಕೆಲವು ವಿಚಾರ–ಹೀಗೆ ವಿಷಯದ ಹರಹು ಇದೆ. ಶಿವರುದ್ರಪ್ಪನವರು ಭಾರತೀಯ ಕಾವ್ಯಮೀಮಾಂಸೆ ಮತ್ತು ಪಾಶ್ಚಾತ್ಯಕಾವ್ಯಮೀಮಾಂಸೆಯನ್ನು ತೌಲನಿಕವಾಗಿ ಈ ಎಲ್ಲ ವಿಷಯಗಳ ವಿವೇಚನೆಯಲ್ಲಿ ಗುರುತಿಸಿ ವಿಶ್ಲೇಷಿಸಿರುವದು ಮಹತ್ವದ್ದಾಗಿದೆ. ಹೀಗೆ ಮಾಡುವಾಗ ಭಾರತೀಯ ಕಾವ್ಯಪರಂಪರೆಯ ತತ್ವಗಳ ಹಿರಿಮೆಯನ್ನು ಪಾಶ್ಚಾತ್ಯ ತತ್ವಗಳ ಹಿನ್ನೆಲೆಯಲ್ಲಿ ಶಿವರುದ್ರಪ್ಪನವರು ವ್ಯಕ್ತಪಡಿಸಿರುವದು ಅತ್ಯಂತ ಉಚಿತವಾಗಿದೆ. ಪಾಶ್ಚಾತ್ಯವಾದಗಳಿಗೆ ಮನಸೋತ ನಾವು ಭಾರತೀಯ ಸಾಹಿತ್ಯಗಳ ವ್ಯಾಪಕ ಅಧ್ಯಯನ ಮಾಡಬೇಕಾದ ಅಗತ್ಯವನ್ನು ಶಿವರುದ್ರಪ್ಪನವರು ಸೂಚಿಸಿರುವದು ಸಮಕಾಲೀನ ಸಂದರ್ಭದಲ್ಲಿ ಅರ್ಥಪೂರ್ಣವಾಗಿದೆ. ತೌಲನಿಕ ಕಾವ್ಯಮೀಮಾಂಸೆಯ ಅಧ್ಯಯನ ನಡೆಸಿದ ಕುವೆಂಪು, ತೀನಂಶ್ರೀ ಕೆ. ಕೃಷ್ಣಮೂರ್ತಿ ಇವರ ಮಾರ್ಗದಲ್ಲಿ ಕಾವ್ಯಮೀಮಾಂಸೆಯ ಅಧ್ಯಯನವನ್ನು ಮುಂದುವರಿಸಿರುವ ವಿದ್ವಾಂಸರು ಶಿವರುದ್ರಪ್ಪನವರು. ಮೊದಲಿನ ಆಲೋಚಕರಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಕಡೆಗೆ ಹೆಚ್ಚಿನ ಆಸಕ್ತಿ ಇತ್ತು. ಶಿವರುದ್ರಪ್ಪನವರು ಎರಡೂ ಪರಂಪರೆಯನ್ನು ತೌಲನಿಕವಾಗಿ ವಿಶ್ಲೇಷಿಸಿ ತಮ್ಮ ಸ್ವಂತ ಆಲೋಚನೆಯನ್ನೂ ಸೇರಿಸಿದ್ದಾರೆ. ಈವರೆಗೆ ನಡೆದಿರುವ ಕೆಲಸದ ಸಮಾಲೋಚನೆಯೂ ನಮಗೆ ದೊರಕುವದಲ್ಲದೆ ತೌಲನಿಕವಾಗಿ ಅನ್ವೇಷಣೆ ಕೈಕೊಳ್ಳುವಾಗ ನಡೆಸಬೇಕಾದ ವ್ಯಾಸಂಗಸೂಚಿಯೂ ಕಾವ್ಯಾರ್ಥಚಿಂತನದಲ್ಲಿ ನಮಗೆ ದೊರೆಯುತ್ತದೆ. ಭಾರತೀಯ ಸಾಹಿತ್ಯ ಪರಂಪರೆಯ ವಿಚಾರದಲ್ಲಿ ಶಿವರುದ್ರಪ್ಪನವರು ಅವಶ್ಯವಾಗಿ ಆಗಬೇಕಾದ ವಿಚಾರವಿಸ್ತರಣೆಯನ್ನು ಸೂಚಿಸಿದ್ದಾರೆ. ಅರೆಕೊರೆಗಳನ್ನು ಗೆರೆಕೊರೆದು ತೋರಿಸಿದ್ದಾರೆ. "ಸ್ಫೂರ್ತಿ ಎನ್ನುವ ಪದ ನಮ್ಮಲ್ಲಿ ಹೊಳಪು, ಸ್ಪಂದನ, ಅಭಿವ್ಯಕ್ತಿ ಎನ್ನುವ ಅರ್ಥಗಳಲ್ಲಿ ಬಳಕೆಯಲ್ಲಿದ್ದರೂ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಅದು ಪ್ರತಿಭಾ ವ್ಯಾಪಾರಕ್ಕೆ ಸಂಬಂಧಿಸಿದ ಒಂದು ಪಾರಿಭಾಷಿಕ

ಪದವಾಗಿ ಬಳಸಲ್ಪಟ್ಟಿಲ್ಲ" (ಪು೬೭) ಎಂದೂ ಒಂದೆಡೆ ಹೇಳಿದ್ದಾರೆ. ರೀತಿಶೈಲಿಯ ವಿಚಾರದಲ್ಲಿ "ಶೈಲಿಗಳು ಎಷ್ಟು ಎಂದು ಲೆಕ್ಕಹಾಕುವದಾಗಲೀ ಪ್ರಾಚೀನ ಭಾರತೀಯ ಹಾಗೂ ಕೆಲವು ಪಾಶ್ಚಿಮಾತ್ಯ ಆಲಂಕಾರಿಕರಂತೆ ಅವುಗಳು ಎರಡು ಅಥವಾ ಮೂರು ಎಂದು ಹೇಳುವದಾಗಲೀ ಸಮರ್ಪಕವಾದದ್ದೆಂದು ತೋರುವದಿಲ್ಲ. ಯಾಕೆಂದರೆ ಎಷ್ಟು ಬಗೆಯ ಸಮರ್ಥರಾದ ಕವಿಗಳಿದ್ದಾರೋ ಅಷ್ಟೂ ಶೈಲಿಗಳಿರಲೂ ಸಾಧ್ಯ ಎಂಬುದನ್ನು ಗುರುತಿಸಿಕೊಳ್ಳಬೇಕಾಗುತ್ತದೆ" (ಪು ೫೮) ಎಂದು ಸೂಚಿಸುತ್ತಾರೆ. ಇನ್ನೊಂದೆಡೆ "ಧಾರ್ಮಿಕವಾದ ವಸ್ತುವನ್ನು ಆಶ್ರಯಿಸಿ ರಚಿತವಾದ ಕೃತಿಯನ್ನು ಅಳೆಯುವಾಗ ಧಾರ್ಮಿಕವಲ್ಲದ ಕಾವ್ಯವನ್ನು ನಿಷ್ಕರ್ಷಿಸುವ ವಿಮರ್ಶೆಯ ವಿಧಾನಗಳನ್ನು ಅನ್ವಯಿಸಬಾರದು" (ಪು ೨೧೨) ಎಂದು ಎಚ್ಚರಿಕೆ ಕೊಡುತ್ತಾರೆ. ಹೀಗೆ 'ಕಾವ್ಯಾರ್ಥಚಿಂತನ' ದ ತುಂಬ ಶಿವರುದ್ರಪ್ಪನವರ ಕಾವ್ಯಶಾಸ್ತ್ರದ ತೌಲನಿಕಚಿಂತನೆ ವ್ಯಾಪಕವಾಗಿ ತುಂಬಿದೆ. ಅವರು ಕೊಡುವ ದೃಷ್ಟಾಂತಗಳು. ಕನ್ನಡ ಕಾವ್ಯಸಂದರ್ಭದ ಮಾತುಗಳು ಶಾಸ್ತ್ರಪಾಂಡಿತ್ಯಕ್ಕೆ ಸಹೃದಯ ರಸಪಾಕವನ್ನು ತಂದಿರುತ್ತವೆ.

ವೇದದ ಷಡಂಗಗಳಲ್ಲಿ ಒಂದಾದ ನಿರುಕ್ತವು ಪ್ರಾಚೀನ ಕಾಲದಿಂದಲೂ ಶಾಸ್ತ್ರ ಗ್ರಂಥಗಳಲ್ಲಿ ಪ್ರಾಮುಖ್ಯತೆ ಗಳಿಸಿದೆ. ೧೯–೨೦ ನೆಯ ಶತಮಾನದಲ್ಲಿ ವಿಪುಲವಾಗಿ ರಚನೆಗೊಂಡ ನಿಘಂಟುಗಳು ಸತತವಾಗಿ ಪ್ರಕಟಗೊಳ್ಳುತ್ತ ಬಂದಿವೆ. ಕನ್ನಡದಲ್ಲಿ ನಿಘಂಟು ರಚನೆಯ ಸಾಹಸಕಾರ್ಯ ಈ ವರ್ಷವೂ ಮುಂದುವರಿದಿದೆ. ಒಂದು ಭಾಷೆಯಲ್ಲಿರುವ ಸಾಧಾರಣ ಬಳಕೆಯಲ್ಲಿರುವ ಎಲ್ಲ ಪದಗಳನ್ನು ಅರ್ಥ ವಿವರಣೆ ವ್ಯಾಕರಣ ವಿಶ್ಲೇಷಣೆಯೊಡನೆ ಅಕಾರಾದಿಯಾಗಿ ಜೋಡಿಸಿದಾಗ ನಿಘಂಟು ಸಿದ್ಧವಾಗುತ್ತದೆ. ಕೇವಲ ಆಡುಭಾಷೆಯನ್ನೇ ಪರಿಶೀಲಿಸಿ ನಿಘಂಟು ರಚನೆ ಮಾಡುವ ಸಾಹಸಕಾರ್ಯ ೧೯೮೫ನೇ ವರ್ಷದಲ್ಲಿ ನಡೆದಿರುವುದು ಒಂದು ವಿಶೇಷ. ಇದಕ್ಕೆ ಹವ್ಯಕ–ಇಂಗ್ಲೀಷ್ ನಿಘಂಟು ಮತ್ತು ಕೊಡವ-ಕನ್ನಡ ನಿಘಂಟು ನಿದರ್ಶನವಾಗಿವೆ.

'ಹವ್ಯಕ ಇಂಗ್ಲೀಷ್ ನಿಘಂಟು' : ಸಂಪಾದಕರು ಪ್ರೊ. ಎಂ. ಮರಿಯಪ್ಪ ಭಟ್ಟ, ಸಂಪಾದಿಸಿ ಅಚ್ಚಿಗೆ ಅಣಿಗೊಳಿಸಿದವರು ಅವರ ಮಗಳು ಶಾರದಾ ಜಯಗೋವಿಂದ. ಉಡುಪಿಯ ಗೋವಿಂದ ಪೈ ಸ್ಮಾರಕ ಸಂಶೋಧನ ಸಂಸ್ಥೆಯ ವತಿಯಿಂದ ಮೈಸೂರಿನ ಗೀತಾ ಬುಕ್ ಹೌಸ್ ಇದನ್ನು ಹೊರತಂದಿದೆ.

ಎಂ. ಮರಿಯಪ್ಪ ಭಟ್ಟರು ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕನ್ನಡದ ಪ್ರಾಚೀನ ಕಾವ್ಯಗಳನ್ನು ಸಂಪಾದಿಸಿದ್ದಲ್ಲದೆ ಬಹುಭಾಷಾವಿದರಾಗಿ ಕೋಶರಚನೆಯಲ್ಲಿ ಅಪಾರ ಪಾಂಡಿತ್ಯ ತೋರಿದವರು. ಕಿಟೆಲ್ ಕೋಶದ ಪರಿಷ್ಕೃತ ಆವೃತ್ತಿ. ತುಳುಇಂಗ್ಲೀಷ ನಿಘಂಟು ನೀಡಿದ್ದಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟು ಸಮಿತಿಯ ಅಧ್ಯಕ್ಷರಾಗಿದ್ದ ಮರಿಯಪ್ಪ

ಭಟ್ಟರ ಜೀವಿತದ ಬಹುಕಾಲದ ಆಸೆಯು ಹವ್ಯಕ–ಇಂಗ್ಲೀಷ ನಿಘಂಟಿನ ರಚನೆಯು ಮೂಲಕ ನೆರವೇರಿದಂತಾಗಿದೆ.

ಹವ್ಯಕ ಕನ್ನಡವು ಕನ್ನಡದ ಪ್ರಸಿದ್ಧ ಸಾಮಾಜಿಕ ಉಪಭಾಷೆಗಳಲ್ಲೊಂದಾಗಿದೆ. ಇದು ಉತ್ತರಕನ್ನಡ, ದಕ್ಷಿಣಕನ್ನಡ, ಕೊಡಗು, ಶಿವಮೊಗ್ಗಾ ಜಿಲ್ಲೆಗಳಲ್ಲಿ ಬಹುವಾಗಿ ನೆಲಸಿದ ಹವ್ಯಕರ ಮನೆಮಾತಾಗಿದೆ. ಬೇರೆ ಬೇರೆ ಭಾಗಗಳಲ್ಲಿರುವ ಹವ್ಯಕರ ಉಪ ಭಾಷೆಯಲ್ಲಿ ಪ್ರಾದೇಶಿಕ ಭೇದಗಳಿವೆ. ಮರಿಯಪ್ಪ ಭಟ್ಟರು ಪ್ರಸ್ತುತ ನಿಘಂಟಿನಲ್ಲಿ ದಕ್ಷಿಣಕನ್ನಡದ ಪುತ್ತೂರು, ಕುಂಬ್ಳೆ, ಸುಳ್ಯ ಭಾಗದ ಹವ್ಯಕ ಕನ್ನಡವನ್ನು ಪ್ರಮುಖ ವಾಗಿ ಪದಗಳ ಆಯ್ಕೆಗೆ ಎತ್ತಿಕೊಂಡಿದ್ದಾರೆ. ಇದರಿಂದ ಈ ನಿಘಂಟಿನಲ್ಲಿ ೪೭೦೦ ಪದಗಳು ಸಂಕಲಿತವಾಗಿವೆ. ಪದಗಳನ್ನು ಕನ್ನಡಲಿಪಿಯಲ್ಲೂ ಆ ಬಳಿಕ ರೋಮನ್ನ ಲಿಪಿಯಲ್ಲೂ ಕೊಟ್ಟು ಇದರ ಜೊತೆ ಇಂಗ್ಲೀಷ್ ಅರ್ಥ ಮತ್ತು ಆಯಾ ಪದವು ತೆಲಗು, ತಮಿಳು, ಮಲೆಯಾಳಂ, ತುಳು ಭಾಷೆಯಲ್ಲಿದ್ದರೆ ಅವುಗಳನ್ನು ಸೂಚಿಸುವ ವಿಶೇಷ ಪ್ರಯತ್ನವಿದೆ. ಇಲ್ಲಿ ದೇಶ್ಯಶಬ್ದಗಳ ಸಂಗ್ರಹವೇ ನಿಘಂಟುಕಾರರ ಮುಖ್ಯ ಧ್ಯೇಯ. ಹವ್ಯಕ ಪದಗಳು ಗ್ರಂಥಸ್ಥಮೂಲವಲ್ಲವಾದ್ದರಿಂದ ಅವುಗಳ ಕಾಲಮಾನ ಮತ್ತು ಮೂಲರೂಪ ಲಭ್ಯವಾಗುವದಿಲ್ಲ. ಇಲ್ಲಿ ಅರ್ಥನಿರ್ಣಯ ತುಂಬ ಕಠಿಣ. ಯಾಕೆಂದರೆ ಕೆಲವನ್ನು ತುಳು ಮತ್ತು ಕನ್ನಡಿಗರಿಬ್ಬರೂ ಬಳಸುತ್ತಾರೆ. ಉದಾ: ಅದಲುಬದಲು, ಕಾಯಂ, ಕಿಲಾಡಿ ಇತ್ಯಾದಿ. ಹವ್ಯಕ ಕನ್ನಡದ ರೂಪಗಳು ಪ್ರಾಚೀನ ಕನ್ನಡ ಭಾಷೆಯನ್ನು ಇನ್ನೂ ಜೀವಂತವಾಗಿಸಿರುವಂತೆ ಭಾಸವಾಗುತ್ತದೆ. ತಾಯಿಗೆ 'ಅಬ್ಬೆ' ಎಂದೂ ಚಿಕ್ಕಪ್ಪನಿಗೆ ಅಪ್ಪಚ್ಚಿ ಎಂದೂ ಕರೆಯುವ ವಾಡಿಕೆ ಇನ್ನೂ ರೂಢಿ ಯಲ್ಲಿದೆ. ಇಂತಹ ಸ್ವಾರಸ್ಯಕರ ಪದಗಳು ಅನೇಕ ಪ್ರಾಚೀನ ಕನ್ನಡದ ಅಭ್ಯಾಸಿಗಳಿಗೆ ನಿಶ್ಚಿತವಾಗಿಯೂ ಆಕರ್ಷಕವಾಗಿರುತ್ತವೆ. 'ಹವ್ಯಕ ಪದಸಂಚಯ' ಎಂಬ ಗ್ರಂಥದಲ್ಲಿ ಟಿ. ಕೇಶವಭಟ್ಟರು ಈಗಾಗಲೆ ಹವ್ಯಕ ಪದಕೋಶಕ್ಕೆ ನಾಂದಿ ಹಾಡಿ ದವರು. ಆದರೆ ಅದರಲ್ಲಿರುವ ಕೆಲವು ಪದಗಳು ಮರಿಯಪ್ಪಭಟ್ಟರ ಕೋಶದಲ್ಲಿಲ್ಲ. ಇದಕ್ಕೆ ಕಾರಣ ಭಟ್ಟರ ಆಯ್ಕೆಯು ಒಂದು ಪ್ರದೇಶಕ್ಕೆ ಸೀಮಿತವಾದುದೇ ಆಗಿದೆ. ಒಂದು ಸಂಸ್ಥೆ ಮಾಡಬಹುದಾದ ಈ ಉಪಭಾಷಾಕೋಶ (Dialect Dictionary)ವನ್ನು ರಚಿಸಿ ಕನ್ನಡ ಕೋಶರಾಶಿಗೆ ಅಮೂಲ್ಯ ಕೊಡುಗೆ ನೀಡಿದ ಮರಿಯಪ್ಪ ಭಟ್ಟರ ಪಾಂಡಿತ್ಯ ಮತ್ತು ಶಾಸ್ತ್ರಪ್ರೀತಿಗೆ ನಿದರ್ಶನ ಈ ನಿಘಂಟು. ಕನ್ನಡದ ಉಪ ಭಾಷಾಕೋಶಕ್ಕೆ ಮೊದಲ ನಾಂದಿ ಹಾಡಿ ತರುಣ ಸಂಶೋಧಕರಿಗೆ ಭಟ್ಟರು ಮಾರ್ಗ ಹಾಕಿಕೊಟ್ಟಿದ್ದಾರೆ ಎಂದು ಹೇಳಬಹುದು. ದೇ. ಜ. ಗೌ. ಅವರು ಕನ್ನಡದಲ್ಲೂ, ಉಪಾಧ್ಯಾಯರು ಇಂಗ್ಲೀಷಿನಲ್ಲೂ ನಿಘಂಟಿಗೆ ವಿಸ್ತಾರವಾದ ಪೀಠಿಕೆ ಬರೆದಿರುವರು. ಇದೂ ಉಪಯುಕ್ತ ಪ್ರವೇಶಿಕೆಯಾಗಿದೆ. ಈ ನಿಘಂಟಿನಲ್ಲಿ ಪದಗಳಿಗೆ ಇಂಗ್ಲೀಷ್ ಅರ್ಥವನ್ನು ಕೊಡುವದರ ಜೊತೆಗೆ ಕನ್ನಡ ಅರ್ಥವನ್ನು ನೀಡಿದ್ದರೆ ಉಳಿದ ಕನ್ನಡ

ಬಾಂಧವರಿಗೆ ಉಪಯುಕ್ತವಾಗುತ್ತಿತ್ತು. ಸಮಗ್ರ ಹವ್ಯಕ-ಕನ್ನಡ ನಿಘಂಟು ರಚನಾ ಕಾರ್ಯ ಇನ್ನಾದರೂ ಆಗಬೇಕಾಗಿದೆ.

ಐ. ಮಾ. ಮುತ್ತಣ್ಣ : **ಕೊಡವ-ಕನ್ನಡ ನಿಘಂಟು,** ಕನ್ನಡಸಾಹಿತ್ಯ ಪರಿಷತ್ತು ಬೆಂಗಳೂರು.

ದ್ರಾವಿಡಭಾಷಾ ಪರಿವಾರದಲ್ಲಿ ಕೊಡವ ಭಾಷೆಯೂ ಒಂದಾಗಿದೆ. ಕೊಡವ ಭಾಷೆಯನ್ನು ಮಾತನಾಡುವ ಜನರು ಸುಮಾರು ಒಂದುಲಕ್ಷ ಇದ್ದಾರೆ. ಇದರ ಲ್ಲಿರುವ ಪದಗಳು ಕನ್ನಡ, ತುಳು, ತಮಿಳು, ಮಲೆಯಾಳಂ ಭಾಷೆಯ ಪದಗಳಿಂದಾದ ಸಮ್ಮಿಶ್ರಣವೆನ್ನಬಹುದು. ಹೀಗಿದ್ದರೂ ಕೊಡವ ಭಾಷೆಯಲ್ಲಿ ಕನ್ನಡ ಮತ್ತು ಮಲೆಯಾಳಂ ಭಾಷೆಗಳ ಪದಗಳೇ ಹೆಚ್ಚು. ಪಾಶ್ಚಾತ್ಯ ವಿದ್ವಾಂಸರ ಕನ್ನಡಸೇವೆ ಮೊದಲಾದ ಗ್ರಂಥಗಳನ್ನು ರಚಿಸಿ ಜನಪ್ರಿಯರಾದ ಮುತ್ತಣ್ಣನವರು ಕೊಡವ ಭಾಷೆಯನ್ನು ಬಲ್ಲ ವಿದ್ವಾಂಸರು. ಅವರು ನಿಘಂಟು ರಚನೆಯ ಕಾರ್ಯವನ್ನು ಕೈ ಕೊಂಡು ಇದರಲ್ಲಿ ೩೫೦೦ ಪದಗಳನ್ನು ಸಂಕಲಿಸಿದ್ದಾರೆ. ಹೀಗೆ ಆಯ್ಕೆಮಾಡು ವಾಗ ಮುತ್ತಣ್ಣನವರು ಒಂದು ಕ್ರಮವನ್ನು ಅನುಸರಿಸಿದ್ದಾರೆ. ಕನ್ನಡದ್ದೇ ಆದ ಪದಗಳನ್ನು ಬಿಟ್ಟು ಕೊಡವ ಶಬ್ದಗಳನ್ನೇ ಹೆಚ್ಚಾಗಿ ಆಯ್ಕೆ ಮಾಡಿರುವದು ಸೂಕ್ತ ವಾಗಿದೆ. ವಿವರಣೆಯನ್ನು ಕೊಡುವಾಗ ಪುನರುಕ್ತಿ ದೋಷವಿದ್ದರೂ ಕೊಡವ ಭಾಷೆಯ ಅಧ್ಯಯನಕ್ಕೆ ನೆರವಾಗುವ ಈ ನಿಘಂಟು ಮುತ್ತಣ್ಣನವರ ಅಪಾರ ಪರಿಶ್ರ ಮಕ್ಕೆ ಸಾಕ್ಷಿಯಾಗಿದೆ. ದ್ರಾವಿಡಭಾಷಾ ಪರಿವಾರದ ಎಲ್ಲ ಭಾಷೆಗಳಲ್ಲಿ ನಿಘಂಟು ರಚನಾಕಾರ್ಯ ನಡೆಯಬೇಕಾದುದು ಅವಶ್ಯ.

ವಿ.ಎಸ್. ಸಂಪತ್ಕುಮಾರಾಚಾರ್ಯ (ಸಂಪಾದಕರು): **ಕರ್ನಾಟಕ ಸಂಗೀತ ಪಾರಿಭಾಷಿಕ ಶಬ್ದಕೋಶ.** ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಮೈಸೂರು.

ಇದು ಲಲಿತಕಲೆಗಳಲ್ಲಿ ಒಂದಾದ ಸಂಗೀತದ ಶಾಸ್ತ್ರಕ್ಕೆ ಸಂಬಂಧಿಸಿದ ವಿವರ ಣಾತ್ಮಕ ಪಾರಿಭಾಷಿಕಕೋಶವಾಗಿದೆ. ಇತರ ಶಾಸ್ತ್ರಗಳಂತೆ ಸಂಗೀತದಲ್ಲೂ ಪಾರಿ ಭಾಷಿಕಶಬ್ದಗಳು ಸಾಕಷ್ಟಿವೆ. ಮೈಸೂರು ವಿಶ್ವವಿದ್ಯಾಲಯ ಹಮ್ಮಿಕೊಂಡ ಈ ಯೋಜನೆಯನ್ವಯ ಬಂದ ಮೊದಲ ಸಂಪುಟವಿದು. ಇದರಲ್ಲಿ 'ಅ' ದಿಂದ 'ಸ' ದವರೆಗಿನ ಪದಗಳಿವೆ. ಮೊದಲಸಂಪುಟದಲ್ಲಿ 'ಸಂಗೀತಶಾಸ್ತ್ರ ಗ್ರಂಥಗಳು: 'ಸಂಗೀತಕ್ಕೂ ಇತರ ಕಲೆಗಳಿಗೂ ಇರುವ ಸಂಬಂಧ'. ಕರ್ನಾಟಕದ ವಾಗ್ಗೇಯ ಕಾರರು, ಗಮಕ, ಕಲಾಕೇಂದ್ರ. ರಾಗಲಕ್ಷಣ. ತಾಳಗಳ ಪರಿಚಯ ಮೊದಲಾದ ವಿಷಯಗಳ ಹರಹು ಇದೆ. ಸಂಗೀತಶಾಸ್ತ್ರವನ್ನು ವ್ಯಾಸಂಗ ಮಾಡುವವರಿಗೆ

ಅವಶ್ಯವಾಗಿ ಬೇಕಾದ ವಿವರಣಾತ್ಮಕ ಪರಿಚಯು ಈ ಕೋಶದಿಂದ ದೊರೆಯುತ್ತದೆ. ವಿಷಯನಿರೂಪಣೆ, ಶಾಸ್ತ್ರಜ್ಞಾನ ಅಚ್ಚುಕಟ್ಟಾಗಿ ನಿರೂಪಿಸಲ್ಪಟ್ಟಿದೆ. ಮುಂದಿನ ಸಂಪುಟಗಳೂ ಪ್ರಕಟವಾದಾಗ ಒಟ್ಟು ಶಾಸ್ತ್ರಪರಿಚಯು ಸಮಗ್ರವಾಗಿ ದೊರಕು ವಂತಾಗುವದು.

ರಾ. ಕೃ. ಕುಲಕರ್ಣಿ : **ಆಯುರ್ವೇದೀಯ ಶಾರೀರ ಶಬ್ದಕೋಶ**

೪೭ ಪುಟಗಳ ಈ ಚಿಕ್ಕ ಗ್ರಂಥದಲ್ಲಿ ಶರೀರಕ್ಕೆ ಸಂಬಂಧಪಟ್ಟಂತೆ ಆಯು ರ್ವೇದ ಗ್ರಂಥಗಳಲ್ಲಿ ಬರುವ ಪದಗಳನ್ನೆಲ್ಲ ಒಂದೆಡೆ ಸೇರಿಸಿ ಅರ್ಥ ವಿವರಣೆ ನೀಡಿರುವ ಈ ಕೆಲಸ ಲೇಖಕರ ಆಯುರ್ವೇದಶಾಸ್ತ್ರ ಪರಿಚಯುದ ದ್ಯೋತಕವಾಗಿದೆ. ಆಯುರ್ವೇದ ವಿದ್ಯೆ ಪಾಶ್ಚಾತ್ಯ ವಿಜ್ಞಾನಿಗಳ ಆದರವನ್ನು ಗಳಿಸುತ್ತಿರುವ ಈ ಕಾಲ ದಲ್ಲಿ ಕನ್ನಡದಲ್ಲಿ ಆಯುರ್ವೇದಶಾಸ್ತ್ರಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಕೋಶ ಮೂಡಿ ಬರಬೇಕಾದ ಅಗತ್ಯವಿದೆ.

ರೆ. ಎ. ಮ್ಯಾನರ್ : **ತುಳು–ಇಂಗ್ಲೀಷ್ ಡಿಕ್ಷನರಿ**, ಏಶಿಯನ್ ಎಜ್ಯುಕೇಶನ್ ಸರ್ವಿಸ್ ನವದೆಹಲಿ.

ದ್ರಾವಿಡ ಭಾಷಾ ಪರಿವಾರದಲ್ಲಿ ಕರ್ನಾಟಕದ ಕರಾವಳಿಯ ಲಕ್ಷವಷ್ಟು ಜನರು ಮಾತನಾಡುವ ತುಳು ಭಾಷೆಯ ನಿಘಂಟು ಈಗ ಮರು ಮುದ್ರಣಗೊಂಡಿದೆ. ಮ್ಯಾನರ್‌ರ ತುಳು–ಇಂಗ್ಲೀಷ್ ನಿಘಂಟು ಕಿಟೆಲ್‌ರ ಕನ್ನಡ–ಇಂಗ್ಲೀಷ ಕೋಶ ದಂತೆ ಬಹು ಜನಪ್ರಿಯವಾದದ್ದು. ಆದರೆ ಸುಂದರ ಮುದ್ರಣವಾಗಿರುವ ಈ ನಿಘಂಟಿನ ಬೆಲೆ ಅಧಿಕವಾಗಿರುವದು. ಪಾಶ್ಚಾತ್ಯ ವಿದ್ವಾಂಸರೊಬ್ಬರು ತುಳುಭಾಷೆ ಕಲಿತು ಆಡುಭಾಷೆಯ ಪದಗಳ ಕೋಶ ರಚನೆ ಮಾಡಿರುವ ರೀತಿ ಎಷ್ಟೇ ಅರೆಕೊರೆ ಗಳಿದ್ದರೂ ಮೆಚ್ಚುಗೆಗೆ ಪಾತ್ರವಾಗಿದೆ.

ಹಾ. ಮಾ. ನಾಯಕ. ಪ್ರಧಾನ ಸಂಪಾದಕರು : **ಕನ್ನಡ ವಿಶ್ವಕೋಶ** ೧೧ನೆಯ ಸಂಪುಟ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕನ್ನಡದಲ್ಲಿ ವಿಶ್ವಕೋಶವನ್ನು ತರುವ ಮಹಾಪ್ರಯತ್ನದಲ್ಲಿ ೧೧ನೆಯ ಸಂಪುಟವು ಈ ವರ್ಷ ಪ್ರಕಟವಾಗಿದೆ. ೧೪ ಸಂಪುಟಗಳ ಈ ಬೃಹತ್ ಯೋಜನೆ ಯನ್ನು ಹಮ್ಮಿಕೊಂಡ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕದ ವಿವಿದ ವಿದ್ವಾಂಸರ ನೆರವನ್ನು ಪಡೆದು ವಿವಿಧ ವಿಷಯುಗಳಿಗೆ ಸಂಬಂಧಿಸಿ ಲೇಖನಗಳನ್ನು ಬರೆಯಿಸಿ ಹೊರತರುತ್ತಿರುವ ಸಾಂಸ್ಥಿಕ ಪ್ರಯತ್ನವಿದು. ಈ ೧೧ನೆಯ ಸಂಪುಟದಲ್ಲಿ ಪಾರಿವಾಳದಿಂದ ಒಡಿದು 'ಬಳ್ಳಿಗಾವೆ'ಯ ವರೆಗೆ ಇರುವ

ವಿವಿಧ ಶಾಸ್ತ್ರ ಕಲೆಗಳಿಗೆ ಸಂಬಂಧಿಸಿದ ವಿಷಯಗಳಿವೆ. ೯೬೪ ಪುಟಗಳ ವ್ಯಾಪ್ತಿಯ ೪೦೭ ಲೇಖಕರ ೯೯೩ ಲೇಖನಗಳ ಮಹಾಸಂಪುಟವಿದು. ಇಲ್ಲಿ ಕನ್ನಡ ಸಾಹಿತ್ಯ, ಕಲೆ, ಇತಿಹಾಸ, ಸಮಾಜಶಾಸ್ತ್ರ, ಭಾಷಾವಿಜ್ಞಾನ, ಮತಧರ್ಮ. ವಿಜ್ಞಾನದ ಬೇರೆ ಬೇರೆ ಶಾಖೆಗಳಿಗೆ ಸಂಬಂಧಿಸಿದ ನೂರಾರು ವಿಷಯಗಳಿವೆ. ಇವುಗಳನ್ನೆಲ್ಲ ಏಕ ಕಾಲಕ್ಕೆ ಏಕವ್ಯಕ್ತಿ ವಿಮರ್ಶಿಸುವದು ಅಸಾಧ್ಯ. ವಿಶ್ವಕೋಶದಲ್ಲಿ ಸಂಶೋಧನ ಲೇಖನಗಳಿಗೆ ಸ್ಥಳವಿಲ್ಲ: ಈ ವರೆಗೆ ಪ್ರಕಟವಾದ ಜ್ಞಾನವನ್ನು ಸ್ಪಷ್ಟವಾಗಿ, ಶಿಶಿಯಾಗಿ, ಸಂಗ್ರಹವಾಗಿ ನಿರೂಪಿಸುವದು ಇಲ್ಲಿ ಉದ್ದೇಶವಾಗಿರುತ್ತದೆ. ಆಯಾ ವಿಷಯಕ್ಕೆ ಸಂಬಂಧಿಸಿದ ಲೇಖಕರು ಲೇಖನಗಳನ್ನು ತೀರಾ ಪ್ರೌಢವಾಗಿ ಮಾಡದೆ ಅಥವಾ ತೀರಾ ಪ್ರಾಥಮಿಕವಾಗಿಸದೆ ಒಂದು ಸಮ ಪ್ರಮಾಣದಲ್ಲಿ ಶೈಲಿಯ ಪದವನ್ನು ಕಾಪಾಡಿಕೊಂಡಿದ್ದಾರೆ. ಹೀಗಾಗಿ ವಿಶ್ವಕೋಶವು ಮಹತ್ವದ ಸಾಧನೆಯಾಗಿದೆ. ಸಂಪಾದಕವರ್ಗದ ಶ್ರಮ, ಜಾಣ್ಮೆ ನಿಜಕ್ಕೂ ಮೆಚ್ಚಿಕೆಯನ್ನುಂಟು ಮಾಡುತ್ತದೆ.

ಹಾ. ಮಾ. ನಾಯಕ ಸಂಪಾದಕರು : **ಮಾಸ್ತಿಯವರ ಪುಸ್ತಕಗಳು** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಡೆದ ಮಾಸ್ತಿಯವರು ಕನ್ನಡದ ಮಹಾ ಲೇಖಕರು ಅವರ ಪುಸ್ತಕರಾಶಿ ಕನ್ನಡ ಲೋಕಕ್ಕೆ ಬೆರಗುಗೊಳಿಸುವಂಥದು. ಮಾಸ್ತಿಯವರು ಬರೆದಗ್ರಂಥಗಳು ಕನ್ನಡವಷ್ಟೇ ಏಕೆ ಇಂಗ್ಲೀಷಿನಲ್ಲೂ ವಿಪುಲವಾಗಿವೆ. ಮಾಸ್ತಿಯವರ ಗ್ರಂಥಗಳು ಎಷ್ಟು ಎಂಬ ಬಗ್ಗೆ ನಮ್ಮಲ್ಲಿ ಸ್ಪಷ್ಟವಾದ ಚಿತ್ರ ಮೂಡಿಸಬೇಕಾದ ಅಗತ್ಯ ಇಂದಿನ ಸಂದರ್ಭದಲ್ಲಿ ಅತ್ಯವಶ್ಯ. ಸಮಗ್ರ ಭಾರತವೇ ಜ್ಞಾನಪೀಠ ಪ್ರಶಸ್ತಿ ಪಡೆದ ಮಾಸ್ತಿಯವರತ್ತ ನೋಡುತ್ತಿರುವ ಸಂದರ್ಭದಲ್ಲಿ ಮಾಸ್ತಿಯವರ ಸೃಜನ ಸಾಹಿತ್ಯ, ಸೃಜನೇತರ, ಸಂಪಾದಿತ. ಕನ್ನಡ ಇಂಗ್ಲೀಷ್ ಅಲ್ಲದೆ ಮಾಸ್ತಿಯವರ ಮೇಲೆ ಬಂದ ಪುಸ್ತಕಗಳ ಬಗೆಗೆ ವಿವರವಾದ ಸೂಚಿ ಕನ್ನಡಿಗರಿಗೆ ಲಭ್ಯವಾಗಿರುವದು ಸಂತಸದ ಸಂಗತಿಯಾಗಿದೆ. ಇದನ್ನು ಅಚ್ಚುಕಟ್ಟಾಗಿ ನೆರವೇರಿಸಿದ ಹಾ. ಮಾ ನಾಯಕರು ಸೂಚಿಯನ್ನು ಸಿದ್ಧಪಡಿಸುವಲ್ಲಿ ಸಿದ್ಧಹಸ್ತರೆಂಬುದು ವಿದಿತವಾಗುತ್ತದೆ. ಈಗಾಗಲೆ 'ಜಾನಪದ ಗ್ರಂಥಸೂಚಿ' ರಚಿಸಿರುವ ಹಾ. ಮಾ. ನಾಯಕರು 'ಮಾಸ್ತಿ ಪುಸ್ತಕಗಳು' ಮೂಲಕ ಮಾಸ್ತಿ ಸಾಹಿತ್ಯದ ಅಧ್ಯಯನಕ್ಕೆ ನೆರವಾಗಿದ್ದಾರೆ. ಮಾಸ್ತಿಯವರು ತಮ್ಮ ೯೪ನೇ ವರ್ಷದಲ್ಲೂ ಸತತವಾಗಿ ಸಾಹಿತ್ಯರಚನೆ ಮಾಡುತ್ತಲಿರುವ ಲೇಖಕರು. ಅವರ ಎಲ್ಲ ಪ್ರಕಟವಾಗುತ್ತಿರುವ ಗ್ರಂಥಗಳೂ ನಮಗೆ ಇವರಲ್ಲಿ ದೊರೆಯದೆ ಹೋಗಬಹುದು. ಆದರೆ ಮುಂದೆ ಮರುಮುದ್ರಣದಲ್ಲಿ ಅವುಗಳನ್ನು ಸೇರಿಸಬಹುದಾಗಿದೆ. ಇದೇ ರೀತಿ ನಮ್ಮ ಹೊಸಗನ್ನಡ ಹಿರಿಯ ಲೇಖಕರ

ಬರವಣಿಗೆಯ ಸೂಚಿ ಕೃತಿರಚನೆಗೆ ಇದು ಪ್ರೇರಕವಾಗಬಲ್ಲುದು.

ಆಧುನಿಕ ಕನ್ನಡ ಬರಹಗಾರರು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.

ಇದು ಹೊಸಗನ್ನಡದ ೧೦೭೩ ಲೇಖಕ–ಲೇಖಕಿಯರ ಸಂಕ್ಷಿಪ್ತ ಪರಿಚಯವನ್ನು ನೀಡುವ ಅಪರೂಪದ ಗ್ರಂಥ. ಇಂಗ್ಲೀಷಿನಲ್ಲಿ 'Whos Who' ಎಂಬ ಗ್ರಂಥವಿರುವಂತೆ ಕನ್ನಡದಲ್ಲೂ ಅಂಥದನ್ನು ತರಬೇಕೆಂಬ ಆಕಾಂಕ್ಷೆಯೇ ಈ ಸೂಚಿಕೃತಿಯ ಉದ್ದೇಶ. ಇದರಲ್ಲಿ ಆಯಾ ಲೇಖಕರ ಜೀವನ ಮತ್ತು ಕೃತಿ ಸೂಚಿ ಆಸಕ್ತ ಕ್ಷೇತ್ರಗಳ ವಿವರಣೆ ದೊರಕುತ್ತದೆ. ಇದರಲ್ಲಿ ಎಲ್ಲ ಲೇಖಕರ. ಎಲ್ಲ ಕೃತಿಗಳ ಸೂಚಿ ದೊರಕದಿದ್ದರೂ ಕನ್ನಡ ಲೇಖಕರ ಬಗೆಗೆ ಮಾಹಿತಿ ತಿಳಿದುಕೊಳ್ಳುವವರಿಗೆ ಉಪಯುಕ್ತವಾಗುತ್ತದೆ. ಕನ್ನಡ ಲೇಖಕಪಡೆಯ ಪಕ್ಷಿನೋಟ ಇದರಲ್ಲಿ ಕಾಣುವದು.

ಟಿ. ವಿ. ವೆಂಕಟರಮಣಯ್ಯ : **ಪರಿಷತ್ಪತ್ರಿಕೆಗಳ ಲೇಖನಗಳ ಸೂಚಿ** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

ಕನ್ನಡದ ಸಂಶೋಧಕರಿಗೆ ಉಪಯುಕ್ತವಾದ 'ಕನ್ನಡ ಭಾಷಾ ಲೇಖನಗಳ ಸೂಚಿ' ಎಂಬ ದೊಡ್ಡ ಸೂಚಿಗ್ರಂಥವನ್ನು ನೀಡಿರುವ ಟಿ. ವಿ. ವೆಂಕಟರಮಣಯ್ಯ ಅವರು ಸೂಚಿಶಾಸ್ತ್ರದಲ್ಲಿ ಶ್ರಮಿಸಿದ ತಜ್ಞರು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯು ಕನ್ನಡದ ಸಂಶೋಧನಲೇಖನಗಳಿಗೆ ಮೀಸಲಾದ ಮಹತ್ವದ ಪತ್ರಿಕೆ. ಈ ಷಾಣ್ಮಾಸಿಕದ ೧೯೭೧ರ ಸಂಚಿಕೆಯಿಂದ ೧೯೮೨ರ ಸಂಚಿಕೆಯ ವರೆಗಿನ ಅವಧಿಯಲ್ಲಿ ಬಂದ ಲೇಖನಗಳ ವಿವರಣಾತ್ಮಕ ಸೂಚಿ ಇಲ್ಲಿದೆ. ಸುಮಾರು ೧೬೩ ಲೇಖನಗಳ ಉಲ್ಲೇಖವಿದೆ. ಕೃತಿಕಾರರು ವಿಷಯ ಸೂಚಿಯನ್ನು ವಿಷಯಾನುಸಾರ ಅಚ್ಚುಕಟ್ಟಾಗಿ ಅಣಿಗೊಳಿಸಿರುವದು ಸಂಶೋಧಕರಿಗೆ. ಅಭ್ಯಾಸಿಗಳಿಗೆ ನೆರವಾಗುತ್ತದೆ. ಇದು ಸ್ತುತ್ಯ ಪ್ರಯತ್ನ.

ಹ.ನಂ. ವಿಜಯಕುಮಾರ: **ಅಲ್ಲಮನ ವಚನಗಳ ಪದ್ಪ್ರೋಶ**, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

ಕನ್ನಡದಲ್ಲಿ ಪದಪ್ರಯೋಗ ಕೋಶರಚನೆ ಬಸವಣ್ಣನವರ ವಚನಗಳ ಪದಪ್ರಯೋಗಕೋಶದಿಂದ ಮೊದಲಾಗಿದೆ. ತೋಟದ ಸಿದ್ಧಲಿಂಗ ಶಿವಯೋಗಿಯ ವಚನಗಳ ಪದಪ್ರಯೋಗಕೋಶಕ್ಕೆ ಪ್ರಸ್ತಾವನೆ ಬರೆಯುತ್ತ ಡಾ. ಎಂ. ಚಿದಾನಂದ ಮೂರ್ತಿಯವರು ಪದಪ್ರಯೋಗಕೋಶವನ್ನು ಪದ್ಪ್ರೋಶ ಎಂದು ಕರೆಯಬೇಕೆಂದು ಸೂಚಿಸಿದ್ದಾರೆ. ಅವರ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಹ.ನಂ. ವಿಜಯಕುಮಾರ ಅವರು ಕನ್ನಡದ ಹಿರಿಯ ವಚನಕಾರ ಅಲ್ಲಮನ ವಚನಗಳ ಪದ್ಪ್ರೋಶ

ವನ್ನು ಸಿದ್ಧಪಡಿಸಿರುತ್ತಾರೆ. ಅಲ್ಲಮನ ವಚನಗಳಲ್ಲಿ ಬರುವ ವಿಶಿಷ್ಟ ಪದಗಳ ಬಳಕೆಯನ್ನು, ಉಪಮೆ, ದೃಷ್ಟಾಂತ, ರೂಪಕಗಳ ವೈಭವವನ್ನು ತಿಳಿಯಲು ಈ ಕೋಶ ಸಹಾಯುಮಾಡುತ್ತದೆ. ಅಕಾರಾದಿಯಾಗಿ ಜೋಡಿಸಲ್ಪಟ್ಟ ವಿವಿಧ ವಚನಗಳಲ್ಲಿ ಬಂದ ಅಪೂರ್ವ ಪದಗಳ ಪ್ರಯೋಗವನ್ನು ಅಧ್ಯಯನ ಮಾಡುವಲ್ಲಿ ಈ ಕೋಶ ಸಹಾಯ ಮಾಡುತ್ತದೆ. ಬೃಹದ್ ಗಾತ್ರದ ಈ ಪದ್ಕೋಶವನ್ನು ವಿಜಯ ಕುಮಾರ್ ಅತ್ಯಂತ ಕಡಿಮೆ ಅವಧಿಯಲ್ಲಿ ಮೊಟ್ಟ ಮೊದಲಿಗೆ ಸಿದ್ಧಪಡಿಸಿರುವದು ಅವರ ದುಡಿಮೆ, ವಚನಸಾಹಿತ್ಯ ಪ್ರೀತಿಗೆ ಮೆಚ್ಚಿಕೆಯುಂಟಾಗುತ್ತದೆ. ವಚನ ಸಾಹಿತ್ಯದ ಅಭ್ಯಾಸಿಗಳಿಗೆ ಮತ್ತು ವಿವಿಧ ಮುಖಗಳ ಅಧ್ಯಯನಕ್ಕೆ ಈ ಕೋಶ ನೆರವು ನೀಡುತ್ತದೆ.

ಎಸ್. ವೇಣುಗೋಪಾಲಾಚಾರ್ಯ: (೧) **ತುಳು ಮೂಲದ ಇಂಗ್ಲೀಷ್, ಗ್ರೀಕ್, ಲ್ಯಾಟಿನ್ ಪದಗಳು. (೨) ವಿಶ್ವಕನ್ನಡ ಮೂಲದ ಇಂಗ್ಲೀಷ್ ಮತ್ತು ಹಿಂದಿ ಚೀಣಿ ಸ್ವಬೋಧಿನಿಯ ಮಾರ್ಗದರ್ಶಿ.**

ಈ ಎರಡೂ ಪುಸ್ತಕಗಳು ತೌಲನಿಕ ಭಾಷಾಶಾಸ್ತ್ರದ ಅಭ್ಯಾಸದ ಫಲವಾಗಿ ಮೂಡಿಬಂದಿರುವಂಥವು. ಭಾಷಾ ಚರಿತ್ರೆಯಲ್ಲಿ ತೌಲನಿಕವಾಗಿ ಪದಗಳ ನಿಷ್ಪತ್ತಿಯನ್ನು ಪತ್ತೆಹಚ್ಚಿ ನಿರ್ದಿಷ್ಟಪಡಿಸುವ ಕೆಲಸ ಸ್ತುತ್ಯವಾದ ಪ್ರಯತ್ನವೆ ಸರಿ. ಹೀಗೆ ಮಾಡುವಾಗ ಐತಿಹಾಸಿಕ ಭಾಷಾವಿಜ್ಞಾನ ಮತ್ತು ಭಾಷಾಶಾಸ್ತ್ರದ ಮೂಲ ತತ್ವಗಳ ಆಳವಾದ ವ್ಯಾಸಂಗ ಆವಶ್ಯಕ. ಪ್ರಸ್ತುತ ಲೇಖಕರು ಈ ಹಿನ್ನೆಲೆಯಲ್ಲಿ ವಿವೇಚನೆ ಮಾಡಿದ್ದರೆ ಇವೆರಡೂ ಕೃತಿಗಳು ಹೆಚ್ಚು ಉಪಯುಕ್ತವಾಗುತ್ತಿದ್ದವು ಎಂದಿಷ್ಟೇ ಹೇಳಬಹುದಾಗಿದೆ.

ಸಿದ್ಧಗಂಗಯ್ಯ : **ವ್ಯಾಕರಣ ದರ್ಪಣ**

೧೯೭೩ರಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ರಚಿಸಲ್ಪಟ್ಟ ವ್ಯಾಕರಣ ದರ್ಪಣ ಈ ವರ್ಷ ಪುನಃ ಪ್ರಕಟವಾಗಿದೆ. ಈ ಮರುಮುದ್ರಣವಲ್ಲಿ ಮುದ್ರಣ ದೋಷಗಳೂ, ಇತರ ವಿಷಯ ನಿರೂಪಣಾ ದೋಷಗಳೂ ಇವೆ. ಇಲ್ಲಿ ಶಾಸ್ತ್ರೀಯ ವಿಶ್ಲೇಷಣೆಗೆ ಹೆಚ್ಚಿನ ಅವಕಾಶವಿಲ್ಲದೆ ಕೇವಲ ವಿದ್ಯಾರ್ಥಿಗಳಿಗೆ ಬೇಕಾದ ಕೈಪಿಡಿಯಾಗಿ ಉಳಿದಿವೆ.

ಹುಚ್ಚಪ್ಪನವರು : **ಗೋಕಾಕ ವರದಿಯ ಅನುಷ್ಠಾನ**

ಇದು ಭಾಷಾ ವಿವೇಚನೆಯ ಗ್ರಂಥ. ೨೨೪ ಪುಟಗಳ ಈ ಪುಸ್ತಕದಲ್ಲಿ ಗೋಕಾಕ ವರದಿಯ ವಿವರವಾದ ವಿಶ್ಲೇಷಣೆ ಇದೆ. ಇದನ್ನು ಭಾಷಾಶಾಸ್ತ್ರದಡಿಯಲ್ಲಿ ಗಂಭೀರವಾಗಿ ಪರಿಗಣಿಸಲು ಬಾರದಿದ್ದರೂ ಕನ್ನಡ ಭಾಷೆಯ ಅಸ್ತಿತ್ವದ ಚಳುವಳಿಯ

ಇತಿಹಾಸದಲ್ಲಿ ದೊಡ್ಡ ಚಳುವಳಿಯಾದ ಗೋಕಾಕ್ ವರದಿಯ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಸ್ಥಾನಮಾನದ ಕುರಿತಾದ ಚಿಂತನೆ ಇಲ್ಲಿ ಢಾಳಾಗಿ ಚಿತ್ರಿತವಾಗಿದೆ.

೧. ೧೯೮೩ರ ಶಾಸ್ತ್ರಕೃತಿಗಳಲ್ಲಿ ವೈವಿಧ್ಯತೆ ಇರುವದು ಎದ್ದುಕಾಣುವ ವೈಶಿಷ್ಟ್ಯ. ವಿಮರ್ಶಾಶಾಸ್ತ್ರ, ತೌಲನಿಕ ಕಾವ್ಯಮೀಮಾಂಸೆ, ವಿಶ್ವಕೋಶ, ನಿಘಂಟುಗಳು ಸೂಚಿಕೃತಿಗಳು ಪದಪ್ರಯೋಗಕೋಶ, ಭಾಷೆ ವ್ಯಾಕರಣ ಗ್ರಂಥಗಳೇ ಮೊದಲಾದ ಕ್ಷೇತ್ರದಲ್ಲಿ ಕನ್ನಡದ ಶಾಸ್ತ್ರಕಾರರು ಕೃತಿರಚನೆ ಗೈದಿದ್ದಾರೆ.

೨. ಸಾಂಸ್ಥಿಕ ಮತ್ತು ವೈಯಕ್ತಿಕ ಸಾಧನೆಗಳೆರಡೂ ಈ ವರ್ಷದ ಶಾಸ್ತ್ರ ಕೃತಿಗಳಲ್ಲಿ ಕಾಣುವದಾದರೂ ವೈಯಕ್ತಿಕಸಾಧನೆಯೇ ಹೆಚ್ಚಾಗಿರುವಂತೆ ತೋರುತ್ತದೆ.

೩. ನಾಗಭೂಷಣ ಸ್ವಾಮಿಯವರ ವಿಮರ್ಶೆಯ ಪರಿಭಾಷೆ, ಶಿವರುದ್ರಪ್ಪ ನವರ ಕಾವ್ಯಾರ್ಥಚಿಂತನ, ಮರಿಯಪ್ಪ ಭಟ್ಟರ ಹವ್ಯಕ ಇಂಗ್ಲೀಷ್ ನಿಘಂಟು, ಹಾ ಮಾ. ನಾಯಕರ, ಮಾಸ್ತಿಯವರ ಪುಸ್ತಕಗಳು, ವಿಜಯಕುಮಾರ ಅವರ ಅಲ್ಲಮನ ವಚನಗಳ ಪದ್ಪ್ರೋಶ ವರ್ಷದ ಶಾಸ್ತ್ರಕೃತಿಗಳಲ್ಲಿ ಗಮನಾರ್ಹ ಗ್ರಂಥ ಗಳಾಗಿವೆ.

೪. ಈ ವರ್ಷದಲ್ಲಿ ಭಾಷಾ ವಿಜ್ಞಾನದ ಕ್ಷೇತ್ರದಲ್ಲಿ ಮಹತ್ವದ ಕೃತಿಗಳು ಬರದಿರುವದು ಒಂದು ಕೊರತೆ ಎನ್ನಬಹುದು.

೫. ಹಳೆ ಹೊಸ ತಲೆಮಾರಿನವರಾದ ಲೇಖಕರೀರ್ವರೂ ಶಾಸ್ತ್ರರಚನೆಗೆ ಕೈಹಾಕಿರುವದು ಕಂಡುಬರುತ್ತದೆ.

೬. ಪ್ರಕಾಶಕರಲ್ಲಿ ವಿಶ್ವವಿದ್ಯಾಲಯ ಮತ್ತು ಇತರ ಸಂಸ್ಥೆಗಳು ಆದ್ಯಸ್ಥಾನ ದಲ್ಲಿದ್ದರೂ ಖಾಸಗಿ ಪ್ರಕಾಶಕರೂ ಶಾಸ್ತ್ರಕೃತಿಗಳ ಪ್ರಕಟಣೆಗೆ ಆಸಕ್ತಿ ತೋರಿದ್ದಾರೆ.

ಇರು ಮರುಳೆ ವೈಯಾಕರಣಂ ಶುಷ್ಕಂ ಎಂಬ ಭಾವನೆ ನಮ್ಮ ವಾಚಕವರ್ಗದಲ್ಲಿ ದೂರವಾದಾಗ ಮಾತ್ರ ಶಾಸ್ತ್ರಗ್ರಂಥಗಳು ಪ್ರತಿವರ್ಷ ಪ್ರಕಟಣ ಪ್ರಪಂಚದಲ್ಲಿ ವಿಶೇಷ ಮಾನ್ಯತೆ ಗಳಿಸಬಹುದಾಗಿದೆ.

೧೯೮೩ ರ ಜಾನಪದ ಸಾಹಿತ್ಯ

● ಜ್ಯೋತಿ ಹೊಸೂರ

ಇಪ್ಪತ್ತು ವರ್ಷಗಳಿಂದೀಚೆ ಜಾನಪದ ಅಭ್ಯಾಸ ಭರದಿಂದ ಸಾಗಿದೆ. ಕರ್ನಾಟಕದಲ್ಲಿಯ ಎಲ್ಲ ವಿಶ್ವವಿದ್ಯಾಲಯಗಳು ಜಾನಪದ ಅಭ್ಯಾಸಕ್ಕೆ ವಿಶೇಷ ಅವಕಾಶ ಕೊಟ್ಟಿರುವುದೇ ಇದಕ್ಕೆ ಮೂಲ ಕಾರಣ. ಅಂತೆಯೇ ಇತ್ತೀಚೆಯ ಜಾನಪದ ವಿದ್ವಾಂಸರುಗಳಲ್ಲಿ ಬಹುಪಾಲು ಜನ ಈ ವಿಶ್ವವಿದ್ಯಾಲಯಗಳಲ್ಲಿ ತರಬೇತಿ ಪಡೆದವರೇ ಆಗಿರುವರು. ಇಂಥ ವಿದ್ವಾಂಸರಿಂದ ಪ್ರಕಟಗೊಂಡ ಜಾನಪದ ಕೃತಿಗಳೂ ಸಹ ವೈವಿಧ್ಯಪೂರ್ಣ ವಿಷಯಗಳನ್ನು ಒಳಗೊಂಡಿರುತ್ತವೆ. ೧೯೮೩ರಲ್ಲಿ ಪ್ರಥಮ ಚಾರಿಗೆ ಬೆಳಕು ಕಂಡ ಕೃತಿಗಳಲ್ಲಿ ಇಂಥ ವೈವಿಧ್ಯವನ್ನು ಕಾಣಲು ಬಯಸುವುದು ಸ್ವಾಭಾವಿಕ. ಆದರೆ ಜಾನಪದದ ಎಲ್ಲ ಪ್ರಕಾರಗಳಲ್ಲಿ ಕೃತಿಗಳು ಈ ವರ್ಷ ಹೊರ ಬಂದಿಲ್ಲವೆಂಬುದು ನಿರಾಶೆಯ ಸಂಗತಿ.

ಪ್ರಸ್ತುತ ವರ್ಷದಲ್ಲಿ ಸುಮಾರು ೪೫ ಗ್ರಂಥಗಳು ಮೊದಲ ಸಲ ಪ್ರಕಟಗೊಂಡಿವೆ; ಕೆಲವು ಕೃತಿಗಳು ಪುನರ್ ಮುದ್ರಣಗೊಂಡಿವೆ. ಈಗಾಗಲೇ ಪ್ರಕಟಿಸಲಾಗಿರುವ ಕೆಲವು ಜನಪದ ಗೀತೆಗಳ ಗದ್ಯಾನುವಾದಗಳೂ ಹೊರಬಂದಿವೆ ಈ ಗದ್ಯಾನುವಾದಗಳನ್ನು ಜಾನಪದ ಕೃತಿಗಳೆಂದು ಗಣಿಸಬಹುದೇ ಎಂಬ ಸಮಸ್ಯೆಯೊಂದು ಎದ್ದು ನಿಲ್ಲುತ್ತದೆ. ಕೊನೆಯಲ್ಲಿ ಈ ಬಗೆಗೆ ಚರ್ಚಿಸಲಾಗುವುದು.

ಜನಪದ ಪದ್ಯಸಾಹಿತ್ಯ

ಜಾನಪದದಲ್ಲಿ ಜನಪದಸಾಹಿತ್ಯ ಅತ್ಯಂತ ಪ್ರಮುಖ ವಿಭಾಗ. ಜಾನಪದ (Folklore) ಎಂದರೆ ಜನಪದಸಾಹಿತ್ಯವೆಂದೇ ಇಂದಿಗೂ ಹಲವರ ಗ್ರಹಿಕೆ ಇರುವುದೇನೂ ಸುಳ್ಳಲ್ಲ. ಮತ್ತೆ, ಜನಪದಸಾಹಿತ್ಯ ವಿಭಾಗದಲ್ಲಿ ಪದ್ಯಗಳಿಗೇ ಮುಖ್ಯಸ್ಥಾನ. ಜನಪದಸಾಹಿತ್ಯವೆಂದರೆ ಜನಪದ ಪದ್ಯಗಳೆಂದೇ ಅದೆಷ್ಟೋ ಜನರ ಗ್ರಹಿಕೆ ಇಂದಿಗೂ ಅಚ್ಚಳಿಯದೆ ಉಳಿದಿರುವುದು ಅಚ್ಚರಿಯ ಸಂಗತಿ. ಈ ವಾಸ್ತವಾಂಶಗಳಿಗೆ ಪೋಷಣೆಯೆನ್ನುವಂತೆ ೧೯೮೩ರಲ್ಲಿ ಪ್ರಕಟವಾದ ಬಹುಪಾಲು ಕೃತಿಗಳು ಜನಪದಸಾಹಿತ್ಯ ವಿಭಾಗಕ್ಕೆ ಸೇರಿದುವಾಗಿವೆ. ಅದರಲ್ಲಿಯೂ ಜನಪದಪದ್ಯ ಗ್ರಂಥಗಳ ಸಂಖ್ಯೆಯೇ ಹೆಚ್ಚಿಗಿದೆ.

ಡಾ. ಎಂ. ಬಿ. ನೇಗಿನಹಾಳ ಅವರ ಮೈಲಾರಲಿಂಗನ ಪದಗಳು ಈ ವರ್ಷದಲ್ಲಿ ಪ್ರಕಟವಾದ ಜನಪದಸಾಹಿತ್ಯ ಕ್ಷೇತ್ರದಲ್ಲಿಯ ಗಮನಾರ್ಹ ಕೃತಿ. ಮೈಲಾರಲಿಂಗ, ಮಲ್ಲಾರಿ, ಮಲ್ಲಯ್ಯ, ಖಂಡೋಬಾ ಹೆಸರಿನಿಂದ ಕರೆಯಿಸಿಕೊಳ್ಳುವ ದೈವತವೊಂದನ್ನು ಕುರಿತು ಇರುವ ವಿಪುಲ ಜನಪದ ಸಾಹಿತ್ಯದ ಪೈಕಿ ಸ್ವಲ್ಪ ಭಾಗವೂ ಇಂದಿನ ವರೆಗೆ ಬೆಳಕು ಕಂಡಂತಿಲ್ಲ. ಆದ್ದರಿಂದ ಮೈಲಾರ ಲಿಂಗನನ್ನು ಕುರಿತಾದ ಪದಗಳನ್ನು ಪ್ರಕಟಿಸುವಲ್ಲಿ ಮೊದಲಿಗರಾದ ಶ್ರೇಯಸ್ಸು ಡಾ. ನೇಗಿನಹಾಳ ಅವರಿಗೆ ಸಲ್ಲುತ್ತದೆ.

ಮೈಲಾರಲಿಂಗನ ಹಿರಿಮೆ, ಮಹಾತ್ಮೆ ಹೇಳುವ ಪದಗಳ ಸಂಗ್ರಹ ಇಲ್ಲಿ ಹೆಚ್ಚು ಇವೆ. ಮೈಲಾರಲಿಂಗನ ಜೀವನಕ್ಕೆ ಸಂಬಂಧಿಸಿದ ಪದಗಳೂ ಕೆಲವು ಇವೆ. ಪ್ರಾರಂಭದಲ್ಲಿ ಹದಿನೈದು ಪುಟಗಳ ಪೀಠಿಕೆ ಇದೆ. ಮೈಲಾರಲಿಂಗ ದೇವತೆ ಕುರಿತಾದ ಮಹತ್ತ್ವದ ಮಾಹಿತಿ ಮತ್ತು ಈ ಸಂಗ್ರಹ ಕಾರ್ಯದ ಬಗ್ಗೆ ವಿವರಣೆಗಳು ಪೀಠಿಕೆಯಲ್ಲಿವೆ. ಈ ದೈವತ ಕುರಿತು ತಮ್ಮಲ್ಲಿ ಇರುವ ವಿಪುಲ ಸಾಮಗ್ರಿಯಲ್ಲಿಯ ಮೊದಲ ಕಂತಾಗಿ ಈ ಗ್ರಂಥ ಪ್ರಕಟಿಸಿರುವುದಾಗಿ ಸಂಪಾದಕರು ಹೇಳಿದ್ದಾರೆ. ಅಂತೆಯೇ ಪ್ರಸ್ತುತ ಗ್ರಂಥಕ್ಕೆ ಒಂದನೆಯ ಭಾಗ ಎಂದಿದ್ದಾರೆ. ಅವರ ಎಲ್ಲ ಸಂಗ್ರಹ ಶೀಘ್ರ ಬೆಳಕು ಕಾಣುವುದು ಅತ್ಯವಶ್ಯ. ಗ್ರಂಥದ ಸಂಗ್ರಹ ಕಾರ್ಯ ವ್ಯವಸ್ಥಿತವಾಗಿದೆ. ಕೊನೆಯಲ್ಲಿ ಕೊಟ್ಟಿರುವ ಟಿಪ್ಪಣಿ ಮತ್ತು ಶಬ್ದಕೋಶ ಉಪಯುಕ್ತವಾಗಿವೆ.

ಮುಸಲ್ಮಾನರ ಮಹತ್ವದ ಹಬ್ಬಗಳಲ್ಲೊಂದಾದ ಮೊಹರ್ರಂ ಹಿಂದೂಗಳಮೇಲೂ ಸಾಕಷ್ಟು ಪ್ರಭಾವ ಬೀರಿದೆ. ಕರ್ನಾಟಕದ ಹಳ್ಳಿಗಳಲ್ಲಂತೂ ಅಲಾಬ (ಅಲ್ಲಾಹಬ್ಬ) ಎಂದೇ ಕರೆಯಲಾಗುವ ಈ ಹಬ್ಬಕ್ಕೆ ಮೂರುತಿಂಗಳು ಮುಂಚೆಯೇ ಹಾಡು ಕಲಿಯುವುದು ಪ್ರಾರಂಭವಾಗುತ್ತದೆ,ಇಂಥ ಮಹತ್ವದ ಹಬ್ಬದ ಪ್ರಸಂಗದಲ್ಲಿ ಮೇಳದೊಂದಿಗೆ ಹಾಡುವ ಹಾಡುಗಳನ್ನು 'ಗುಲ್ಬರ್ಗ ಜಿಲ್ಲೆಯ ಮೊಹರ್ರಂ ಪದಗಳು' ಹೆಸರಿನಿಂದ ಡಾ. ಚೆನ್ನಣ್ಣ ವಾಲೀಕಾರ ಅವರು ಸಂಪಾದಿಸಿದ್ದಾರೆ. ಪ್ರಸ್ತುತ ಸಂಗ್ರಹದಲ್ಲಿ ೫೫ ಪದಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಈ ಪದಗಳನ್ನೆಲ್ಲ ಕರ್ಬಲಾ ಪದಗಳು. ಧಾರ್ಮಿಕ ಪದಗಳು, ಸಾಮಾಜಿಕ ಪದಗಳು, ಇತರ ಪದಗಳು ಎಂಬುದಾಗಿ ವರ್ಗೀಕರಿಸಲಾದೆ. ಧಾರ್ಮಿಕ ಪದಗಳ ವರ್ಗದಲ್ಲಿ ಮುಸಲ್ಮಾನ ಧರ್ಮದ ಪದಗಳು ಮತ್ತು ಹಿಂದೂಧರ್ಮದ ಪದಗಳು ಎಂಬುದಾಗಿ ಎರಡು ಪ್ರತ್ಯೇಕ ವರ್ಗ ಮಾಡಿದ್ದರೆ ಇನ್ನಷ್ಟು ಅನುಕೂಲವಾಗುತ್ತಿತ್ತು. ಏಕೆಂದರೆ ಈ ಮೊಹರ್ರಂ ಪದಗಳಲ್ಲಿ ಹಿಂದೂಧರ್ಮಕ್ಕೆ ಸಂಬಂಧಿಸಿದ ಪದಗಳ ಸೇರ್ಪಡೆಯು ಕರ್ನಾಟಕದ ಧರ್ಮ ಸಮನ್ವಯ ಧೋರಣೆಯನ್ನು ಮನದಟ್ಟು ಮಾಡಿಕೊಡುವಲ್ಲಿ ಮಹತ್ತ್ವದ ಪಾತ್ರ ಮಾಡುತ್ತದೆ. ೧೯ ಪುಟಗಳ ಪ್ರಸ್ತಾವನೆಯಲ್ಲಿ ಮೊಹರ್ರಂ ಹಬ್ಬದ ಹಿನ್ನೆಲೆ ಮತ್ತು

ಇಲ್ಲಿ ಸಂಗ್ರಹ ಗೊಂಡಿರುವ ಪದಗಳ ಕುರಿತು ವಿವರ ನೀಡಲಾಗಿದೆ. ಕೊನೆಯಲ್ಲಿ ೪ ಅನುಬಂಧಗಳಿವೆ. ೩ನೆಯ ಅನುಬಂಧದಲ್ಲಿ ಇಲ್ಲಿಯ ಪದಗಳ ಕರ್ತೃಗಳ ಹಾಗೂ ನಾಲ್ಕನೆಯ ಅನುಬಂಧದಲ್ಲಿ ಪದಗಳನ್ನು ಹಾಡಿದವರ ಹೆಸರುಗಳನ್ನು ಕೊಡಲಾಗಿದೆ. ಆದರೆ ಯಾರು ಯಾರು ಯಾವ ಯಾವ ಪದ ರಚಿಸಿದರು ಮತ್ತು ಹಾಡಿದರೆಂಬು ಖಚಿತಪಡಿಸಿಲ್ಲ. ಮೊಹರ್‍ರಂ ಪಬ್ಬದ ಪ್ರಸಂಗ ಗೊತ್ತಿಲ್ಲದ ಭಾಗದವರಿಗಾಗಿ ಇನ್ನೊಂದು ಬಗೆಯ ವಿವರ ಬೇಕಾಗಿತ್ತೆಂದು ಅನಿಸುತ್ತದೆ. ಅಂದರೆ, ಈ ಹಾಡು ಗಳನ್ನು ಮೊಹರ್‍ರಂ ಸಮಯದಲ್ಲಿ ಎಷ್ಟು ದಿನಗಳ ವರೆಗೆ ಹಾಡುತ್ತಾರೆ, ಯಾವ ಸಮಯದಲ್ಲಿ ಹಾಡುತ್ತಾರೆ. ಹಾಡುವ ಮೇಳಗಳ ರಚನೆ ಹೇಗಿರುತ್ತದೆ ಇತ್ಯಾದಿ ಗಳನ್ನು ಕುರಿತು ವಿವರಣೆ ಪ್ರಸ್ತಾವನೆಯಲ್ಲಿ ಬೇಕಾಗಿತ್ತು. ಈ ಕೊರತೆಗಳಿದ್ದೂ ಇದೊಂದು ಶ್ರೇಷ್ಠ ಕೊಡುಗೆಯೆಂಬಲ್ಲಿ ಸಂಶಯವಿಲ್ಲ.

ಡಾ. ನಿಂಗಣ್ಣ ಸಣ್ಣಕ್ಕಿ ಅವರ 'ಹೇಳುವೆ ಮಜಕೂರಾ' ಎಂಬ ಸಂಗ್ರಹದ ನಂತರ ಮೊಹರ್‍ರಂ ಪದಗಳನ್ನು ಕುರಿತು ಬಂದಿರುವ ಡಾ. ಚೆನ್ನಣ್ಣ ಅವರ ಈ ಕೃತಿ ಅತ್ಯಂತ ಮಹತ್ತ್ವದ್ದು ಮತ್ತು ಸ್ವಾಗತಾರ್ಹವಾದುದು ಆಗಿದೆ.

ಗಾತ್ರ ಮತ್ತು ಸತ್ವದಲ್ಲಿ ಬೃಹತ್ ಎನ್ನಿಸುವಂಥ ಗ್ರಂಥವೊಂದನ್ನು ಡಾ. ಎನ್. ಆರ್. ನಾಯಕ ಅವರು ಹೊರತಂದಿದ್ದಾರೆ. 'ಕೂಸಾಯ್ತು ನಮ್ಮ ಕೊಮ ರಾಗೆ' ಹೆಸರಿನ ಈ ಕೃತಿಯಲ್ಲಿ ಮದುವೆ ಸಂಪ್ರದಾಯದ ಸುಮಾರು ೨೨೦೦ ತ್ರಿಪದಿ ಗಳು ಸಂಗ್ರಹಗೊಂಡಿವೆ.

ಉತ್ತರ ಕನ್ನಡ ಜಿಲ್ಲೆಯ ಎಂಟು ವಿಭಿನ್ನ ಜಾತಿಯವರ ಮದುವೆ ಸಂಪ್ರ ದಾಯದ ಹಾಡುಗಳನ್ನು ಇಲ್ಲಿ ಸಂಕಲಿಸಿರುವುದಾಗಿ ಡಾ. ನಾಯಕರು ಹೇಳಿದ್ದಾರೆ. ಈ ಗ್ರಂಥದ ದೀರ್ಘ ಪ್ರಸ್ತಾವನೆ ಅಭ್ಯಾಸಿಗಳಿಗೆ ಉಪಯುಕ್ತ ಮಾಹಿತಿ ಒದಗಿಸು ತ್ತದೆ. ಬಯಲು ನಾಡಿನ ಜನರ ಸಂಪ್ರದಾಯಗಳಿಂದ ಅನೇಕ ಬಗೆಯಲ್ಲಿ ಭಿನ್ನವಾದ ವಿಧಿ-ವಿಧಾನಗಳನ್ನು ಮದುವೆ ಕ್ರಮಗಳಲ್ಲಿ ಕಂಡುಕೊಳ್ಳಬಹುದಾದರೂ ಹಾಡು ಗಳಲ್ಲಿಯ ಮೂಲಭಾವಗಳ ಸ್ಪಂದನೆ ಒಂದೇ ಬಗೆಯಾಗಿರುವುದು ಮಾತ್ರ ಆಶ್ಚರ್ಯ ವನ್ನುಂಟುಮಾಡುತ್ತದೆ.

ರಕ್ಷಾಪುಟದ ಮುಖಚಿತ್ರವು ಗ್ರಂಥದ ಶೀರ್ಷಿಕೆಯ ಆಶಯ ಸೂಚಿಸಲು ಅಸಮರ್ಥವಾಗಿದೆಯೆಂಬುದು ಯಾರಿಗಾದರೂ ಒಡೆದು ಕಾಣುವ ಒಂದು ಪ್ರಮುಖ ದೋಷ. ಇದು ಚಿತ್ರ ಕಲಾವಿದನ ದೋಷವಾದರೂ ಸಂಪಾದಕರು ಕಲಾವಿದನಿಗೆ ಸರಿಯಾದ ಸೂಚನೆ ನೀಡಿ ಇದನ್ನು ನಿವಾರಿಸಬಹುದಿತ್ತು.

ಹೊನ್ನಾವರದಲ್ಲಿ ಜಾನಪದ ಪ್ರಕಾಶನದ ಪರವಾಗಿ ಪ್ರತಿ ವರುಷ ಜಾನಪದ ಗ್ರಂಥಗಳನ್ನು ಪ್ರಕಟಿಸುತ್ತಿರುವ ಡಾ. ಎನ್. ಆರ್. ನಾಯಕ ಅವರ ನಿಷ್ಠೆಯ ಫಲವಾಗಿ ಹೊರಬಂದಿರುವ ಪ್ರಸ್ತುತ ಕೃತಿ ಈ ಬಗೆಯ ಕೃತಿಗಳಲ್ಲೆಲ್ಲ ಒಡೆದು ಕಾಣುವ ಸತ್ವವನ್ನೊಳಗೊಂಡಿದೆ.

'ಹೇಳುತೇವೋ ಗುಮ್ಟೆ ಪದನಾವಾ' ಎಂಬ ಇನ್ನೊಂದು ಗ್ರಂಥವನ್ನೂ ಡಾ. ಎನ್. ಆರ್. ನಾಯಕ ಅವರು ಪ್ರಕಟಿಸಿದ್ದಾರೆ. ಡಾ. ಎಲ್. ಆರ್. ಹೆಗಡೆ ಯವರ ಗುಮಟೆ ಪದಗಳ ಒಂದು ಸಂಕಲನ ಬಹಳ ಹಿಂದೆಯೇ ಪ್ರಕಟವಾಗಿದೆ. ಅದರಲ್ಲಿ ಹಾಲಕ್ಕಿ ಒಕ್ಕಲಿಗರ ಮತ್ತು ಬೇರೆ ಸಮಾಜದವರ ಪದಗಳು ಒಟ್ಟು ಗೂಡಿವೆ. ಆದರೆ ಪ್ರಸ್ತುತ ಸಂಗ್ರಹದಲ್ಲಿ ಡಾ. ನಾಯಕ ಅವರು ಕೇವಲ ಹಾಲಕ್ಕಿ ಒಕ್ಕಲಿಗರ ಗುಮಟೆ ಪದಗಳನ್ನು ಮಾತ್ರ ಸಂಪಾದಿಸಿದ್ದಾರೆ. ಇದು ಈ ಕೃತಿಯ ವೈಶಿಷ್ಟ್ಯ ಹಾಲಕ್ಕಿ ಒಕ್ಕಲಿಗರಸಂಸ್ಕೃತಿ ಮತ್ತು ಭಾಷಾ ವಿಶೇಷ ಅಭ್ಯಾಸ ಮಾಡ ಬಯಸುವವರಿಗೆ ಈ ಕೃತಿ ಉಪಯುಕ್ತವಾಗಿದೆ.

ಮೂವತ್ತಾರು ಪುಟಗಳ ದೀರ್ಘ ಪ್ರಸ್ತಾವನೆಯಲ್ಲಿ ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ, ಗುಮಟೆ ವಾದ್ಯದ ಪ್ರಕಾರಗಳು ಮತ್ತು ಪ್ರಸ್ತುತ ಸಂಗ್ರಹ ದಲ್ಲಿಯ ಪದಗಳ ವಸ್ತು ವೈವಿಧ್ಯ ಇತ್ಯಾದಿಗಳನ್ನು ಕುರಿತು ವಿವರವಾಗಿ ಚರ್ಚಿಸ ಲಾಗಿದೆ.

ಈ ಸಂಗ್ರಹದಲ್ಲಿಯ ಗುಮ್ಟೆ ಪದಗಳನ್ನು ೧) ದೇವತಾ ಸ್ತುತಿ ಪ್ರಸಂಗ ೨) ಪೌರಾಣಿಕ ಪ್ರಸಂಗ ೩) ಐತಿಹ್ಯ ಪ್ರಸಂಗ ೪) ಸಾಮಾಜಿಕ ಪ್ರಸಂಗ ೫) ಸಮಾಜ ಶೀಲ ೬) ಸಂಕೀರ್ಣ ಪ್ರಸಂಗ ಎಂಬುದಾಗಿ ಆರು ಭಾಗಗಳಲ್ಲಿ ವಿಪಜಿಸಲಾಗಿದೆ. ಇಲ್ಲಿ ಒಟ್ಟಿಗೆ ೯೫ ಪದಗಳನ್ನು ಸಂಗ್ರಹಿಸಲಾಗಿದೆ.

ವಿವಿಧ ವಿಷಯಗಳಿಗೆ ಸಂಬಂಧಿಸಿದ ಈ ೯೫ ಪದಗಳು ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ ಮತ್ತು ಭಾಷಾ ವೈಶಿಷ್ಟ್ಯ ಅರಿಯಲು, ಅಭ್ಯಾಸ ಮಾಡಲು ಉಪಯುಕ್ತ ಮಾಹಿತಿ ಒದಗಿಸುತ್ತವೆ.

ಕಠಿನ ಶಬ್ದಗಳ ಅರ್ಥವನ್ನು ಆಯಾ ಪದದ ಕೆಳಗೇ ಕೊಟ್ಟಿರುವುದರಿಂದ, ಪದ ಗಳ ಅಭ್ಯಾಸಕ್ಕೆ ಬಹಳ ಅನುಕೂಲವಾಗಿದೆ. ಮತ್ತು ಪ್ರಸ್ತಾವನೆಯಲ್ಲಿಯೇ ಇಲ್ಲಿಯ ಪದಗಳ ಹಿನ್ನೆಲೆ ಇತ್ಯಾದಿಗಳನ್ನು ತಿಳಿಸಲಾಗಿರುವುದರಿಂದ ಮುಂದಿನ ಪದ್ಯಗಳ ಪರಿಶೀಲನೆಗೆ ಯಾವ ತೊಡಕೂ ಉಂಟಾಗುವುದಿಲ್ಲ. ಆದ್ದರಿಂದ ಈ ಕೃತಿ ಜಾನಪದ ಅಭ್ಯಾಸಿಗಳಿಗೆ ಉಪಯುಕ್ತ ಕೊಡುಗೆಯಾಗಿದೆ,

ಡಾ. ಎನ್. ಆರ್. ನಾಯಕ ಅವರು ನುರಿತ ಜಾನಪದ ತಜ್ಞರೆಂಬುದನ್ನು ಅವರ 'ಕೂಸಾಯ್ತು ನಮ್ಮ ಕೊಮರಾಗ' ಮತ್ತು 'ಹೇಳುತೇವೋ ಗುಮ್ಟೆ ಪದ ನಾವಾ' ಈ ಎರಡೂ ಕೃತಿಗಳು ದೃಢೀಕರಿಸುತ್ತವೆ. ಕಾರವಾರ ಜಿಲ್ಲೆಯ ವಿಶಿಷ್ಟ ಜಾನಪದವ ಪ್ರಕಟನೆಗಾಗಿ ಸದಾ ದುಡಿಯುತ್ತಿರುವ ಡಾ. ನಾಯಕರಿಂದ ಇನ್ನೂ ಮಹತ್ವದ ಕೃತಿಗಳು ಹೊರಬರುತ್ತವೆಂದು ನಂಬಬಹುದಾಗಿದೆ.

'ತ್ರಿಳದ ಮಾಡು ಹಾದರಾ' ಗ್ರಂಥವು ಶ್ರೀ ಬೈರಮಂಗಲ ರಾಮೇಗೌಡ ಅವರು ಸಂಪಾದಿಸಿ ಕೊಟ್ಟಿರುವ ಕೃತಿ; ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆ. ಈ ಸಂಗ್ರಹದಲ್ಲಿಯ ಪದಗಳನ್ನು ಬೆಂಗಳೂರ ಮತ್ತು ಬೆಳಗಾವಿ ಜಿಲ್ಲೆಯ ಗ್ರಾಮ ಗಳಲ್ಲಿ ಸಂಗ್ರಹಿಸಿರುವುದಾಗಿ ಸಂಪಾದಕರು ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ. ಆದರೆ ಯಾವ ಪದವನ್ನು ಯಾವ ಊರಿನಲ್ಲಿ (ಕೊನೆಯ ಪಕ್ಷ ಯಾವ ಜಿಲ್ಲೆಯಲ್ಲಿ) ಸಂಗ್ರಹಿಸಿದರೆಂಬುವರ ಬಗ್ಗೆ ಎಲ್ಲಿಯೂ ವಿವರ ಕೊಟ್ಟಿಲ್ಲ. ಹಾಡಿವವರ ವಿವರ ಗಳೂ ಇಲ್ಲ. ಹೀಗಾಗಿ ಪ್ರಾದೇಶಿಕ ಹಿನ್ನೆಲೆಯಲ್ಲಿ ಅಭ್ಯಾಸ ಮಾಡಬೇಕೆನ್ನುವವರಿಗೆ ಇಲ್ಲಿ ನಿರಾಶೆ ಕಾಯ್ದಿದೆ.

ಸಂಗ್ರಹಗೊಂಡಿರುವ ೨೪ ಪದಗಳಲ್ಲಿ ಕೊನೆಯದೊಂದನ್ನುಳಿದು ಎಲ್ಲವೂ ಗಂಡು–ಹೆಣ್ಣಿನ ಮೇಲಾಟ, ವಾದ–ವಿವಾದ, ಗುಣ–ಸ್ವಭಾವ ಮುಂತಾದ ವಿಷಯ ಗಳನ್ನು ಒಳಗೊಂಡಿವೆ. ಇಲ್ಲಿಯ ಬಹುತೇಕ ಪದಗಳು ಗೀ ಗೀ ಮೇಳದವರು ಹಾಡುವ ಹರದೇಶಿ–ನಾಗೇಶಿ ಸಂಪ್ರದಾಯದವುಗಳಾಗಿರುವುದೇ ಇದಕ್ಕೆ ಕಾರಣ. ಇಂಥ ಹಾಡುಗಳಲ್ಲಿ ಧಾಟಿಗೆ ಸಂಬಂಧಿಸಿದ ಏರು ಇಳುವು. ಚಾಲ ಇತ್ಯಾದಿಗಳಿಗೆ ಪ್ರಾಮುಖ್ಯತೆ ಬಹಳ, ಈ ಪ್ರಮುಖ ಅಂಶಗಳ ಬಗ್ಗೆ ಸಂಪಾದಕರು ಬಹಳಷ್ಟು ಜಾಗರೂಕರಾಗಿರಬೇಕು. ಇಲ್ಲಿಯ ಕೆಲವು ಪದ್ಯಗಳಲ್ಲಿ ಮಾತ್ರ ಏರು, ಇಳುವು, ಚಾಲ ಇತ್ಯಾದಿಗಳನ್ನು ಸಂಪಾದಕರು ಸೂಚಿಸಿದ್ದಾರೆ. ಆದರೆ ಬಹಳಷ್ಟು ಪದ್ಯಗಳ ಬಗ್ಗೆ. ಈ ಬಗೆಯ ಸೂಚನೆ ಕೊಟ್ಟಿಲ್ಲ. ಇದೊಂದು ದೊಡ್ಡ ಕೊರತೆಯೆಂದು ಅನಿಸುತ್ತದೆ.

ಪ್ರಸ್ತಾವನೆಯಲ್ಲಿ ಹರದೇಶಿ–ನಾಗೇಶಿ ಪರಂಪರೆಯ ಬಗೆಗೆ ಕೊಟ್ಟಿರುವ ವಿವರ ಸಾಲದು. ಹಾಡುಗಾರಿಕೆ ಪದ್ಧತಿ. ಮೇಳಗಳ ರೀತಿ ನೀತಿ ಕುರಿತೂ ಮಾಹಿತಿ ಬೇಕಿತ್ತು. ಇವುಗಳಿಲ್ಲದ್ದರಿಂದ ಕೊರತೆ ಇನ್ನಷ್ಟು ಹೆಚ್ಚುಗಿದೆ.

ಪ್ರಸ್ತುತ ಸಂಗ್ರಹದಲ್ಲಿ ಹೆಣ್ಣು–ಗಂಡುಗಳ ಜೀವನ. ಸಮಸ್ಯೆ ಮೇಲು–ಕೀಳೆಂಬ ವಾಗ್ವಾದ ಕುರಿತು ಕೆಲವು ಒಳ್ಳೆಯ ಹಾಡುಗಳು ಸಂಗ್ರಹಗೊಂಡಿವೆ. ಆದರೆ ಕೊನೆ ಯಲ್ಲಿ ಸಾವಳಗಿ ಶ್ರೀ ಶಿವಲಿಂಗ ಮಹಾಶಿವಯೋಗಿಗಳವರ ಲಾವಣಿ ಸೇರ್ಪಡೆ

ಮಾಡಿರುವುದು ಮಾತ್ರ ಉಚಿತವೆನಿಸುವುದಿಲ್ಲ. 'ತಿಳಿದು ಮಾಡು ಹಾವರಾ' ಎಂಬ ಶೀರ್ಷಿಕೆ ನೆನೆದಾಗಂತೂ ಈ ಕೊನೆಯ ಪದದ ಸೇರ್ಪಡೆ ಇನ್ನಷ್ಟು ಆಭಾಸವೆನಿಸುತ್ತದೆ.

ಸಂಗ್ರಹದ ಶೀರ್ಷಿಕೆಗೂ ಅದರಲ್ಲಿಯ ಪದಗಳ ಒಟ್ಟು ಆಶಯಕ್ಕೂ ಅಷ್ಟೇನೂ ಹೊಂದಾಣಿಕೆಯಿಲ್ಲ. ಒಟ್ಟಿನಲ್ಲಿ ಸಂಪಾದನೆಯ ಹೆಚ್ಚಿನ ಹೊಣೆಗಾರಿಕೆ, ಈ ಕೃತಿಯ ಪ್ರಕಟನೆಯಲ್ಲಿ ಎದ್ದು ಕಾಣದಿದ್ದರೂ ಕೆಲವು ಉತ್ತಮ ಪದಗಳು ಬೆಳಕು ಕಂಡಿರುವುದರಿಂದ ಇದೊಂದು ಒಳ್ಳೆಯ ಸಂಗ್ರಹವೆನ್ನಬೇಕಾಗುತ್ತದೆ.

ಮದುವೆ ಹಾಡುಗಳ ಇನ್ನೊಂದು ಸಂಗ್ರಹವಾಗಿರುವ 'ಭದ್ರೇರು ಹಸೆಯ ಬರೆದಾರೆ' ಅತ್ಯಂತ ಗಮನಾರ್ಹ ಕೃತಿ. ಶ್ರೀ ಎ. ಕೊಟ್ರಪ್ಪ ಅವರು 'ಸಾಹಿತ್ಯಾನಂದ' ಎಂಬ ಅಂಕಿತದಿಂದ ಈ ಗ್ರಂಥ ಹೊರತಂದಿದ್ದಾರೆ.

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಹೂವಿನಗಡಗಲಿ ತಾಲೂಕಿನ ಹಳ್ಳಿಗಳಲ್ಲಿಯ ಮದುವೆ ಪ್ರಸಂಗಗಳಲ್ಲಿ ಹಾಡುವ ಪದಗಳನ್ನು ಈ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿಯ ಹಾಡುಗಳು ತ್ರಿಪದಿ, ಏಳೆ ಮತ್ತು ಚೌಪದಿಯ ಛಾಯೆಯುಳ್ಳ ಛಂದಸ್ಸಿನಲ್ಲಿವೆ.

ಪ್ರಸ್ತಾವನೆಯಲ್ಲಿ 'ಸೋಬಾನೆ' ಶಬ್ದದ ಉಗಮ ಕುರಿತು ಚರ್ಚಿಸಿದ್ದಾರೆ. ಶೂದ್ರರಲ್ಲಿ ಸೋಬಾನ ಹಾಡುಗಳಿಗೆ ಪ್ರಾಮುಖ್ಯತೆ ಇರುವುದಕ್ಕೆ ಕಾರಣ ವಿವರಿಸುವ ಪಾರಂಪರಿಕ ಕಥೆಯೊಂದನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಸಾಂಕೇತಿಕವಾಗಿರುವ ಈ ಕಥೆ ಅರ್ಥಪೂರ್ಣವಾಗಿದೆ.

ಮದುವೆ ಪ್ರಸಂಗದ ವಿವಿಧ ಸಮಯದಲ್ಲಿ ಹಾಡುವ ಉತ್ತಮ ಹಾಡುಗಳನ್ನು ಇಲ್ಲಿ ಸಂಗ್ರಹಿಸಲಾಗಿವೆ. ಎಲ್ಲ ಹಾಡುಗಳನ್ನು ೩೨ ಶೀರ್ಷಿಕೆಗಳಡಿಯಲ್ಲಿ ವಿಭಜಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಪ್ರಾದೇಶಿಕ ಹಿನ್ನೆಲೆಯ ಮದುವೆ ಸಂಪ್ರದಾಯ ಕುರಿತ ಈ ಸಂಗ್ರಹ ಸೊಗಸಾಗಿದೆ. ಆದರೆ ಮದುವೆಯ ವಿವಿಧ ವಿಧಿವಿಧಾನಗಳ ವಿವರಗಳ ಹಿನ್ನೆಲೆಯಲ್ಲಿ ಹಾಡುಗಳನ್ನು ಕೊಟ್ಟಿದ್ದರೆ ಸಂಗ್ರಹದ ಉಪಯುಕ್ತತೆ ಇನ್ನೂ ಹೆಚ್ಚುತ್ತಿತ್ತು.

ದೀಪ ನೀಡುವ ಸಂಪ್ರದಾಯ ಬಹಳ ಕಡೆಗೆ ಇದೆ. ಈ ಪ್ರಸಂಗದಲ್ಲಿ ಹಾಡು ವುದೂ ಉಂಟು. ಇಂಥ ಸಂಪ್ರದಾಯಕ್ಕೆ ಸಂಬಂಧಿಸಿದ ಪದಗಳನ್ನು ಶ್ರೀ ಅರವಿಂದ ಮಾಲಗತ್ತಿ ಅವರು 'ಆಣೀ ಪೀಣೀ' ಹೆಸರಿನಿಂದ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹೆಚ್ಚು

ಕಾರ್ಯವಾಗದಿರುವ ಹೊಸ ಕೇತ್ರವೊಂದರಲ್ಲಿಯು ಪದಗಳನ್ನು ಸಂಪಾದಿಸಿಕೊಟ್ಟದ್ದಕ್ಕಾಗಿ ಶ್ರೀ ಅರವಿಂದ ಮಾಲಗತ್ತಿಯವರು ಅಭಿನಂದನಾರ್ಹರು.

ಜಾನಪದದಲ್ಲಿಯು ಅಶ್ಲೀಲ ಸಾಹಿತ್ಯ ಹೊರತರುವಲ್ಲಿ ಶ್ರೀ ಬಿ. ಬಿ. ಬಿರಾದಾರ ಅವರು ಗಮನಾರ್ಹರಾಗಿದ್ದಾರೆ. ಅವರ 'ಬತ್ತಲೆ ಗಾದೆಗಳು' ಸ್ವಾಭಾವಿಕವಾಗಿ ಜನಪ್ರಿಯವಾಗಿವೆ. ಅಂಥ ಮತ್ತೊಂದು ಕೃತಿ 'ಬೆತ್ತಲೆ ಹೋಳಿ ಹಾಡುಗಳು' ಅವರಿಂದಲೇ ಹೊರಬಂದಿದೆ. ಜಾನಪದರ ಮನಸ್ಸಿನ ಒಳಪದರಿನಲ್ಲಿಯು ಸುಪ್ತ ಭಾವನೆಗಳನ್ನು ಅಭ್ಯಸಿಸಲು ಈ ಹಾಡುಗಳು ಸಹಾಯಕವಾಗುತ್ತವೆಂಬುದರಲ್ಲಿ ಸಂಶಯವಿಲ್ಲ. ಇಲ್ಲಿಯು ಹಾಡುಗಳು ಅಶ್ಲೀಲವಾಗಿರುವುದು ಸರಿ ಆದರೆ ಹೋಳಿ ಹುಣ್ಣಿವೆಯಂದು ಗ್ರಾಮೀಣ ಭಾಗದಲ್ಲಿ ಇದಕ್ಕೂ ಹೆಚ್ಚಿನ ಅಶ್ಲೀಲ ಹಾಡುಗಳು ಹೊರ ಬರುತ್ತವೆಂಬುದನ್ನು ನಾವು ಮರೆಯುವಂತಿಲ್ಲ.

'ಕ್ರೈಸ್ತ ಜನಪದ ಗೀತೆಗಳು' ಶ್ರೀ ಬಿ. ಎಸ್. ತಲ್ವಾಡಿಯವರ ಕೃತಿ. ಇದು ಈ ದಿಶೆಯಲ್ಲಿ ಮೊದಲ ಕೃತಿಯಾಗಿರುವಂತಿದೆ. ಆದರೆ ಇಲ್ಲಿಯ ಗೀತೆಗಳಲ್ಲಿ ಕ್ರೈಸ್ತ ಮತದ ಸ್ವಂತಿಕೆಯನ್ನು ಎತ್ತಿ ತೋರಿಸುವ ಶಕ್ತಿಯಿಲ್ಲವೆಂಬುದು ಸ್ಪಷ್ಟ. ಹಿಂದೂ ದೇವ-ದೇವತೆಗಳಿಗೆ ಸಂಬಂಧಿಸಿದ ಹಾಡುಗಳಲ್ಲಿ ಪ್ರಾಸಂಗಿಕವಾಗಿ ಕ್ರೈಸ್ತ ಹೆಸರುಗಳನ್ನು ಸೇರಿಸಿ,ಬದಲಿಸಿರುವುದರಿಂದ ಹಾಡುಗಳನ್ನೂ ಮತಾಂತರಗೊಳಿಸಿದಂತಾಗಿದೆ. ಜಾನಪದಕ್ಕೆ ಈ ಕೃತಿಯ ಪ್ರವೇಶದಿಂದ ಹೆಚ್ಚಿನ ಲಾಭವೇನೂ ಆಗಿಲ್ಲವೆಂದು ಹೇಳಲೇ ಬೇಕಾಗುತ್ತದೆ.

'ಗುಮ್ಮಳ್ಳಿ ಕದನ'ವೆಂಬುದು ಶ್ರೀ ಎಚ್. ವಿ. ವೀರನಾಯಕ ಅವರ ಕೃತಿ. ಉಪಲಬ್ಧ ಹಾಡುಗಳ ಸಹಾಯದಿಂದ ಹದಿನೈದನೆಯ ಶತಮಾನದಲ್ಲಿ ಜರುಗಿದ ಕಾಳಗವೊಂದರ ಚಿತ್ರಣ ಕೊಡುವುದೇ ಈ ಕೃತಿಯ ಉದ್ದೇಶ. ಶಿರಾ ಪಟ್ಟಣದ ರಂಗಣ್ಣ ಮತ್ತು ಪೂವಲ ಕೆಂಗಣ್ಣ ಹೆಸರಿನ ನಾಯಕರಿಬ್ಬರ ನಡುವೆ ನಡೆದ ಯುದ್ಧವೊಂದರ ವೃತ್ತಾಂತವು ಇಲ್ಲಿಯ ಮುಖ್ಯ ವಸ್ತು. ಜಾನಪದ ಸತ್ವದಿಂದ ಕೂಡಿಕೊಂಡಿರುವ ಸುಮಾರು ೯೦ ತ್ರಿಪದಿಗಳನ್ನು ಆಯ್ದುಕೊಂಡು ಕಾಳಗದ ಕತೆಯನ್ನು ಶ್ರೀ ವೀರನಾಯಕ ಅವರು ನಿರೂಪಿಸಿದ್ದಾರೆ.

ಶ್ರೀ. ಎಚ್. ವಿ. ವೀರನಾಯಕರು ತಮಗೆ ಬೇಕಾದ ತ್ರಿಪದಿಗಳನ್ನು ಆಯ್ದುಕೊಂಡು ಯುದ್ಧದ ವಿವರ ಹೇಳುತ್ತ ಹೋಗುವುದಕ್ಕೆ ಬದಲಾಗಿ, ಎಲ್ಲ ಪದಗಳನ್ನೂ (ಒಂದೂ ಬಿಡದೆ) ಸಂಗ್ರಹಿಸಿ ಕೊಟ್ಟಿದ್ದರೆ ನಿಜವಾದ ಜಾನಪದ ಕಾರ್ಯವಾಗುತ್ತಿತ್ತು ಶ್ರೀಯುತರು ಹಾಗೆ ಮಾಡಿಲ್ಲವಾದ್ದರಿಂದ ಜಾನಪದ (folklore) ಸಂಗ್ರಹವನ್ನು ಶಾಸ್ತ್ರೀಯವಾಗಿ ಮಾಡುವ ಪೂರ್ವಸಿದ್ಧತೆ ಇವರಿಗೆ ಇಲ್ಲವೇನೋ ಎಂಬ ಸಂಶಯ

ಬರುತ್ತದೆ. ಇನ್ನು ಮೇಲಾದರೂ ಅವರು ಶಾಸ್ತ್ರೀಯತೆ ಅರಿತುಕೊಳ್ಳಲೆಂದು ಅಪೇಕ್ಷೆ ವ್ಯಕ್ತ ಮಾಡಬೇಕಾಗುತ್ತದೆ.

ಶ್ರೀ ಟಿ. ಎಂ. ಚಂದ್ರಶೇಖರಶಾಸ್ತ್ರೀ ಅವರ 'ಸ್ತ್ರೀ ನೀತಿ-ಮಂಗಳ ಹಾಡುಗಳು' ಸಂಗ್ರಹ ಪ್ರಕಟವಾಗಿರುವುದಾಗಿ ತಿಳಿದು ಬರುತ್ತದೆ.

ಜನಪದ ಸಾಹಿತ್ಯ ಸಂಗ್ರಹ ಕಾರ್ಯವನ್ನು ವ್ಯಾಪಕವಾಗಿ ಮಾಡಿದ ಶ್ರೀ ಕ. ರಾ. ಕೃ ಅವರ 'ಜನಪ್ರಿಯ ಜಾನಪದ ಗೀತೆಗಳು', 'ಜನಪದ ಹಾಸ್ಯಲಹರಿ', 'ಆಯ್ದ ಮುತ್ತುಗಳು', 'ಆಯ್ದ ಜನಪದ ಗೀತೆಗಳು' ಪುನರ್ ಮುದ್ರಣಗೊಂಡಿರುವುದಾಗಿ 'ಗ್ರಂಥಲೋಕ'ದಿಂದ ಕಂಡು ಬರುತ್ತದೆ. ಜನಪದ ಪದ್ಯ ಮತ್ತು ಗದ್ಯ ಪ್ರಕಾರಗಳೆರಡರಲ್ಲೂ ಸ್ಥಾನ ಪಡೆಯಬಲ್ಲ ಪ್ರಕಾರವೆಂದರೆ ಜನಪದ ಶಿಶುಪ್ರಾಸಗಳು. ಇಂಥ ಸಂಗ್ರಹವೊಂದನ್ನು ಶ್ರೀ ಚಿಕ್ಕಮುರಳಿ ಬೋರೇಗೌಡರು 'ಗ್ರಾಮಾಂತರ ಶಿಶು ಪ್ರಾಸಗಳು' ಹೆಸರಿನಿಂದ ಬೆಳಕಿಗೆ ತಂದಿದ್ದಾರೆ. ಒಟ್ಟಿಗೆ ೧೮೫ ಶಿಶುಪ್ರಾಸಗಳು ಇಲ್ಲಿವೆ. ಕೆಲವು ತೀರ ಸಣ್ಣವು ಅಂದರೆ ಎರಡು ಸಾಲಿನವು ಉಂಟು. ಕೆಲವು ಒಂದೂವರೆ ಪುಟವಷ್ಟು ದೊಡ್ಡ ಗಾತ್ರದವೂ ಉಂಟು, ಮಧ್ಯಮ ಗಾತ್ರದವುಗಳ ಸಂಖ್ಯೆ ಹೆಚ್ಚಿಗಿದೆ.

ಶ್ರೀ ಬೋರೇಗೌಡರ ಶಾಸ್ತ್ರೀಯತೆ, ತಾಳ್ಮೆ ಮತ್ತು ಅಧ್ಯಯನಶೀಲತೆಗಳು ಈ ಕೃತಿಯ ತುಂಬೆಲ್ಲ ಎದ್ದು ಕಾಣುತ್ತವೆ. ದೀರ್ಘವೂ ವಿವರಪೂರ್ಣ ಮತ್ತು ಅಭ್ಯಾಸಪೂರ್ಣವೂ ಆದ ಪ್ರಸ್ತಾವನೆ ಅತ್ಯಂತ ಉಪಯುಕ್ತವಾಗಿದೆ. ಸಿ. ಪಿ. ಕೆ. ಅವರ ಚಿಕ್ಕ-ಚೊಕ್ಕ ಮುನ್ನುಡಿಯಿದೆ. ಪಾಠಾಂತರಗಳನ್ನೂ ಕೊಡಲಾಗಿದೆ. ಅನುಬಂಧವಾಗಿ ಕೊಟ್ಟಿರುವ ಟಿಪ್ಪಣಿಗಳು ಮತ್ತು ಅರ್ಥಕೋಶ ಅಭ್ಯಾಸಿಗಳಿಗೆ ಅತ್ಯಂತ ಪ್ರಯೋಜನಕಾರಿ. ಶ್ರೀ ಬೋರೇಗೌಡರ ಮೊದಲ ಕೃತಿಯಾದರೂ ಪ್ರಬುದ್ಧ ಜಾನಪದ ತಜ್ಞನ ಕೃತಿಯೆಂಬಂತೆ 'ಗ್ರಾಮಾಂತರ ಶಿಶುಪ್ರಾಸಗಳು' ಶಾಸ್ತ್ರೀಯವಾಗಿ ಸಂಪಾದನೆಗೊಂಡಿವೆ. ಆದ್ದರಿಂದ ಶ್ರೀಯುತರನ್ನು ಹಾರ್ದಿಕವಾಗಿ ಅಭಿನಂದಿಸಬೇಕಾಗುತ್ತದೆ.

ಜನಪದ ಗದ್ಯ ಕೃತಿಗಳು

ಕೆಲವು ಗದ್ಯ ಕೃತಿಗಳು ಅವರಲ್ಲಿಯೂ ಕಥಾ ಸಂಕಲನಗಳು ಈ ವರ್ಷಾವಧಿಯಲ್ಲಿ ಪ್ರಕಟವಾಗಿವೆ. ಆದರೆ ನಿಜವಾದ ಜಾನಪದ ಸತ್ವವುಳ್ಳವು ಮತ್ತು ಶಾಸ್ತ್ರೀಯ-ವಾಗಿ ಸಂಗ್ರಹಿಸಿದವುಗಳು ಮಾತ್ರ ಒಂದೂ ಇಲ್ಲವೆಂದು ವಿಷಾದದಿಂದ ಹೇಳ-ಬೇಕಾಗುತ್ತದೆ.

ಹದಿನಾರು ದೀರ್ಘ ಕಥೆಗಳನ್ನು ಶ್ರೀ. ಜಿ. ವಿಶ್ವೇಶ್ವರಪ್ಪನವರು 'ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು' ಹೆಸರಿನಿಂದ ಪ್ರಕಟಿಸಿದ್ದಾರೆ. ಕಥಾನಿರೂಪಕರ ಭಾಷೆಯಲ್ಲಿ ಈ ಕಥೆಗಳಿಲ್ಲ. ವಿವಿಧ ವೃತ್ತಿಗಾಯಕರು ಪ್ರಾಸಂಗಿಕವಾಗಿ ಹಾಡುವ ಕಥನಗೀತೆಗಳನ್ನು ಗದ್ಯರೂಪದಲ್ಲಿ ಕೊಟ್ಟಿರುವಂತೆ ಇಲ್ಲಿಯ ಕಥೆಗಳೆಲ್ಲ ಇವೆ. ಆದ್ದರಿಂದ ಜನಪದ ಕಥಾ ಪ್ರಕಾರದಲ್ಲಿ ಈ ಸಂಗ್ರಹಕ್ಕೆ ಮಹತ್ವದ ಸ್ಥಾನ ಹೇಗೆ ಸಿಗಬೇಕು ?

ಹಳೆಯ ತಲೆಮಾರಿನ ಜಾನಪದ ತಜ್ಞರಲ್ಲೊಬ್ಬರಾದ ಡಾ : : ಎಲ್. ಆರ್. ಹೆಗಡೆ 'ಮಲೆನಾಡ ಸೆರಗಿನ ಕಥೆಗಳು'. ಹೆಸರಿನ ಸಂಗ್ರಹ ಹೊರತಂದಿದ್ದಾರೆ. ಧಾರವಾಡ ಜಿಲ್ಲೆಯ ಜಾನಪದ ವೃತ್ತಿಕಲಾವಿದರಾದ ವೇಷಗಾರರಿಂದ ಸಂಗ್ರಹಿಸಿದ ಕತೆಗಳಿವು. ವೇಷಗಾರರು ಕಥಾ ನಿರೂಪಕರಲ್ಲ, ಕೇವಲ ವಿವಿಧ ವೇಷಧರಿಸಿ ಅಭಿನಯಾದಿಗಳ ಮೂಲಕ ಮನರಂಜನೆ ಒದಗಿಸುವವರು. ಆದ್ದರಿಂದ ಇಂಥವರು ಯಾವಾಗ ಕಥೆ ಹೇಳುತ್ತಾರೆಂಬುದು ಮುಖ್ಯ ಸಮಸ್ಯೆ. ಇವು ಕಥೆಗಾರರಲ್ಲದವರ ಕಥೆಗಳು. ಹೀಗಾಗಿ, ಇದೊಂದು ಅಶಾಸ್ತ್ರೀಯ ಸಂಗ್ರಹವಾಗಿದೆಯನ್ನದೆ ವಿಧಿಯಿಲ್ಲ.

ಅಜ್ಜಿ ಹೇಳಿದ ಕಥೆಗಳನ್ನು ಸಂಗ್ರಹಿಸಿ 'ಚಿನ್ನದ ಮಲ್ಲಿಗೆ' ಯನ್ನು ವಸಂತ ಚಂದ್ರಶೇಖರ ಅವರು ಹೊರತಂದಿದ್ದಾರೆ. ಕಥೆಗಳು ಅಜ್ಜಿಯ ಭಾಷೆಯಲ್ಲಿ ಇಲ್ಲ. ಸಂಪಾದಕರ ಭಾಷೆಯಲ್ಲಿವೆ. ನಿರೂಪಕರ ಹೆಸರೂ ಹೇಳಿಲ್ಲ. ಹೀಗಾಗಿ ಈ ಸಂಗ್ರಹವೂ ನಿರಾಶೆಯನ್ನುಂಟು ಮಾಡುತ್ತದೆ.

ಬೇರೆ ಭಾಷೆಗಳಿಂದ ಅನುವಾದ ಮಾಡಿದ ಎರಡು ಕೃತಿಗಳೂ ಈ ಅವಧಿಯಲ್ಲಿ ಕನ್ನಡಕ್ಕೆ ಬಂದಿವೆ. ಮ. ನಿ. ತೋಳನೂರ ಅವರು ಮಕ್ಕಳಿಗಾಗಿ ದೇಶ ವಿದೇಶಗಳ ಜನಪದ ಕಥೆಗಳನ್ನು ಅನುವಾದಿಸಿ 'ಬಟ್ಟಲು ತುಂಬ ಬಾರಿಕಾಯಿ' ಹೆಸರಿನಲ್ಲಿ ಪ್ರಿಂಟ ಮಾಡಿದ್ದಾರೆ. ಮತ್ತು ಅಂಡರಸನ್ ಅವರ ಕೆಲವು ಕಥೆಗಳನ್ನು ನೀಲತ್ತಹಳ್ಳಿ ಕಸ್ತೂರಿ ಅವರು ಅನುವಾದಿಸಿ 'ನಿಜವಾದ ರಾಜಕುಮಾರಿ ಮತ್ತು ಇತರ ಕಿನ್ನರ ಕಥೆಗಳು' ಹೆಸರಿನಿಂದ ಬೆಳಕಿಗೆ ತಂದಿದ್ದಾರೆ.

ಜನಪದ ಸಾಹಿತ್ಯದಲ್ಲಿ ಗಾದೆ ಪ್ರಕಾರ ಅತ್ಯಂತ ಮಹತ್ತ್ವದ್ದು: ಸತ್ವಪೂರ್ಣವಾದುದು. ಇಂಥ ಪ್ರಮುಖ ಪ್ರಕಾರದಲ್ಲಿ ಈ ವರ್ಷದ ಸಾಧನೆಯೆಂದರೆ ನಾಲ್ಕು ಸಂಗ್ರಹಗಳು.

ಕೆ. ಎಸ್. ಉಮಾಪತಿ ಅವರು 'ವಿದೇಶ ಗಾದೆಗಳು' ಶ್ರೀ ಕೃಷ್ಣಭಟ್ಟ ಅರ್ತಿಕಜೆ ಅವರು 'ತುಳುಗಾದೆಗಳು' ಎಂಬ ಹೆಸರಿನ ಗ್ರಂಥಗಳನ್ನು ಕನ್ನಡಿಗರಿಗೆ ನೀಡಿದ್ದಾರೆ.

'ಹಬ್ಬದ ದಿನವೂ ಹಳೇ ಗಂಡನೆ' ಎಂಬುದಾಗಿ ಗಾದೆಯನ್ನೇ ಶೀರ್ಷಿಕೆಯಾಗಿ ಪಡೆದ ಗ್ರಂಥವು ಸುಧಾರ್ಥಿ ಅವರ ಕೊಡುಗೆಯಾಗಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು 'ಗಾದೆಗಳು' ಹೆಸರಿನಿಂದ ಸಂಗ್ರಹವೊಂದನ್ನು ತಂದಿದ್ದಾರೆ. ಇಲ್ಲಿಯ ವರೆಗಿನ ವಿವಿಧ ಸಂಗ್ರಹಗಳಿಂದ ಆಯ್ದ ಗಾದೆಗಳು ಇಲ್ಲಿವೆ. ಅತ್ಯುತ್ತಮ ಗಾದೆಗಳನ್ನು ಸಂಗ್ರಹಿಸಿ ಕೊಡುವ ಹಂಬಲದಿಂದ ಈ ಕೃತಿ ಹೊರಬಂದಿದೆ. ತಜ್ಞರ ಕಣ್ಣರಿಕೆಯಲ್ಲಿ ಸಿದ್ಧವಾಗಿರುವ ಈ ಕೃತಿಯಲ್ಲೂ ಕೆಲವು ಗಾದೆಗಳು ಪುನರುಕ್ತವಾಗಿರುವುದುಂಟು. ಕೆಲವು ಪಡೆನುಡಿಗಳನ್ನು ಗಾದೆಯೆಂದು ಭ್ರಮಿಸಿ ಇಲ್ಲಿ ಸೇರಿಸಿರುವುದುಂಟು. ಜಾನಪದಕ್ಕಾಗಿಯೇ ಮೀಸಲಾಗಿರುವ ಸಂಸ್ಥೆಯೊಂದರ ಪ್ರಕಟನೆಯಲ್ಲಿ ಇಂಥ ದೋಷಗಳು ಉಳಿಯಲೇ ಬಾರದು; ಆದರೆ ಉಳಿದಿವೆ.

ಬಯಲಾಟ ಯಕ್ಷಗಾನ

ಜಾನಪದ ಸಾಹಿತ್ಯ ಪ್ರಕಾರದಲ್ಲಿ ಬಯಲಾಟಗಳಿಗೆ ವಿಶಿಷ್ಟ ಸ್ಥಾನವಿದೆ. ಈ ಕ್ಷೇತ್ರದಲ್ಲಿ ಇನ್ನೂ ಬಹಳಷ್ಟು ಕೆಲಸವಾಗಬೇಕಿದೆ. ಈ ಪ್ರಕಾರದಲ್ಲಿ ಶ್ರೀ ಎಂ. ಬಿ. ಧೂಪದ ಅವರ 'ಭಕ್ತ ಮಾರ್ಕಂಡೇಯ' ಹೆಸರಿಸಬೇಕಾದ ಒಂದೇ ಒಂದು ಕೃತಿ. ಇದನ್ನು ಮೂಡಲಪಾಯದ ದೊಡ್ಡಾಟವೆಂದು ಶ್ರೀ ಧೂಪದ ಅವರು ಕರೆದಿದ್ದಾರೆ. ಮತ್ತು ನೇರವಾಗಿ ಬಯಲಾಟ ಸಂಗ್ರಹಿಸಿ ಬಿಟ್ಟಿದ್ದಾರೆ. ಆದರೆ ಯಾವುದೇ ವಿಷಯ ಕುರಿತು ಎಳ್ಳಷ್ಟೂ ವಿವರ ಕೊಡುವ ಗೋಜಿಗೆ ಅವರು ಹೋಗಿಲ್ಲ. ಆದ್ದರಿಂದ ಅಭ್ಯಾಸಿಗಳಿಗೆ ನಿರಾಶೆಯೊಂದನ್ನು ಬಿಟ್ಟು ಬೇರೇನೂ ಇಲ್ಲಿ ಸಿಗುವುದಿಲ್ಲ.

ಯಕ್ಷಗಾನಕ್ಕೆ ಸಂಬಂಧಿಸಿದಂತೆ ಕೆಲವು ಕೃತಿಗಳು ಹೊರಬಂದಿವೆಯೆಂಬುದಾಗಿ ತಿಳಿದು ಬರುತ್ತದೆ. ಅವುಗಳನ್ನು ದೊರಕಿಸಲು ಮಾಡಿದ ಪ್ರಯತ್ನ ಫಲಿಸಲಿಲ್ಲ. ಕೊರ್ಗಿ ಸೂರ್ಯ ನಾರಾಯಣ ಉಪಾಧ್ಯಾಯರಿಂದ ರಚಿತವಾದ 'ಗುರುದ್ರೋಣ', ಎಂ. ಎ. ಹೆಗಡೆ ಅವರ 'ಆದಿಪರ್ವ', ಅಮೃತ ಸೋಮೇಶ್ವರರ 'ಅಮರವಾಹಿನಿ' ಇವು ದೊರೆಯುವ ಕೆಲವು ಹೆಸರುಗಳು ಮಾತ್ರ. ಇವುಗಳಲ್ಲದೆ ಕುಮಟೆಯ ಶ್ರೀ ರಾಮನಾಥ ಯಕ್ಷಗಾನ ವ ಂಡಳಿಯ ನಾಲ್ವತ್ತು ವರ್ಷಗಳ ಸಾಧನೆ ಮತ್ತು ಕಲಾ ವಿದರ ಪರಿಚಯವನ್ನೊಳಗೊಂಡ ಪುಸ್ತಿಕೆಯೊಂದು 'ಚಿನ್ನದ ಪೆಟ್ಟಿಗೆ' ಹೆಸರಿನಿಂದ ಶ್ರೀ ವಿನಾಯಕ ಕುರ್ತಕೋಟಿ ಅವರಿಂದ ಬೆಳಕು ಕಂಡಿರುತ್ತದೆಯೆಂದೂ ಗೊತ್ತಾಗುತ್ತದೆ.

ಜಾನಪದ ತತ್ವ, ವಿಮರ್ಶೆ—ಪರಿಚಯ

ಜಾನಪದ ತತ್ತ್ವಗಳಿಗೆ, ಸಂಬಂಧಿಸಿದಂತೆ ಒಂದೇ ಗ್ರಂಥ ಹೊರಬಂದಿದೆಯಾ

ದರೂ ಸತ್ವಪೂರ್ಣವಾಗಿದೆ. ಜಾನಪದ ಅಭ್ಯಾಸಿಗಳಿಗೆ ಮಹತ್ವದ ಆಕರವಾಗಿದೆ. ಡಾ. ದೇವೇಂದ್ರಕುಮಾರ ಹಕಾರಿ ಅವರ 'ಜಾನಪದದ ಮೂಲಭೂತ ತತ್ವಗಳು' ಎಂಬುದೇ ಆ ಗ್ರಂಥ. ಇದರಲ್ಲಿ ಎರಡು ಭಾಗಗಳಿವೆ. "ಹಿನ್ನೆಲೆ" ಹೆಸರಿನ ಮೊದಲನೆಯ ಭಾಗದಲ್ಲಿ ೧) ಜಾನಪದ ಅಧ್ಯಯನದ ಸ್ವರೂಪ-ವ್ಯಾಪ್ತಿ ೨) ಜಾನಪದ ಮತ್ತು ಇತರ ವಿಜ್ಞಾನಗಳು(೩ ಜಾನಪದ ಕ್ಷೇತ್ರ ಕಾರ್ಯ ವಿಧಾನಗಳು ಮತ್ತು ಸಿದ್ಧಾಂತಗಳು ಎಂಬುದಾಗಿ ಮೂರು ಮಹತ್ವದ ಪ್ರಕರಣಗಳಿವೆ. ಇಲ್ಲಿಯ ವಿಷಯಗಳನ್ನು ಪಾಶ್ಚಿಮಾತ್ಯ ಮತ್ತು ಪೌರಾತ್ಯ ಜಾನ ಪದ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ. "ನೆಲೆ" ಎಂಬ ಹೆಸರಿನ ಎರಡನೆಯ ಭಾಗದಲ್ಲಿ ಜಾನಪದದ ಐದು ಮೂಲಭೂತ ತತ್ವಗಳನ್ನು ಕುರಿತು ವಿವರಿಸಲಾಗಿದೆ. ೧) ಭೌಗೋಲಿಕ ಪ್ರಾದೇಶಿಕ ತತ್ವ ೨) ಜನಾಂಗಿಕ ಕ್ರಿಯಾತತ್ವ ೩) ಭಾಷಾಸಾಹಿತ್ಯ ತತ್ವ ಅಥವಾ ಶ್ರವ್ಯಕಲಾ ತತ್ವ ೪) ಧರ್ಮಕಲಾ ತತ್ವ ೫) ಸಂಸ್ಕೃತಿ ಸಂವಹನ ತತ್ವಗಳೆಂಬ ಈ ಐದನ್ನು ಕುರಿತು ಸಂಕ್ಷಿಪ್ತ ವಿವರ ನೀಡಿದ್ದಾರೆ. ಜಾನಪದ ವಿದ್ವಾಂಸರು ಗಂಭೀರವಾಗಿ ವಿಚಾರ ಮಾಡಲು ಸಾಮಗ್ರಿಯನ್ನು ಸಿದ್ಧ ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ವಿವರವಾದ ಚಿಂತನೆಗೆ ಮೂಲ ಸಾಮಗ್ರಿ ಒದಗಿಸಿದ್ದಾರೆ. ಈ ಬಗೆಯ ತಾತ್ವಿಕ ವಿವೇಚನೆಯ ಕೃತಿ ಈ ವರ್ಷದಲ್ಲಿ ಇದೊಂದೇಯಾಗಿರುವುದರಿಂದ ಇದರ ಕರ್ತೃ ಪ್ರಶಂಸಾರ್ಹರು.

ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಬಿ. ಆರ್. ಪ್ರೊಜೆಕ್ಟನಲ್ಲಿ ೧೯೮೨ರಲ್ಲಿ ನಡೆದ ಜಾನಪದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ೨೦ ಪ್ರಬಂಧಗಳ ಸಂಕಲನವನ್ನು 'ಮಲೆನಾಡು ಜಾನಪದ' ಹೆಸರಿನಿಂದ ಪ್ರೊ. ಎಚ್. ಜೆ. ಲಕ್ಕಪ್ಪಗೌಡರ ಅವರು ಸಂಪಾದಿಸಿದ್ದಾರೆ. ಯೋಜನಾ ಬದ್ಧವಾಗಿ ನಿಯೋಜಿಸಿರುವ ಇಲ್ಲಿಯ ಪ್ರತಿಯೊಂದು ಪ್ರಬಂಧವೂ ಉಪಯುಕ್ತ ಮಾಹಿತಿ ಒಳಗೊಂಡಿರುವುದರಿಂದ ಪ್ರಸ್ತುತ ಗ್ರಂಥವು ಜಾನಪದ ವಿದ್ವಾಂಸರಿಗೆ, ಜ್ಞಾನಾಕಾಂಕ್ಷಿಗಳಿಗೆ ಮಹತ್ವದ ಆಧಾರ ಗ್ರಂಥವಾಗಿದೆ. ಇಂಥ ವ್ಯವಸ್ಥಿತ ವಿಚಾರ ಸಂಕಿರಣ ಏರ್ಪಡಿಸಿ. ಈ ಗ್ರಂಥವನ್ನು ಪ್ರಕಟಿಸಿರುವ ಪ್ರೊ. ಲಕ್ಕಪ್ಪಗೌಡರು ಅಭಿನಂದನಾರ್ಹರು.

ಜಾನಪದ ಕ್ಷೇತ್ರದ ಉದ್ದಾಮ ವಿದ್ವಾಂಸರಲ್ಲೊಬ್ಬರಾಗಿರುವ ಡಾ. ಜೀ. ಶಂ. ಪರಮಶಿವಯ್ಯನವರು ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಸಲುವಾಗಿ 'ಕರ್ನಾಟಕ ಜಾನಪದ ಸಮೀಕ್ಷೆ' ಪ್ರಕಟಿಸಿದ್ದಾರೆ. ಇಲ್ಲಿ ಕೆಲವು ಉತ್ತಮ ಲೇಖನಗಳಿವೆ. ಕೆಲವು ಲೇಖನಗಳು ಅಸಮಾಧಾನವನ್ನುಂಟು ಮಾಡುತ್ತವೆ. ವಿಶ್ವಸಮ್ಮೇಳನದ ಸಲುವಾಗಿ ಪ್ರಕಟವಾಗುವ ಗ್ರಂಥದಲ್ಲಿಯ ಲೇಖನಗಳೆಲ್ಲವೂ ಅತ್ಯಂತ ಪ್ರೌಢವಾಗಿರಬೇಕೆಂದು ಬಯಸುವವರಿಗೆ ಅಂಥ ಲೇಖನಗಳು ನಿರಾಶೆಯನ್ನುಂಟು ಮಾಡುತ್ತವೆ.

'ಮುಂಗೋಳಿ' ತ. ಚಿ. ಚಲುವೇಗೌಡ ಅವರ ಕೃತಿ. ಏಳು ಪ್ರಬಂಧಗಳ ಸಂಕಲನ. ಜನಪದ ಗೀತೆಗಳಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಜೀವನ, ತಾಯಿ, ತವರುಗಳ ಸ್ಥಾನ ಇತ್ಯಾದಿಗಳು ಮೊದಲಿನ ಐದು ಪ್ರಬಂಧಗಳ ವಿಷಯ. ಇವು ಸಾಂಪ್ರದಾಯಿಕ ರೀತಿಯಲ್ಲಿ ನಿರೂಪಣೆಗೊಂಡಿವೆ. ಶಿಶುಪ್ರಾಸಗಳನ್ನು ಕುರಿತ ಆರನೆಯ ಪ್ರಬಂಧವಲ್ಲಿ ಲೇಖಕರ ಅಭ್ಯಾಸ ಪ್ರವೃತ್ತಿ ಚೆನ್ನಾಗಿ ಅಭಿವ್ಯಕ್ತವಾಗಿದೆ. ನಮ್ಮೂರಿನ ಜನಪದ ನೃತ್ಯಗಳು ಇಲ್ಲಿಯ ಕೊನೆಯ ಲೇಖನ. ಹಲವಾರು ನೃತ್ಯಗಳ ವಿವರ ಅಲ್ಲಿದೆ. ಒಟ್ಟಾರೆ ಪ್ರಯತ್ನ ಸ್ತುತ್ಯ.

ಡಾ. ದೇವೇಂದ್ರಕುಮಾರ ಹಕಾರಿ ಅವರ 'ಜಾನಪದ ಸಮ್ಮುಖ'ವೂ ಏಳು ಪ್ರಬಂಧಗಳ ಸಂಕಲನ. 'ದೇವರಗುಡ್ಡದ ಮೈಲಾರಲಿಂಗ' ಮೊದಲನೆಯ ಲೇಖನ; ಪ್ರೌಢವಾಗಿದೆ. ಜನಾಂಗಿಕ ಹಿನ್ನೆಲೆಯಲ್ಲಿ ಪೌರಾಣಿಕ ವಿಷಯಗಳ ಸಾಂಕೇತಿಕತೆಯನ್ನು ಒಡೆಯುವ ಕಾರ್ಯವೂ ಆಗಿದ್ದರೆ ಅದ್ಭುತ ಸಂಗತಿಗಳು ಹೊರಬರಬಹುದಾಗಿತ್ತು. 'ಜನಪದ ಕಲೆಗಳು ಮತ್ತು ಶರಣರು' ಲೇಖನವು ಉಪಯುಕ್ತ ವಿಷಯ ಒಳಗೊಂಡಿದೆ. 'ಉತ್ತರ ಕರ್ನಾಟಕದ ಸಣ್ಣಾಟಗಳು' ಲೇಖನ ವಿವರಪೂರ್ಣವಾಗಿದೆ. ಮುಂದಿನ ನಾಲ್ಕು ಟಿಪ್ಪಣಿ ರೂಪದ ಚಿಕ್ಕ ಲೇಖನಗಳು. ವಿವಿಧ ವಿಷಯಗಳನ್ನೊಳಗೊಂಡ ಈ ಪ್ರಾಸಂಗಿಕ ಲೇಖನಗಳು ಗ್ರಂಥರೂಪದಲ್ಲಿ ಬಂದಿರುವುದರಿಂದ ಅಭ್ಯಾಸಿಗಳಿಗೆ ಅನುಕೂಲವಾಗಿದೆ.

ಡಾ. ಎನ್. ಆರ್. ನಾಯಕರಂತೆ ಅವರ ಪತ್ನಿ ಸೌ. ಶಾಂತಿ ನಾಯಕ ಅವರೂ ಜಾನಪದ ಕ್ಷೇತ್ರದಲ್ಲಿ ನಿಷ್ಠೆಯಿಂದ ದುಡಿಯುತ್ತಲಿದ್ದಾರೆ. 'ಜಾನಪದ ಸುಧಾ ಸಂಚಯ' ಅವರ ಆಸಕ್ತಿ ಹಾಗೂ ಅಭ್ಯಾಸದ ಫಲ. ವಿವಿಧ ವಿಷಯಗಳಿಗೆ ಸಂಬಂಧಿಸಿದ ಹನ್ನೆರಡು ಲಘು ಲೇಖನಗಳು ಇಲ್ಲಿವೆ. ವಿವರಣಾತ್ಮಕ ಲೇಖನಗಳೇ ಹೆಚ್ಚಿಗಿವೆ. 'ಬೆಮ್ಮುಂಡೆ ಕುಣಿತ' ಉತ್ತರ ಕನ್ನಡ ಹಾಲಕ್ಕಿ ಒಕ್ಕಲಿಗರ ವೈಶಿಷ್ಟ್ಯ. ಇದು ಇನ್ನುಳಿದ ಪ್ರದೇಶದವರಿಗೆ ಹೊಸದೆನ್ನಿಸುತ್ತದೆ. 'ಬೇಸಿಗೆ ಪಾನೀಯಗಳು' ಬಾಯಲ್ಲಿ ನೀರು ಬರಿಸುವ ಲೇಖನ. ಇಲ್ಲಿ ಮಹಿಳೆಯ ಕೈಚಳಕ ಸ್ಪಷ್ಟವಾಗುತ್ತದೆ. ಅಲ್ಪ ಗಾತ್ರದ ಎಲ್ಲ ಲೇಖನಗಳು ಓದಿಸಿಕೊಂಡು ಹೋಗುತ್ತವೆ. ಲೇಖಕಿಯರ ಪ್ರಯತ್ನ ಮೆಚ್ಚುವಂತಹದು.

'ನಾಡ ಜೀವದ ನಾಡಿ ಮಿಡಿದಾವ' ಇದೇ ಬಗೆಯ ಗ್ರಂಥವೆಂದು ತಿಳಿದು ಬರುತ್ತದೆ. ಶ್ರೀ ಶಿರಹಟ್ಟಿ ಅವರು ಇವನ್ನು ಬೆಳಕಿಗೆ ತಂದಿದ್ದಾರೆ.

ಮಕ್ಕಳಿಗೆ ಉಪಯುಕ್ತವಾದ ಪುಸ್ತಕಗಳು ಎರಡು ಹೊರಬಂದಿವೆ. 'ಕೋಲಾಟಗಳು' ಡಿ. ಲಿಂಗಯ್ಯನವರ ಕೃತಿ ತಾಳಬದ್ಧವಾಗಿ ಕುಣಿಯುತ್ತ ಆಡುವ ಕೋಲಾಟವ

ಪರಿಚಯು ನೀಡುವುದೇ ಇಲ್ಲಿಯ ಮುಖ್ಯ ಉದ್ದೇಶ. ಸುಮಾರು ೧೪೦ ಪ್ರಕಾರದ ಕೋಲಾಟದ ಹೆಸರುಗಳನ್ನು ಕೊಡಲಾಗಿದೆ. ಕೆಲವು ಪ್ರಕಾರಗಳ ವಿವರವನ್ನೂ ಕೊಡಲಾಗಿದೆ. ಆದ್ದರಿಂದ ಇದು ಮಕ್ಕಳಿಗಷ್ಟೇ ಏಕೆ, ಎಲ್ಲ ಆಸಕ್ತರೂ ಗಮನಿಸ ಬೇಕಾದ ಉಪಯುಕ್ತ ಗ್ರಂಥ.

'೧೯೮೫ರ ಪ್ರಶಸ್ತಿಗಳು'* ವಿಶಿಷ್ಟ ಪರಿಚಯಾತ್ಮಕ ಪುಟ್ಟ ಪುಸ್ತಕ. ಕರ್ನಾಟಕ ರಾಜ್ಯ ಜಾನಪದ ಅಕಾಡೆಮಿಯು ಗೌರವಿಸಿದ ೧೯ ಜನ ಕಲಾವಿದರ ಸಂಕ್ಷಿಪ್ತ ಪರಿಚಯುವನ್ನು ಭಾವಚಿತ್ರಗಳೊಂದಿಗೆ ಇಲ್ಲಿ ಕೊಡಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಶ್ರೀ ಎಂ. ಬಿ. ಹೂಗಾರ ಅವರ 'ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ' ಮತ್ತು ಶ್ರೀ ಎಸ್. ಆರ್. ಗೌಡರ ಅವರ 'ಹಂತಿಯ ಪದಗಳ ಸೊಗಸು' ಈ ಎರಡು ಪುಸ್ತಿಕೆಗಳು ಪ್ರಕಟವಾಗಿವೆ. ಇವೆರಡರಲ್ಲೂ ಪ್ರಶಂಸೆ ಮತ್ತು ವೈಭವೀಕರಣ ಎದ್ದು ಕಾಣುತ್ತ ದೆಯೇ ಹೊರತು ಎತ್ತಿ ಹೇಳಬೇಕಾದ ಹೊಸತನವೇನೂ ಇಲ್ಲ.

ಜಾನಪದ ವಿಷಯುಗಳಲ್ಲೊಂದನ್ನು ಆಯ್ದುಕೊಂಡ ಪಿಎಚ್. ಡಿ. ಪ್ರಬಂಧ ಗಳು ಈಗಾಗಲೇ ಪ್ರಕಟವಾಗಿವೆ. ಈ ವರ್ಷ ಒಂದೇ ಒಂದು ಅಂಥ ಮಹಾಪ್ರಬಂಧ ಹೊರಬಂದಿದೆ ಬಸವರಾಜ ಮಲಶೆಟ್ಟಿ ಅವರಿಗೆ ಡಾಕ್ಟರೇಟ ಪದವಿ ಗಳಿಸಿಕೊಟ್ಟಿರುವ 'ಉತ್ತರ ಕರ್ನಾಟಕದ ಬಯುಲಾಟಗಳು' ಈ ಮಹಾಪ್ರಬಂಧವು ಅತ್ಯಂತ ಗಮನಾರ್ಹ ಮತ್ತು ಉತ್ಕೃಷ್ಟ ಕೃತಿ. ಬಯಲಾಟ ಕುರಿತು ಇಲ್ಲಿಯವರೆಗೆ ಅನೇಕ ಲೇಖನ ಕೆಲವು ಗ್ರಂಥ ಪ್ರಕಟವಾಗಿವೆ. ಇವುಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಕೆಲವು ಮಹತ್ವದ ನಿರ್ಣಯುಗಳನ್ನು ಡಾ. ಮಲಶೆಟ್ಟಿ ಅವರು ಸಾಧಾರಣವಾಗಿ ಖಂಡಿಸಿ. ತಮ್ಮ ನಿರ್ಣಯುಗಳನ್ನು ಮಂಡಿಸಿದ್ದಾರೆ. ಅವರ ಪ್ರಮುಖವಾದ ನಿರ್ಣಯುಗಳು ಕೆಳಗಿ ನಂತಿವೆ.

೧) ಇಂದು ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಬಯುಲಾಟಗಳು ಸುಮಾರು ೧೫೦ ವರ್ಷಗಳ ಇತಿಹಾಸವನ್ನು ಮಾತ್ರ ಹೊಂದಿವೆ.

೨) ಬಯುಲಾಟದ ಪ್ರಕಾರವೊಂದೆಂದು ಗಣಿಸಲ್ಪಡುವ ಮೂಡಲಪಾಯ ಎಂಬುದು ಮೂಲತಃ ಸಂಗೀತ ಶೈಲಿಯಿಂದ ಬಂದುದು.

* ಡಾ|| ಎಸ್. ಆರ್. ನಾಯಕ ಅವರ 'ಕರ್ನಾಟಕದ ಶಕ್ತಿದೇವತೆಗಳು' ಒಂದು ಪರಿಚಯಾತ್ಮ ಪ್ರಬಂಧ. ಜನಪದ ದೇವತೆಗಳನ್ನು ಮೊದಲು ಮಾಡಿಕೊಂಡು ಎಲ್ಲ ಬಗೆಯ ಶಕ್ತಿ ದೇವತೆಗಳ ಸ್ಥೂಲ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ.ವಿಷಯದ ವಿಸ್ತೃತ ವ್ಯಾಪ್ತಿಯಿಂದಾಗಿ ಕೆಲವು ದೇವತೆಗಳಿಗೆ ಇಲ್ಲಿ ಅವಕಾಶ ಸಿಕ್ಕಿಲ್ಲ. ಆದರೂ ಪ್ರಯತ್ನ ಸ್ತುತ್ಯ. ಗ್ರಂಥ ಸಂಗ್ರಹಾರ್ಹ.

೩) ಸಣ್ಣಾಟ ಎಂಬುದಾಗಿ ಕರೆಯಲ್ಪಡುವ ಬಯಲಾಟದ ಪ್ರಕಾರ ವೊಂದಕ್ಕೆ ಡಪ್ಪಿನಾಟ ವೆನ್ನುವುದು ಅರ್ಥಯುಕ್ತವಾದ ಹೆಸರು. ಸಣ್ಣಾಟವೆನ್ನುವುದು ಸರಿಯಲ್ಲ.

೪) ಪಾರಿಜಾತವು ಸಣ್ಣಾಟಗಳಲ್ಲಿ ಅಂದರೆ ಡಪ್ಪಿನಾಟಗಳಲ್ಲಿ ಒಳಗೊಳ್ಳುವು ದಿಲ್ಲ. ಅದರದು ಒಂದು ಸ್ವತಂತ್ರ ಪ್ರಕಾರವೆನ್ನಬೇಕಾಗುತ್ತದೆ.

ಡಾ. ಬಸವರಾಜ ಮಲಶೆಟ್ಟಿಯವರು ತಮ್ಮೀ ಹೊಸ ನಿರ್ಣಯಗಳಿಗೆ ಸಾಕಷ್ಟು ವಿವರಣೆ ನೀಡಿದ್ದಾರೆ: ಸಾಧಾರವಾಗಿ ಪ್ರತಿಪಾದಿಸಿದ್ದಾರೆ. ಆದ್ದರಿಂದ ಅವರ ಈ ನಿರ್ಣಯಗಳನ್ನು ಸುಲಭವಾಗಿ ತೆಗೆದು ಹಾಕುವುದು ಸುಲಭ ಸಾಧ್ಯವಲ್ಲ.

ಡಾ. ಮಲಶೆಟ್ಟಿ ಅವರು ಹಿಂದಿನವರ ನಿರ್ಣಯಗಳನ್ನು ಖಂಡಿಸುವಾಗಿನ ಭಾಷೆ ಹರಿತವಾಗಿದೆ. ಕೆಲವೊಮ್ಮೆ ಕಟುವಾಗಿದೆ.

ದೀರ್ಘವಾದ ಎಂಟು ಪ್ರಕರಣಗಳಲ್ಲಿ ಮಹಾಪ್ರಬಂಧದ ವಿಷಯ ವ್ಯಾಪಿಸಿದೆ. ಅವಶ್ಯವಿದ್ದೆಡೆಯಲ್ಲೆಲ್ಲ ಪ್ರವಾಸ ಮಾಡಿ ನಿಷ್ಠೆಯಿಂದ ಸಂಗ್ರಹಿಸಿದ ವಿಪುಲ ಸಾಮಗ್ರಿಯನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಲಾಗಿದೆ. ಆದ್ದರಿಂದ ಪ್ರಸ್ತುತ ಮಹಾಪ್ರಬಂಧವು ಜಾನಪದ ಕ್ಷೇತ್ರಕ್ಕೆ ಸಂದ ಅತ್ಯುತ್ತಮ ಕಾಣಿಕೆ. ಡಾ. ಮಲ ಶೆಟ್ಟಿಯವರ ಪರಿಶ್ರಮ ಸಾರ್ಥಕ. 'ಬಯಲಾಟ' ಕುರಿತು ಅಭ್ಯಾಸ ಮಾಡುವವರಿಗೆ ಮಹತ್ತ್ವದ ಆಕರ ಗ್ರಂಥವಿದು.

ಜನಪದ ಸಾಹಿತ್ಯದ ವಿವಿಧ ಪ್ರಕಾರಗಳು ಮತ್ತು ವಿಮರ್ಶೆ ಇತ್ಯಾದಿಗಳಿಗೆ ಸಂಬಂಧಿಸಿದ ಪುಸ್ತಕಗಳ ಪರಿಶೀಲನ ಕಾರ್ಯ ಮುಗಿಸಿ. ಮುನ್ನಡೆಯುವ ಮೊದಲು ಕ.ರಾ.ಕೃ. ಅವರ ಕೆಲವು ಸಂಕಲನಗಳ ಗದ್ಯಾನುವಾದ ಕುರಿತು ಚರ್ಚಿಸ ಬೇಕಾಗಿದೆ.

ಕ. ರಾ. ಕೃ. ಅವರು ಹವ್ಯಾಸಿ ಜನಪದಸಾಹಿತ್ಯ ಸಂಗ್ರಾಹಕರಲ್ಲಿ ಅಗ್ರ ಗಣ್ಯರು. ಸಾಕಷ್ಟು ಪರಿಶ್ರಮ ಪಟ್ಟು. ಹಣ ಖರ್ಚು ಮಾಡಿ ಜನಪದ ಗೀತೆಗಳ ಅನೇಕ ಸಂಗ್ರಹಗಳನ್ನು ಬೆಳಕಿಗೆ ತಂದಿದ್ದಾರೆ. ಕ. ರಾ. ಕೃ. ತಮ್ಮ ಆ ಕೃತಿಗಳ ಪೈಕಿ 'ಜಾನಪದ ಕಥನ ಗೀತೆಗಳಲ್ಲಿ ಮಹಾ ಭಾರತ' ಭಾಗ ೧ ಮತ್ತು ಭಾಗ ೨ ಈ ಮೂರರ ಗದ್ಯಾನುವಾದ ಮಾಡಿಸಿ, ಈಗ ಪ್ರಕಟಿಸಿದ್ದಾರೆ. ಮೊದಲಿನ ಎರಡರ ಗದ್ಯಾನುವಾದವನ್ನು ಶ್ರೀ. ಸಿ. ಎನ್. ಚನ್ನವೀರಯ್ಯ ಅವರೂ ಮತ್ತೊಂದರದನ್ನು ಶ್ರೀ ಬಿ. ಎಸ್. ಸ್ವಾಮಿ ಅವರೂ ಮಾಡಿದ್ದಾರೆ. ಆದರೆ ಈ ಮೂಲ ಪದ್ಯಗ್ರಂಥಗಳ ಗದ್ಯಾನುವಾದ ಮಾಡಿಸುವುದರ ಉದ್ದೇಶ ಮತ್ತು ಪ್ರಯೋಜನವೇ ಅರ್ಥವಾಗುವು

ದಿಲ್ಲ. ಮೂಲ ಗ್ರಂಥಗಳಲ್ಲಿಯ ಪದ್ಯಗಳನ್ನು ಓದುವ ಅಥವಾ ಕೇಳುವ ಎಂಥ ಸಾಮಾನ್ಯನಿಗಾವರೂ ಸಂಪೂರ್ಣ ಅರ್ಥವಾಗುವಷ್ಟು ಅವು ಸರಳವಾಗಿವೆ. ಹೀಗಿರುವಾಗ ಈ ಕಾರ್ಯ ವ್ಯರ್ಥವೆಂದು ಹೇಳಲೇಬೇಕಾಗುತ್ತದೆ. ಇದೇ ಹಣ, ಪರಿಶ್ರಮದಿಂದ ಹೊಸ ವಿಷಯಗಳ ಸಂಗ್ರಹಗಳು ಬಂದಿದ್ದರೆ ಅಥವಾ ಇವುಗಳನ್ನೇ ಇದ್ದಕ್ಕಿದ್ದಂತೆ ಪುನರ್ ಮುದ್ರಣ ಮಾಡಿಸಿದ್ದರೆ ಒಳ್ಳೆಯದಾಗುತ್ತಿತ್ತು. ಕೇವಲ ಗದ್ಯಾನುವಾದಗಳ ಪ್ರಕಟನೆಯನ್ನು ಯಾವ ಜಾನಪದ ತಜ್ಞನೂ ಸ್ವಾಗತಿಸಲಾರ.

ಜನಪದ ಸಂಸ್ಕಾರ ಧರ್ಮ

ಕರ್ನಾಟಕದಲ್ಲಿಯ ವಿವಿಧ ಜಾತಿ ಮತಗಳವರಲ್ಲಿ ಮದುವೆ ಮುಂತಾದ ಸಂಸ್ಕಾರಗಳಿಗೆ ಸಂಬಂಧಿಸಿದಂತೆ ವಿಭಿನ್ನ ವಿಧಿ–ವಿಧಾನಗಳಿವೆ. ಈಡಿಗ ಮತದವರಲ್ಲಿ ರೂಢಿಯಲ್ಲಿರುವ ಮದುವೆ ಪದ್ಧತಿ ಕುರಿತು ಶ್ರೀ. ಜಿ. ಬಿ. ಡಿ. ಅವರು 'ಈಡಿಗರ ವಿವಾಹ ಪದ್ಧತಿ' ಕುರಿತು ಸಣ್ಣ ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಮದುವೆಗೆ ಸಂಬಂಧಿಸಿದ ಎಲ್ಲ ಬಗೆಯ ಕಾರ್ಯಾಚರಣೆಗಳು ಮತ್ತು ವಿಧಿ ವಿಧಾನಗಳನ್ನು ಇಲ್ಲಿ ಲೇಖಕರು ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ಇದೊಂದು ಅತ್ಯಂತ ಉಪಯುಕ್ತ ಗ್ರಂಥ. ಕರ್ನಾಟಕದ ಪ್ರಮುಖ ಶಾಸ್ತ್ರವಾಗಿರುವ ಅಕ್ಷತಾರೋಪಣ (ಅಕ್ಕಿ ಕಾಳು ಹಾಕುವದು ಅವರಲ್ಲಿ ಇಲ್ಲವೆಂದು ತೋರುತ್ತದೆ. ಮತದ ಮತ್ತು ಪ್ರಾದೇಶಿಕ ಹಿನ್ನೆಲೆಯಲ್ಲಿ ತೌಲನಿಕ ಅಭ್ಯಾಸ ಮಾಡಲು ಇಂಥ ಗ್ರಂಥಗಳು ನೆರವಾಗುತ್ತವೆ. ಆದ್ದರಿಂದ ಲೇಖಕರ ಕಾರ್ಯ ಸ್ತುತ್ಯಾರ್ಹ.

ಜನಪದ ವಿಜ್ಞಾನ

ವೈದ್ಯಕ್ಕೆ ಸಂಬಂಧಿಸಿದ ಎರಡು ಗ್ರಂಥಗಳು ಪ್ರಕಟವಾದುದಾಗಿ ಕಂಡು ಬರುತ್ತದೆ. ಅವು ಜನಪದ ವೈದ್ಯಕ್ಕೆ ಸಂಬಂಧಿಸಿರಬಹುದೆಂದು ನನ್ನ ಊಹೆ. ಕೈಗೆ ಸಿಕ್ಕಿಲ್ಲವಾದ್ದರಿಂದ ಈ ಮಾತು ಡಾ. ಎಲ್. ಆರ್. ಹೆಗಡೆ ಅವರ 'ಸುಲಭ ಚಿಕಿತ್ಸೆ' ಜನಪದ ವೈದ್ಯಕ್ಕೆ ಸಂಬಂಧಿಸಿದ ಗ್ರಂಥವೆಂದು ಕೇಳಿದ್ದೇನೆ. ಇನ್ನೊಂದು 'ಜನಪದ ಸಂಜೀವಿನಿ' ಹೆಸರಿನ ಶ್ರೀ ಆರ್. ಸಿ. ಮುದ್ದೇಬಿಹಾಳ ಅವರ ಗ್ರಂಥ. ಇದರ ಹೆಸರನ್ನು ನೋಡಿದಾಕ್ಷಣ ಜನಪದ ವೈದ್ಯಕ್ಕೆ ಸಂಬಂಧಿಸಿದ್ದೆಂದು ಅನ್ನಿಸುತ್ತದೆ. ಆದರೆ ಹೆಸರಿನ ಕೆಳಗೇ 'ಆಯುರ್ವೇದ ಶಾಸ್ತ್ರ ಗ್ರಂಥ' ಎಂದು ಬರೆದಿದೆ. ಆದ್ದರಿಂದ ಇದು ಜನಪದ ವೈದ್ಯ ಗ್ರಂಥವಾಗಿರಲಿಕ್ಕಿಲ್ಲವೆಂದೂ ಅನಿಸುತ್ತದೆ. ಆಯುರ್ವೇದವು ಒಂದು ವ್ಯವಸ್ಥಿತ ವಿಜ್ಞಾನವಾದ್ದರಿಂದ ಜನಪದ ವೈದ್ಯದಲ್ಲಿ ಆಯುರ್ವೇದಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಗಣಿಸಲಾಗದೆಂಬುದನ್ನು ನಾವು ಮರೆಯಲಾಗದು.

ಸಮಾರೋಪ

೧೯೮೩ರಲ್ಲಿ ಪ್ರಕಟವಾದ ಜಾನಪದಕ್ಕೆ ಸಂಬಂಧಿಸಿದ ಎಲ್ಲ ಬಗೆಯ ಗ್ರಂಥಗಳ ಸಂಖ್ಯೆ ಪರಿಶೀಲಿಸಿದಾಗ, ಕೆಲವೊಂದು ವಿಭಾಗದಲ್ಲಿಯ ಸಾಧನೆ ಬಹಳ ಕಡಿಮೆ ಯೆಂಬುದು ಸ್ಪಷ್ಟ. ಹಲವಾರು ವರುಷಗಳ ಪರಂಪರೆಯಂತೆ ಈ ವರ್ಷವು ಕೂಡ ಜನಪದ ಸಾಹಿತ್ಯ ಮತ್ತು ವಿಮರ್ಶೆಗೆ ಸಂಬಂಧಿಸಿದ ಗ್ರಂಥಗಳ ಸಂಖ್ಯೆಯೇ ಹೆಚ್ಚು. ವಿಮರ್ಶಾ ಗ್ರಂಥಗಳಲ್ಲಿಯೂ ಅಂಥ ಗಂಭೀರತೆ ಇಲ್ಲ. ಧರ್ಮ, ವಿಜ್ಞಾನ, ಚಟುವಟಿಕೆ (ಕ್ರಿಯೆ) ಕ್ಷೇತ್ರಗಳಿಗೆ ಸಂಬಂಧಿಸಿದ ಸಾಧನೆ ತೀರ ನಿರಾಶಾದಾಯಕ. ಇಡೀ ವರ್ಷದಲ್ಲಿ ಪ್ರಕಟವಾದ ಎಲ್ಲ ಗ್ರಂಥಗಳನ್ನು ಕಣ್ಮುಂದೆ ತಂದುಕೊಂಡರೆ ಡಾ. ಬಸವರಾಜ ಮಲಶೆಟ್ಟಿ ಅವರ 'ಉತ್ತರ ಕರ್ನಾಟಕದ ಬಯಲಾಟಗಳು' ಡಾ. ಎನ್. ಆರ್. ನಾಯಕ ಅವರ 'ಕೂಸಾಯ್ತು ನಮ್ಮ ಕೊಮರಾಗೆ' ಡಾ. ದೇವೇಂದ್ರಕುಮಾರ ಹಕಾರಿಯವರ 'ಜಾನಪದ ಮೂಲಭೂತ ತತ್ವಗಳು' ಪ್ರೊ. ಎಚ್. ಜೆ. ಲಕ್ಕಪ್ಪಗೌಡರು ಸಂಪಾದಿಸಿರುವ 'ಮಲೆನಾಡು ಜಾನಪದ' ಈ ನಾಲ್ಕು ಗ್ರಂಥಗಳು ಮಾತ್ರ ತಮ್ಮಲ್ಲಿಯ ಸತ್ವದಿಂದ ಎದ್ದು ಕಾಣುತ್ತವೆ.

ಈ ಶತಮಾನದ ಏಳನೆಯ ಮತ್ತು ಎಂಟನೆಯ ದಶಕಗಳಲ್ಲಿದ್ದ ಜಾನಪದ ಕುರಿತ ಜಿಜ್ಞಾಸೆಯ ತೀವ್ರತೆ, ಅಭ್ಯಾಸದ ಕಾತರತೆಗಳು ಇತ್ತೀಚೆಗೆ ತುಸು ಕಡಿಮೆ ಯಾಗುತ್ತಲಿವೆ. ೧೯೮೩ರಲ್ಲಿ ಪ್ರಕಟವಾದ ಗ್ರಂಥಗಳಲ್ಲಿಯ ವೈವಿಧ್ಯತೆ, ಸಂಖ್ಯೆ ಮತ್ತು ಸತ್ತ್ವದಲ್ಲಿಯ ಕೊರತೆಗಳು ಮೇಲಿನ ಮಾತಿಗೆ ಸಾಕ್ಷಿ.

●

ಕನ್ನಡ ಅಧ್ಯಾಪಕರ ಅಪೂರ್ವ ಶಿಬಿರದ ವರದಿ

● ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ಅಧ್ಯಾಪಕರ ಶಿಬಿರ ಅಕ್ಟೋಬರ್ ೨೭ ಮತ್ತು ೨೮ರಂದು ದಾಂಡೇಲಿಯಲ್ಲಿ ಜರುಗಿತು. ನೂರಕ್ಕೆ ನೂರು ಶೈಕ್ಷಣಿಕವಾಗಬೇಕೆಂಬ ಉದ್ದೇಶದಿಂದ ಹಾರ, ತುರಾಯಿ, ಅಧ್ಯಕ್ಷತೆ ಇತ್ಯಾದಿ ಗೋಜು–ಆಡಂಬರಗಳಿಲ್ಲದೆ ದಾಂಡೇಲಿಯ ಕಾಳೀನದಿ ತೀರದ ಅರಣ್ಯ ಮಧ್ಯದಲ್ಲಿ ಜರುಗಿದ ಸಮಾವೇಶವಿದು. ಸಾರ್ವಜನಿಕರ ಸಂಪರ್ಕವಿಲ್ಲದೆ ನಡೆದ ಈ ಸಮಾವೇಶದಲ್ಲಿ ೬೦ ಜನ ಅಧ್ಯಾಪಕರು ಭಾಗವಹಿಸಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಅಧ್ಯಾಪಕರ ಕರ್ತವ್ಯಗಳನ್ನು ಕುರಿತು ಮುಕ್ತವಾಗಿ ಸಮಾಲೋಚಿಸಿದರು.

೨೭ ರಂದು ಮುಂಜಾನೆ ಸ್ಥಳೀಯ ಕಾಲೇಜಿನ ಕನ್ನಡ ಅಧ್ಯಾಪಕರೂ ಈ ಶಿಬಿರದ ಸಂಚಾಲಕರೂ ಆದ ಶ್ರೀ ಎನ್. ಎಸ್. ಭಟ್ ಎಲ್ಲರನ್ನು ಸ್ವಾಗತಿಸಿದರು. ಡಾ. ಎಂ. ಎಂ. ಕಲಬುರ್ಗಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತ 'ಇದು ಆತ್ಮಸಾಕ್ಷಿ ವೇದಿಕೆ, ಇದರ ಮೇಲೆ ನಿಂತು ನಾವು ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕು. ನಮ್ಮ ಭಾಷೆ–ಸಾಹಿತ್ಯ–ಸಮಸ್ಯೆಗಳನ್ನು ಕುರಿತು ಪ್ರಜಾಸತ್ತಾತ್ಮಕವಾಗಿ ಚರ್ಚಿಸಿ ಕನ್ನಡದ ಬಗೆಗೆ ಯೋಚಿಸಬೇಕು, ಯೋಜಿಸಬೇಕು' ಎಂದು ಹೇಳಿದರು. ಮುಂದುವರಿದು 'ಅಲ್ಲಲ್ಲಿ ವೃತ್ತಿನಿರತರಾದ ಕನ್ನಡ ಅಧ್ಯಾಪಕರ ಶಕ್ತಿ ಆಸಕ್ತಿಗಳನ್ನು ಗುರುತಿಸುವ ಮತ್ತು ಅವರಿಗೆ ಅವಕಾಶವನ್ನು ಒದಗಿಸಿಕೊಡುವ ಉದ್ದೇಶವನ್ನು ಈ ಸಮಾವೇಶ ಹೊಂದಿದೆ' ಎಂದು ಬಿಚ್ಚು ಮಾತುಗಳಲ್ಲಿ ಸ್ಪಷ್ಟಪಡಿಸಿದರು. ಅಂದಿನ ಪ್ರಥಮ ಮತ್ತು ದ್ವಿತೀಯ ಗೋಷ್ಠಿಯ ವಿಷಯ : "೧೯೮೫ರ ಕನ್ನಡ ಸಾಹಿತ್ಯ" ವಾಗಿದ್ದಿತು.

ಶ್ಯಾಮಸುಂದರ ಬಿದರಕುಂದಿ (ಕಾದಂಬರಿ), ಬಸವಲಿಂಗ ಸೊಪ್ಪಿಮಠ (ಕಾವ್ಯ), ಸರೋಜಿನಿ ಚವಲಾರ (ಸಣ್ಣ ಕಥೆ), ಬಾಳಣ್ಣ ಶೀಗಿಹಳ್ಳಿ (ನಾಟಕ), ಅವರು ಈ ಗೋಷ್ಠಿಯಲ್ಲಿ ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಕಾದಂಬರಿ ಕ್ಷೇತ್ರದಲ್ಲಿ ಕಾರಂತರು ಕ್ರಮೇಣ ಸೋಲುತ್ತಿದ್ದಾರೆ. ಶಾಂತಿನಾಥ ದೇಸಾಯಿ ಅವರಿಗೆ ಭಾಷೆ ಸಾಲದು. ಭೈರಪ್ಪ, ಕುಂದರನಾಡ ಪಾಟೀಲ ಮತ್ತು ಕುಂ. ವೀರಭದ್ರಪ್ಪ ಅವರು ಮಾತ್ರ ಈ ವರ್ಷ ಒಳ್ಳೆಯ ಕಾದಂಬರಿಗಳನ್ನು ಕೊಟ್ಟಿದ್ದಾರೆ. ವಯಸ್ಸಾದಂತೆ ಅಡಿಗರು ವೈದಿಕ ಪ್ರಜ್ಞೆಗೆ ಹೆಚ್ಚು ವಾಲುತ್ತಿದ್ದಾರೆ. ಸ್ತ್ರೀಯರು

ಅಧಿಕ ಸಂಖ್ಯೆಯಲ್ಲಿ ಕವಿತೆ ಬರೆದುದು ಈ ವರ್ಷದ ವಿಶೇಷ. ಆದರೆ ಮುಕ್ತಾಯಕ್ಕ ಹೇಮಾ ಇವರ ಬಿಚ್ಚುಮಾತು ಹಸಿಭಾವಗಳಾಗಿ ಬಿಡುವದೇ ಹೆಚ್ಚು. ಸುಕನ್ಯಾ ಮಾರುತಿ ಅವರಲ್ಲಿ ಕೆಲವು ಪದ್ಯಗಳು ಅನುಭವಕ್ಕೆ ನಿಲುಕದ ಮಾತುಗಳಾಗಿ ಉಳಿಯು ತ್ತವೆ ಎಂದು ನುಡಿದರು. ಬೆರಳು ಮಾಡಿ ತೋರಿಸುವಂಥ ಹೊಸತನ ಸಣ್ಣಕಥೆಗಳಿಗೆ ಸಾಧ್ಯವಾಗಿಲ್ಲ. ತಂತ್ರ ಭಾಷೆ ಇತ್ಯಾದಿ ದೃಷ್ಟಿಯಿಂದ ಹೊಸ ಅಲೆಯ ನಾಟಕಗಳ ಸೃಷ್ಟಿ ಆಶಾದಾಯಕವಾಗಿದ್ದರೆ, ಅನುವಾದ ಮತ್ತು ಬೀದಿನಾಟಕಗಳ ಸೃಷ್ಟಿ ಅತೃಪ್ತಿ ಯನ್ನು ಹುಟ್ಟಿಸುತ್ತವೆ. ಎಂಬುದು ಈ ಗೋಷ್ಠಿಯ ಅಭಿಪ್ರಾಯವಾಗಿದ್ದಿತು. ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ೧೯೮೩ರ ಸಾಹಿತ್ಯರಚನೆ ತೃಪ್ತಿಕರವಾಗಿದೆ. ಕೇವಲ ಸಂಘರ್ಷ ಪ್ರತಿಭಟನೆ ಪ್ರಧಾನ ವಾಗಿ ಜೀವನದ ಬಹಳಷ್ಟು ಮಗ್ಗಲುಗಳು ಅಲಕ್ಷಿಸಲ್ಪಟ್ಟಿವೆ.—ಎಂದು ಹೇಳಿದರು. ಈ ಗೋಷ್ಠಿಯ ನಿರ್ದೇಶನ ಮಾಡಿದ ಶ್ರೀ ಎನ್. ಎಸ್. ಭಟ್ ಅವರು ಆಭಾರ ಮನ್ನಿಸಿದರು.

ಮಧ್ಯಾಹ್ನದ ಗೋಷ್ಠಿಯಲ್ಲಿ ಎಸ್. ಎಲ್. ಕುಲಕರ್ಣಿ (ಪ್ರಬಂಧ), ಜಿ. ಎಸ್ ಅವಧಾನಿ (ವಿಮರ್ಶೆ), ವಿ. ಬಿ. ರಾಜೂರ (ಸಂಪಾದನೆ), ಜಿ. ಎಂ. ಹೆಗಡೆ (ಶಾಸ್ತ್ರ) ಅವರು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಇತ್ತೀಚೆಗೆ ಪ್ರಬಂಧ ಎದ್ದು ಕಾಣುವ ಪ್ರಕಾರವಾಗಿ ಬೆಳೆದು ಬರುತ್ತಿಲ್ಲ. ಧಾರವಾಡಕರ, ದೇಶ ಕುಲಕರ್ಣಿ ಮೊದಲಾದವರ ಬರವಣಿಗೆ ಈ ಕೊರತೆಯನ್ನು ತುಂಬಿಕೊಟ್ಟುದು ಸಮಾಧಾನದ ಸಂಗತಿಯಾಗಿದೆ. ವಿಮರ್ಶೆ ಮಾರ್ಕ್ಸ ಲೋಹಿಯಾ ಅಂಬೇಡ್ಕರ ವಿಚಾರಧಾರೆಯಲ್ಲಿ ಬೆಳೆಯುತ್ತಿದ್ದು ಗ್ರಂಥರೂಪದ ಕೊಡುಗೆ ಇಲ್ಲಿ ಕಡಿಮೆ ಎಂದೇ ಹೇಳಬೇಕು. ಸಂಪಾದನ ಸಾಹಿತ್ಯ, ಹುಲುಸಾಗಿದ್ದರೂ ಪಾಂಡಿತ್ಯ—ಪರಿಶ್ರಮಗಳ ಅಭಾವದಿಂದಾಗಿ ಗುಣಮಟ್ಟ ಕುಸಿಯುತ್ತಿದೆ. ಶಾಸ್ತ್ರ ವೈವಿಧ್ಯಪೂರ್ಣವಾಗಿ ಈ ವರ್ಷದಲ್ಲಿ ಬೆಳೆದುದು ಗಮನಾರ್ಹ ಸಂಗತಿಯಾಗಿದೆ. ಎಂಬ ಅಭಿಪ್ರಾಯಗಳು ಈ ಗೋಷ್ಠಿಯಲ್ಲಿ ವ್ಯಕ್ತವಾದವು. ಶ್ರೀ ಬೂದಿಹಾಳ ಅವರು ಈ ಗೋಷ್ಠಿಯನ್ನು ನಿರ್ದೇಶಿಸಿ ಅಭಾರಮನ್ನಿಸಿದರು. ಮರು ದಿನ ಜಾನಪದ ದೇವತೆ ಜುಂಜಪ್ಪನನ್ನು ಕುರಿತು ಶ್ರೀ ಎಂ. ಬಿ. ನೇಗಿನಹಾಳ ಅವರು ಮಾತನಾಡುತ್ತ 'ಈವರೆಗೆ ವಿದ್ವಾಂಸರು ಭಾವಿಸಿದಂತೆ ಈ ದೇವತೆ ದಕ್ಷಿಣ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ, ಮೈಲಾರನ ಪರಿವಾರದ ದೇವತೆಯಾಗಿ ಉತ್ತರ ಕರ್ನಾಟಕದಲ್ಲಿಯೂ ಕಂಡು ಬರುತ್ತದೆ.'—ಎಂದು ಹೇಳಿದರು. ಕನ್ನಡದಲ್ಲಿ ಶಬ್ದಾರ್ಥ ವಿಜ್ಞಾನ ತೀರ ಅಲಕ್ಷಿತ ಕ್ಷೇತ್ರವಾಗಿದೆ. ಎನ್ನುತ್ತ ಡಾ. ಎಚ್. ಎಂ. ಮಹೇಶ್ವರಯ್ಯ ಅವರು ಇದರ ಮಹತ್ವವನ್ನು ಉದಾಹರಣೆ ಸಹಿತ ಸ್ಪಷ್ಟಪಡಿಸಿ ದರು. 'ಗ್ರಾಮನಾಮಗಳ ಅಧ್ಯಯನ ನಮ್ಮ ನಾಡಿನ ಸಾಂಸ್ಕೃತಿಕ ಅಧ್ಯಯನಕ್ಕೆ ಹೇಗೆ ಸಹಾಯವಾಗಬಲ್ಲುದೆಂಬುದನ್ನು ಮನಗಾಣಿಸುತ್ತ ನೀರನ್ನು ಸೂಚಿಸುವ ಗ್ರಾಮ

ನಾಮಗಳ ಬಗೆಗೆ ಚನ್ನಕ್ಕ ಎಲಿಗಾರ ಮಾತನಾಡಿದರು. ಕುರಿಹಿಂಡುಗಳ ಜೊತೆ ನಿಸರ್ಗ ಮಡಿಲಲ್ಲಿ ಬದುಕುವ ಕುರುಬರು ಮುಂಬರುವ ಮಳೆ–ಗಾಳಿ ಲಕ್ಷಣಗಳನ್ನು ಹೇಳುವ ರೀತಿಯನ್ನು ಸ್ಪಷ್ಟಪಡಿಸಿದವರು ಎಂ. ಎಂ. ಪಡಶೆಟ್ಟಿ ಅವರು. ಒಂದು ದಿನದ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನೂ ಒಂದು ಶಬ್ದಕೋಶವನ್ನೂ ಆಧಾರ ವಾಗಿಟ್ಟುಕೊಂಡು ಇಂದಿನ ಕನ್ನಡದಲ್ಲಿ ಮಹಾಪ್ರಾಣಗಳನ್ನು ಕೈಬಿಟ್ಟರೆ ಏನೂ ತೊಂದರೆ ಇಲ್ಲವೆಂದು ಕೆ. ಅನ್ಸನ್ ಅವರು ಉದಾಹರಣೆಗಳಿಂದ ಸ್ಪಷ್ಟಪಡಿಸಿದರು. ಈ ಗೋಷ್ಠಿಯನ್ನು ನಿರ್ದೇಶಿಸಿದ ಸಾವಿತ್ರಿ ಮುದಗಲ್ಲ ವಂದನಾರ್ಪಣೆ ಸಲ್ಲಿಸಿದರು.

ಸಾಯಂಕಾಲ ಜರುಗಿದ ಕವಿಗೋಷ್ಠಿಯಲ್ಲಿ ಗುರುಪಾದ ಮರೆಗುದ್ದಿ, ಚೆನ್ನಪ್ಪ ಹುದೇವಗಡ್ಡಿ, ಎಂ. ಬಿ. ಹೂಗಾರ, ದೇವೇಂದ್ರಕುಮಾರ ಹಕಾರಿ. ಶ್ರೀಪಾದ ಶೆಟ್ಟಿ. ಉಮೇಶ ಅಂಗಡಿ, ಎಸ್. ಜಿ. ಇಮ್ರಾಪುರ. ಎಸ್. ಎಸ್. ಕೋತೀನ, ಬುದ್ದಣ್ಣ ಹಿಂಗಮಿರೆ, ಬಸವಲಿಂಗ ಸೊಪ್ಪಿಮಠ, ಶ್ಯಾಮಸುಂದರ ಬಿದರಕುಂದಿ. ಎಂ. ಎಸ್. ವಾಲಿ, ಎಸ್ ವಿ. ಬಳಿಗಾರ ಅವರು ಭಾಗವಹಿಸಿದ್ದರು. ಈ ಗೋಷ್ಠಿಯನ್ನು ನಿರ್ದೇಶಿಸಿದ ಎಂ. ಬಿ. ಉಪಾಧ್ಯಾಯ ಅವರು ಆಭಾರ ಮನ್ನಿಸಿದರು.

ಸಮಾರೋಪ ಸಭೆಯಲ್ಲಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಡಾ. ಎಂ. ಎಂ. ಕಲಬುರ್ಗಿ ಅವರು ಒಂದು ಪ್ರಯೋಗವೆಂದು ಭಾವಿಸಿದ್ದ ಈ ಶಿಬಿರದ ಯಶಸ್ಸಿನ ಬಗ್ಗೆ ತಮ್ಮ ಶಬ್ದಾತೀತ ಸಂತೋಷವನ್ನು ವ್ಯಕ್ತಪಡಿಸಿ ಕಷ್ಟಪಟ್ಟು ನಾವೆಲ್ಲ ಹಚ್ಚಿದ ಈ ದೀಪ ಆರದಂತೆ ನೋಡಿಕೊಳ್ಳಬೇಕೆಂದು ಹೇಳಿ ಭಾಗಿಗಳಿಗೂ ನೆರವು ನೀಡಿದವ ರಿಗೂ ವಂದನೆ ಸಲ್ಲಿಸಿದರು. ಸಮಾರೋಪ ಭಾಷಣ ಮಾಡುತ್ತ ಡಾ. ಎಂ. ಬಿ. ಕೊಟ್ರಶೆಟ್ಟಿ ಅವರು 'ವೈಯಕ್ತಿಕತೆಯನ್ನು ನಿರಸನ ಮಾಡಿಕೊಂಡು ಸಾಂಘಿಕ ರೂಪ ದಲ್ಲಿ ನಿಂತಿರುವ ನಾವು ಮುಂದಿನ ವರ್ಷ ಹೆಚ್ಚು ಸಂಖ್ಯೆಯಲ್ಲಿ ಬರಬೇಕು. ಈ ವೇದಿಕೆಯ ಮೌಲಿಕತೆಯ ಕಡೆಗೆ ವಿಶೇಷ ಗಮನ ಕೊಡಬೇಕು' ಎಂದು ಹೇಳಿ ಮುಂದಿನ ವರ್ಷ ಈ ಶಿಬಿರವನ್ನು ಬಾದಾಮಿ ಪರಿಸರದಲ್ಲಿ ಜರುಗಿಸಲು ನಿರ್ಧರಿಸ ಲಾಗಿದೆಯೆಂದು ಪ್ರಕಟಿಸಿದರು. ಶಿಬಿರಾರ್ಥಿಗಳ ಪರವಾಗಿ ಬಿ. ವಿ. ಗುಂಜೆಟ್ಟಿ ಮತ್ತು ಶ್ರೀಪಾದ ಶೆಟ್ಟಿ ಮಾತನಾಡಿದರು. ಈ ಸಭೆಯನ್ನು ಶ್ರೀ 'ಗುರುಪಾದ ಛಿಪಾರಿ ನಿರ್ವಹಿಸಿಕೊಟ್ಟರು. ಶ್ರೀ ಎನ್. ಎಸ್. ಭಟ್ ಅವರಿಂದ ವಂದನಾರ್ಪಣೆ ಜರುಗಿತು.

ಈ ಸಂಚಿಕೆಯ ಲೇಖಕರು

- ಶ್ರೀ ಬಸವಲಿಂಗ ಸೊಪ್ಪಿಮಠ
  ಕನ್ನಡ ಅಧ್ಯಾಪಕರು
  ಪೋರ್‌ವಾಲ ಕಲಾ ಮಹಾವಿದ್ಯಾಲಯ,
  ಸಿಂದಗಿ

- ಶ್ರೀ ಶ್ಯಾಮಸುಂದರ ಬಿದರಕುಂದಿ
  ಕನ್ನಡ ಅಧ್ಯಾಪಕರು
  ವಾಣಿಜ್ಯ ಮಹಾವಿದ್ಯಾಲಯ
  ಗದಗ

- ಡಾ. ಸರೋಜನಿ ಚವಲಾರ
  ಕನ್ನಡ ಅಧ್ಯಾಪಕಿ
  ಮಹಿಳಾ ಮಹಾವಿದ್ಯಾಲಯ
  ಜಯಚಾಮರಾಜ ನಗರ, ಹುಬ್ಬಳ್ಳಿ

- ಶ್ರೀ ಬಾಳಣ್ಣ ಶೀಗೀಹಳ್ಳಿ
  ಕನ್ನಡ ಅಧ್ಯಾಪಕರು
  ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
  ಕಿತ್ತೂರ

- ಶ್ರೀನಿವಾಸ ಕುಲಕರ್ಣಿ
  ಕನ್ನಡ ಅಧ್ಯಾಪಕರು
  ಆರ್. ಪಿ. ಡಿ. ಕಾಲೇಜು,
  ಬೆಳಗಾವಿ.

- ಶ್ರೀ ಜಿ. ಎಸ್. ಅವಧಾನಿ
  ಕನ್ನಡ ಅಧ್ಯಾಪಕರು
  ಎಸ್. ಡಿ. ಎಂ. ಕಾಲೇಜು
  ಹೊನ್ನಾವರ

- ಡಾ. ಎಂ. ಬಿ. ನೇಗಿನಹಾಳ
  ಕನ್ನಡ ಅಧ್ಯಾಪಕರು
  ಸ್ನಾತಕೋತ್ತರ ಕೇಂದ್ರ, ಬೆಳಗಾವಿ

- ಡಾ. ವೀರಣ್ಣ ರಾಜೂರ
  ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಜಿ. ಎಂ. ಹೆಗಡೆ
  ಕನ್ನಡ ಅಧ್ಯಾಪಕರು,
  ಕಿಟೆಲ್ ಕಾಲೇಜು ಧಾರವಾಡ

- ಶ್ರೀ ಜ್ಯೋತಿ ಹೊಸೂರ
  ಪ್ರಾಚಾರ್ಯರು
  ಕಲಾ ಮಹಾವಿದ್ಯಾಲಯ ರಾಯಭಾಗ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು, ರೂ. ೧೦೦-೦೦ (ಒಂದು ನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ : ರೂ. ೪-೦೦

ಹಣವನ್ನು **ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩.** ಇವರ ಹೆಸರಿನಲ್ಲಿ ಡಿಮಾಂಡ ಡ್ರಾಪ್ಟ ಅಥವಾ ಪೋಸ್ಟಲ್ ಆರ್ಡರ ತಗೆಯಿಸಿ, **ನಿರ್ದೇಶಕರು, ಪ್ರಸಾರಾಂಗ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ